PEER - REVIEWED JOURNAL
ISSN: 2320-9941

ಸಂಪುಟ - 09, ಸಂಚಿಕೆ- 03

VOLUME: 09, ISSUE: 03

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಭಾಗ - 1 PART - 1

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 01 PART - 1

ಸಂಪುಟ: 09, ಸಂಚಿಕೆ 03, ಸೆಪ್ಟಂಬರ್ 2025

VOLUME: 09, ISSUE: 03, SEPTEMBER 2025

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ

ತೋಟದ ಮನೆ ನಂ 107(25)

ಕಂಚಾಘಟ್ಟ ಹೊಸ ಬಡಾವಣೆ

ತಿಪಟೂರು 572201

e-mail: prathispanda@gmail.com

wibsite : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಅಭಿನಂದನೆಗಳು

ಪೃಥ್ವಿ ಸೂರಿಯವರು ಇದುವರೆಗೂ ನಮ್ಮ ಪತ್ರಿಕೆಯನ್ನು ತಾಂತ್ರಿಕವಾಗಿ ನಿರ್ವಹಿಸಿದವರು. ಇವರಿಗೆ ಪತ್ರಿಕೆಯ ಕಡೆಯಿಂದ ಧನ್ಯವಾದಗಳನ್ನು ಸಲ್ಲಿಸುತ್ತಾ, ಈ ಪತ್ರಿಕೆಯಲ್ಲಿ ಕಾನೂನು ಸಲಹೆಗಾರರಾಗಿ ಮುಂದುವರೆಯುತ್ತಾರೆಂದು ತಿಳಿಸುತ್ತಾ ಶ್ರೀಯುತರಿಗೆ ಗೌರವ ಪೂರ್ವಕ ಅಭಿನಂದನೆಗಳನ್ನು ಪತ್ರಿಕೆಯ ವತಿಯಿಂದ ಸಲ್ಲಿಸಲಾಗುತ್ತಿದೆ.

ಸಂಪಾದಕೀಯ...

ಭಾಷೆಯು ಭಾವನೆ, ಅಭಿಪ್ರಾಯ, ಮಾಹಿತಿ ಮತ್ತು ಜ್ಞಾನವನ್ನು ಪಸರಿಸುವ ವಾಹಕ. ಈ ವಾಹನಕ್ಕೆ ಸೀಮಿತವಾದ ಅವಕಾಶಗಳಿರುತ್ತವೆ. ಅತಾರ್ಕಿಕವಾದ ಸಂವೇದನೆಗಳೊಡನೆ ವ್ಯವಹರಿಸಲು ಭಾಷೆಗೆ ಮಿತಿಗಳಿರುತ್ತವೆ. ಇಂತಹ ಸಂದರ್ಭಗಳಲ್ಲಿ ಭಾಷೆ ಮೌನದೆದುರಿಗೆ ಮಂಡಿಯೂರುತ್ತದೆ.

ಆದರೆ ಭಾಷೆ ಸಾಹಿತ್ಯವನ್ನು ತನ್ನ ಹೆಗಲ ಮೇಲೆ ಹೊತ್ತು ನಡೆದರೆ ತನ್ನ ತೂಕವನ್ನು ಹೆಚ್ಚಿಸಿಕೊಳ್ಳುತ್ತದೆ. ಅದರ ವಿಸ್ತಾರವು ಬಹುಮುಖವಾಗುತ್ತದೆ. ಅಸಾಧ್ಯವನ್ನು ದಾಟುತ್ತದೆ. ಜೀವ ವಿಸ್ಮಯವನ್ನು ಅರಳಿಸುತ್ತದೆ.

ಹೆಣ್ಣಿನ ದೇಹದ ಮೇಲೆ ಆಗುತ್ತಿರುವ ದಬ್ಬಾಳಿಕೆಗಳ ಬಗ್ಗೆ, ಮಾಹಿತಿಗಳನ್ನಾದರಿಸಿದ, ವಿವರವಾದ, ಅಂಕಿ–ಸಂಖ್ಯೆಗಳ ಸಮರ್ಥನೆಯೊಂದಿಗೆ ಬರೆದಿರುವ ಅನೇಕ ಲೇಖನಗಳನ್ನು, ಭಾಷಣಗಳನ್ನು ನಾವೆಲ್ಲ ಓದಿರುತ್ತೇವೆ ಅಥವಾ ವರದಿಗಳನ್ನು ಮಾಧ್ಯಮಗಳಲ್ಲಿ ನೋಡಿರುತ್ತೇವೆ. ಇಂತಹ ಮಾಹಿತಿಗಳನ್ನು ತಿಳಿಯುತ್ತಲೇ ಮನಸ್ಸು ಖಿನ್ನವಾಗುತ್ತದೆ, ಮರುಗುತ್ತದೆ, ನಿರಾಶೆ ಕವಿಯುತ್ತದೆ.

ಇಂತಹ ಸೂಕ್ಷ್ಮ ಆದರೆ ಕ್ಲಿಷ್ಟವಾದ ವಿಚಾರಗಳನ್ನು ಸಂವಹಿಸುವಾಗ ಭಾಷೆ ತನ್ನೊಂದಿಗೆ ಕಠೋರತೆಯನ್ನು ತಳುಕು ಹಾಕಿಕೊಂಡಿರುತ್ತದೆ. ಆದರೆ ಸು ಫ್ರಮ್ ಸೋ ಅಂತಹ ಚಲನಚಿತ್ರವೊಂದು ಮನೆಯೆಂಬ ಸುರಕ್ಷಿತ ವಲಯವು ಎಷ್ಟೊಂದು ಭೀಕರವಾಗಿರುತ್ತದೆ, ಕತ್ತಲೆಯಲ್ಲಿರುತ್ತದೆ ಎಂಬ ಭೀಕರ ಸತ್ಯವನ್ನು ನಗೆಯ ಲೇಪನದೊಂದಿಗೆ ತೆರೆದಿಡುತ್ತದೆ ಎಂಬುದನ್ನು ಗಮನಿಸಿ. ಇದು ಸಾಹಿತ್ಯದ ಗೆಲವು. ಅದರಿಂದಾಗಿಯೇ ಕನ್ನಡ ಭಾಷೆಗೆ ಹಿರಿಮೆ. ಭಾಷೆ, ಸಾಹಿತ್ಯವನ್ನು ತಲುಪಿಸುವ

ಗಮ್ಯ. ಬದುಕಿನ ವಿವಿಧ ಆಯಾಮಗಳನ್ನು ಸಾಂದರ್ಭಿಕಗೊಳಿಸಿ ಪಥ್ಯದ ಕಠೋರತೆಯನ್ನು ದೂರವಿಡುವ ಮಾಂತ್ರಿಕತೆ ಸಾಹಿತ್ಯಕ್ಕಿದೆ.

ಸಾಹಿತ್ಯಕ್ಕಿರುವ ಈ ಅನನ್ಯತೆಯನ್ನು ದಕ್ಕಿಸಿಕೊಳ್ಳದೆ, ಭಾಷೆಗೆ ಭವಿಷ್ಯವಿರುವುದಿಲ್ಲ. ಅದು ಪೇಲವವಾಗುತ್ತದೆ, ಕೊರಗುತ್ತದೆ. ಸಾಹಿತ್ಯಕ್ಕಿರುವ ಸೃಜನಶೀಲತೆ ಬದುಕಿನ contextನಿಂದ ಬರುವಂತಹದ್ದು. ಸಮಯ–ಸನ್ನಿವೇಶ– ಸಂದರ್ಭಗಳ ಹದದಲ್ಲಿ ಅಗತ್ಯತೆಗೆ ಅನುಗುಣವಾಗಿ ರೂಪಗೊಳ್ಳುವ ಪ್ರಕ್ರಿಯೆ, ಸಾಹಿತ್ಯದ ನಾವೀನ್ಯತೆಯನ್ನು, ಸೊಬಗನ್ನು ಹೆಚ್ಚಿಸುತ್ತದೆ. ಹಾಗಾಗಿಯೇ ಸಾಹಿತ್ಯವು ಬದುಕಿನ ಜಂಜಡವೆಂಬ ಕಡುಗೋಲಿಂದ ಕಡೆಯಲ್ಪಡುವ ನವನೀತ. ಕೆಸರಿನಲ್ಲಿ ಅರಳುವ ಕಮಲ. ಕೆಸರು ಹೆಚ್ಚಿದ್ದಷ್ಟೂ ಹೂವಿನ ಸೊಬಗು ಅಧಿಕ. ಕವಿಗೆ ಸಾಹಿತ್ಯದ ಈ ಸೊಬಗನ್ನು ಭಾಷೆಯ ಮೂಲಕ ಹಿಡಿದಿಡುವ ಸವಾಲಿರುತ್ತದೆ. ಆ ಎತ್ತರಕ್ಕೆ ಏರುವ ಕನಸು ಸದಾ ಹಸಿರಾಗಿರಲಿ ಎಂಬುದು ಆಶಯ.

– ಡಾ. ಸರಸ್ವತಿ ಕೆ. ಬಿ

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ತಜ್ಞ ಪರಿಶೀಲನ ಸಮಿತಿಯ ವರದಿ :

'ಪ್ರತಿಸ್ಪಂದ' ಪತ್ರಿಕೆಯ ಸಂಚಿಕೆಯು ವೈವಿಧ್ಯಮಯ ಲೇಖನಗಳೊಂದಿಗೆ ಮೂಡಿ ಬಂದಿದೆ. ಸಂಶೋಧನಾರ್ಥಿಗಳು, ಅಧ್ಯಾಪಕರು ಹಾಗೂ ಸಾಹಿತ್ಯ ಅಭಿರುಚಿಯ ಸೃಜನಶೀಲ ಲೇಖಕರು ತಮ್ಮ ಆಯ್ಕೆಯ ವಿಷಯಗಳಲ್ಲಿ ಆಸಕ್ತಿ ಮತ್ತು ಶ್ರದ್ಧೆಯಿಂದ ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವ ಪ್ರಯತ್ನ ಮಾಡಿದ್ದಾರೆ. ಶಾಸನಗಳು, ಯುದ್ಧ ಶಾಪದ ಪರಿಕಲ್ಪನೆ, ಜಾನಪದ ಸಾಹಿತ್ಯ, ಕಥೆ, ನಾಟಕ, ಕಾದಂಬರಿ, ಸಂಸ್ಕೃತಿ, ಭಾಷಾ ಕೌಶಲಗಳ ಕಲಿಕೆ ಮುಂತಾದ ವಿಷಯ ಪ್ರಕಾರಗಳಲ್ಲಿ ಲೇಖನಗಳನ್ನು ಬರೆಯುವ ಮೂಲಕ ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಸಾಹಿತ್ಯ, ಭಾಷೆಯ ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನಾ ಕ್ಷೇತ್ರವು ವೈಜ್ಞಾನಿಕ, ವೈಚಾರಿಕ ತಳಹದಿಯ ಮೇಲೆ ನಿಂತಾಗ ಓದುಗರ ದೃಷ್ಟಿಕೋನ ಮತ್ತು ಆಲೋಚನಾ ಕ್ರಮವನ್ನು ವಿಭಿನ್ನತೆಯ ಕಡೆಗೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತದೆ. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳು ಏಕ ಮಾದರಿಯ ಕಡೆಗೆ ಹೋಗದೆ, ಬಹುತ್ವದ ಕಡೆಗೆ ಹೊರಟಾಗ ವೈವಿಧ್ಯತೆಗೆ ಅವಕಾಶ ಸಿಗುತ್ತದೆ. ಹಾಗೆಯೇ ಆಲೋಚನಾಕ್ರಮ ಮತ್ತು ವೈಜ್ಞಾನಿಕ ಮನೋಭಾವದ ತಳಹದಿಯ ಮೇಲೆ ನಿಂತಾಗ ಮಾತ್ರ ಸಾಹಿತ್ಯ ವೈಚಾರಿಕ ತಳಹದಿಯ ಮೇಲೆ ನಿಲ್ಲಲು ಸಾಧ್ಯವಾಗುತ್ತದೆ. ಸಂಶೋಧನಾ ಕ್ಷೇತ್ರ ಕನ್ನಡ ಸಾಹಿತ್ಯದಲ್ಲಿ ಬಹುತ್ವದ ನೆಲೆಯಾಗಿ ರೂಪುಗೊಳ್ಳಲಿ ಎಂದು ಆಶಿಸುತ್ತೇನೆ. ಎಲ್ಲಾ ಲೇಖಕರಿಗೂ ಮತ್ತು ಸಂಪಾದಕ ಮಂಡಳಿಯ ಇತರರಿಗೂ ಧನ್ಯವಾದಗಳು.

– ಡಾ. ಗೋವಿಂದರಾಯ ಎಂ.

ಈ ಸಂಚಿಕೆಯ ವಿಶೇಷವೇ ಕನ್ನಡ ಸಾಹಿತ್ಯ ಬೆಳೆದ ಎಲ್ಲಾ ಕಾಲಘಟ್ಟದ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಿದ ಮರುಚಿಂತನೆಯ ಲೇಖನಗಳು ಬಂದಿರುವುದು. ಗುರುತಿಸದೇ ಕಣ್ಮರೆಯಲ್ಲಿದ್ದ ಶಾಸನ ಕವಿಗಳು ಪರಿಚಯ, ವಚನಕಾರರು, ಅನೇಕ ಬರಹಗಾರರು ಬರಹಗಳಲ್ಲಿ ಸಮ ಸಮಾಜ ನಿರ್ಮಾಣದ ಆಶಯಗಳು, ಕರ್ನಾಟಕ ಇತಿಹಾಸದ ಮಹತ್ವದ ಶೋಧನೆ, ಐತಿಹಾಸಿಕ ಸ್ಥಳಗಳ ಸಾಂಸ್ಕೃತಿಕ ಮಹತ್ವದ ಶೋಧ, ಪ್ರಕೃತಿ ನಾಶ ಮತ್ತು ಹೆಣ್ಣಿನ ಶೋಷಣೆಯನ್ನು ಹೊಸ ಪರಿಕಲ್ಪನೆಯ ನೆಲೆಯಲ್ಲಿ ಅಧ್ಯಯನ, ವೈಜ್ಞಾನಿಕ ಮತ್ತು ಮನೋವೈಜ್ಞಾನಿಕ ನೆಲೆಯಲ್ಲಿ ವಿಭಿನ್ನ ದೃಷ್ಟಿಕೋನದ ಸಾಹಿತ್ಯಿಕ ಚಿಂತನೆಗಳು ನಡೆದಿರುವುದು, ಈ

ಎಲ್ಲ ರೀತಿಯ ಕೃಷಿಯಿಂದ ಸಂಶೋಧನಾ ಕಾರ್ಯದ ಮೌಲ್ಯವನ್ನು ಹೆಚ್ಚಿಸಿದೆ.

– ಅನಿತ ಕೆ. ವಿ.

ಈ ಬಾರಿಯ ಪ್ರತಿಸ್ಪಂದ ಸಂಚಿಕೆಯ ವೈವಿಧ್ಯಮಯ ಬರಹಗಳಿಂದ ಕೂಡಿದ್ದು ಒಂದೊಂದು ಲೇಖನವೂ ವಿಭಿನ್ನ ದೃಷ್ಟಿಕೋನದಲ್ಲಿ ಮಾನವ ಜೀವನ, ಚರಿತ್ರೆ ಸಮಾಜ, ಪರಿಸರ, ಧರ್ಮ, ರಾಜಕೀಯ, ಮಹಿಳೆ, ಆಧ್ಯಾತ್ಮ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಬಿಂಬಿಸುವ ಪ್ರಯತ್ನವನ್ನು ಮಾಡಿದೆ.

ತಾತ್ವಿಕ ನೆಲೆಗಟ್ಟಿನಲ್ಲಿ ರೂಪುಗೊಂಡಿರುವ ಲೇಖನಗಳು (ಕನಕದಾಸರು, ಸರ್ವಜ್ಞ, ಹರಿಹರ, ಅಂಬಿಗರ ಚೌಡಯ್ಯ, ಸಿದ್ಧಲಿಂಗಯ್ಯ ಕುರಿತಾದವು) ಇಂದು ನಾವು ಪಾಲಿಸಲೇಬೇಕಾದ ಹಲವು ಜೀವನ ಮಾರ್ಗಗಳಿಗೆ ಬೆಳಕು ಚೆಲ್ಲುತ್ತವೆ. ಇನ್ನು ಯುದ್ಧಕ್ಕೆ ಸಂಬಂಧಿಸಿದ ವಿನಯ ಕುಮಾರ್ ಅವರ ಲೇಖನ ಹಾಗೂ ಶಾಂತಿ ತುಂಬುವ ಪ್ರಯತ್ನ ಮಾಡುವ ರಂಜಾನ್ ದರ್ಗಾ ಅವರ 'ಪ್ರಣಾಳಿಕೆ' ಕವಿತೆ ಕುರಿತ ಲೇಖನಗಳು ತಮ್ಮ ಕಣ್ಣೆದುರಿನ ವಾಸ್ತವ ದುಸ್ಥಿತಿಯನ್ನು ಬಿಚ್ಚಿಡುತ್ತವೆ. ಒಟ್ಟಾರೆಯಾಗಿ, ಬಹುತೇಕ ಲೇಖನಗಳು ನಮ್ಮ ಎದುರಿನ ಆಯ್ಕೆಗಳನ್ನು ಸರಿಯಾದ ರೀತಿಯಲ್ಲಿ ಆರಿಸಿಕೊಳ್ಳುವ ಕುರಿತು ನಮಗೆ ಮಾರ್ಗದರ್ಶನ ಮಾಡುತ್ತವೆ.

– ಸಿದ್ಧರಾಮಯ್ಯ ಡಿ. ಎಂ

ಪ್ರಸ್ತುತ ಪ್ರತಿಸ್ಪಂದ ಸಂಚಿಕೆಯಲ್ಲಿ ಮುದ್ರಣಕ್ಕೆ ಸಿದ್ಧವಾಗಿರುವ ಲೇಖನಗಳೆಲ್ಲವೂ ವಿವಿಧ ಆಯಾಮಗಳಿಂದ ಕೂಡಿದ್ದು ಓದುಗರನ್ನು ಪ್ರಚೋದಿಸುತ್ತವೆ, ಚಿಂತನನೆಗೊಡ್ಡುತ್ತವೆ. ಮಾತ್ರವಲ್ಲದೆ, ಸಂಶೋಧನಾತ್ಮಕವಾಗಿಯೂ ವಿಶ್ಲೇಷಣಾತ್ಮಕವಾಗಿಯೂ ಮೂಡಿಬಂದಿವೆ. ಹಾಗಾಗಿ ಇವುಗಳನ್ನು ಪ್ರಕಟಿಸಬಹುದಾಗಿದೆ.

ಡಾ. ಎಂ. ರಂಗಸ್ವಾಮಿ

ಪರಿವಿಡಿ

ವಿಜಯನಗರ ಜಿಲ್ಲೆಯ ಶಾಸನೋಕ್ತ ಕವಿಗಳು

ಶ್ರೀ ರಘುಪ್ರಸಾದ ಟಿ.
ಕನ್ನಡ ಸಹಾಯಕ ಪ್ರಾಧ್ಯಾಪಕರು
ಶ್ರೀ ಶಂ.ಆ.ಸಿಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಪೇಟೆ
ವಿಜಯನಗರ ಜಿಲ್ಲೆ

ಕರ್ನಾಟಕದ ನೂತನ ಜಿಲ್ಲೆಯಾದ ವಿಜಯನಗರವು ಐತಿಹಾಸಿಕವಾಗಿ ಶ್ರೀಮಂತವಾಗಿದೆ. ವಿಜಯನಗರದ ರಾಜಧಾನಿ ಹಂಪೆಯ ಗತಕಾಲದ ವೈಭವವು ಈ ಜಿಲ್ಲೆಯ ಪ್ರಮುಖ ಅಸ್ಮಿತೆ. ಬಳ್ಳಾರಿಯನ್ನು ವಿಭಜಿಸಿ ಹೊಸಪೇಟೆಯನ್ನು ಜಿಲ್ಲಾ ಕೇಂದ್ರವಾಗಿಸಿ ನೂತನ ಜಿಲ್ಲೆಗೆ ವಿಜಯನಗರ ಎಂಬ ಹೆಸರನ್ನು ನಾಮಕರಣ ಮಾಡಿದ್ದೂ ಈ ಹಿನ್ನೆಲೆಯಲ್ಲಿಯೇ. ಜಿಲ್ಲಾ ವ್ಯಾಪ್ತಿಯಲ್ಲಿ ಎಂಟುನೂರಕ್ಕೂ ಹೆಚ್ಚು ಶಾಸನಗಳು ಪತ್ತೆಯಾಗಿದ್ದು ಅವುಗಳು ಈ ಪ್ರದೇಶದ ಸಾಮಾಜಿಕ, ಸಾಹಿತ್ಯಕ, ಧಾರ್ಮಿಕ, ರಾಜಕೀಯ ಪರಂಪರೆಯನ್ನು ಕಟ್ಟಿಕೊಡುವಲ್ಲಿ ಪ್ರಮುಖ ಆಕರಗಳಾಗಿವೆ. ಪ್ರಸ್ತುತ ಲೇಖನದಲ್ಲಿ ಜಿಲ್ಲೆಯ ಸಾಹಿತ್ಯಿಕ ಶ್ರೀಮಂತ ಪರಂಪರೆಗೆ ಕಾರಣರಾದ ಪ್ರಾಚೀನ ಶಾಸನ ಕವಿಗಳ ಚರಿತ್ರೆಯನ್ನು ಕಟ್ಟಿಕೊಡುವುದಾಗಿದೆ. ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ದೊರೆತ ಶಾಸನಗಳಲ್ಲಿ ಒಟ್ಟು 35 ಜನ ಕವಿಗಳ ಹೆಸರುಗಳು ಉಲ್ಲೇಖವಾಗಿವೆ.

ಸಾಹಿತ್ಯಿಕವಾಗಿ ಮಹತ್ತರವಾದ ಅನೇಕ ಶಾಸನಗಳಲ್ಲಿ ಕವಿಗಳ ಉಲ್ಲೇಖವೇ ಆಗಿಲ್ಲವಾದರೂ ಅಲ್ಲಿಯ ಕಾವ್ಯಮಯ ಸಾಲುಗಳನ್ನು ಗಮನಿಸಿದರೆ ಆ ಕಾಲದ ಪ್ರಸಿದ್ಧ ಕವಿಗಳಾಗಿರಬಹುದೇನೋ ಎಂದು ಊಹಿಸಬಹುದಾದಷ್ಟು ಉತ್ಕೃಷ್ಟತೆಯು ಕಂಡುಬರುವುದು. ಪ್ರಸ್ತುತ ಶಾಸನಗಳಲ್ಲಿ ಹೆಸರಿನ ಉಲ್ಲೇಖವಿರುವ ಕವಿಗಳನ್ನು ಕುರಿತು ಮಾತ್ರ ಪ್ರಸ್ತಾಪಿಸಲಾಗಿದೆ ಮತ್ತು ಚರ್ಚಿಸಲಾಗಿದೆ. ಉಲ್ಲೇಖಗೊಂಡ ಶಾಸನಕವಿಗಳೆಲ್ಲರು

ಶ್ರೇಷ್ಠಕವಿಗಳಾಗಿದ್ದರು ಎಂದು ಬಾವಿಸಬೇಕಿಲ್ಲ. ಕವಿಗಳ ಹೆಸರು ಉಕ್ತಗೊಳ್ಳದ ಅನೇಕ ಶಾಸನಗಳು ಕಾವ್ಯಾತ್ಮಕವಾಗಿ ಉತ್ಕೃಷ್ಟವಾಗಿವೆ. 3ನೇ ಶತಮಾನದಿಂದ 18ನೇ ಶತಮಾನದವರೆಗೂ ಕವಿಗಳ ಹೆಸರು ಉಕ್ತವಾಗಿದ್ದು. ಉಕ್ತಗೊಂಡ ಕವಿಗಳ ಬಗ್ಗೆ ಮಾತ್ರ ಮಾಹಿತಿ ನೀಡಲಾಗಿದೆ.

ಕೋೞಿವಾಡದ ಭೋಜಕದ ಭಟ್ಟಸರ್ಮ (ಕ್ರಿ.ಶ.3ನೇ ಶ.ಮಾ)

ಹಡಗಲಿ ತಾಲ್ಲೂಕು ಹಿರೇಹಡಗಲಿಯಲ್ಲಿ ದೊರೆತ ತಾಮ್ರ ಶಾಸನವನ್ನು ರಚಿಸಿದ ಭಟ್ಟಸರ್ಮನನ್ನು ವಿಜಯನಗರ ಜಿಲ್ಲೆಯ ಮೊದಲ ಪ್ರಾಚೀನ ಗದ್ಯ ಶಾಸನ ಕವಿಯಾಗಿ ಗುರುತಿಸಬಹುದಾಗಿದೆ. ಪ್ರಸ್ತುತ ದಾನ ಶಾಸನವನ್ನು ಪ್ರಾಕೃತದಲ್ಲಿ ರಚಿಸಿದ್ದಾನೆ. ತನ್ನ ತಂದೆ ಬಪ್ಪಸ್ವಾಮಿಯು ಈ ಮೊದಲು ಬ್ರಾಹ್ಮಣರಿಗೆ ದಾನವಾಗಿ ನೀಡಿದ್ದ ಚಿಲ್ಲರೇಕಕೋಡುಂಕ ಗ್ರಾಮದಲ್ಲಿನ ತೋಟ ಹಾಗೂ ಭೂಮಿಯನ್ನು ಪಲ್ಲವರ ಅರಸ ಶಿವಸ್ಕಂದವರ್ಮ ಪುನಃ ದಾನ ನೀಡಿದ್ದನ್ನು ಶಾಸನದಲ್ಲಿ ಹೇಳಲಾಗಿದೆ.

ಕಾಳಿದಾಸಯ್ಯ (ಕ್ರಿ.ಶ.1035)

ಚಾಳುಕ್ಯರ ಜಗದೇಕಮಲ್ಲ ಜಯಸಿಂಹದೇವನ ಆಳ್ವಿಕೆಯ ಸಂದರ್ಭದಲ್ಲಿದ್ದ ಕಾಳಿದಾಸಯ್ಯನು ಕನ್ನಡದ ಗದ್ಯದಲ್ಲಿ ರಚಿಸಿದ ಶಾಸನವೊಂದು ಹರಪನಹಳ್ಳಿ ತಾಲ್ಲೂಕಿನ ಬಾಗಳಿಯಲ್ಲಿ ದೊರೆತಿದೆ. ಕನ್ನಡದಲ್ಲಿ ಶಾಸನವನ್ನು ರಚಿಸಿದ ಇವನು ಮಾಂಡಳಿಕ ಬಿಜ್ಜರಸನ ಪೆರ್ಗಡೆಯಾಗಿದ್ದನೆಂದು ತಿಳಿದು ಬರುತ್ತದೆ. ವಿಜಯನಗರ ಜಿಲ್ಲೆಯಲ್ಲಿ ದೊರೆತ ಮೊದಲ ಕನ್ನಡ ಗದ್ಯ ಶಾಸನಕವಿಯೆಂದು ಇವನನ್ನು ಗುರುತಿಸಬಹುದಾಗಿದೆ. ಬಾಗಳಿಯ ಐವತ್ತು ಮಹಾಜನರು ಕಲಿದೇವರ ದೇವಾಲಯದಲ್ಲಿ ಸೇರಿ ಅಚ್ಚವಳ್ಳಿಯರ ಗಣಮಯ್ಯನ ತಮ್ಮ ನಾಯ್ಚಯ್ಯನ ಕೈಯಲ್ಲಿ ಅಕ್ಕಸಾಲಿಯ ಆದಾಯದ ಉಪ್ಪು ಮತ್ತು ಧಾನ್ಯಗಳನ್ನು ಹೊನ್ನಿಗೆ ಎರಡು ಬಳ್ಳದಂತೆ ಕೊಂಡುಕೊಳ್ಳಲು 103 ಗದ್ಯಾಣವನ್ನು ಬಿಟ್ಟು ಇದರ ಹುಟ್ಟುವಳಿಯಲ್ಲಿ ನಾಲ್ಕು ಜನರಿಗೆ ಸತ್ರವನ್ನು ನಡೆಸುವಂತೆ ದಾನಬಿಟ್ಟ ವಿಚಾರವನ್ನು ಈ ಗದ್ಯ ಶಾಸನದಲ್ಲಿ ತಿಳಿಸಲಾಗಿದೆ.

ನಾಗಮಯ್ಯ (ಕ್ರಿ.ಶ.1045)

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮೋರಿಗೆರೆ ಗ್ರಾಮದ ಉದ್ದಿ ಬಸವಣ್ಣನ ಗುಡಿಯಲ್ಲಿನ ಶಾಸನವೊಂದನ್ನು ನಾಗಮಯ್ಯನು ರಚಿಸಿರುವುದು ತಿಳಿದುಬರುತ್ತದೆ. ಚಾಳುಕ್ಯರ ಆಹವಮಲ್ಲದೇವನ ಸಾಮಂತರಾಗಿದ್ದ ನೊಳಂಬಪಲ್ಲವರ ವಂಶದ ಪ್ರಮುಖರನ್ನು ಹೆಸರಿಸಲಾಗಿದೆ. ಒಂದು ವೃತ್ತದಲ್ಲಿ ನನ್ನಿನೊಳಂಬನನ್ನು ಹಾಗೂ ಒಂದು ಕಂದಪದ್ಯದಲ್ಲಿ ಮೋರಿಗೆರೆಯನ್ನು ಬಣ್ಣಿಸಲಾಗಿದ್ದು ಉಳಿದ ಸಾಲುಗಳು ಗದ್ಯದಲ್ಲಿವೆ. ಉದಯಾದಿತ್ಯದೇವನ ಕಿರಿಯ ಮಗನಾದ ನನ್ನಿನೊಳಂಬ ಪಲ್ಲವ

ಪೆರ್ಮಾನಡಿಯನ್ನು ವೈರಿನಾರಾಯಣ, ರಾಜಮನೋಜ, ದ್ರೋಹಾಕಾಳಾನಳ, ಹಯವತ್ಸರಾಜ, ಚಿತ್ರವೆಡಂಗ, ತ್ಯಾಗಚಿಂತಾಮಣಿ, ರಾಜಗಜಸರ್ವಜ್ಞ ಎಂಬ ಬಿರುದುಗಳಿಂದ ಅಲಂಕರಿಸಲಾಗಿದೆ. ಅವನ ಪರಾಕ್ರಮವನ್ನು, ಗುಣವಿಶೇಷತೆಗಳನ್ನು ಕವಿ ನಾಗಮಯ್ಯನು ಚಂಪಕಮಾಲಾ ವೃತ್ತದಲ್ಲಿ ಸೊಗಸಾಗಿ ವರ್ಣಿಸಿದ್ದಾನೆ.

"ನುಡಿವುದು ನನ್ನಿ ಮಾಡುವುದು ಕೀರ್ತನಮೀವುದೆ ಸದ್ವಿನೋದಮೊ
ಯ್ದಡೆ ಮಱವೊಕ್ಕಱನ್ನೆಱಯೆ ಕಾವಗುಣಂ ಬಸನಂ ಮಹಾಜಿಯೊ
ಳ್ಪಡೆಯದುದುಗ್ಗಿಯೆಂದು ನುಡಿವೀನುಡಿ ಲೆಂಕರೊಳಾವಕಾಲಮುಂ
ನಡೆವುದು ಪಣ್ಡಿತರ್ಪೊರ್ಗಳೆ ಭೇರಿಯ ಗೋಸನೆ ಭೂತಳಾಗ್ರದೊಳ್"

ಉತ್ತಮ ಸಾಹಿತ್ಯಗುಣವುಳ್ಳ ಈ ಶಾಸನಪದ್ಯವನ್ನು ವಿಜಯನಗರ ಜಿಲ್ಲೆಯ ಮೊದಲ ಶಾಸನೋಕ್ತ ಪದ್ಯವಾಗಿ ಗುರುತಿಸಬಹುದಾಗಿದೆ. ಇದಕ್ಕಿಂತ ಮೊದಲು ಶಾಸನಪದ್ಯಗಳು ಕಂಡುಬಂದಿರುವುದಿಲ್ಲ. ನನ್ನಿನೊಳಂಬನು ಹೆಸರಿಗೆ ತಕ್ಕಂತೆ 'ನುಡಿಯುವುದು ನನ್ನಿ' ಎಂದು ಹೇಳಿರುವಲ್ಲಿ ಕವಿಯ ಚಮತ್ಕಾರ ವ್ಯಕ್ತವಾಗಿರುವುದನ್ನು ಗುರುತಿಸಬಹುದು. ಇದೇ ಶಾಸನದ ಕಂದಪದ್ಯವೊಂದರಲ್ಲಿ ಮೋರಿಗೆರೆಯನ್ನು ಸೊಗಸಾಗಿ ವರ್ಣಿಸಲಾಗಿದೆ.

"ವಾರಿಧಿಪರಿವೃತ ಧಾತ್ರೀ
ನಾರಿಯವದನವೊಲೆಸೆವ ಕೋಗಳಿನಾಡೊ
ಳ್ಮೋರಿಂಗೆಱ ತಿಳಕಾಳಂ
ಕಾರಮನನುಕರಿಪುದೆನೆ ಜನಂ ಬಣ್ಣಿಸದೇ"

'ಭೂದೇವಿಯ ವದನದಂತೆ ಕಾಣುವ ಕೋಗಳಿ ನಾಡಿನಲ್ಲಿ ಮೋರಿಂಗೆರೆಯು ತಿಳಕಾಲಂಕಾರದಂತೆ' ಎಂದು ಬಣ್ಣಿಸಿರುವುದು ವಿಶೇಷವಾಗಿದೆ. ಇಲ್ಲಿಯ ಪದ್ಯಗಳ ಸಾಲುಗಳನ್ನು ಗಮನಿಸಿದರೆ ನಾಗಮಯ್ಯ ಆ ಕಾಲದ ಶ್ರೇಷ್ಠ ಕವಿಯಾಗಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಇವನು ಇತರ ಕಾವ್ಯಗಳನ್ನು ಬರೆದಿರಲೂ ಸಾಧ್ಯವಿದೆ. ಅಂತಹ ಕಾವ್ಯಶಕ್ತಿ ಇಲ್ಲಿನ ವೃತ್ತ ಮತ್ತು ಕಂದಪದ್ಯಗಳಲ್ಲಿ ಕಾಣಲಾಗಿದೆ. ಛಂದೋಬದ್ಧವಾಗಿ ಪದ್ಯಗಳನ್ನು ರಚಿಸಿದ ನಾಗಮಯ್ಯನನ್ನು ವಿಜಯನಗರ ಜಿಲ್ಲೆಯ ಮೊದಲ ಪದ್ಯಶಾಸನ ಕವಿ ಎಂದು ಗುರುತಿಸಲಾಗಿದೆ. ನಾಗಮಯ್ಯನು ಅಣ್ಣಿಗೆರೆಯ ವಿದ್ಯಾಭರಣಜೀಯರ ಮಗನಾಗಿದ್ದನೆಂದು ಶಾಸನದಿಂದ ತಿಳಿದುಬರುತ್ತದೆ.

ನಾಗವಾರ (ಕ್ರಿ.ಶ.1046)

ಹಡಗಲಿ ತಾಲ್ಲೂಕಿನ ಮೈಲಾರದ ಐವತ್ತಾರುಸಾಲುಗಳ ದೀರ್ಘ ಶಾಸನವೊಂದನ್ನು ರಚಿಸಿದ ನಾಗವಾರ ಮಹತ್ವದ ಕವಿಯಾಗಿದ್ದಾನೆ. ಚಾಳುಕ್ಯರ

ತ್ರೈಲೋಕ್ಯಮಲ್ಲದೇವನ ಆಳ್ವಿಕೆಯ ಕಾಲಾವಧಿಯಲ್ಲಿದ್ದ ಕವಿ. ನವ ಗ್ರಹಗಳು ಹನ್ನೊಂದನೆಯ ಸ್ಥಾನದಲ್ಲಿ ಬಂದ ಶುಭ ಮುಹೂರ್ತದಲ್ಲಿ ಹೆಗ್ಗಡೆ ಕಾಳಿದಾಸಯ್ಯನು ಭೂಮಿ, ಮನೆ, ಅಂಗಡಿಯನ್ನು ಸ್ವಯಂಭುದೇವರಿಗೆ ಮತ್ತು ಮೂಲಸ್ಥಾನದ ದೇವರಿಗೆ ದಾನನೀಡಿದ ವಿವರವನ್ನು ಹಾಗೂ ದೇವಾಲಯದ ಸ್ಥಾನಿಕ ಸ್ಥಾನಕ್ಕೆ ವೇದವಿದರೂ, ವೈಷ್ಣವಧರ್ಮೋದಯರೂ, ಅಕಳಂಕಚರಿತರೂ, ಬ್ರಹ್ಮಚರ್ಯ ಪಾಲಿಸುವ ತಪಸ್ವಿಗಳನ್ನು ನೇಮಿಸಲಾಗುತ್ತಿತ್ತು. ಬ್ರಹ್ಮಚರ್ಯ ಪಾಲಿಸದವರನ್ನು ಆ ಸ್ಥಾನದಿಂದ ಓಡಿಸಲಾಗುತ್ತಿತ್ತು ಎಂದು ತಿಳಿಸಲಾಗಿದೆ. ವಿವಿಧ ಸಂದರ್ಭದಲ್ಲಿ ವಿಧಿಸುತ್ತಿದ್ದ ದಂಡ ಪದ್ಧತಿ ಹಾಗೂ ಆ ದಂಡದ ಹಣವನ್ನು ಕೆರೆಕಟ್ಟಿಸುವ, ಕೆರೆದುರಸ್ತಿ ಮಾಡುವ ಕಾರ್ಯಗಳಿಗೆ ಬಳಸಲಾಗುತ್ತಿದ್ದುದನ್ನು ಉಲ್ಲೇಖಿಸಲಾಗಿದೆ.

“ದಕ್ಷಿಣಗಂಗೆಯ ದ್ವಿಜಸಮೂಹದ ಪೆರ್ಚಿದ ವೇದಘೋಷದಿಂ
ದಕ್ಷಯಮೊಳ್ಪುವೆತ್ತ ಕುರುವತ್ತಿಯ ಸತ್ತ್ರಭು ಧರ್ಮಚಿತ್ತದಾ
ಪೇಕ್ಷೆಯೊಳೀಸ್ವರಾಲಯಕೆ ಕೆ..ನೆಯ...ಗೋತ್ರವೃದ್ಧಿಯಿ
ನ್ದಕ್ಷತೆಯಿಕ್ಕಿದರ್ದ್ವಿಜರಿದೇಂಕೃತಪುಣ್ಯನೋಮಂತ್ರಿಮಾಣಿಕ್ಯಂ”(ಉತ್ಪಲಮಾಲಾವೃತ್ತ)
“ಧರಣೀನ್ದ್ರಂಬರಮೆಯ್ದೆ ಸಪ್ತತಳಮಂ ತಳ್ತರ್ತ್ತುಂಮ್ಮ್ರ್ಧ್ಯದದೀ
ನರಲೋಕಂ ಹಿಮಸೇತುಮನ್ದರಮುಮಂ ಕೊಂಬೆತ್ತಿಸುತ್ತಿಱ್ದ್ದವಾ
ಸುರಲೋಕಂಗಳಿನತ್ತಜಾಣ್ಡತಟದೊಳ್ಕೀರ್ತ್ತಿರ್ಲ್ಲತಾವಲ್ಲಿ
ಸ್ತರದಿಂ ಪರ್ವ್ವಿದ ಕಾಳಿದಾಸನ ಮಹಾಸತ್ವಂಯಶೋಭಾಗಿಯೋ” (ಮತ್ತೇಭ ವಿಕ್ರೀಡಿತ)
“ಜಗದೇಕಮಲ್ಲತನಯಂ
ನೆಗೞ್ದಂ ಚಾಲುಕ್ಯತಿಳಕನಾಹವಮಲ್ಲಂ
ಗಗನೇನ್ದುದಿನಕರಾಂಬುಧಿ
ಯುಗಮುಳ್ಳಿನಮೂರ್ಗ್ಗೆ ಪಂಚರಸಮಂ ಬಿಟ್ಟಂ” (ಕಂದ)

ತುಂಗಭದ್ರಾ ನದಿಯನ್ನು ಕವಿ ದಕ್ಷಿಣಗಂಗೆ ಎಂದು ಕರೆದಿದ್ದಾನೆ. ಕಾಳಿದಾಸಯ್ಯನ ಕೀರ್ತಿಯು ಎಲ್ಲೆಡೆ ಬಳ್ಳಿಯಂತೆ ಹಬ್ಬಿರುವುದನ್ನು ಹಾಗೂ ಅರಸನು ಪಂಚರಸವನ್ನು ದಾನಬಿಟ್ಟಿರುವುದನ್ನು ಶಾಸನ ಪದ್ಯದಲ್ಲಿ ಬಣ್ಣಿಸಲಾಗಿದೆ. ಶಾಸನವನ್ನು ಓದಿಸಿದ, ಓದಿದ, ಓದಿ ಸಂತಸಪಟ್ಟವರಿಗೆಲ್ಲ ಮಂಗಳವಾಗಲಿ ಎಂದು ಕವಿ ಹೇಳಿದ್ದಾನೆ. ಮಾಹಾಕಾವ್ಯಗಳಲ್ಲಿ ಕವಿಗಳು ಫಲಶೃತಿಗಳನ್ನು ತಿಳಿಸುತ್ತಿದ್ದಂತೆ ಶಾಸನಗಳಲ್ಲೂ ಹೇಳಿರುವುದು ತುಂಬಾ ವಿಶೇಷವೆನಿಸಿದೆ.

“ಎಳೆಗೆಸೆಯೆ ಕಾಳಿಗಾಂಕನ

ಕುಳಮೀ ಕೃತಿನೆಗಳೆ ನಾಗವಾರಂ ಪೇಟ್ದಿಂ
ಸಿಳಸಾಸನದೊಳು ಮನುಮುನಿ
ಗಳ ವಾಕ್ಯಮನಡೆಯೆ ನಾಗಮ್ಮ ಬರೆದಂ”

ಶಾಸನದಲ್ಲಿ ನಾಗವಾರ ಹೇಳಿದಂತೆಯೂ, ನಾಗಮ್ಮನೆಂಬುವನು ಬರೆದಂತೆಯೂ ಉಲ್ಲೇಖಿತವಾಗಿದ್ದರೂ ಇವನ ನಿಜವಾದ ಹೆಸರು ನಾಗವರ್ಮನೇ ಇರಬೇಕು. ಶಾಸನ ಕಂಡರಿಸುವಾಗ ತಪ್ಪಾಗಿ ಉಲ್ಲೇಖವಾಗಿರುವಂತೆ ಕಾಣುತ್ತದೆ. ಮೇವುಂಡಿ ಮಲ್ಲಾರಿಯುವರು ನಾಗವರ್ಮನೇ ಸರಿಯಾದ ಹೆಸರೆಂದು ಪ್ರತಿಪಾದಿಸಿದ್ದಾರೆ. ಒಂದೇ ಕಲ್ಲಲ್ಲಿ ಎರಡು ಶಾಸನಗಳನ್ನು ಕಂಡರಿಸಿದ್ದು ಎರಡನೇ ಶಾಸನ ಬಹುಪಾಲು ತ್ರುಟಿತಗೊಂಡಿದೆ. ಆದರೆ ಕೊನೆಯ ಸಾಲುಗಳಲ್ಲಿ 'ನಾಗವರ್ಮಂ ಬರೆದಂ' ಎಂದಿದೆ ಎನ್ನುವುದನ್ನು ಗುರುತಿಸಿದ್ದಾರೆ. ನರಗುಂದದ ಶಾಸನವೊಂದರಲ್ಲಿ ನಾಗವಾರಕವೀಂದ್ರ ಎಂಬ ಹೆಸರು ಉಲ್ಲೇಖವಾಗಿದೆಯಾದರೂ ಅವನು ಕೊಲ್ಲೂರಿನವನೆಂದು ತಿಳಿದುಬರುತ್ತದೆ.

ವಿಷ್ಣಯ್ಯ (ಕ್ರಿ.ಶ.1046)

ಹಗರಿಬೊಮ್ಮನಹಳ್ಳಿ ತಾಲೂಕಿನ ಮೊರಿಗೇರಿ ಗ್ರಾಮದ ಉದ್ದಿ ಬಸವಣ್ಣನ ಗುಡಿಯ ಮುಖಮಂಟಪದಲ್ಲಿನ ಶಾಸನವನ್ನು ವಿಷ್ಣಯ್ಯ ರಚಿಸಿದ್ದಾನೆ. ಇವನ ತಂದೆ ಊರೊಡೆಯನಾಗಿದ್ದ ನಾರಣಮಯ್ಯ. ಇವನಿಗೆ ನಾಗವರ್ಮಯ್ಯನೆಂಬ ಅಣ್ಣನಿದ್ದನು. ಕಲ್ಯಾಣ ಚಾಳುಕ್ಯರ ತ್ರೈಲೋಕ್ಯಮಲ್ಲದೇವನ ಆಳ್ವಿಕೆಯಲ್ಲಿ ಶಿವಪಾದಶೇಖರ, ನೀತಿರತ್ನಾಕರ, ನುಡಿದಂತೆಗಂಡ, ಪತಿಹಿತಗರುಡ ಬಿರುದುಗಳನ್ನು ಹೊಂದಿದ್ದ ದಂಡನಾಯಕ ಸೋವಿಮಯ್ಯನು ಮೋರಿಗೆರೆಯ ಊರಿನೊಡೆಯ ಹಾಗೂ ಲೆಂಕಸಾಸಿರ್ವರ ಸನ್ನಿಧಾನದಲ್ಲಿ ಹೊನ್ನು ಕೊಟ್ಟು ಭೂಮಿಯನ್ನು ಕೊಂಡುಕೊಂಡನು. ನಂತರ ಕೆರೆಯೊಳಗೆ ಬಾವಿಯನ್ನು ತೋಡಿಸಿ ಸೋಮತೀರ್ಥ ಎಂದು ಹೆಸರನ್ನಿಟ್ಟು, ಹೂದೋಟ, ನಂದನವನವನ್ನು ನಿರ್ಮಿಸಿ ನೊಳಂಬೇಶ್ವರ ದೇವರಿಗೆ ಕೊಟ್ಟಿರುವುದನ್ನು ಇಲ್ಲಿ ದಾಖಲಿಸಲಾಗಿದೆ. ಇದೊಂದು ಗದ್ಯಶಾಸನವಾಗಿದೆ. ಶಾಸನಕವಿಯಾದ ವಿಷ್ಣಯ್ಯನು ನೊಳಂಬೇಶ್ವರದೇವರಿಗೆ ಭೂಮಿಯನ್ನು ದಾನಕೊಟ್ಟಿರುವುದು ಅವನ ಶಾಸನದಿಂದ ತಿಳಿದು ಬರುತ್ತದೆ.

ವಾವಣಯ್ಯ (ಕ್ರಿ.ಶ.1054)

ಹರಪನಹಳ್ಳಿ ತಾಲೂಕಿನ ನಂದಿಬೇವೂರು ಆಂಜನೇಯ ದೇವಾಲಯದ ಬಳಿಯಿರುವ ಶಾಸನವು ವಾವಣಯ್ಯನಿಂದ ರಚನೆಯಾಗಿದೆ. ಚಾಳುಕ್ಯರ ತ್ರೈಲೋಕ್ಯಮಲ್ಲನ ಕಾಲದಲಿದ್ದ ವಾವಣಯ್ಯ ಜೈನಕವಿಯಾಗಿದ್ದಾನೆ. ಕೋಗಳಿ ನಾಡಿನ

ಮನ್ನೆಯ ಘಟ್ಟಿಯರಸ, ಇರಿವನೊಳಂಬ ನಾರಸಿಂಘದೇವನ ಪಂಚಪ್ರಧಾನರ ಅನುಮತದಲ್ಲಿ ಊರೊಡೆಯ ಸಿವಾಮಯ್ಯ, ಮಾಳಿಮಯ್ಯ ಮೊದಲಾಗಿ 120 ಮಹಾಜನರು ದೇಸಿಗಣದ ಅಷ್ಟೋಪವಾಸಿ ಭಳರರಿಗೆ ತಾವು ಮಾಡಿಸಿದ ಬಸದಿಗೆ ಭೂಮಿಕೊಟ್ಟ ವಿವರ ಇಲ್ಲಿದೆ. ಇದೊಂದು ಗದ್ಯಶಾಸನ.

ಬರ್ಮದೇವ (ಕ್ರಿ.ಶ.1061)

ಹರಪನಹಳ್ಳಿ ತಾಲ್ಲೂಕಿನ ಹಿರೇಮ್ಯಾಗಳಗೆರೆಯ ಶಾಸನವೊಂದನ್ನು (ಶಾ.ಸಂ–33, ಪು.ಸಂ–489, ಕ.ವಿ.ಶಾ.ಸಂ–1) ಇವನು ರಚಿಸಿರುವುದು ತಿಳಿದುಬರುತ್ತದೆ. ಚಾಳುಕ್ಯರ ತ್ರೈಲೋಕ್ಯಮಲ್ಲನ ಆಳ್ವಿಕೆಯಲ್ಲಿ ಮೇಗಣಂಗೆರೆಯನ್ನು ಆಳುತ್ತಿದ್ದ ಅವನ ದಂಡನಾಯಕ ಕೇಸಿಮಯ್ಯನು ಸ್ವಯಂಭು ಕಲಿದೇವರಸ್ವಾಮಿಗೆ ದಾನಬಿಟ್ಟ ವಿವರವನ್ನು ಶಾಸನದಲ್ಲಿ ಹೇಳಲಾಗಿದೆ. ಇವನಿಗೆ 'ಕವಿಮುಖದರ್ಪಣಂ' ಎಂಬ ಬಿರುದು ಇದ್ದುದು ಈ ಶಾಸನದ ಮೂಲಕ ತಿಳಿಯುತ್ತದೆ.

ರೇವಣಾರ್ಯ (ಕ್ರಿ.ಶ.1068)

ಹರಪನಹಳ್ಳಿ ತಾಲೂಕಿನ ಬಾಗಳಿಯ ಕಲ್ಲೇಶ್ವರ ದೇವಾಲಯದ ನೈರುತ್ಯಕ್ಕಿರುವ ಶಾಸನವನ್ನು ಬರೆದಿರುವವನು ರೇವಣಾರ್ಯ. ಇವನು ಕವಿಯೂ, ಶಿಲ್ಪಿಯೂ ಆಗಿದ್ದಂತೆ ತೋರುತ್ತದೆ. ಇವನು ತನ್ನ ಬರಹದ ಬಗ್ಗೆ ಹೆಗ್ಗಳಿಕೆಯ ಮಾತುಗಳನ್ನಾಡಿರುವುದು ತಿಳಿಯುತ್ತದೆ. ತನ್ನನ್ನು ತಾನು ಬರಹದಲ್ಲಿ ಅತಿಜಾಣನೆಂದು ಹೇಳಿಕೊಂಡಿದ್ದಾನೆ. "ಬರಪದೊಳ್ ಹಸ್ತಿಸಿಂಗಂ ಹರಿಣಿಯ ರೂಹಗೆಯಕ್ಷರಾವಳಿಯಿಂದಂ ಬರೆಯಲತಿ ಜಾಣನೆಂದಡೆ ಪುರುಡಿಸವೇಡೆಲೆವೊ ರೇವಣಾರ್ಯ್ಯನೊಳೆಂದುಂ" ಎಂದು ಹೊಗಳಿಕೊಂಡಿದ್ದಾನೆ. ಬರಹದಲ್ಲಿ ಆನೆ, ಸಿಂಹ,ಹರಿಣಿಗಳ ರೂಪವನ್ನು ಅಕ್ಷರಾವಳಿಯಿಂದಲೇ ಬರೆಯಲು ಬಲುಜಾಣನಾದ ತನ್ನೊಡನೆ ಸ್ಪರ್ಧೆಯಾಗಲೀ. ಅಸೂಯೆಯಾಗಲೀ ಬೇಡವೆಂದು ಹೇಳಿಕೊಂಡಿದ್ದಾನೆ. ತನ್ನ ಸಾಮರ್ಥ್ಯದ ಬಗ್ಗೆ ಅಪಾರವಾದ ವಿಶ್ವಾಸ ಹೊಂದಿದ್ದ ರೇವಣಾರ್ಯನು ಇತರರಿಂದ ಅಸೂಯೆಗೆ ಒಳಗಾಗಿದ್ದಂತೆ ಕಾಣುತ್ತದೆ.

ಮಲ್ಲಯ್ಯ ಪಂಡಿತ (ಕ್ರಿ.ಶ.1087)

ಹರಪನಹಳ್ಳಿ ತಾಲ್ಲೂಕಿನ ನೀಲಗುಂದ ಗ್ರಾಮದಲ್ಲಿ ದೊರೆತ ತಾಮ್ರಶಾಸನವನ್ನು ಮಲ್ಲಯ್ಯಪಂಡಿತ ಕವಿ ಬರೆದಿದ್ದಾನೆ. ಇವನು ವತ್ಸಗೋತ್ರದ ಸಾಮವೇದಿ ಭಟ್ಟ, ವಿಲಾಸೋಪಮಾನನೆನಿಸಿದ್ದ ಆರ್ಯಸ್ವಾಮಿಯ ಮಗನೆಂಬುದು ತಿಳಿದುಬರುತ್ತದೆ. ಸಂಸ್ಕೃತ ಪಂಡಿತನಾಗಿದ್ದರಿಂದ ಅದೇ ಭಾಷೆಯಲ್ಲಿಯೆ ಶಾಸನವನ್ನು ರಚಿಸಿದ್ದಾನೆ.. ಚಾಳುಕ್ಯರಾಜ ತ್ರಿಭುವನಮಲ್ಲನು ಕಲ್ಯಾಣಪುರದಿಂದ ಆಳ್ವಿಕೆ

ನಡೆಸುತ್ತಿದ್ದಾಗ ಇವನ ಮಹಾಮಂಡಲೇಶ್ವರ ಪಲಿತಪಾಂಡ್ಯನು ಬ್ರಾಹ್ಮಣರಿಗೆ ನೀರ್ಗುಂದವನ್ನು ದಾನನೀಡಿದ ವಿವರವನ್ನು ಈ ಶಾಸನವು ತಿಳಿಸುತ್ತದೆ.

ಶ್ರೀಕಂಠಸೂರಿ (ಕ್ರಿ.ಶ.1099)

ಹಡಗಲಿ ತಾಲ್ಲೂಕಿನ ಕುರುವತ್ತಿಯ ಕಲ್ಲೇಶ್ವರ ದೇವಾಲಯದ ಬಳಿಯಿರುವ ಶಾಸನವನ್ನು ಕವಿ ಶ್ರೀಕಂಠಸೂರಿಯು ರಚಿಸಿದ್ದಾನೆ. 81 ಸಾಲುಗಳ ದೀರ್ಘಶಾಸನವು 18 ಕನ್ನಡ ಪದ್ಯಗಳನ್ನು ಒಳಗೊಂಡ ಸುಂದರ ಚಂಪೂಕಾವ್ಯವಾಗಿದೆ. ಬೆಣ್ಣೆವೂರು 12ಕ್ಕೆ ಸೇರಿದ್ದು ಅಗ್ರಹಾರವಾಗಿದ್ದ ಕುರುವತ್ತಿಯಲ್ಲಿನ ಸೋಮೇಶ್ವರ ದೇವಾಲಯದ ಐತಿಹ್ಯ ಕುರಿತು ಬೆಳಕುಚೆಲ್ಲುತ್ತದೆ. ಸೋಮೇಶ್ವರದೇವ ಉದಿಸಿದ ಸಂಗತಿಯನ್ನು ವರ್ಣಿಸಿದೆ. ಕುರುವತ್ತಿಯ ಊರೊಡೆಯನಾದ ಕಾಳಿದಾಸ ದಂಡನಾಯಕನು ಹಾಗೂ ಮಹಾಜನ ಇನ್ನೂರ್ವರು ಪರಮಪ್ರೇಮದಿಂದ ಅಭಿನವ ಸೋಮೇಶ್ವರದೇವರಿಗೆ ಅಂಗಭೋಗಕ್ಕೆ, ತಪೋಧನರ ಆಹಾರಕ್ಕೆ ಮಾಟಕೂಟಕ್ಕೆ ಭೂದಾನ ಮಾಡಿದ್ದನ್ನು ತಿಳಿಸಲಾಗಿದೆ. ಶ್ರೀಕಂಠಸೂರಿಯು ಉಭಯಭಾಷಾ ಕವಿಯಾಗಿದ್ದಂತೆ ತೋರುತ್ತದೆ. ಇಡೀ ಶಾಸನವನ್ನು ಕಾವ್ಯಮಯವಾಗಿ ಕನ್ನಡದಲ್ಲಿ ಹೇಳಿ ತನ್ನ ಹೆಸರಿನ ಉಲ್ಲೇಖವನ್ನು ಸಂಸ್ಕೃತ ಪದ್ಯದಲ್ಲಿ ಹೇಳಿರುವುದನ್ನು ಗುರುತಿಸಲಾಗಿದೆ.

"ವಿದ್ಯಾವಧೂಭಾಸುರಕರ್ಣಪೂರಃ
ಶ್ರೀ ಕಾಳಿದಾಸ ವಿಬುಧಾಪತ್ತೇಸ್ತನೂಜಃ
ಸೋಮೇಶಶಾಸನವಚೋರಚನಾಂ ವಿಧಾಯ
ಶ್ರೀಕಂಠಸೂರಿರಲಿಖದ್ವಿಬುಧೈರ್ವಿಚಾರ್ಯರ್ಮ್" ಇವನು ತನ್ನನ್ನು ಕಾಳಿದಾಸನೆಂಬ ಶ್ರೇಷ್ಟ ಬ್ರಾಹ್ಮಣನ ಮಗನೆಂದು, ಸರಸತಿಗೆ ಕಿವಿದೊಡವಿಯಂತಿರುವ ಶ್ರೀಕಂಠಸೂರಿಯೆಂಬ ತಾನು ಸೋಮೇಶ್ವರನ ಶಾಸನವನ್ನು ಬರೆದನು, ತಿಳಿದವರು ಬಗೆದು ನೋಡುವುದು ಎಂದು ಹೇಳಿಕೊಂಡಿದ್ದಾನೆ. (ಕನ್ನಡ ನಾಡಿನ ಶಾಸನಕವಿಗಳು, 1963 ಮೇವುಂಡಿ ಮಲ್ಲಾರಿ, ಕ.ಸಾ.ಪ 2013, ಪು.ಸಂ–85)

ಕುರುವತ್ತಿಯ ವರ್ಣನೆ:

"ಇನ್ತು ನೆಗಟ್ದಗ್ರಹಾರಾ
ಭ್ಯನ್ತಿಕದೊಳು ತುಂಗಭದ್ರೆ ಪಶ್ಚಿಮಮುಖದಿಂ
ಸನ್ತತವಾಹಿನಿಯೆನೆ
ಲಿನ್ತಿನ್ತೆಂದೀ ಗ್ರಾಮವಿಭವಮಂ ಬಣ್ಣಿಪರಾರ್"

ಸೋಮೇಶ್ವರನ ವರ್ಣನೆ:

"ತ್ರಿಭುವನ ಸಂಭವಸ್ಥಿತಿಲಯಂಗಳಿಗೋರ್ವನೆ ಕರ್ತೃವೆಂದು ಸ

ನ್ದ ಭವನಿಕಾಯ ಸಂಸರಣಘೋರಮಹಾರ್ಣ್ಣವ ಕರ್ಣ್ಣಧಾರನೆ
ನ್ದಭಿನಯಿಪನ್ತೆ ದಕ್ಷಿಣಸುರಾಪಗೆಯೊಳ್ ನೆರೆಯೆಲ್ಕೆ ಬನ್ದನೊಲ್ದ
ನಭಿನವಸೋಮನಾಥನಮರೋತ್ಕರನಾಥನನಾಥನವ್ಯಯಂ"(ಚಂ.ಮಾ.ವೃತ್ತ)

ಸೇನಬೋವ ಚಾವರಾಜ (ಕ್ರಿ.ಶ.1100)

ಹರಪನಹಳ್ಳಿಯ ಉಚ್ಚಂಗಿದುರ್ಗದ ಹಾಲಮ್ಮನ ದೇವಾಲಯದಲ್ಲಿರುವ ಶಾಸನವನ್ನು ಸೇನಬೋವ ಚಾವರಾಜ ಎಂಬ ಕವಿ ಬರೆದಿದ್ದಾನೆ. ಚಾಳುಕ್ಯ ತ್ರಿಭುವನಮಲ್ಲಪಾಂಡ್ಯದೇವನ ಸಾಮಂತರಾದ ಬಳನಾಡಾಳ್ವರು ಶ್ರೀಪಾಂಡ್ಯದೇವರಿಗೆ ಭಿನ್ನಪಂಗೆಯ್ಯಲು ಆಗ ಪಾಂಡ್ಯದೇವ ಅನಾದಿಕಾಲದಿಂದಲೂ ಉಚ್ಚಂಗಿ ಕೋಟೆಯನ್ನು ಕಾಪಾಡುತ್ತಾ ಬಂದ ಉಚ್ಚಂಗಿದೇವಿಗೆ ದತ್ತಿನೀಡಿರುವುದು ತಿಳಿಯುತ್ತದೆ. ಕೂಡಲೂರ ಶಂಕರನಾರಾಯಣ ದೇವರ ತೀರ್ಥವನ್ನು ಹೆಸರಿಸುವ ಈ ಶಾಸನವು ಗದ್ಯದಲ್ಲಿದೆ.

ಕಾಳಸೋವಿದ್ಯರ ಮಾದೋಜ (ಕ್ರಿ.ಶ.11ನೇ ಶ.ಮಾ)

ಹರಪನಹಳ್ಳಿಯ ಉಚ್ಚಂಗಿದುರ್ಗದ ದೇವಾಲಯದ ಮುಂದಿರುವ ಶಾಸನವನ್ನು ಕಾಳಸೋವಿದ್ಯರ ಮಾದೋಜ ಬರೆದಿದ್ದಾನೆ. ತ್ರುಟಿತಗೊಂಡಿರುವ ಈ ಶಾಸನದಲ್ಲಿ ಶಾಪಾಶಯವನ್ನು ಹೊರತುಪಡಿಸಿ ಇತರ ಮಾಹಿತಿ ದೊರೆಯುವುದಿಲ್ಲ. 'ಕಾಳಸೋವಿದ್ಯರ ಮಾದೋಜ ಬೆಸಂಗೆಯ್ದಂ' ಎಂದು ಶಾಸನವು ಕೊನೆಯಾಗುತ್ತದೆ.

ಕುಲಕರ್ಣಿ ಕಾಳಯ್ಯ (ಕ್ರಿ.ಶ.1108)

ಹರಪನಹಳ್ಳಿ ತಾಲ್ಲೂಕಿನ ಬಾಗಳಿಯ ಕಲ್ಲೇಶ್ವರದೇವಾಲಯದ ಆವರಣದಲ್ಲಿನ ಶಾಸನವೊಂದನ್ನು ಕುಲಕರ್ಣಿ ಕಾಳಯ್ಯ ರಚಿಸಿರುವುದು ತಿಳಿಯುತ್ತದೆ. ಚಾಳುಕ್ಯರ ತ್ರಿಭುವನಮಲ್ಲನ ಮಹಾಮಂಡಳೇಶ್ವರ ಪಾಂಡ್ಯದೇವನ ಆಳ್ವಿಕೆಯಲ್ಲಿ ಬಾಗಳಿಯ ಅಗ್ರಹಾರದ ಮಹಾಜನರ ಸಮ್ಮುಖದಲ್ಲಿ ಮಲೆಯಾಳ ವಡ್ಡಬೆವಹಾರಿ ಕೊಮರಮಾರ್ಕ್ಕನು ಕಲಿದೇವರಿಗೆ ನಂದಾದೀವಿಗೆಗಾಗಿ ಐದು ಗದ್ಯಾಣವನ್ನು ದಾನವಾಗಿ ನೀಡಿರುವುದನ್ನು ತಿಳಿಸಲಾಗಿದೆ. ಇಂದೊಂದು ಗದ್ಯಶಾಸನವಾಗಿದೆ.

ಕವಿಕಂಠಾಭರಣ (ಕ್ರಿ.ಶ.1110)

ಹಡಗಲಿ ತಾಲ್ಲೂಕಿನ ಹೂವಿನಹಡಗಲಿಯಲ್ಲಿನ ಪಾಂಡುರಂಗದೇವಾಲಯದ ಆವರಣದಲ್ಲಿನ ಶಾಸನವನ್ನು ಕವಿಕಂಠಾಭರಣನು ರಚಿಸಿರುವನು. ಈ ಕವಿಯ ನಿಜನಾಮ ಬೇರೆಯೇ ಇರಬಹುದು. ಕವಿಕಂಠಾಭರಣ ಎನ್ನುವುದು ಈ ಶಾಸನಕವಿಗೆ ಇದ್ದ ಬಿರುದು ಎನಿಸುತ್ತದೆ. ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯದೇವನ ಆಳ್ವಿಕೆಯಲ್ಲಿ ತೆರಿಗೆ ಅಧಿಕಾರಿಯಾಗಿದ್ದ ಮಾಂಡಳಿಕ ಮುದ್ದರಸನು ತುಂಗಭದ್ರೆಯ ದಕ್ಷಿಣ ತಟದಲ್ಲಿನ ಸೋಮೇಶ್ವರ ದೇವರ ಸೇವಾಕಾರ್ಯಕ್ಕೆ ಮಹಾಜನರ ಸಮ್ಮುಖದಲ್ಲಿ

ದಾನಬಿಟ್ಟ ವಿವರವನ್ನು ಇಲ್ಲಿ ಹೇಳಲಾಗಿದೆ. ಮುದ್ದರಸನ ಸಾಮಾಜಿಕ ಕಾರ್ಯಗಳನ್ನು ಮತ್ತೇಭವಿಕ್ರೀಡಿತ ವೃತ್ತದಲ್ಲಿ ಕವಿ ಸೊಗಸಾಗಿ ಚಿತ್ರಿಸಿದ್ದಾನೆ.

"ಕೆಱೆಯಂ ಕಟ್ಟಿಸುತ್ತಿರ್ಪ್ಪ ದೇಗುಲಮನಾರಯ್ದೆತ್ತಿಸುತಿರ್ಪ್ಪಾಮ
ನ್ನೊಱೆಯಂಬಾರದುರ್ಮಾನಸರ್ವ್ವದೆನಿರಾಭಾರಂಗಳಂಮಾರ್ಪ್ಪನಿ
ರ್ವ್ವಱಿಹಾದಲ್ಲಿ ಜಲಂಗಳಂ ಪಡೆದು ಧರ್ಮತಂಗಳಂಮಾರ್ಪ್ಪ
ಕೊಳ್ವಱಿನಂ ಬಾರಿಸುತಿರ್ಪ್ಪ ಮುದ್ದರಸನಂ ಪೋಲ್ವನ್ನನಾವೊನ್ನರಂ"

ಸೇನಬೋವ ಸೋಮನಾಥಯ್ಯ (ಕ್ರಿ.ಶ.1111)

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹನಶಿ ಗ್ರಾಮದ ರಾಮೇಶ್ವರ ದೇವಾಲಯದ ಶಾಸನವನ್ನು ಸೇನಬೋವ ಸೋಮನಾಥಯ್ಯ ಎಂಬ ಶಾಸನಕವಿ ಬರೆದಿದ್ದಾನೆ. ಇದೊಂದು ಗದ್ಯಶಾಸನವಾಗಿದೆ. ತ್ರಿಭುವನಪಾಂಡ್ಯದೇವನ ಸಾಮಂತ ಹೊಳ್ಳೆಯನು ಕೋಗಳಿ 500 ರ ಬಳಿಯ ನಾಯಕವೃತ್ತಿಯ ಹನಸೆಯ ಶ್ರೀಪರಸುರಾಮೇಶ್ರದೇವರ ಅಂಗಭೋಗ, ನೈವೇದ್ಯ ಮುಂತಾದ ದೇವರ ಸೇವಾಕಾರ್ಯಗಳಿಗೆ ಚಿಬ್ಬಲಗೆರೆಯನ್ನು ದತ್ತಿ ನೀಡಿದ ವಿವರ ಇಲ್ಲಿದೆ.

ಸಂಧಿವಿಗ್ರಹಿ ಮಲ್ಲಪರಾಜ (ಕ್ರಿ.ಶ.1112)

ಕೊಟ್ಟೂರಿನ ಕಲ್ಲೇಶ್ವರ ದೇವಾಲಯದ ಮುಂಬದಿಯಲ್ಲಿನ ಸಂಧಿವಿಗ್ರಹಿ ಮಲ್ಲಪರಾಜನು ಬರೆದಿದ್ದಾನೆ. ಚಾಳುಕ್ಯರ ಮಹಾಮಂಡಲೇಶ್ವರನಾದ ಕದಂಬವಂಶದ ಘಟ್ಟಿಯರಸನು ಕೋಗಳಿ 500ನ್ನು ಆಳುತ್ತಿದ್ದಾಗ ಘಟ್ಟಿದೇವನು ಕೊಟ್ಟೂರಿನ ರಾಮೇಶ್ವರದೇವರ ಸೇವಾಕಾರ್ಯಗಳಿಗೆ ಭೂಮಿಯನ್ನು ದಾನವಾಗಿ ಕೊಟ್ಟಿರುವ ಸಂಗತಿಯನ್ನು ಹೇಳಲಾಗಿದೆ. ಗದ್ಯದಲ್ಲಿರುವ ಈ ಶಾಸನವನ್ನು ಬರೆದ ಮಲ್ಲಪರಾಜನು ಘಟ್ಟಿದೇವನ ಸಂಧಿವಿಗ್ರಹಿಯಾಗಿದ್ದನು. ಸಂಧಿವಿಗ್ರಹಿಗಳು ಶಾಂತಿ, ಒಪ್ಪಂದ ಹಾಗೂ ಯುದ್ಧಗಳಿಗೆ ಸಂಬಂಧಿಸಿದ ಅಧಿಕಾರಿಗಳಾಗಿದ್ದು ಭಾಷೆ, ಲಿಪಿಗೆ ಸಂಬಂಧಿಸಿದಂತೆ ಪರಿಣಿತಿಯನ್ನು ಪಡೆದವರಾಗಿರುತ್ತಿದ್ದರು. ಶಾಸನಕವಿಗಳು ಸಂಧಿವಿಗ್ರಹಿಗಳಾಗಿ ಕಾರ್ಯನಿರ್ವಹಿಸಿದ ಹಲವು ಉದಾರಣೆಗಳು ಕರ್ನಾಟಕದ ಶಾಸನಗಳಲ್ಲಿ ಕಂಡಬರುತ್ತವೆ.

ತೂಬಿಗೆರೆಯ ಊರೊಡೆಯ ಆಸ್ಕಂದದೇವರು (ಕ್ರಿ.ಶ.1122)

ಹರಪನಹಳ್ಳಿ ತಾಲ್ಲೂಕಿನ ಯರಬಾಳು ಗ್ರಾಮದ ಕಲ್ಲೇಶ್ವರ ದೇವಾಲಯದ ಹತ್ತಿರವಿರುವ ಶಾಸನವನ್ನು ಆಸ್ಕಂದದೇವನು ರಚಿಸಿದ್ದಾನೆ. ಚಾಳುಕ್ಯರ ತ್ರಿಭುವನಮಲ್ಲನ ಆಜ್ಞೆಯಂತೆ ಪಾಂಡ್ಯದೇವನು ರತ್ನಪುರದ ರಾಜನನ್ನು ಸೆದೆಬಡಿದ ಹಾಗೂ ಗಂಗ, ಚೋಳ, ಲಾಳರನ್ನು ಗೆದ್ದು, ಪಾಂಚಾಲರಿಂದ ಕಪ್ಪವನ್ನು ಪಡೆದು ಮಿಕ್ಕ ಅರಸರನ್ನು

ಮೇಳಪಾಳಿಯೊಳು ಪೂಣಿಸಿದ ಎಂಬುದನ್ನು ಕಾವ್ಯಾತ್ಮಕವಾಗಿ ಹೇಳಲಾಗಿದೆ. "ಚೋಳನ ದರ್ಪಮಂ ಕಿಡಿಸಿ ಲಾಳನನತ್ತಲದಿರ್ಪ್ಪಿ ತಾಳ್ದಿ ಪಾಂಚಾಳನ" ಎಂದು ಪ್ರಾಸಬದ್ಧವಾಗಿ ಹೇಳಿದ್ದಾನೆ. ಇಲ್ಲಿರುವ ಸಾಲುಗಳ ಛಂದಸ್ಸಿನ ಲಕ್ಷಣಗಳ ಆಧಾರದಲ್ಲಿ ಉತ್ಪಲಮಾಲಾ ಮತ್ತು ಚಂಪಕಮಾಲಾ ವೃತ್ತಗಳನ್ನು ಬಳಸಿರುವುದನ್ನು ಗುರುತಿಸಲಾಗಿದೆ. ಶಾಸನದ ಸಾಲುಗಳು ತ್ರುಟಿತವಾಗಿರುವುದರಿಂದ ಪೂರ್ಣ ಶಾಸನಪದ್ಯಗಳನ್ನು ಇಲ್ಲಿ ನೀಡಲು ಸಾಧ್ಯವಾಗಿಲ್ಲ.

ಮಲ್ಲಿಯಣ್ಣ (ಕ್ರಿ.ಶ.1126)

ಹರಪನಹಳ್ಳಿ ತಾಲ್ಲೂಕಿನ ದುಗ್ಗವತಿ ಈಶ್ವರದೇವಾಲಯದ ಬಳಿ ಇರುವ ಶಾಸನದ ಕರ್ತೃ ಮಲ್ಲಿಯಣ್ಣ. ಇವನು 'ಶ್ರೀಸರಸ್ವತೀಗಣಭಾತ್ರ' ಎಂಬ ಬಿರುದುಳ್ಳವನಾಗಿದ್ದ. ಕೋಗಳಿ ಐನೂರರ ಬಳಿಯ ಬಿಕ್ಕಿಗ ಎಪ್ಪತ್ತರಲ್ಲಿನ ಗ್ರಾಮ ದುಗ್ಗತಿಯನ್ನು ಆಳುತ್ತಿದ್ದನಂಬಿಗಣ್ಣಿಸೆಟ್ಟಿಯನ್ನು "ಸಮಸ್ತ ವಸ್ತು ವಿಷಯ ವ್ಯಾಪಾರ ನಿಯತನುಂ ವಸ್ತು ಗುಣಸಂಪನ್ನನು ನುಡಿದುಮತ್ತೆನ್ನನುವಾಸ್ರಿತಚಿಂತಾಮಣಿಯುಂ ವ್ಯವಹಾರ ಶಿಖಾಮಣಿಯುಮಷ್ಟಾದಸಪಟ್ಟಣ ಸಮುದ್ಧರಣನು ಸಮಯ ಸಮುದ್ಧರಣನು ಸಾರದಾದೇವೀಲಬ್ಧವರಪ್ರಸಾದನು" ಎಂದು ಮುಂತಾಗಿ ಹಲವು ರೀತಿಯ ಗುಣವಾಚಕಗಳಿಂದ ಕರೆಯಲಾಗಿದೆ.

ಮಧುಸೂಧನದೇವ (ಕ್ರಿ.ಶ.1148) ಮತ್ತು ಶಂಕರದೇವ (ಕ್ರಿ.ಶ.1178)

ಹಡಗಲಿ ತಾಲ್ಲೂಕಿನ ಕೊಟ್ನಕಲ್ಲು ಗ್ರಾಮದ ಕೋಟೇಶ್ವರ ದೇವಾಲಯದ ಗೋಡೆಗೆ ಸೇರಿಸಿದ ಕಲ್ಲಿನಲ್ಲಿ ಇರುವ ಶಾಸನವನ್ನು ಬರೆದಿರುವವರು ಮಧುಸೂಧನದೇವ ಮತ್ತು ಶಂಕರದೇವ. ಈ ಇಬ್ಬರೂ ಶಾಸನಕವಿಗಳ ಉಲ್ಲೇಖ ಒಂದೇ ಶಾಸನದಲ್ಲಿ ಬಂದಿರುವುದು ವಿಶೇಷ. ಬೇರೆ ಬೇರೆ ಕಾಲದಲ್ಲಿ ಈ ಶಾಸನವನ್ನು ಇಬ್ಬರು ಕವಿಗಳು ಬರೆದಿರುವುದನ್ನು ಗುರುತಿಸಲಾಗಿದೆ. ಕಲ್ಯಾಣ ಚಾಳುಕ್ಯರ ಜಗದೇಕಮಲ್ಲನ ಮಾಂಡಲಿಕ ವೀರಪಾಂಡ್ಯದೇವ, ಅವನ ತಾಯಿ ಸೋವಲದೇವಿ, ವಿಕ್ರಮಾದಿತ್ಯನ ಸಹೋದರಿ, ವಿಕ್ರಮಾದಿತ್ಯನ ವಧು ಬಾಚಲದೇವಿ, ಮಗಳು ಮಹಾದೇವಿಯರನ್ನು ಕುರಿತ ವಿವರಗಳಿವೆ. ಶಂಕರದೇವನಿಗಿಂತ ಮಧುಸೂಧನದೇವ ಶ್ರೇಷ್ಠಕವಿಯಾಗಿದ್ದಂತೆ ತೋರುತ್ತದೆ. ವಿವಿಧ ವೃತ್ತ ಹಾಗೂ ಕಂದಪದ್ಯಗಳಲ್ಲಿ ಶಾಸನವನ್ನು ಕಾವ್ಯಮಯವಾಗಿಸಿದ್ದಾನೆ. ಉದಾಹರಣೆಗಾಗಿ ವಿಕ್ರಮಾದಿತ್ಯನ ಮಗಳಾದ ಮಹಾದೇವಿಯನ್ನು ವರ್ಣಿಸಿರುವ ಪದ್ಯವೊಂದನ್ನು ನೀಡಲಾಗಿದೆ.

"ವಿನಯ ನಿಧಿ ವಿಕ್ರಮಾದಿ
ತ್ಯನಸುತೆ ಕಲಿಕಾಲ ಸೀತೆ ಲಕ್ಷ್ಮೀವಧು ನೂ

ತನಗೌರಿಯೆಂದು ಪೊಗಳ್ಗುಂ
ವಿನುತೆ ಮಹಾದೇವಿರಾಣಿಯಂ ಜಗಮೆಲ್ಲಂ"

ದೇವಣ್ಣ (ಕ್ರಿ.ಶ.1178)

ಹಡಗಲಿ ತಾಲ್ಲೂಕಿನ ಹೊಳಲು ಗ್ರಾಮದ ಗೌರೀಶ್ವರ ದೇವಾಲಯದ ಶಾಸನವನ್ನು (ಶಾ.ಸಂ–39, ಪು.ಸಂ–344, ಕ.ವಿ.ಶಾ.ಸಂ–1) ದೇವಣ್ಣ ಕವಿ ರಚಿಸಿರುವುದು ತಿಳಿದುಬರುತ್ತದೆ. ಮಹಾಕಾವ್ಯಗಳಲ್ಲಿಯಂತೆ ಸಮುದ್ರ ವರ್ಣನೆಯನ್ನು ಮಾಡಲಾಗಿರುವುದು ಕಂಡುಬರುತ್ತದೆ. ವಿಜಯಪಾಂಡ್ಯನ ಆಳ್ವಿಕೆಯಲ್ಲಿ ಅವನ ದಂಡನಾಯಕ ಶಂಕರ, ತುಂಗಾಭದ್ರಾನದಿ, ಹೊಳಲು ಗ್ರಾಮವನ್ನು ಮತ್ತು ಅಲ್ಲಿನ ಮಹಾಜನರನ್ನು, ಅಯ್ಯಾವೊಳೆಯ ವ್ಯಾಪಾರಿಗಳನ್ನು ವರ್ಣಿಸಲಾಗಿದೆ. ಇಲ್ಲಿನ ವರ್ಣನೆಗಳನ್ನು ಗಮನಿಸಿದರೆ ಶ್ರೇಷ್ಠಕವಿಯಾಗಿದ್ದಂತೆ ಕಾಣುತ್ತದೆ. ಹೊಳಲು ಗ್ರಾಮವನ್ನು ಕುರಿತು "ಹೊಳಲಗ್ರಹಾರವಿಂದ್ರನಪುರದಭಿರಾಮತೆಯು ತಳೆದುದೆಂದಡೆ ಭೂಮಿಯೊಳಿದನೆಯ್ದು ಪೋಲುವ ಪುರವರೊಳವೇ" ಎಂದು ಕವಿ ಬಣ್ಣಿಸಿದ್ದಾನೆ. ಕುಂತಳದೇಶವನ್ನು ವನಿತೆಯ ಕುರುಳಿಗೆ ಹೋಲಿಸಿರುವುದು ಸೊಗಸಾಗಿದೆ. ಆ ಪದ್ಯ ಹೀಗಿದೆ.

"ಸುರಗಿರಿಯಿಂದಂ ತೆಂಕಲು
ಚರತೋರ್ಪ್ಪಿರೆಯಲ್ಲಿ ಪಲಹದೇಶಂಗಳೊಳೇಂ
ಕರಮೆಸೆದಿದ್ದುದು ಧರಣೀ
ವರವನಿತೆಯ ಕುರುಳಿನಂತೆ ಕುಂತಳದೇಶಂ" ಈ ಶಾಸನದಲ್ಲಿನ ಗದ್ಯ ಪದ್ಯಗಳೆರಡೂ ಸೊಗಸಾದ ವರ್ಣನೆಗಳಿಂದ ಮೂಡಿಬಂದಿರುವುದನ್ನು ನೋಡಿದರೆ ದೇವಣ್ಣನು ಕಾವ್ಯಕೃತಿಗಳನ್ನೂ ರಚಿಸಿರಬಹುದೆಂದು ಹೇಳಬಹುದಾಗಿದೆ.

ಕವಿತಿಳಕ ಮಾರಮರಸ (ಕ್ರಿ.ಶ.1199)

ಹೊಸಪೇಟೆ ತಾಲ್ಲೂಕಿನ ಹಂಪೆಯ ವಿರೂಪಾಕ್ಷ ದೇವಾಲಯದ ಆವರಣದ ಉತ್ತರಕ್ಕಿರುವ ದುರ್ಗಾದೇವಾಲಯಯದಲ್ಲಿನ ಶಾಸನವನ್ನು ಕವಿತಿಳಕ ಮಾರಮರಸನು ರಚಿಸಿರುವನು. ಇವನ ತಂದೆ ರೇವರಸ. ಸಿಂದವಂಶದ ಎರಡನೇ ರಾಚಮಲ್ಲನ ಮಗನಾದ ಕಲಿದೇವನ ಆಳ್ವಕೆಯನ್ನು ಹೇಳಲಾಗಿದೆ. ಅವನ ಅಧಿಕಾರಿ ಚೌಡನ ಪರಾಕ್ರಮ ಹಾಗೂ ದಾನಗುಣವನ್ನು ಮುಕ್ತಕಂಠದಿಂದ ಶಾಸನಕವಿ ಹೊಗಳಿದ್ದಾನೆ. ಚೌಡನು ಪಂಪಾದೇವಿಗೆ ಚಿನ್ನದ ಕಲಶಗಳನ್ನು ಮಾಡಿಸಿ, ಭೈರವಗೃಹಕ್ಕೆ ಸುಣ್ಣಬಳಿಸಿ ವಿವಿಧ ಪೂಜಾ ಸಾಮಗ್ರಿಗಳನ್ನು ದೇವಾಲಯಗಳಿಗೆ ನೀಡಿರುವದನ್ನು ಶಾಸನವು ತಿಳಿಸುತ್ತದೆ. ವಿರೂಪಾಕ್ಷ, ಪಂಪಾಂಬಿಕ ಸ್ತುತಿ ಹಾಗೂ ಪಂಪಾಕ್ಷೇತ್ರದ ವರ್ಣನೆಯು

ಸೊಗಸಾದ ರಚನೆಗಳಾಗಿವೆ. ಮಾರರಸನಿಗೆ ಕವಿತಿಳಕ ಎಂಬುದು ಬಿರುದಾಗಿದ್ದಂತೆ ತೋರುತ್ತದೆ. ಇಲ್ಲಿನ ವೃತ್ತ, ಕಂದ ಹಾಗೂ ವಿವಿಧ ಅಲಂಕಾರಗಳ ಬಳಕೆಯನ್ನು ನೋಡಿದರೆ ಇವನು 12–13ನೇ ಶತಮಾನದ ಬಹುಮುಖ್ಯ ಕವಿಯಾಗಿದ್ದಂತೆ ಕಾಣುತ್ತದೆ. ಗೌರಿ ಸಮೇತನಾಗಿ ಶ್ರೀ ವಿರೂಪಾಕ್ಷದೇವನು ನೆಲೆಸಿರುವ ಈ ಪಂಪಾಕ್ಷೇತ್ರವನ್ನು ಪುಣ್ಯತೀರ್ಥವೆಂದು ಬಣ್ಣಿಸಲಾಗಿದೆ. ಪಾರ್ವತಿಗೆ ಹಿತವಾದ ಹೇಮಶಿಲೆಯ ಪರ್ವತವೇ ತನಗೆ ಎಂದೆಂದಿಗೂ ಆವಾಸ ಸ್ಥಾನವೆಂದು ಆನಂದದಿಂದ ನೆಲೆಸಿರುವ ಕ್ಷೇತ್ರವಿದು ಹಂಪೆ ಎಂದು ಪಂಪಾಕ್ಷೇತ್ರವನ್ನು ವರ್ಣಿಸಿದ ಬಗೆಯಂತೂ ಮನೋಹರವಾಗಿದೆ. ಪಂಪಾಕ್ಷೇತ್ರವು ಪುಣ್ಯೋದಯ ಜನ್ಮಭೂಮಿ ಎಂದೂ, ಪಾಪಗಳನ್ನು ವಿನಾಶಮಾಡುವ ವಿರೂಪಾಕ್ಷನ ಆವಾಸ ಸ್ಥಾನವೆಂದೂ, ಸುಖವೆಂಬ ಬಳ್ಳಿಯು ಸಂವರ್ಧಿಸುತ್ತಿರುವ ಕ್ಷೇತ್ರವೆಂದೂ, ಭಕ್ತರ ಇಷ್ಟಾರ್ಥಗಳನ್ನು ಈಡೆರಿಸುವ ಮೂರು ಲೋಕಕ್ಕೂ ಸುಖವನ್ನು ಸದಾ ನೀಡುವ ಪುಣ್ಯ ಕ್ಷೇತ್ರವೆಂದೂ ಪಂಪಾಕ್ಷೇತ್ರವು ಪ್ರಸಿದ್ಧಿಯನ್ನು ಪಡೆದಿದೆ ಎಂದು ಶಾಸನ ಕವಿಯು ಇಲ್ಲಿ ಮನತುಂಬಿ ಅಭಿವ್ಯಕ್ತಿಸಿದ್ದಾನೆ.

ಇದೇ ಶಾಸನದ ಮುಂದಿನ ಸಾಲುಗಳಲ್ಲಿ ಲಕ್ಷ್ಮೀಧರನ ಮೈದುನನಾದ ಚೌಡನೆಂಬ ವೀರನನ್ನು ಶಾಸನ ಕವಿಯು ಮದವೇರಿದ ಆನೆಗೆ ಹೋಲಿಸಿದ್ದಾನೆ. ಇಲ್ಲಿ ಆದಿಪ್ರಾಸದ ಜೊತೆಗೆ ಅನುಪ್ರಾಸದ ಬಳಕೆಯು ಶಾಸನ ಪದ್ಯದ ಮೆರುಗನ್ನು ಹೆಚ್ಚಿಸಿದೆ. 'ಈಡಟ್ಟಿ ಮುಟ್ಟಿತ್ತು, ಹಿಡಿದೊತ್ತಿತ್ತು, ಸುತ್ತಿತ್ತು, ಕುತ್ತಿತ್ತು, ಒರಸಿತ್ತು, ಎತ್ತಿತ್ತು, ಬೀಸಿತ್ತು, ತೌಂಕಿತ್ತು, ಉರಿಳ್ಚಿತ್ತು, ಉರಮಂ ಮೆಟ್ಟಿತ್ತು, ಒಕ್ಕಲಿಕ್ಕಿತ್ತು'. ಎಂಬ ಅನುಪ್ರಾಸದ ಜೊತೆಗೆ 'ಚೌಡನೆಂಬಾಮದೇಭಂ' ಎಂಬ ರೂಪಕವೂ ಇಲ್ಲಿನ ಸಾಹಿತ್ಯಿಕ ಶ್ರೀಮಂತಿಕೆಗೆ ಉದಾಹರಣೆಯಾಗಿದೆ. ಚೌಡನ ಹೆಂಡತಿಯ ದಾನಗುಣವನ್ನು ಕುರಿತು ಹೇಳಿದ ಪದ್ಯವೊಂದು ಹೀಗಿದೆ.

"ಪತಿಮಾಳ್ಪ ಧರ್ಮಕಾರ್ಯೋಂ
ನತಿಯಂ ತಾಂ ಮುಂದುವರಿದು ಮಾಡುವ ಗುಣದುಂ
ನತಿಯಂ ಹಾಚಲೆ ಪಡೆದಳ್
ಕ್ಷಿತಿಯೊಳ್ ಸ್ತ್ರೀರತ್ನಮೀಕೆಯೆಂಬೊಳ್ಪೆಸರಂ"

ಚೌಡನ ವ್ಯಕ್ತಿತ್ವವನ್ನು ಮತ್ತೇಭ ವಿಕ್ರೀಡಿತ ಛಂದಸ್ಸಿನಲ್ಲಿ ಮನೋಹರವಾಗಿ ಚಿತ್ರಿಸಿದ್ದಾನೆ.

"ಧನಮಾ ಬಯ್ತಿಡಲೆಂದು ಪೇಳ್ವಡೆವನೇ ದಾನಕ್ಕೆ ಧರ್ಮಕ್ಕೆ ಸ
ಜ್ಜನರ್ಗ್ಗಿಷ್ಟರ್ಗ್ಗೆರೆದರ್ಗೆ ಬಾಂಧವರ್ಗೆ ಜೀರ್ಣೋದ್ಧಾರ ಸಂಸ್ಥಾಪನ
ಕ್ಕನಿಶಂ ಮಾಡುವ ದೇವತಾರ್ಚನಕೆ ಯೆಂದೆಂದಾರ್ಜಿಪೆಂಬೆಱ ಸ
ದ್ವಿನಿಯೋಗಕ್ಕೆದಲೆಂದು ಪೇಳ್ವಡೆವನೇ ಚೌಡಯ್ಯನೇಂರಂದದಿಂ"

ಅಯ್ಯಾವಳಯ ಸೇನಬೋವ ಸೋಮಯ್ಯ (ಕ್ರಿ.ಶ.1221)

ಕೊಟ್ಟೂರಿನ ಮೂರುಕಲ್ಲು ಮಠದ ಮುಂದಿನ ಶಾಸನವನ್ನು ಸೇನಬೋವ ಸೋಮಯ್ಯನು ಬರೆದಿದ್ದಾನೆ. ಹೊಯ್ಸಳ ವೀರನರಸಿಂಹನ ಆಳ್ವಿಕೆಯನ್ನು ತಿಳಿಸುವ ಈ ಶಾಸನದಲ್ಲಿ ಅವನ ದಂಡನಾಯಕ ಕೇಶವದಂಡಾಧಿಪನು ರಾಯಭಟ್ಟ, ಶಂಕರನಾರಾಯಣ, ಭೇರುಂಡ ಬಮ್ಮಯ್ಯ, ಅಚ್ಯುತಭಟ್ಟ, ಚೀಲಯ ನಾಯಕ ನಾಗಂಗೆ 'ಮಾವಿನಮಾಗೆ'ಯೆಂಬ ಹಳ್ಳಿಯನ್ನು ದಾನವಾಗಿ ನೀಡಿದ್ದನ್ನು ತಿಳಿಸಿದೆ.ಇದೊಂದು ಗದ್ಯಶಾಸನವಾಗಿದ್ದು ಕಾವ್ಯಾಂಶಗಳು ಕಡಿಮೆಯೆಂದೇ ಹೇಳಬಹುದು.

ಮಧರಕವಿ (ಕ್ರಿ.ಶ.1410)

ಹೊಸಪೇಟೆ ತಾಲ್ಲೂಕಿನ ಹಂಪಿಯ ಕಡಲೆಕಾಳು ಗಣೇಶನ ಗುಡಿಯ ಮುಂಭಾಗದ ಮಂಟಪದಲ್ಲಿನ ಶಾಸನವನ್ನು ಮಧುರಕವಿ ರಚಿಸಿದ್ದಾನೆ. 134 ಸಾಲುಗಳನ್ನು ಒಳಗೊಂಡ ದೀರ್ಘ ಶಾಸನವಿದು. ವಿಜಯನಗರದ ವಂಶಾವಳಿಯನ್ನು ಸಂಗಮನಿಂದ ಆರಂಭಿಸಿ ದೇವರಾಯನವರೆಗೆ ನೀಡಿದ್ದು ದೇವರಾಯನ ಮಂತ್ರಿಯಾಗಿದ್ದ ಲಕ್ಷ್ಮೀಧರನು ಸಮಾಜಮುಖಿಕಾರ್ಯಗಳಲ್ಲಿ ತೊಡಗಿಸಿ ಕೊಂಡಿದ್ದನ್ನು ಈ ಶಾಸನವು ತಿಳಿಸುವುದು. ಲಕ್ಷ್ಮೀಧರನ ಸದ್ಗುಣಗಳನ್ನು ಈ ಶಾಸನವು ಅನೇಕ ರೀತಿಯಲ್ಲಿ ವರ್ಣಿಸಿದೆ. ಮಾಲ್ಯವಂತ ಪರ್ವತದ ಗುಹೆಯಲ್ಲಿ ಮಹಾಗಣಪತಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ ವಿಚಾರವನ್ನು ಪ್ರಸ್ತುತ ಶಾಸನ ತಿಳಿಸುತ್ತದೆ. ವೃತ್ತ ಹಾಗೂ ಕಂದ ಪದ್ಯಗಳ ಛಂದಸ್ಸಿನಲ್ಲಿ ವಿಜಯನಗರದ ಅರಸರನ್ನು, ಮಂತ್ರಿಗಳನ್ನು, ವಿರೂಪಾಕ್ಷ ದೇವಾಲಯ ಹಾಗೂ ತುಂಗಭದ್ರಾ ನದಿಯ ವರ್ಣನೆಯು ಅತ್ಯಂತ ಕಾವ್ಯಾತ್ಮಕವಾಗಿದೆ. ಶಾಸನದ ಕರ್ತೃ ಮಧುರನು ತನ್ನನ್ನು ಕವೀಂದ್ರಾಭರಣ, ಕರ್ನಾಟ ಲಕ್ಷ್ಮಣ ಪಾದಸರೋಜನೆಂದು ಕರೆದುಕೊಂಡಿರುವಲ್ಲಿ ಅವನು ಶಾಸನವಲ್ಲದೆ ಇತರ ಕಾವ್ಯಗಳನ್ನೂ ರಚಿಸಿರಬೇಕೆನಿಸುತ್ತದೆ.

ಇಲ್ಲಿನ ಶಾಸನದ ಸಾಲುಗಳಲ್ಲಿ ಸಾಹಿತ್ಯಿಕ ಅಂಶಗಳು ಸಮೃದ್ಧವಾಗಿರುವುದನ್ನು ಗುರುತಿಸಬಹುದಾಗಿದೆ. ಖ್ಯಾತಕರ್ನಾಟಕ ವೃತ್ತಗಳ ಜೊತೆಗೆ ಕಂದ ಛಂದಸ್ಸಿನಲ್ಲೂ ಶಾಸನ ಪದ್ಯಗಳು ರಚಿಸಲ್ಪಟ್ಟಿವೆ. ಪ್ರಸ್ತುತ ಶಾಸನವು ದೇವರಾಯನ ಮಂತ್ರಿಯಾಗಿದ್ದ ಲಕ್ಷ್ಮೀಧರ ಅಮಾತ್ಯನನ್ನು 'ಕನ್ನಡಿಗ ಕುಲಕ್ಕೆ ರನ್ನದ ಕನ್ನಡಿಯಂತೆ ವಿಶ್ವಪ್ರಸಿದ್ಧನಾಗಿದ್ದ'ನೆಂದು, ಭೀಮಪ್ರತಾಪನೂ, ಅರ್ಜುನಕೀರ್ತಿ ಪ್ರೇಮನೂ ಆದ ಲಕ್ಷ್ಮೀಧರನನ್ನು ವರ್ಣಿಸಲಾಗಿದೆ.

"ಕಂನಡಿಗ ಕುಲಕೆ ರಂನದ

ಕಂನಡಿಯೆನೆ ವಿಶ್ವವಿದಿತವೃತ್ತ ಶ್ರೀಸಂ
ಪಂನಂ ಲಕ್ಷ್ಮೀಧರದೇ
ವಂ ನಿರ್ಮಲನಾಗಿ ನೆಗಳ್ದನೊಳಗಂ ಪೊಱಗಂ"

ಮಧುರಕವಿಯು ತಾನು ಈ ಶಾಸನವನ್ನು ಬರೆದ ಕಾರಣವನ್ನು ಸೊಗಸಾಗಿ ಕಂದಪದ್ಯದಲ್ಲಿ ಹಿಡಿದಿಟ್ಟಿದ್ದಾನೆ.

"ಪಿಂಗದೆ ಲಕ್ಷ್ಮೀಧರ ಸಚಿ
ವಂಗಾಚಂದ್ರಾರ್ಕ್ಕಮೊದವದಾಯು ಶ್ರೀಯುಂ
ಸಂಗತಿವಡೆದಿರೆ ಬರೆದಂ
ಮಂಗಳಮಯಮಾಗೆ ಮಧುರನೀ ಶಾಸನಮಂ"

ಲಕ್ಷ್ಮೀಧರ (ಕ್ರಿ.ಶ.1410)

"ಕಂನಡಿಗ ಕುಲಕ್ಕೆ ರಂನದ ಕಂನಡಿ"ಯೆಂದು ಮಧುರಕವಿಯಿಂದ ಹೊಗಳಿಸಿಕೊಂಡ ಲಕ್ಷ್ಮೀಧರನು ವಿಜಯನಗರ ಕಾಲದ ದೇವರಾಯನ ಮಂತ್ರಿಯಾಗಿದ್ದನು. ಇವನು ಕಲಿಯೂ, ಕವಿಯೂ ಆಗಿದ್ದನೆಂಬುದಕ್ಕೆ ಮಧುರಕವಿಯು ಚಿತ್ರಿಸಿದ ಲಕ್ಷ್ಮೀಧರನನ್ನು ಕುರಿತ ಶಾಸನಪದ್ಯಗಳೇ ಆಧಾರವಾಗಿವೆ. ಮಧುರನು ಇವನ ಸಮಾಜಮುಖಿ ಕಾರ್ಯಗಳನ್ನು ವರ್ಣಿಸುವ ಜೊತೆಗೆ ಇವನು ಕವಿಯೂ ಆಗಿದ್ದನೆಂಬುದನ್ನು ತಿಳಿಸಿದ್ದಾನೆ. ಲಕ್ಷ್ಮೀಧರನು ಬರೆದ ಶಾಸನಗಳು ಅಥವಾ ಕೃತಿಗಳು ದೊರೆತಿಲ್ಲವಾದರೂ ಅವನೊಬ್ಬ ಶ್ರೇಷ್ಠಕವಿಯಾಗಿದ್ದನೆಂಬುದು ಮಧುರನ ಮಾತಿನಲ್ಲಿ ಸ್ಪಷ್ಟವಾಗುತ್ತದೆ. 'ಕವಿಗೆ ಕವಿಮುನಿವಂ' ಎಂಬ ಕೇಶಿರಾಜನ ಶಬ್ದಮಣಿದರ್ಪಣ ಕೃತಿಯ ಸಾಲಿಗೆ ಅಪವಾದವೆಂಬಂತೆ ಇಲ್ಲಿ ಮಧುರನು ತನ್ನ ಸಮಕಾಲೀನ ಕವಿಯೂ ಆಗಿದ್ದ ಲಕ್ಷ್ಮೀಧರನನ್ನು ಮುಕ್ತಕಂಠದಿಂದ ಹಾಡಿಹೊಗಳಿದ್ದಾನೆ. ಮಧುರನು ಲಕ್ಷ್ಮೀಧರನನ್ನು 'ಕವಿರಾಜ' ಎಂದು ಬಣ್ಣಿಸಿ ಅವನ ಕಾವ್ಯಶಕ್ತಿಯನ್ನು ಈ ಕೆಳಗಿನ ಪದ್ಯದಲ್ಲಿ ಸೊಗಸಾಗಿ ಚಿತ್ರಿಸಿದ್ದಾನೆ.

"ಪದಪಿಂದಂ ಕವಿರಾಜ ಲಕ್ಷ್ಮಣನ ಕಾವ್ಯಾಲಾಪಮಂ ಕೂರ್ತ್ತು ಕೇ
ಳದೆ ಮುಂ ಪೋದರೆ ಪಾದವೊಂದು ಕಿವಿಗೊಟ್ಟೆತ್ತಾನುಮಾರೈದು ಸಂ
ಮುದದಿಂ ಸೈತಿರದೋರು ದೂತಿಯರ ಮಾತಂ ಮೀಱೆ ಕಣ್ಗೊಂಡು ನೋ
ಡಿದ ಪೆಂಣ್ಗಳ್ಬುದಿದಿದ್ದ ಪೂಗಣೆಯ ಪುಂಣಿಂದಂಣಿ ಪುಯ್ಯಲ್ವರೇ" (ಮ.ಪಿ.)

ಲಕ್ಷ್ಮೀಧರ ಕವಿಯನ್ನು ಕುರಿತ ಇನ್ನೊಂದು ಪದ್ಯವನ್ನು ಉದಾರಣೆಯಾಗಿ ಇಲ್ಲಿ ನೀಡಲಾಗಿದೆ. ಓದು ಅಥವಾ ಅರಿವು ಎನ್ನುವುದು ಸಮಾಜಮುಖಿಯಾಗಿರಬೇಕೇ ಹೊರತು ಮತ್ತೊಬ್ಬರನ್ನು ವಂಚಿಸಲು ಅಲ್ಲವೆಂದು ಧ್ವನಿಪೂರ್ಣವಾಗಿ ತಿಳಿಸಲಾಗಿದೆ.

"ವೋದಿ ಪರವಂಚನಂಗೆ
ಯ್ವೋದುಗಳಂತಿರ್ಕ್ಕೆ ಲಕ್ಷ್ಮಣಾಮಾತ್ಯನ ವೊ
ಲಾದರಿಸಿ ಸಚಿವರಾದವ
ರೋದುವುದೋರಂತೆ ಪತಿಹಿತಾರ್ತ್ಥಾಗಮಮಂ"

ಲಕ್ಷ್ಮೀಧರನ ಕೌಟುಂಬಿಕ ಹಿನ್ನೆಲೆಯನ್ನು ಮಧುರಕವಿಯು ವಿವರವಾಗಿ ಚಿತ್ರಿಸಿದ್ದಾನೆ. ವಿಜಯನಗರ ಅರಸರ ಕಾಲದ ಮಹಾಪ್ರಧಾನರಾಗಿದ್ದ ಮಾಧವ–ಸಾಯಣರೆಂಬ ಸಹೋದರರ ಸೋದರಳಿಯನೂ ಆಗಿದ್ದನು. ಇವನ ತಾಯಿ ಸಿಂಗಲೆ, ತಂದೆ ರಾಮರಸ. ಇವನಿಗೆ ನಾಲ್ಕುಜನ ಸಹೋದರರಿದ್ದರು. ದೇವಕಿ, ಸೋಮಲೆ ಎನ್ನುವ ಇಬ್ಬರು ಹೆಂಡತಿಯರನ್ನು ಹೊಂದಿದ್ದ ಇವನಿಗೆ ನಾಲ್ಕು ಜನ ಮಕ್ಕಳಿದ್ದರು ಎನ್ನುವ ವಿವರಗಳನ್ನು ನೀಡಲಾಗಿದೆ.

ವೀರಣ್ಣ (ಕ್ರಿ.ಶ.1455)

ಹೊಸಪೇಟೆ ತಾಲ್ಲೂಕಿನ ಹಂಪಿಯ ಕಪಿಲಾಶ್ರಮದ ಬಳಿಯಿರುವ ಶಾಸನವನ್ನು ವೀರಣ್ಣ ಕವಿಯು ರಚಿಸಿದ್ದಾನೆ. ಇವನ ತಂದೆ ಮುದ್ದಣಾಚಾರ್ಯನೆಂಬುದು ಶಾಸನದ ಮೂಲಕ ತಿಳಿಯುತ್ತದೆ. ವಿಜಯನಗರದ ಪ್ರೌಢದೇವರಾಯನ ಆಳ್ವಿಕೆಯನ್ನು ತಿಳಿಸುವ ಈ ಶಾಸನದಲ್ಲಿ ಸಂಗಮನಿಂದ ಪ್ರೌಢದೇವರಾಯನ ಕಾಲದವರೆಗಿನ ವಿಜಯನಗರದ ಅರಸರ ವಂಶಾವಳಿಯನ್ನು ದಾಖಲಿಸಲಾಗಿದೆ. ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿದ್ದ ಪ್ರೌಢದೇವರಾಯನು ತುಂಗಭದ್ರೆಯ ದಕ್ಷಿಣ ತೀರದ ಕುಮಾರಗಿರಿ ಅಗ್ರಹಾರದ ಹತ್ತಿರ ಸೋಮಲಾಪುರದಲ್ಲಿ ಹೊಸದಾಗಿ ಪ್ರತಿಷ್ಠೆಯಾದ ಸೌಮ್ಯಸೋಮೇಶ್ವರ ದೇವರ ಪೂಜೆಗಾಗಿ ಗ್ರಾಮವೊಂದನ್ನು ದಾನವಾಗಿ ನೀಡಿದ ವಿವರವನ್ನು ತಿಳಿಸಲಾಗಿದೆ. ಇದೊಂದು ಗದ್ಯ ಶಾಸನವಾಗಿದೆ.

ಬೋಕಪ ಶಿಂಘರಸ (ಕ್ರಿ.ಶ.1521)

ಹಂಪಿಯ ಹಜಾರರಾಮಸ್ವಾಮಿ ದೇವಾಲಯದ ದಕ್ಷಿಣ ಗೋಡೆಯಲ್ಲಿನ ಶಾಸನವನ್ನು ಬೋಕಪ ಶಿಂಘರಸನು ಬರೆದಿದ್ದಾನೆ. ಇವನು ಸೇನಬೋವ ಮಾಗುಡಿ ಕಾಮರಸನ ಮಗನಾಗಿದ್ದು ವಿಜಯನಗರದ ಕೃಷ್ಣದೇವರಾಯನ ಆಳ್ವಿಕೆಯಲ್ಲಿದ್ದ ಕವಿಯಾಗಿದ್ದಾನೆ. ಕೃಷ್ಣರಾಯ ಸಮರ್ಪಿಸಿದ್ದ ಸೊಂಡೂರ ಸೀಮೆಯಲ್ಲಿನ ತಾಳೂರ ಗ್ರಾಮದಲ್ಲಿ ಚಿಕ್ಕ ತಿಮ್ಮಯ್ಯದೇವನ ಮಗ ತಿಮ್ಮರಾಜನು ದೊಡ್ಡಕೆರೆಯನ್ನು ಕಟ್ಟಿಸಿರುವುದನ್ನು ತಿಳಿಸಲಾಗಿದೆ. ಶಿಂಘರಸ ಬರೆದ ಪ್ರಸ್ತುತ ಶಾಸನವು ಗದ್ಯ ಶಾಸನವಗಿದ್ದು ಗುರುತಿಸಬಹುದಾದ ಸಾಹಿತ್ಯಿಕ ಅಂಶಗಳು ಕಂಡುಬರುವುದಿಲ್ಲ.

ರಂಗಯತಿಮ್ಮ (ಕ್ರಿ.ಶ.1527)

ಹರಪನಹಳ್ಳಿ ತಾಲ್ಲೂಕಿನ ಕೆರೆಗುಡಿಹಳ್ಳಿಯ ಶಾಸನದಲ್ಲಿ ರಂಗಯತಿಮ್ಮ ಕವಿಯ ಉಲ್ಲೇಖವಿದೆ. ಕೃಷ್ಣದೇವರಾಯನ ಆಳ್ವಿಕೆಯನ್ನು ತಿಳಿಸಲಾಗಿದ್ದು, ಅರಸಿಕೆರೆಯ ಅಧಿಕಾರವನ್ನು ರಂಗದಾಸರ ಮಗ ತಿಂಮರಸನು ಮಾಡುತ್ತಿದ್ದನು. ಇವನು ಅರಸಿಕೆರೆಯಪುರದ ತೂಬು ಮುರಿದು ಬಿದ್ದು ಕೆಟ್ಟಿರುವಾಗ ಆ ತೂಬನ್ನು ಬಿಚ್ಚಿಸಿ ಶೋಧಿಸಿ ಬಲುಮಾನದ ಕಲ್ಲನ್ನು ಕಟ್ಟಿಸಿ ಗಾರೆಯನ್ನು ಹಾಕಿಸಿ ಜೀರ್ಣೋದ್ಧಾರ ಮಾಡಿದ್ದನ್ನು ತಿಳಿಸಲಾಗಿದೆ. ಇವನು ಕೆರೆಗುಡಿಹಳ್ಳಿ ಭಾಗದಲ್ಲಿ ಪ್ರಸಿದ್ಧ ಆಶುಕವಿಯಾಗಿದ್ದಂತೆ ತೋರುತ್ತದೆ. ತಿಂಮರಸ ಇವನ ಹೆಸರಾಗಿದ್ದು ತನ್ನ ತಂದೆ ರಂಗದಾಸನ ಹೆಸರನ್ನು ಸೇರಿಸಿಕೊಂಡು 'ರಂಗಯತಿಮ್ಮ' ಎಂಬ ಹೆಸರಿನಲ್ಲಿ ಪದ್ಯಗಳನ್ನು ಬರೆದಿರಬಹುದು. ಅರಸನಾದಿಯಾಗಿ ಅಧಿಕಾರದ ಬೇರೆ ಬೇರೆ ಹುದ್ದೆಗಳಲ್ಲಿದ್ದವರು ಕಾವ್ಯಗಳನ್ನು, ಶಾಸನಗಳನ್ನು ಬರೆದ ನಿದರ್ಶನಗಳಿವೆ. ಇವನೂ ಅಂಥವರ ಸಾಲಿಗೆ ಸೇರುವಂಥವನು. ತಿಂಮನು 'ಬಲ್ಲಿದ ರಂಗಯ್ಯ ತಿಂಮನು ಮೆಲ್ಲನೆ ಮಾತಾಡಿದ್ದೆಲ್ಲವು ಕಲ್ಲಶಾಸನದಂತೆ ಶಾಶ್ವತವಾಗಿರುವುದು' ಎಂದು ಮೆಚ್ಚುಗೆಯ ಮಾತಾಡಲಾಗಿದೆ. "ಬಲ್ಲಿದ ರಂಗಯ್ಯ ತಿಮ್ಮನು ಮೆಲ್ಲನೆ ಮಾತಾಡೆ ಕಲಶಾಷನಮಕುಂ" ಎನ್ನುವ ಮಾತಲ್ಲದೆ ತಿಮ್ಮನ ವ್ಯಕ್ತಿಚಿತ್ರವನ್ನು ಮುಂದಿನ ಕಂದಪದ್ಯವೊಂದರಲ್ಲಿ ನೋಡಬಹುದು.

"ಪೊಡವಿ ತಪ್ಪಿದರೆ ತಪ್ಪನು
ನಡೆಯಲ್ಕುಲನೀತಿಗಳೆನಲು ಪಡುಲ್ಮೂಡಲಿ
ಕಡಲುಕ್ಕಿ ಹರಿದು ಹೋಗಲಿ
ನುಡಿದರೆ ತಪ್ಪಿಲ್ಲ ಬಾಪು ರಂಗಯತಿಂಮನು" (ಮೂಲ ಶಾಸನದಲ್ಲಿ 'ತಪಿಲ' ಎಂದಿದ್ದು ಛಂದಸ್ಸಿನ ಲಕ್ಷಣದ ಆಧಾರದ ಮೇಲೆ 'ತಪ್ಪಿಲ್ಲ' ಎಂದು ಬರೆದುಕೊಳ್ಳಲಾಗಿದೆ) ಎಂತಹ ಸಂದರ್ಭದಲ್ಲೂ ಮಾತಿಗೆ ತಪ್ಪದವನು ಈ ರಂಗತಿಂಮ ಎಂದು ಹೊಗಳಲಾಗಿದ್ದು ಇವನೇ ಪ್ರಸ್ತುತ ಶಾಸನವನ್ನು ಬರೆದಿರಬಹುದು ಎಂದು ಊಹಿಸಲಾಗಿದೆ.

ತಿಂಮಪ (ಕ್ರಿ.ಶ.1531)

ಹೊಸಪೇಟೆಯ ಕಮಲಾಪುರ ಕೇಂದ್ರ ಪ್ರಾಚ್ಯವಸ್ತು ಸಂಗ್ರಹಾಲಯದ ಬಳಿ ಇರುವ ಶಾಸನವು ಚೆರಟಿಮಂಗಲದ ಲಿಂಗರಸರ ಮಗ ತಿಂಮಪ ಕವಿಯನ್ನು ದಾಖಲಿಸಿದೆ. ವಿಜಯನಗರದ ಅಚ್ಯುತರಾಯನ ಆಳ್ವಿಕೆಯನ್ನು ದೃಢೀಕರಿಸುತ್ತದೆ. ಇದೊಂದು ಗದ್ಯ ಶಾಸನವಾಗಿದ್ದು ಕುಂತೂರು ಎತಿರಾಯದೇವನ ಮಗ ವಲ್ಲಭಯ್ಯ ಅಗಸಿದ ನಾಡದ ಬಾವಿ, ಕೊಂಡಮರಸಯ್ಯ ಅಗಸಿದ ಕಪಿಲೆಯ ಬಾವಿಗಳನ್ನು ಹೆಸರಿಸಲಾಗಿದೆ.

ಓದುವ ತಿರುಮಲಮ್ಮ (ಕ್ರಿ.ಶ.1533)

ಹಂಪಿಯ ವಿಠಲದೇವಾಲಯದ ಮುಖ್ಯಗರ್ಭಗೃಹದ ಉತ್ತರದ ತಳಪಾಯದಲ್ಲಿರು ಶಾಸನವು ಕವಯಿತ್ರಿ ಓದುವ ತಿರುಮಲಂಮನವರ ಹೆಸರನ್ನು ದಾಖಲಿಸಿದೆ. ವಿಜಯನಗರದ ಅಚ್ಯುತದೇವರಾಯನ ಕಾಲದಲ್ಲಿದ್ದ ಈ ಕವಯಿತ್ರಿ ವಿಜಯನಗರ ಜಿಲ್ಲೆಯಲ್ಲಿ ಕಂಡುಬರುವ ಮೊದಲ ಶಾಸನೋಕ್ತ ಮಹಿಳಾ ಕವಿಯಾಗಿ ಗುರುತಿಸಲಾಗಿದೆ. ಸಂಸ್ಕೃತದಲ್ಲಿ ಶ್ಲೋಕ ರಚಿಸಿರುವುದು ತಿಳಿದು ಬರುತ್ತದೆ. ಕನ್ನಡ ಮತ್ತು ಎರಡೂ ಭಾಷೆಯಲ್ಲಿ ಈಕೆ ಪ್ರವೀಣೆಯಾಗಿದ್ದಂತೆ ತೋರುತ್ತದೆ. ತುಂಗಭದ್ರಾ ತೀರದಲ್ಲಿ ಶ್ರೀವಿಠಲೇಶ್ವರನ ಸನ್ನಿಧಿಯಲ್ಲಿ ಅಚ್ಯುತದೇವರಾಯನು ಮಾಡಿದ ಸುವರ್ಣಮೇರು ದಾನ ಕುರಿತು ಶ್ಲೋಕವೊಂದನ್ನು ಈಕೆ ರಚನೆ ಮಾಡಿದ್ದು ಶಾಸನದಲ್ಲಿ ಅದರ ಪಾಠವನ್ನು ನೀಡಲಾಗಿದೆ.

"ಬಾಣ ಪ್ರಾಣ ಪಯೋದಿ ಶೀತಕರ ಸಂಖ್ಯಾತೇ ಶಕವತ್ಸರೇ ವಿಖ್ಯಾತೇ
ವಿಜಯೇ ಚ ಮಾಸಿ ಸಹಸಿ ಸ್ವಚ್ಛೇ ಚ ಪಕ್ಷೇ ಗುರೋಃವಾಕೀ
ವಿಷ್ಣುದಿನೇ ಶುಭೇಪರಿಸರೇ ಶ್ರೀವಿಠಲಾಧೀಶಿತುಃ
ಧೀರ ಕಾಂಚನಮೇರು ದಾನಮಕರೋದ್ವೀರೋಽಚ್ಯುತಾಕ್ಷ್ಮಾಪತಿಃ"

ಇದೇ ಶ್ಲೋಕ ಮತ್ತೊಂದು ಶಾಸನದಲ್ಲಿಯೂ ಉಕ್ತಗೊಂಡಿದೆ.

ಅಕಸಾಲೆ ಸಿರಿಯಣ್ಣ (ಕ್ರಿ.ಶ.1552)

ಕೂಡ್ಲಿಗಿ ತಾಲ್ಲೂಕಿನ ಗಜಾಪುರದ ಹತ್ತಿರದ ದೇವಲಾಪುರದ ಪಾಳುಬಿದ್ದ ವಸಂತಮಲ್ಲಿಕಾಜುನ ದೇವಾಲಯದ ಮುಂದೆ ಬಿದ್ದಿರುವ ಕಂಬದಲ್ಲಿನ ಶಾಸನವನ್ನು ಅಕಸಾಲೆ ಸಿರಿಯಣ್ಣನು ಬರೆದಿರುವ ಉಲ್ಲೇಖವಿದೆ. ವಿಜಯನಗರದ ಸದಾಶಿವರಾಯನ ಆಳ್ವಿಕೆಯನ್ನು ಹೆಸರಿಸುತ್ತದೆ. ತಿಮ್ಮಪ್ಪನಾಯಕನ ಮಗ ರಾಮಪ್ಪನಾಯಕನು ಪಂನಲುನುಂಕನಹಳ್ಳಿಯನ್ನು ದೇವಲಾಪುರದ ಮಲ್ಲಿಕಾರ್ಜುನ ದೇವರ ಸೇವಾಕಾರ್ಯಗಳಿಗಾಗಿ ದಾನ ನೀಡಿದ ವಿವರವಿದೆ. ಶಾಸನವನ್ನು ಬರೆದುದಕ್ಕಾಗಿ ಕಾಟಿಗಂಭದ ಮಾನ್ಯದ ಭೂಮಿಯನ್ನು ನೀಡಲಾಗಿರುವುದನ್ನು ಸಿರಿಯಣ್ಣ ಹೇಳಿಕೊಂಡಿದ್ದಾನೆ.

ದೇಮರಸರ ಮಗ (ಕವಿಯ ಹೆಸರು ತ್ರುಟಿತವಾಗಿದೆ) (ಕ್ರಿ.ಶ.1557)

ಹರಪನಹಳ್ಳಿ ತಾಲ್ಲೂಕಿನ ಮುತ್ತಗಿಯ ಆಂಜನೇಯ ದೇವಾಲಯದ ಬಳಿಇರುವ ಶಾಸನ ಬರೆದಿರುವ ಶಾಸನಕವಿಯ ಹೆಸರು ತ್ರುಟಿತಗೊಂಡಿದ್ದು ಅವನ ತಂದೆಯ ಹೆಸರು ಗೊಬಳಿಯಬಾವಿಯ ದೇಮರಸರ ಮಗ ಎಂದು ಇರುವುದು ತಿಳಿದು ಬರುತ್ತದೆ. ವಿಜಯನಗರದ ಸದಾಶಿವರಾಯನ ಆಳ್ವಿಕೆಯಲ್ಲಿ ಕೃಷ್ಣಪ್ಪನಾಯಕನು

ವಿಧಿಸಿದ ಕುರಿಗಳ ತೆರಿಗೆ ಕುರಿತು ತಿಳಿಸಲಾಗಿದೆ.

ಭಾಗವತ ನಾಗೈಯ (16ನೇ ಶ.ಮಾ)

ಹೊಸಪೇಟೆ ತಾಲ್ಲೂಕಿನ ಹೊಸೂರು ಗ್ರಾಮದ ಹೊಸೂರಮ್ಮನ ದೇವಾಲಯದ ದ್ವಾರಪಾಲಕ ವಿಗ್ರಹದ ಪಕ್ಕದಲ್ಲಿರುವ ಶಾಸನವನ್ನು ನಾಗೈಯ ಕವಿ ಬರೆದಿರುವಂತೆ ತಿಳಿಯುತ್ತದೆ. ಹೊಸೂರ ಮಹಾಮಾಯಿಗೆ ನೈವೇದ್ಯಕ್ಕಾಗಿ ಮಾದಿನಾಯಕರು ಬ್ರಾಹ್ಮಣ ಚಿತ್ತವಾಡಿಯ ಸೀಮೆಯಲ್ಲಿ ಕೆಲವು ಸ್ಥಳಗಳನ್ನು ದತ್ತಿಬಿಟ್ಟಿರುವ ದಾಖಲೆ ಇಲ್ಲಿದೆ. ನಾಗೈಯನು ದೇವರ ಪುರಾಣಗಳನ್ನು ವ್ಯಾಖ್ಯಾನಿಸುವ ಪ್ರವಚನಕಾರನಾಗಿಯೋ ಅಥವಾ ಬಯಲಾಟಗಳನ್ನು ಆಡಿಸುತ್ತಿದ್ದಂತೆ ತೋರುತ್ತದೆ. ಆದ್ಧರಿಂದಲೇ ತನ್ನನ್ನು ಭಾಗವತ ನಾಗೈಯ ಎಂದು ಕರೆದುಕೊಂಡಿದ್ದಾನೆ. ಜನರೂ ಅವನನ್ನು ಹಾಗೇ ಕರೆಯುತ್ತಿದ್ದಿರಬಹುದು.

ಮಹಾಶ್ವೇತಂಬರಕವಿ (ಕ್ರಿ.ಶ.1612)

ಹೊಸಪೇಟೆ ತಾಲ್ಲೂಕಿನ ಬುಕ್ಕಸಾಗರದಲ್ಲಿ ದೊರೆತ ತಾಮ್ರಶಾಸನವನ್ನು ಮಹಾಶ್ವೇತಂಬರ ಕವಿ ರಚಿಸಿದ್ದಾನೆ. ಹಲವು ಜನ ಪೌರಾಣಿಕ ಹಾಗೂ ಐತಿಹಾಸಿಕ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಶ್ರೀವೀರವೆಂಕಟಪತಿಮಹಾರಾಯನು ಬುಕ್ಕಸಾಗರದ ಹಂಪೆಮಠಕ್ಕೆ ಕರ್ತರಾದ ಸಿದ್ಧಬಸವರಾಜರಿಗೆ ಗಂಗಾವತಿ ಸೀಮೆಯ ಕಲ್ಲುಗುಡಿಯನ್ನು ಜಂಗಮಾರ್ಚನೆ, ಅನ್ನದಾನಕ್ಕಾಗಿ ದಾನ ನೀಡಲಾಗಿರುವುದು ತಿಳಿದುಬರುತ್ತದೆ. ಪ್ರಸ್ತುತ ಶಾಸನ ರಚನೆಯ ಕಾಲಕ್ಕಾಗಲೇ ಇದ್ದ ಶೈವಮತ ಪ್ರಾಬಲ್ಯವನ್ನು ಹೆಚ್ಚು ಸ್ಪಷ್ಟ ಪಡಿಸುತ್ತದೆ. ಕನ್ನಡ ಮತ್ತು ಸಂಸ್ಕೃತ ಎರಡು ಭಾಷೆಯಲ್ಲಿ ಶಾಸನವು ರಚನೆಗೊಂಡಿದ್ದು ಮಹಾಶ್ವೇತಂಬರ ಕವಿಯು ಉಭಯಭಾಷಾ ಕವಿಯಾಗಿದ್ದನೆಂದು ಹೇಳಲಾಗಿದೆ.

ಶಿರಿಗೇರಿ ಹಿರೇಮಠದ ಯೇಕಾಂಬ್ರಯ್ಯ (ಕ್ರಿ.ಶ.1726)

ಹೊಸಪೇಟೆಯ ಕೊಟ್ಟೂರು ಸ್ವಾಮಿ ಮಠದ ಸನ್ನದನ್ನು ಶಿರಿಗೇರಿ ಹಿರೇಮಠದ ಯೇಕಾಂಬ್ರಯ್ಯನು ಬರೆದಿದ್ದಾನೆ. ವಿಜಯನಗರ ಜಿಲ್ಲೆಯ ಶಾಸನಗಳಲ್ಲಿ ಉಕ್ತವಾದ ಕೊನೆಯ ಶಾಸನ ಕರ್ತೃ ಇವನಾಗಿದ್ದಾನೆ. ಹಂಡೆ ಹಿರೇರಾಮಪ್ಪ ನಾಯಕನು ರಾಜಮಾನ್ಯ ಮರಿಕೊಟ್ಟೂರು ಸ್ವಾಮಿಗಳಿಗೆ ತನ್ನ ಹಿರಿಯರಿಗೆ ಸುಕೃತವಾಗಲೆಂದು ನಿರಂತರ ದಾಸೋಹಕ್ಕಾಗಿ ಬಳ್ಳಾರಿಯ ಕೊಟ್ಟೂರು ಮಠಕ್ಕೆ ವಿವಿಧ ಗ್ರಾಮಗಳನ್ನು ದಾನ ನೀಡಿದ ವಿವರಗಳು ಇಲ್ಲಿ ದಾಖಲೆಗೊಂಡಿವೆ.

ಶಾಸನಗಳೂ ಉತ್ಕೃಷ್ಟವಾದ ಕಾವ್ಯಾಂಶಗಳನ್ನು ಒಳಗೊಂಡಿರುವುದರಿಂದ ಅವುಗಳನ್ನು ಬಿಡಿಕಾವ್ಯಗಳೆಂದೇ ಪರಿಗಣಿಸಬೇಕಾಗುತ್ತದೆ. ಇಂತಹ ಸಾಹಿತ್ಯ ವಿಜಯನಗರ ಜಿಲ್ಲೆಯ ಅನೇಕ ಶಾಸನಗಳಲ್ಲಿ ಸಮೃದ್ಧವಾಗಿರುವುದನ್ನು

ಗುರುತಿಸಬಹುದಾಗಿದೆ. 3ನೇ ಶತಮಾನಕ್ಕೆ ಸೇರಿದ ಪಲ್ಲವರ ಆಳ್ವಿಕೆಯ ಕಾಲದಲ್ಲಿ ರಚನೆಗೊಂಡ ಪ್ರಾಕೃತದ ಶಾಸನವೇ ಕವಿಯ ಹೆಸರಿನ ಉಕ್ತಿ ಇರುವ ವಿಜಯನಗರ ಜಿಲ್ಲೆಯ ಮೊದಲ ಶಾಸನವೆಂದು, ಆ ನಂತರ ಮೊದಲ ಕನ್ನಡ ಗದ್ಯಕವಿಯಾಗಿ ಕಾಳಿದಾಸಯ್ಯನನ್ನು, ಮೊದಲ ಕನ್ನಡ ಪದ್ಯಶಾಸನ ಕವಿಯಾಗಿ ನಾಗಮಯ್ಯನನ್ನು ಇಲ್ಲಿ ಗುರುತಿಸಲಾಗಿದೆ. ಶಾಸನಕವಿಗಳ ಶಾಸನ ರಚನೆಯನ್ನು ಗಮನಿಸಿದರೆ ಇವರು ಯಾವ ಮಹಾ ಕವಿಗಳಿಗೂ ಕಡಿಮೆ ಇಲ್ಲ ಎನ್ನುವಂತೆ ಕಾವ್ಯಾತ್ಮಕವಾದ ಶಾಸನಗಳನ್ನು ರಚಿಸಿದ್ದಾರೆ. ಕೊಟ್ನಕಲ್ಲು ಶಾಸನದ ರಚನೆಕಾರ ಮಧುಸೂಧನದೇವ ಕವಿಯು ತಾನು ರಚಿಸಿದ ಶಾಸನವನ್ನು ಶಾಸನಕೃತಿಯೆಂದೇ ಕರೆದುಕೊಂಡಿದ್ದಾನೆ. ಯಾವ ಕಾವ್ಯದ ಸಾಲುಗಳಿಗೂ ಕಡಿಮೆ ಇಲ್ಲದಂತೆ ಶಾಸನಗಳು ಸಾಹಿತ್ಯಿಕ ಮಹತ್ವ ಪಡೆದ ರಚನೆಗಳಾಗಿವೆ. ಕವಿಗಳನ್ನು ಉಲ್ಲೇಖಿಸದೇ ಇರುವ ಬಹಳಷ್ಟು ಶಾಸನಗಳು ಅತ್ಯಂತ ಕಾವ್ಯಾತ್ಮಕವಾಗಿದ್ದು ನಿಜಕ್ಕೂ ಸಾಹಿತ್ಯಿಕವಾಗಿ ಶ್ರೀಮಂತವಾಗಿವೆ. ಇಂತಹ ಶಾಸನಗಳನ್ನು ಹೆಚ್ಚು ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ. ಆ ಮೂಲಕ ಪ್ರಾಚೀನ ಕಾಲದ ಸಾಹಿತ್ಯವನ್ನು ಹೆಚ್ಚು ವಿಸ್ತಾರಗೊಳಿಸುವ ಮತ್ತು ಶ್ರೀಮಂತಗೊಳಿಸುವ ಕಾರ್ಯಗಳು ನಡೆಯಬೇಕಾಗಿದೆ.

ಕೊನೆ ಟಿಪ್ಪಣಿಗಳು :

1. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1 ಬಳ್ಳಾರಿ ಜಿಲ್ಲೆ, ಶಾಸನ ಸಂಖ್ಯೆ–57, ಪು.ಸಂ–373.
2. ಅದೇ, ಶಾಸನ ಸಂಖ್ಯೆ–99, ಪು.ಸಂ–559.
3. ಅದೇ, ಶಾಸನ ಸಂಖ್ಯೆ–24, ಪು.ಸಂ–283.
4. ಅದೇ, ಶಾಸನ ಸಂಖ್ಯೆ–23, ಪು.ಸಂ–328.
5. ಶಾಸನ ಪದ್ಯಸಿರಿ–ಸಂಖ್ಯೆ–2, ಪುಟ ಸಂಖ್ಯೆ–12
6. ಕನ್ನಡ ನಾಡಿನ ಶಾಸನಕವಿಗಳು, ಪುಟ ಸಂ–42
7. ಅದೇ, ಪುಟ ಸಂ–68
8. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1 ಬಳ್ಳಾರಿ ಜಿಲ್ಲೆ, ಶಾಸನ ಸಂಖ್ಯೆ–27, ಪು.ಸಂ–288
9. ಅದೇ, ಶಾಸನ ಸಂಖ್ಯೆ–190, ಪು.ಸಂ–636.
10. ಅದೇ, ಶಾಸನ ಸಂಖ್ಯೆ–132, ಪು.ಸಂ–596.
11. ಅದೇ, ಶಾಸನ ಸಂಖ್ಯೆ–89, ಪು.ಸಂ–540.

12. ಅದೇ, ಶಾಸನ ಸಂಖ್ಯೆ–1, ಪು.ಸಂ–311.
13. ಅದೇ, ಶಾಸನ ಸಂಖ್ಯೆ–7, ಪು.ಸಂ–465.
14. ಅದೇ, ಶಾಸನ ಸಂಖ್ಯೆ–12, ಪು.ಸಂ–470.
15. ಅದೇ, ಶಾಸನ ಸಂಖ್ಯೆ–105, ಪು.ಸಂ–566.
16. ಅದೇ, ಶಾಸನ ಸಂಖ್ಯೆ–85, ಪು.ಸಂ–418.
17. ಅದೇ, ಶಾಸನ ಸಂಖ್ಯೆ–1, ಪು.ಸಂ–248.
18. ಅದೇ, ಶಾಸನ ಸಂಖ್ಯೆ–12, ಪು.ಸಂ–233
19. ಅದೇ, ಶಾಸನ ಸಂಖ್ಯೆ–60, ಪು.ಸಂ–515
20. ಅದೇ, ಶಾಸನ ಸಂಖ್ಯೆ–36, ಪು.ಸಂ–494
21. ಅದೇ, ಶಾಸನ ಸಂಖ್ಯೆ–12, ಪು.ಸಂ–4
22. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3 ಹಂಪಿ ಶಾಸನಗಳು, ಶಾಸನ ಸಂಖ್ಯೆ–55, ಪು.ಸಂ–44
23. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1 ಬಳ್ಳಾರಿ ಜಿಲ್ಲೆ, ಶಾಸನ ಸಂಖ್ಯೆ–13, ಪು.ಸಂ–235
24. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3 ಹಂಪಿ ಶಾಸನಗಳು, ಶಾಸನ ಸಂಖ್ಯೆ–69, ಪು.ಸಂ–56
25. ಅದೇ, ಶಾಸನ ಸಂಖ್ಯೆ–69, ಪು.ಸಂ–56
26. ಅದೇ, ಶಾಸನ ಸಂಖ್ಯೆ–398, ಪು.ಸಂ–283
27. ಅದೇ, ಶಾಸನ ಸಂಖ್ಯೆ–257, ಪು.ಸಂ–198
28. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1 ಬಳ್ಳಾರಿ ಜಿಲ್ಲೆ, ಶಾಸನ ಸಂಖ್ಯೆ–206, ಪು.ಸಂ–655
29. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3 ಹಂಪಿ ಶಾಸನಗಳು, ಶಾಸನ ಸಂಖ್ಯೆ–322, ಪು.ಸಂ–234
30. ಅದೇ, ಶಾಸನ ಸಂಖ್ಯೆ–184, ಪು.ಸಂ–137
31. ಅದೇ, ಶಾಸನ ಸಂಖ್ಯೆ–50, ಪು.ಸಂ–27
32. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1 ಬಳ್ಳಾರಿ ಜಿಲ್ಲೆ, ಶಾಸನ ಸಂಖ್ಯೆ–4, ಪು.ಸಂ–225
33. ಅದೇ, ಶಾಸನ ಸಂಖ್ಯೆ–186, ಪು.ಸಂ–631
34. ಅದೇ, ಶಾಸನ ಸಂಖ್ಯೆ–18, ಪು.ಸಂ–152

35. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3 ಹಂಪಿ ಶಾಸನಗಳು, ಶಾಸನ ಸಂಖ್ಯೆ–396, ಪು.ಸಂ–278

36. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1 ಬಳ್ಳಾರಿ ಜಿಲ್ಲೆ, ಶಾಸನ ಸಂಖ್ಯೆ–6, ಪು.ಸಂ–143

ಪರಾಮರ್ಶನ ಗ್ರಂಥಗಳು

1. ದೇವರಕೊಂಡಾರೆಡ್ಡಿ(ಸಂ), ಕೆ.ಜಿ.ಭಟ್‌ಸೂರಿ, ಡಿ.ವಿ.ಪರಮಶಿವಮೂರ್ತಿ, ಕಲವೀರ ಮನ್ವಾಚಾರ್,(ಸ.ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – 1, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,ಹಂಪಿ 1998

2. ದೇವರಕೊಂಡಾರೆಡ್ಡಿ(ಸಂ), ಕೆ.ಜಿ.ಭಟ್‌ಸೂರಿ, ಡಿ.ವಿ.ಪರಮಶಿವಮೂರ್ತಿ, ಕಲವೀರ ಮನ್ವಾಚಾರ್,(ಸ.ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ – 3, ಹಂಪಿ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ 2000

3. ಮೇವುಂಡಿ ಮಲ್ಲಾರಿ, ಕನ್ನಡ ನಾಡಿನ ಶಾಸನಕವಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2013

***

ಅಂಬಿಗರ ಚೌಡಯ್ಯನ ವಚನಗಳಲ್ಲಿ ಸಾಮಾಜಿಕ ಚಿಂತನೆ

ಡಾ. ಚನ್ನಮ್ಮ ಎನ್. ಅಲ್ಬಾ

ಸಹಾಯಕ ಪ್ರಾಧ್ಯಾಪಕರು

ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ

ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ

channammanalba@gmail.com

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹನ್ನೆರಡನೆಯ ಶತಮಾನಕ್ಕೊಂದು ವಿಶಿಷ್ಠವಾದ ಸ್ಥಾನವಿದೆ. ಧರ್ಮ ಕೇವಲ ಕೆಲವೇ ಜನರ ಗುತ್ತಿಗೆಯಾದಾಗ ಅದನ್ನು ಜನಪರಗೊಳಿಸಿದವರು ಶರಣರು. ಕನ್ನಡನಾಡಿನಲ್ಲಿ ಧರ್ಮ ಹದಗೆಟ್ಟಾಗ ಶರಣರ ಆಗಮನವಾಯಿತು. ಇಂತಹ ವೈಶಿಷ್ಟ್ಯ ಪೂರ್ಣವಾದ ಚಳುವಳಿಯೊಂದು ಈ ದೇಶದಲ್ಲಿ ನಡೆದದ್ದು ಅದೇ ಮೊದಲು. ಈ ಚಳುವಳಿಯಲ್ಲಿ ಮಾದಿಗ, ಮಡಿವಾಳ, ಕುಂಬಾರ, ಕುಮ್ಮಾರ, ಡೋಹರ, ಅಂಬಿಗ ಈ ಮೊದಲಾದ ದುಡಿಯುವ ವರ್ಗವೇ ತಮ್ಮನ್ನು ಹಲವು ತೀವ್ರವಾಗಿ ತೊಡಗಿಸಿಕೊಂಡಿದ್ದು ನಿಜಕ್ಕೂ ಅರ್ಥಪೂರ್ಣವಾದುದು. ಇಂತಹ ಮಹತ್ವಪೂರ್ಣ ಚಳುವಳಿಯ ನಡುವೆ ವಚನಕಾರ ಅಂಬಿಗರ ಚೌಡಯ್ಯ ಇನ್ನೂ ವಿಶಿಷ್ಟನಾಗಿ ಕಾಣುತ್ತಾನೆ.

ವಚನಕಾರರ ಸಂದರ್ಭ ಅವರಿದ್ದ ಕಾಲದ ಸಮಾಜದ ದಾರುಣ ಪರಿಸ್ಥಿತಿ– ಇವನ್ನೆಲ್ಲಾ ಅರ್ಥೈಸಿಕೊಂಡಾಗ ಅಂಬಿಗರ ಚೌಡಯ್ಯ ಹಾಗೂ ಮತ್ತಿತರ ವಚನಕಾರರ ಸಾಧನೆ ಅತ್ಯಂತ ಮಹತ್ವದ್ದಾಗಿ ಕಾಣುತ್ತದೆ. ವಚನಕಾರರು ಬರುವದಕ್ಕಿಂತ ಮೊದಲು ಸಮಾಜದ ಪರಿಸ್ಥಿತಿ ವಿಚಿತ್ರವಾಗಿತ್ತು, ವಚನಕಾರರು ಬೇರೆ–ಬೇರೆ ದಿಕ್ಕಿನಿಂದ, ವಿವಿಧ ಸ್ಥಳಗಳಿಂದ ಬಂದು ಬಸವಕಲ್ಯಾಣದಲ್ಲಿ ಕೂಡಿ ಧರ್ಮದ ಬಗೆಗೆ, ಸಮಾಜದ ಬಗೆಗೆ ಚರ್ಚಿಸಿದ್ದು, ಹೋರಾಟದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡದ್ದು,

ಅಂದಿನ ಸಂದರ್ಭಕ್ಕನುಗುಣವಾಗಿ ಧಾರ್ಮಿಕ ಕ್ಷೇತ್ರದಿಂದ ಸಮಾಜವನ್ನು ಸುಧಾರಿಸುವ ಸಮನ್ವಯ ಮಾರ್ಗವನ್ನೂ ಕಂಡುಕೊಂಡದ್ದು ಗಮನಿಸಬೇಕಾದ ಅಂಶಗಳು. ಬಸವಣ್ಣ, ಚನ್ನಬಸವಣ್ಣ, ಅಲ್ಲಮ ಮೊದಲಾದ ವಚನಕಾರರಲ್ಲಿ ಅಂಬಿಗರ ಚೌಡಯ್ಯ ಅತ್ಯಂತ ಗಮನಾರ್ಹ ವಚನಕಾರ.

ಅಂಬಿಗರ ಚೌಡಯ್ಯ ಹೆಸರೇ ಸೂಚಿಸುವಂತೆ ಒಬ್ಬ ಕಬ್ಬಲಿಗ ಅಥವಾ ಗಂಗಾಮತಸ್ಥ. ನಿಮ್ನ ವರ್ಗದಿಂದ ಬಂದು, ಬಸವಾದಿ ಪ್ರಮಥರ ಮಾನವೀಯ ಧೋರಣೆಗಳಿಂದ ಪ್ರಭಾವಿತನಾಗಿ ಭಕ್ತಿಪಥವನ್ನು ಮೈಗೂಡಿಸಿಕೊಂಡು, ಲಿಂಗಾಂಗಸಂಗಿಯೂ, ಪ್ರಸಾದಕಾಯನೂ ಆಗಿ ಕಾಯಕ ನಿಷ್ಠೆಯಿಂದ ಶ್ರೇಷ್ಠ ಅನುಭಾವಿಯಾಗಿದ್ದ ಚೌಡಯ್ಯ ಮಾನವರ ಪರಿಶುದ್ಧ ಬದುಕು ಮತ್ತು ಭಕ್ತಿಗೆ ಬೆಲೆಕೊಡುತ್ತಾನೆ. ಭವಸಾಗರದಿಂದ ಜನತೆಯನ್ನು ಮುಕ್ತಿ ಮಂಟಪಕ್ಕೊಯ್ಯುವ ಮಹಾಕಾಯಕ ಆತನದ್ದು. ಪ್ರವೃತ್ತಿಯಲ್ಲಿ ಕಟ್ಟಾ ಉಗ್ರನಂತೆ ಕಾಣುವ ಆತ ಮಾನವೀಯತೆಯ ಮೂರ್ತಿಯೂ ಹೌದು. ತನ್ನೆದುರಿನ ಕಟುಸತ್ಯವನ್ನು ಹರಿತವಾದ ನೇರ, ನಿಷ್ಠುರ ನುಡಿಗಳಲ್ಲಿ ಖಂಡಿಸುವ ಬಂಡಾಯಗಾರ. ಶರಣ ತತ್ವಗಳಿಗೆ ವಿರುದ್ಧವಾಗಿ ವರ್ತಿಸುವ ಕಪಟ, ಸೋಗು, ವಂಚನೆಗಳನ್ನು ಕಂಡರೆ ಸಿಡಿಲುಂಡೆಯಾಗುತ್ತಿದ್ದ ಸ್ವತಂತ್ರ ದಿಟ್ಟ ವೀರಾಧಿವೀರ ನಿಜಶರಣ.

ಶರಣರು ಧರ್ಮಮಾರ್ಗಕ್ಕೆ ವ್ಯತಿರಿಕ್ತವಾಗಿ ನಡೆದವರಿಗೆ ಛೀಮಾರಿ ಹಾಕುತ್ತಿದ್ದರು. ಆ ಮಾರ್ಗದಲ್ಲೇ ಮುನ್ನಡೆದ ಚೌಡಯ್ಯ ತನ್ನೆದುರಿನ ಸಮಾಜದಲ್ಲಿ ಜನರನ್ನು ಹಾದಿ ತಪ್ಪಿಸುವ ಸೂತಕದ ಯೋಗಿ ಭ್ರಮಿತರನ್ನು, ಬೆಡಗಿನ ಮಾಯೆಗೊಳಗಾದ ಬಡಿವಾರಿಗಳನ್ನು, ಮಾತಿನಲ್ಲಿ ಅದ್ವೈತವ ನುಡಿವ ಅಬದ್ಧರನ್ನು, ಸಂಸ್ಕೃತ ಭಾಷೆಯ ಕಲಿತು, ಮಾತಿನ ಬಣಬೆಯ ಮುಂದಿಟ್ಟುಕೊಂಡು, ಶಂಖ, ಗಿಣಿಲು, ದಂಡಾಗ್ರ, ಕಾವಿ ಕಾಷಾಂಬರವ ಹೊತ್ತು, ಕಾಮನಾಟದಲ್ಲಿ ಕಲಕಿ, ಮನಸ್ಸಿನಲ್ಲಿ ದುರ್ಗುಣವನ್ನಿಟ್ಟುಕೊಂಡು ಮಾತಿನಲ್ಲಿ ನೀತಿಯನ್ನು ಸೇರಿಸುತ್ತ ಚರಿಸುವವರನ್ನು ಈ ರೀತಿ ಕಂಡಿದ್ದಾನೆ. ಆ ವಚನ ಹೀಗಿದೆ:

"ಅದ್ವೈತವ ನುಡಿದು, ಅಬದ್ಧ ಅಂಗಕ್ಕಾಗಿ
ಬದ್ಧರ ಬಾಗಿಲಲ್ಲಿ ಹೊದ್ದುಕೊಂಬ(ರ)ಲ್ಲಾ ಎಂದು
ಮತ್ತೆ ಅದ್ವೈತಕ್ಕೆ ಕದ್ದೆಹತನವೆ?
ಇಂತೀ ಅಬದ್ಧರ ಕಂಡು ಮುನ್ನವೆ ಹೊದ್ದಬೇಡ,
ಎಂದನಂಬಿಗ ಚೌಡಯ್ಯ"(ಮ.ಸಂ–1, ವಚನ–28)

ಶಿವಪಥಕ್ಕೆ ದೂರಾಗಿ ದುರಾಚಾರವ ಆಚರಿಸುವ ಇಂಥವರಿಂದ ಧರ್ಮ,

ದೇವರು, ಭಕ್ತಿ, ಶಿವಾಚಾರದ ಹೆಸರಿನಲ್ಲಿ, ಲಿಂಗದೀಕ್ಷೆಯ ಹೆಸರಿನಲ್ಲಿ, ಉಪದೇಶದ ಹೆಸರಿನಲ್ಲಿ ಅನ್ಯಾಯ, ಅನಾಚಾರಗಳು ಹೆಚ್ಚಿ ಜನರು ತಮ್ಮ ಬದುಕಿನ ಅಂದವನ್ನು ಕಳೆದುಕೊಳ್ಳುವಂತಾದ ಬಗ್ಗೆ ಚೌಡಯ್ಯನಿಗೆ ತೀವ್ರ ಅನುಕಂಪೆಯಿದೆ. ಅಂಥವರ ಬದುಕು ಹಸನಾಗಬೇಕು, ಅವರು ಋಜುಮಾರ್ಗದಲ್ಲಿ ನಡೆಯಬೇಕು ಎಂಬ ತುಡಿತವಿದೆ. 'ಬೇಗ ಬೇಗನೆ ಗತಿಪಥದ ಜ್ಞಾನವ ಮಾಡಿಕೊಂಡು ನೀಗಿರೊ ನಿಮ್ಮ ಭವಬಂಧನದ ಸಾಗರವನು'(ವ.ಸಂ–1,ವ–193) 'ತಾನಳಿವುದಕ್ಕೆ ಮುನ್ನವೆ ಅರಿದು ಕೂಡಬೇಕು' (ವ.ಸಂ–1,ವ–27) ಎಂಬ ಮಾತುಗಳಲ್ಲಿ ಚೌಡಯ್ಯನು ಮನುಷ್ಯ ದೇಹದ ಅನಿತ್ಯತೆಯನ್ನೂ, 'ಭಕ್ತಿಯಿಂದಲೆ ಮುಕ್ತಿ' ಎಂಬುದನ್ನು ಮನಗಾಣಿಸುತ್ತಿದ್ದಾನೆ. ಬಸವಾದಿ ಶಿವಶರಣರ ಸಮಕಾಲೀನನಾಗಿದ್ದ ಅಂಬಿಗರ ಚೌಡಯ್ಯ 12ನೇ ಶತಮಾನ ಕಂಡ ಬಂಡಾಯ ಮನೋಭೂಮಿಕೆಯ ಒಂದು ಅಗ್ನಿಗೋಲ. ಕೆಳವರ್ಗದಿಂದ ಬಂದ ಈತ ತನ್ನಂತೆಯೇ ಅಸ್ಪೃಶ್ಯರೆನ್ನಿಸಿಕೊಂಡವರನ್ನು ಉತ್ತಮರು ನಡೆಸಿಕೊಳ್ಳುವ ರೀತಿಯನ್ನು ಕಂಡು ತುರತುರನೆ ಉರಿವ ಕೊಳ್ಳಿಯಾಗುವನು. ಅವನ ಅಂತರಂಗದ ಬಡಬಾಗ್ನಿ ನಿಗಿ ನಿಗಿ ಕೆಂಡದ ರೂಪದಲ್ಲಿ ಮಾತಿನಲ್ಲಿ ವ್ಯಕ್ತವಾಗುತ್ತದೆ. ಅಸ್ಪೃಶ್ಯರು ಉತ್ತಮರಿಗಿಂತ ಸಾಮಾಜಿಕವಾಗಿ ಪ್ರಯೋಜನಕ್ಕೆ ಬರುವವರೆನ್ನುವ ಸ್ವಾಭಿಮಾನದ ಮಾತಿನಲ್ಲಿ ತುಂಬಿ ಹರಿಯುತ್ತದೆ.

"ಕುರಿಕೋಳಿ ಕಿರುಮೀನ ತಿಂಬವರ ಊರೊಳಗೆ ಇರು ಎಂಬರು.
ಅಮೃತಾನ್ನವ ಕರೆವ ಗೋವ ತಿಂಬವರ ಊರಿಂದ ಹೊರಗಿರು ಎಂಬರು.
ಆ ತನು ಹರಿಗೋಲಾಯಿತ್ತು,
ಬೊಕ್ಕಣ, ಸಿದ್ದಲಿಕೆ, ಬಾರುಕೋಲು, ಪಾದರಕ್ಷೆ,
ದೇವರ ಮುಂದೆ ಬಾರಿಸುವುದಕ್ಕೆ ಮದ್ದಳೆಯಾಯಿತ್ತು.
ಈ ಸಿದ್ದಲಿಕೆಯೊಳಗಣ ತುಪ್ಪವ ಶುದ್ಧಮಾಡಿ
ತಿಂಬ ಗುಜ್ಜ ಹೊಲೆಯರ ಕಂಡಡೆ
ಉದ್ದನ ಚಮ್ಮಾವಿಗೆಯ ತೆಕ್ಕೊಂಡು ಬಾಯ ಕೊ(ಯ್ಯು)ವೆನು
ಎಂದಾತ ನಮ್ಮ ಅಂಬಿಗರ ಚೌಡಯ್ಯ".(ಮ.ಸಂ–1, ವ–115)

'ಕುಲ ಹಲವಾದಡೇನು, ಉತ್ಪತ್ತಿ – ಸ್ಥಿತಿ – ಲಯ ಒಂದೇ ಭೇದ' ಎನ್ನುವ ವಾಸ್ತವ ಕಹಿಸತ್ಯವನ್ನು ಹೇಳುವ ಚೌಡಯ್ಯ ವ್ಯಕ್ತಿಯ ಹುಟ್ಟನ್ನಾಧರಿಸಿ ಮೇಲು – ಕೀಳು ಎಂದು ನಿರ್ಣಯಿಸುವ ಸಾಮಾಜಿಕ ಪಕ್ಷಪಾತ ಧೋರಣೆಯನ್ನು ನಯವಾಗಿಯೇ ವಿಡಂಬಿಸುವನು :

"ಕುಲ ಹಲವಾದಡೇನು? ಉತ್ಪತ್ಯ ಸ್ಥಿತಿ ಲಯ ಒಂದೆ ಭೇದ.
ಮಾತಿನ ರಚನೆಯ ಬೇಕಾದಂತೆ ನುಡಿದಡೇನು?
ಬಿಡುಮುಡಿಯಲ್ಲಿ ಎರಡನರಿಯಬೇಕೆಂದನಂಬಿಗಚೌಡಯ್ಯ".(ಮ.ಸಂ–1.ವ–118)

ಉತ್ತಮರು ಮಾಡಿಕೊಂಡ ಚಾತುರ್ವರ್ಣವ್ಯವಸ್ಥೆಯು ಬೇಕಾದ ಹಾಗೆ ಹೊರಳಿಸಬಹುದಾದ ಮಾತಿನ ರಚನೆ; ಅದೊಂದು ಕಟ್ಟು, ಬಿಡುಮುಡಿಯಲ್ಲ. ಲೋಕದಲ್ಲಿ ಇರುವುದು ಎರಡೇ ಎರಡು : ಹೆಣ್ಣು – ಗಂಡು; ಮನುಷ್ಯ – ಪ್ರಾಣಿ; ಒಳ್ಳೆಯವ – ಕೆಟ್ಟವ. 'ಹೊಲೆಯ' ಎಂಬುದು ಉತ್ತಮರು ತಮ್ಮ ಅನುಕೂಲಕ್ಕಾಗಿ ಮಾಡಿಕೊಂಡ ಶಾಬ್ದಿಕ ಸೃಷ್ಟಿ. ಊರ ಹೊರಗೆ ಇರುವವರು, ಸತ್ತ ದನವನ್ನು ತಿನ್ನುವವರು ಹೊಲೆಯರಲ್ಲ; ಊರ ಒಳಗೆ ಇದ್ದು ಕುರಿ, ಕೋಳಿ, ಕಿರುಮೀನ ತಿನ್ನುವ ಉತ್ತಮರು ಹೊಲೆಯರು ಎಂದು ಚೌಡಯ್ಯ ತನ್ನ ಮಾತಿನ ಚಾಟಿ ಏಟಿನಿಂದ ಚುರುಕು ಮುಟ್ಟಿಸುವನು.

ಬೇಡರಕಣ್ಣಪ್ಪ, ಜೇಡರ ದಾಸಿಮಯ್ಯ, ಡೋಹರ ಕಕ್ಕಯ್ಯ, ಮಾದರ ಚನ್ನಯ್ಯ – ಇವರಿಗೆಲ್ಲ ರೂಢಿಗೆ, ಸಂಪ್ರದಾಯಕ್ಕೆ ಶಿವನು ಒಲಿದ ಪರಿಯ ನೋಡಾ! ಎಂದು ಕಟಕಿಯೊಡುವ ಚೌಡಯ್ಯ ಧರ್ಮ, ಜಾತಿ ಎನ್ನುವುದು ಮನುಷ್ಯರು ಮಾಡಿಕೊಂಡದ್ದೇ ಹೊರತು ದೇವರು ಮಾಡಿದ್ದಲ್ಲ, ಹಾಗೆ ಮಾಡಲಿಕ್ಕೆ ಅವರೇನು ಸ್ವತಂತ್ರರೆ? ಎಂದು ಪ್ರಶ್ನಿಸುವನು. ಅಷ್ಟೇ ಅಲ್ಲ, ಜಾತಿಯ ಕಟ್ಟುಪಾಡುಗಳನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಕಟ್ಟು ನಿಟ್ಟಾಗಿ ಆಚರಣೆಗೆ ತರಹೊರಟರೆ 'ಇವನೊಡ್ಡಿದ ಠಾವಿನಲಿ ಕಲ್ಲು ಮುಳ್ಳು ಮೂಡುವವು' ಎಂದು ಎಚ್ಚರಿಸುವನು.

ಸಾಮಾಜಿಕ – ಧಾರ್ಮಿಕ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ ತರುವ ಉದ್ದೇಶದಿಂದಲೇ 12ನೇ ಶತಮಾನದಲ್ಲಿ ಶಿವಶರಣರ ಚಳವಳಿ ಹುಟ್ಟಿಕೊಂಡದ್ದು. ಸಮಾಜೋಧಾರ್ಮಿಕ ಬದಲಾವಣೆಗೆ ಶಿವಶರಣರು ಸಾಹಿತ್ಯವನ್ನು ಸಮರ್ಥ ಮಾಧ್ಯಮವಾಗಿ ಬಳಸಿಕೊಂಡರು. ಅಂಬಿಗರ ಚೌಡಯ್ಯ ಶೂದ್ರನಾದ ಕಾರಣ ಮೇಲಿನವರು ಹಾಗೂ ಕೆಳಸ್ತರದ ವ್ಯಕ್ತಿಗಳ ದೌರ್ಬಲ್ಯಗಳನ್ನು, ಊಸರವಳ್ಳಿತನವನ್ನು ಚೆನ್ನಾಗಿ ಬಲ್ಲವನು. ಹೀಗಾಗಿ ಸಾಮಾಜಿಕ ನೆಲೆಯ ಈ ಎರಡು ಸ್ತರಕ್ಕೆ ಸೇರಿದವರ ವರ್ತನೆಯನ್ನು ಗೇಲಿಮಾಡುವಲ್ಲಿ, ಕಟುವಾಗಿ ಟೀಕಿಸುವಲ್ಲಿ ಅವನು ಬಳಸುವ ಭಾಷೆ ತನ್ನ ಮೃದುತ್ವವನ್ನು ಕಳೆದುಕೊಂಡುಬಿಡುತ್ತದೆ. ಬಿಡುಬೀಸಾಗಿ ಟೀಕೆ ಮಾಡುವಾಗ ಅವನ ಭಾಷೆ ತೀರಾ ಒರಟಾಗುತ್ತದೆ, ಹರಿತವಾಗುತ್ತದೆ; ಚುಚ್ಚುವ ಮೊನಚಾದ ಆಯುಧವಾಗಿ ಬಿಡುತ್ತದೆ. ಅವನ ಗೇಲಿ, ವ್ಯಂಗ್ಯಗಳಲ್ಲಿ ರೂಕ್ಷದಾಹ ಪ್ರಕಟನೆಗೊಳ್ಳುತ್ತದೆ.

ತನ್ನವರು ಪರಂಪರೆಯಿಂದ ಶೋಷಣೆಗೊಳಗಾಗುತ್ತ ಬಂದ ಚಿತ್ರ ಅವನಲ್ಲಿ ಮಾಸದ ಗಾಯವಾಗಿದೆ. 'ಆರನೂ ಕೆಡೆನುಡಿಯಬೇಡ' ಎಂದು ಒಂದು ವಚನದಲ್ಲಿ ಅವನು ಹೇಳಿದ್ದರೂ ಅವನು ಹಾಗೂ ಅವನ ಸಮುದಾಯವು ಪರಂಪರೆಯಿಂದ ಅನುಭವಿಸಿದ ಅವಮಾನ, ನೋವುಗಳಿಂದಾಗಿ ಮನಸ್ಸು ವ್ಯಗ್ರವಾಗುತ್ತದೆ. ಆಗ ಮಾತು ಬೆಂಕಿಯ ಉಂಡೆಯಾಗುತ್ತದೆ. ಉತ್ತಮ ವರ್ಣೀಯರು ಶೂದ್ರರಿಗೆ ಜ್ಞಾನದ ಹಕ್ಕನ್ನು ನಿರಾಕರಿಸಿದರು. ಅಕ್ಷರಲೋಕದಿಂದ ಅವರನ್ನು ವಂಚಿಸಿ ತಮ್ಮ ಹೊಲಗದ್ದೆಗಳಲ್ಲಿ, ಕೊಟ್ಟಿಗೆಗಳಲ್ಲಿ ಪ್ರಾಣಿಗಳಂತೆ ದುಡಿಯುವಂತೆ ಮಾಡಿದ್ದು ಒಂದು ದ್ರೋಹವಾಗಿ ಕಂಡಿದೆ. ಜ್ಞಾನ ಎಲ್ಲರ ಸೊತ್ತು. ಅದರ ಹಸಿವಿರುವವರಿಗೆ ಮುಚ್ಚುಮರೆಯಿಲ್ಲದೆ ಅದನ್ನು ಕೊಡಬೇಕು. ಹಾಗೆ ಮಾಡದೆ ಮೇಲುವರ್ಗದವರಿಗೆ ಮಾತ್ರ ಅದು ದಕ್ಕುವಂತೆ ಮಾಡಲಾಯಿತು. ಅಂಬಿಗರ ಚೌಡಯ್ಯ ಈ ಪರಮ ಅನ್ಯಾಯವನ್ನು ಪ್ರಶ್ನಿಸುವನು:

"ಓದಿ ಬೋಧಿಸಿ ಇದಿರಿಗೆ ಹೇಳುವನ್ನಬರ ಚದುರತೆಯಲ್ಲವೆ?
ತಾ ತನ್ನನರಿದಲ್ಲಿ, ಆ ಅರಿಕೆ ಇದರಿಗೆ ತೋ(ರ)ದಲ್ಲಿ
ಅದೇ ದೇವತ್ವವೆಂದನಂಬಿಗಚೌಡಯ್ಯ".(ಮ.ಸಂ–1, ವ–85)

"ವಚನಾರ್ಥವ ಕಂಡಹರೆಂದು ರಚನೆಯ ಮರೆಮಾಡಿ ನುಡಿಯಲೇತಕ್ಕೆ?
ದಾರಿಯಲ್ಲಿ ಸರಕು ಮರೆಯಲ್ಲದೆ, ಮಾರುವಲ್ಲಿ ಮರೆ ಉಂಟೆ?
ತಾನರಿವಲ್ಲಿ ಮರೆಯಲ್ಲದೆ
ಬೋಧೆಗೆ ಮರೆಯಿಲ್ಲ. ಎಂದನಂಬಿಗ ಚೌಡಯ್ಯ".(ಮ.ಸಂ–1, ವ–245)

ವೇದ, ಶಾಸ್ತ್ರ, ಆಗಮ, ಪುರಾಣಗಳನ್ನು ಓದಿದವರನ್ನು ಮಿಟ್ಟೆಯ ಭಂಡರು, ನಿರ್ಬುದ್ಧಿ ಮಾನವರು ಎಂದು ಟೀಕಿಸುವನು ; ಇವರೆಲ್ಲ ಮಾತಿನ ಹಿರಿಯರು ಎಂದು ಸಂದೇಹಿಸುವ ಚೌಡಯ್ಯ ಮನ, ವಚನ, ಕಾಯ ಶುದ್ಧವಾಗಿರುವವರ ಹೃದಯದಲ್ಲಿ ಪರಮಾತ್ಮನನ್ನು ಕಂಡೆ ಎನ್ನುವನು. ಅರಳಿಯ ಮರ, ವಿಷ್ಣು ಕಾಂತಿ, ಬನ್ನಿ, ಮುತ್ತುಕ, ತುಳಸಿ – ಈ ಮರಗಿಡಗಳನ್ನು 'ಹರಿ ಹರಿ' ಎಂದು ನಂಬಿ ಭಾವುಕರಾಗಿ ಸುತ್ತುವ, ಪೂಜಿಸುವ, ನಮಸ್ಕರಿಸುವ ಅಜ್ಞಾನಿಗಳನ್ನು 'ಎಲ್ಲಿ ಭೋ! ಎಲ್ಲಿ ಭೋ!! ನಿಮ್ಮ ಹೊಡೆವಡುವ ದೈವಗಳೆಲ್ಲಾ ಗಿಡಮರವಾಗಿ ಹೋದವಲ್ಲಾ. ನಿಮ್ಮ ನಡೆಯೆಲ್ಲಾ ಅನಾಚಾರ, ನುಡಿಯೆಲ್ಲಾ ಶಿವದ್ರೋಹ ಇವಂದಿರ ಗಡಣ ಬೇಡ' ಎನ್ನುವನು. ಬ್ರಹ್ಮ, ವಿಷ್ಣು ಹೀಗೆ ಮೂವತ್ತೂರು ಕೋಟಿ ದೇವತೆಗಳನ್ನು ಚೌಡಯ್ಯ ದೇವರೆಂದು ಒಪ್ಪುವುದಿಲ್ಲ. ಬ್ರಹ್ಮ ಕುಮಾರ, ವಿಷ್ಟು ಅಬಳ, ಲೆಕ್ಕವಿಡದಷ್ಟು ರುದ್ರರು – ಇವರುಗಳು ಗರ್ವದಿಂದ ಕೂಡಿದವರು; ಇವರು ಮೋಕ್ಷ/ಕೈವಲ್ಯಕ್ಕೆ ಸಲ್ಲದವರು

ಇವರು ವೇಷಧಾರಿಗಳು. ಬ್ರಹ್ಮ, ವಿಷ್ಣು, ಮೂವತ್ಮೂರು ಕೋಟಿ ದೇವತೆಗಳನ್ನು ನಾನು ಬಲ್ಲೆ. ಇವರು ದೇವತೆಗಳೇ ಅಲ್ಲ ಇವರು ಹಲವು ಕಾಲ ನಮ್ಮ ಪಕ್ಕದ ಮನೆಯಲ್ಲಿ ಇದ್ದವರು. ಹೀಗಾಗಿ ನಾನು ಇವರನ್ನು ಒಲ್ಲೆ ಎನ್ನುವನು. ನಮ್ಮ ಪರಿಕಲ್ಪನೆಯ ದೇವರುಗಳ ಹುಟ್ಟನ್ನು ಎತ್ತಿ ಹೇಳುವ ಚೌಡಯ್ಯ ಇವರು ಅಯೋನಿಜರೇನಲ್ಲ, ನಮ್ಮ ನಿಮ್ಮ ಹಾಗೆ ತಾಯಿಯ ಗರ್ಭದಿಂದ ಹೊರಬಂದ ಮಾನವರು ಎನ್ನುವನು ಚೌಡಯ್ಯ :

“ಮಾಯೆಯ ಬಸುರಲ್ಲಿ ಬಂದಾತ ಮಹೇಶ,
ದೇವಕಿಯ ಬಸುರಲ್ಲಿ ಬಂದಾತ ವಿಷ್ಣು,
ಹೂವಿನ ಬಸುರಲ್ಲಿ ಬಂದಾತ ಬ್ರಹ್ಮ,
ಮರುತದೇವಿಯ ಬಸುರಲ್ಲಿ ಬಂದಾತ (ಅರುಹ).
ಇವರು ದೇವರೆಂದು ನಂಬಿ ಪೂಜಿಸಿದಡೆ ಭವ ಅಳಿಯದು,
ಮುಕ್ತಿಯಾಗದೆಂದಾತನಂಬಿಗ ಚೌಡಯ್ಯ”.(ಮ.ಸಂ–1, ವ–230)

ಇಷ್ಟಲಿಂಗವನ್ನು ಧರಿಸಿದ ಮೇಲೆ ಅನ್ಯದೈವಗಳಿಗೆ ವಂದಿಸಬಾರದು. ಭಕ್ತನಾಗಿಯೂ ಲೋಕದ ಗಜಿಬಿಜಿ ದೈವಗಳಿಗೆ ನಮಸ್ಕರಿಸಿದ್ದೇ ಆದರೆ ಅಂಥವರಿಗೆ ಯಮಲೋಕದಲ್ಲಿ ಉಗ್ರಶಿಕ್ಷೆ ಕಾದಿದೆ ಎಂದು ಬೆದರಿಸುವ ಚೌಡಯ್ಯ ಮೈಲಾರ, ಬೀರ, ಭೈರವ, ಧೂಳ, ಕೇತ –ಇವರೇ ಮೊದಲಾದ ಕ್ಷುದ್ರದೇವತೆಗಳನ್ನು ಪೂಜಿಸಿ ಅವುಗಳ ಪ್ರಸಾದ ಸ್ವೀಕರಿಸುತ್ತಿದ್ದ ಭಕ್ತರನ್ನು ‘ಚಂಡಿನಾಯಿ’ಗಳು ‘ಮಾದಿಗರು’ ಎಂದು ಕರೆಯುವನು. ಭವಿತನಕ್ಕೆ ಹೇಸಿ ಭಕ್ತನಾದ ಮೇಲೂ ಕೊರಳಿಗೆ ಕವಡೆಯನ್ನು ಕಟ್ಟಿಕೊಂಡು, ನಾಯಾಗಿ ಬೊಗಳುವ ಮೈಲಾರನ ಭಕ್ತರ ಆಚರಣೆಯನ್ನೂ, ಬೆನ್ನಿಗೆ ಚಾವಟಿ ಏಟು ಹೊಡೆದುಕೊಳ್ಳುವುದು, ಸಿಡಿ ಹೋಗುವುದು, ಬಾಯಿಬೀಗ ಹಾಕಿಕೊಳ್ಳುವುದು, ಬೇವಿನ ಉಡುಗೆ ಧರಿಸಿ ಹಡಲಿಗೆಯನ್ನು ಹೊತ್ತು ಉಧೋ ಉಧೋ ಎನ್ನುವುದು – ಈ ಬಗೆಯ ಮಾರಿದೇವತೆಯ ಭಕ್ತರ ಆಚರಣೆಯನ್ನು ಚೌಡಯ್ಯ ಖಂಡಿಸಿ ಇವರನ್ನು ಶಿವದ್ರೋಹಿಗಳು ಎಂದು ಕರೆಯುವನು.

ಚೌಡಯ್ಯನ ನಿಷ್ಠುರವಾದ ಮಾತಿಗೆ ಅವನ ನೇರ ನಡಾವಳಿಯೇ ಕಾರಣ. ಅವನಲ್ಲಿ ಹೊಂದಾಣಿಕೆಯ, ನಯಗಾರಿಕೆಯ ಸ್ವಭಾವವಿಲ್ಲ. ಇದ್ದುದನ್ನು ಇದ್ದಂತೆ ಹೇಳುವ ನೇರ ನುಡಿ. ಅವನಿಗೆ ಟೀಕೆಗೆ ಮನುಷ್ಯರಷ್ಟೇ ಅಲ್ಲ, ದೇವತೆಗಳೂ ಒಳಗಾಗುವರು; ಭಕ್ತರುಗಳಷ್ಟೇ ಅಲ್ಲ ಗುರು–ವಿರಕ್ತರೂ ಒಳಗಾಗುವರು. ಒಟ್ಟಿನಲ್ಲಿ ಅವನದು ಸಾಣೆಗೊಡ್ಡಿದ ಕತ್ತಿ. ಕೆಟ್ಟದ್ದನ್ನು ಕಂಡು ಕೆರಳುವ ಅವನು ಒಳಿತನ್ನು ಕಂಡಾಗ ಮಣಿಯುವನು:

“ಅರಿವನರಿದಲ್ಲಿ ತಾನೆನ್ನದೆ ಇದಿರೆನ್ನದೆ,
ಮತ್ತೇನುವ ಉಳಿದುವ ಸಂಪಾದಿಸದೆ,
ಅರುಣನ ಕಿರಣದಲ್ಲಿ ಅರತ ಸಾರದಂತೆ, ಕಾದ ಹಂಚಿನಲ್ಲಿ ನೀರ ಬಿಟ್ಟಂತೆ,
ಬಧಿರನ ಕಾವ್ಯದಂತೆ, ಚದುರನ ಒಳುಪಿನಂತೆ
ತಲೆದೋರದೆ ನಿಂದಾತನ ಅಡಿಗೆರಗುವೆನೆಂದನಂಬಿಗ ಚೌಡಯ್ಯ”.(ಮ.ಸಂ–1, ವ–39)

ಅಂಬಿಗರ ಚೌಡಯ್ಯ ವೃತ್ತಿಯಲ್ಲಿ ಅಂಬಿಗ, ಸಾಮಾಜಿಕವಾಗಿ ನಿಕೃಷ್ಟ, ಆದರೂ ಅವನಲ್ಲಿ ತುಂಬಿಹರಿಯುವ ಆತ್ಮವಿಶ್ವಾಸ ಆ ಪರಿಸರದಲ್ಲಿ ತೀರಾ ಅಪರೂಪ. ಅವನು ರೂಢಿಸಿಕೊಂಡ ಜ್ಞಾನ ಹಾಗೂ ದೀಕ್ಷೆಯ ಮುಖಾಂತರ ಅವನಲ್ಲಿ ಕಾಣಿಸಿಕೊಂಡ ಪರಿವರ್ತನೆ ಎರಡೂ ಅಚ್ಚರಿ ಮೂಡಿಸುವಂತಹದು. ಅವನ ಬಿಡುಬೀಸಾದ ವರ್ತನೆ ಹಾಗೂ ಅವನ ಸ್ವಂತದ್ದಾದ ಮಾತುಗಾರಿಕೆ ಅವನ ಸಮಕಾಲೀನ ವಚನಕಾರರಲ್ಲಿ ಕಾಣಲು ಸಾಧ್ಯವೇ ಇಲ್ಲ ಅನ್ನುವ ಮಟ್ಟಕ್ಕೆ ಅವನ ವ್ಯಕ್ತಿತ್ವ ಅವನ ಅಭಿವ್ಯಕ್ತಿಯಲ್ಲಿ ಮೈದಾಳಿದೆ. ಶೂದ್ರವರ್ಗದ ಪ್ರತಿನಿಧಿಯಾಗಿ ತನ್ನ ರೂಕ್ಷ ವರ್ತನೆಯಿಂದ, ಅನಾಗರಿಕ ರೀತಿಯಿಂದ ಸಾಚಾ ಆಗುತ್ತಾನೆ. ಇದು 12ನೆಯ ಶತಮಾನದ ಬಸವ ಚಳವಳಿಯು ದಲಿತನೊಬ್ಬನಿಗೆ ಕೊಟ್ಟ ವಾಕ್‌ಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ವಿಮರ್ಶಾ ಸ್ವಾತಂತ್ರ್ಯ.

ಆಧಾರ ಗ್ರಂಥಗಳು:

1. ಅಂಬಿಗರ ಚೌಡಯ್ಯ, ಡಾ.ಎಸ್. ವಿದ್ಯಾಶಂಕರ, ಬಸವ ಸಮಿತಿ, ಬಸವ ಭವನ, ಶ್ರೀ ಬಸವೇಶ್ವರ ವೃತ್ತ, ಬೆಂಗಳೂರು–1, 2007.
2. ಅಂಬಿಗರ ಚೌಡಯ್ಯ, ಡಾ. ನಾಗಪ್ಪ ಟಿ. ಗೋಗಿ, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘ (ರಿ) ಕಲಬುರಗಿ, 2022.
3. ಅರುಹು ಕುರುಹು, ಪ್ರೊ. ಎಚ್. ಎಸ್. ಉಮೇಶ, 10, ‘ಬೆಳಕು’, ಕುವೆಂಪು ರಸ್ತೆ, ಪೃಥ್ವಿ ಬಡಾವಣೆ, ದಟ್ಟಗಳ್ಳಿ 3ನೇ ಹಂತ ಮೈಸೂರು, ಫೆ. 2023.
4. ಮಹಾಸಂಪುಟ : ಒಂದು, ಡಾ. ಎಂ.ಎಂ. ಕಲಬುರ್ಗಿ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ, 2016.

***

ಬಹುತ್ವದ ಪ್ರತಿಭೆಯ ಸ್ವಯಂಭೂ 'ಜೋಳದರಾಶಿ ದೊಡ್ಡನಗೌಡರ'

ಡಾ. ಪ್ರಹ್ಲಾದ ಡಿ.ಎಂ.
ಕನ್ನಡ ಉಪನ್ಯಾಸಕರು
ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ
ಕೊಪ್ಪಳ ವಿಶ್ವವಿದ್ಯಾಲಯ–583236
prahaladadm1993@gmail.com

ಡಾ. ಮೃತ್ಯುಂಜಯ ರುಮಾಲೆ ಅವರು ಸಾಹಿತ್ಯ ಅಕಾಡೆಮಿಯ 'ಚಿನ್ನದ ಹಬ್ಬದ ವರ್ಷ' ಎಂಬ ಮಾಲಿಕೆಯಲ್ಲಿ ಹೊರತಂದಿರುವ 'ಜೋಳದರಾಶಿ ದೊಡ್ಡನಗೌಡ' ಎಂಬ ಶೀರ್ಷಿಕೆಯ ಈ ಹೊತ್ತಿಗೆಯಲ್ಲಿ ಒಟ್ಟು ಹತ್ತು ವಿದ್ವತ್ಪೂರ್ಣ ಲೇಖನಗನ್ನು ಸಂಗ್ರಹಿಸಿ ಸಂಪಾದಿದ್ದೆ ಒಂದು ಮಹತ್ಪೂರ್ಣ ಮತ್ತು ದೊಡ್ಡನಗೌಡರ ಚಿಂತನೆಗಳ ಕೂಡು ಕಟ್ಟುವ ಪರಿಯೆಂಬಂತೆ ತೋರುತ್ತದೆ.

ಈ ಕೃತಿಯಲ್ಲಿ ಜಿ.ಎಸ್.ಸಿದ್ಧಲಿಂಗಯ್ಯ ನವರು ದೊಡ್ಡನಗೌಡರ ಕಾವ್ಯದ ಭಿನ್ನ ನೆಲೆಗಳನ್ನು ಕುರಿತು ಚರ್ಚಿಸಿದ್ದಾರೆ. ಇದರಲ್ಲಿ ಗೌಡರು ದೇಶಿವಚನಗಳು ಮತ್ತು ರಾಮೇಶ ವಚನಗಳು ಎನ್ನುವ ಕೃತಿಗಳನ್ನು 'ಸ್ವಾಮಿ ರಾಮೇಶ'ಎಂಬ ಅಂಕಿತನಾಮದೊಂದಿಗೆ ಬರೆಯುತ್ತಾರೆ. ಇವರು ವಚನಗಳನ್ನು ಬರೆಯಲು ಪ್ರೇರಣೆಯೆಂಬಂತೆ ಬದುಕಿನುದ್ದಕ್ಕೂ ಭಜನೆ, ಷಟ್‌ಸ್ಥಳ, ಆಧ್ಯಾತ್ಮಿಕ ಕೃತಿಗಳ ಓದು, ಶೂನ್ಯಸಂಪಾದನೆಯನ್ನು ಹೊಸ ದೃಷ್ಟಿಕೋನಗಳಿಂದ ಕಟ್ಟಿದ್ದು. ಕಲೆಯೂ ಸಹ ಒಂದು ಪವಿತ್ರ ಧಾನವೆಂಬುದನ್ನ ಅರಿತಿರುವ ಇವರು ಕಲೆಯನ್ನು ದಾನದ ರೂಪದಲ್ಲಿ ಹಂಚುವ ದೃಷ್ಟಿಯಿಂದ ಕಲೆಯ ತಿರುಗಾಟದಿಂದ ಮನುಷ್ಯನ ಅಂತರಾತ್ಮದ ಕಣ್ಣೋಟ ತೆರೆದಂತೆ ಕಾಣುತ್ತದೆ. ಸಮಾಜದ ಹಿಂಸೆ, ಸುಳ್ಳು, ಅಸತ್ಯಗಳಿಂದ ನೊಂದು ಮನುಷ್ಯನ

ಬದುಕಿನ ಒಳತಿರುಳನ್ನು ಅರಿಯುವ ನಿಟ್ಟಿನಲ್ಲಿ, ಸಮ ಸಮಾಜದ ಪರಿಕಲ್ಪನೆಯನ್ನು ತಮ್ಮ ಕಾವ್ಯ ಮಾರ್ಗವನ್ನಾಗಿಸಿಕೊಂಡಿದ್ದಾರೆ.

"ಸತ್ಯ ಅಹಿಂಸೆಗಳ ಸೋಗಿನಲ್ಲಿ
ಮತ್ತೊಮ್ಮೆ ಗಾಂಧಿಯ ಕೊಲೆಯಾಯಿತಿನ್ನು
ಮಂತ್ರಿಗಳ ರಾಜ್ಯದಲ್ಲಿ, ಮಂಗಗಳಿಗೂ ಸ್ವಾತಂತ್ರ್ಯವಿಲ್ಲ
ನಿನಗೇ ಕೋಡಿ ಎಂದೆ,
ಆಡಿದರೆ ಮಂಗಾ, ನೋಡಿದರೆ ಮಂಗಾ, ಕೇಳಿದರೆ ಮಂಗಾ
ರಾಮೇಶಪ್ರಿಯ ಮಿತ್ರ ಅನ್ನೇಶ ಸುಮ್ಮನಿರುವುದ
ಕಲಿತರೆ ಅದೇ, ಗಾಂಧಿಯರ್ಚನೆ ನೋಡಾ," (ಜೋಳದರಾಶಿ ದೊಡ್ಡನಗೌಡ, ಪುಟ ಸಂ, 2)

ಗಾಂಧಿಯ ತತ್ವದರ್ಶಗಳನ್ನು ಅವರ ಬದುಕಿನ ಮೌಲ್ಯಗಳಾದ ಸತ್ಯ, ಅಹಿಂಸೆ, ಸ್ವರಾಜ್ಯದ ಕಲ್ಪನೆಯ ಜೊತೆಯಲ್ಲಿಯೇ ಗಾಂಧಿಜೀ ಅವರನ್ನೇ ಗುಂಡಿಕ್ಕಿ ಕೊಂದಂತಹ ಈ ಸಮಾಜದ ದುಸ್ಥಿತಿಯನ್ನು ವಿಡಂಬಿಸುವಂತೆ ಕಾವ್ಯದಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಇಲ್ಲಿ ಕವಿಯ ನಿಜದರ್ಶನ ಶೋಷಣೆಯ ವಿರುದ್ಧ ಕಾವ್ಯದ ಮೂಲಕ ಸಂಘರ್ಷ ಮಾಡುತ್ತಿದ್ದಾನೆ. ಇಲ್ಲಿ ಗಾಂಧಿಯ ಕೊಲೆಯನ್ನು ತಿಳಿಸುವ ಮೂಲಕ ಗಾಂಧಿಜೀಯ ರಾಮರಾಜ್ಯದ ಕನಸ್ಸು ಕನಸಾಗಿಯೇ ಉಳಿಯಿತು ಎನ್ನುವ ಅಂತಕದಿಂದ ರಾಷ್ಟ್ರಚೇತನ ಪಾತಾಳಕ್ಕೆ ಹೋಗುತ್ತಿರುವುದನ್ನು ಗುರುತಿಸಿದ್ದಾರೆ.

ದೊಡ್ಡನಗೌಡರು ಬದುಕಿನ ಪ್ರತಿಕ್ಷಣವನ್ನು ವ್ಯರ್ಥಮಾಡದೇ 'ಬದುಕಿಗಾಗಿ ಬದುಕು, ಕಲೆಗಾಗಿಯೇ ಜೀವನ' ಎನ್ನುವಂತೆ ಜೀವಿಸಿದ ಇವರು 'ಮಾನವ ಜನ್ಮ ಬಲು ದೊಡ್ಡದು ಕಾಣ ಹುಚ್ಚಪ್ಪಗಳೀರಾ' ಎನ್ನುವಂತೆ ವ್ಯರ್ಥ ಜೀವನ ನಡೆಸುವ ಜನರನ್ನು ಕುರಿತು ತನ್ನ ವಚನಗಳಲ್ಲಿ ಹೀಗೆ ತಿಳಿಸಿದ್ದಾರೆ.

"ಮೂಗನಿತ್ತವನ ಮರೆತು ಮೂಗುತಿ ಮಾಡಿದಕ್ಕಸಾಲಿಗನ
ಮೆಚ್ಚುವ ವಂಚಕರನೇನೆಂಬೆನಯ್ಯ
ಹಾಲಿತ್ತ ಆವಿಂಗೀಯದೆ ಕರೆದ ಗೊಲ್ಲಂಗೆ
ಲೆನಿಸೀವೆ ಪರಿಯಾಯಿತ್ತು ನೋಡಾ ಅವರಗತಿ,
ಹೆತ್ತವರ ನೊಲ್ಲದೆ ಹತ್ತಿರ ಬಂದ ಮೋಹದ ಸತಿಗೆ
ತೊತ್ತಾದ ತೆರನಂತೆ ಅವರ ಸ್ಥಿತಿ
ಮರದ ಮೂಲಕ್ಕೆ ನೀರೆರೆಯದೆ
ಶಾಖೆಗಳಿಗೆರೆವ ಅರೆಮರುಳರು,

ಇಂತಪ್ಪನವರು ನಿನ್ನ ನೆಲೆಯನರಿಯ ಬಿಟ್ಟರೆ
ನಿನ್ನರಿವಿಲ್ಲದ ನರರ ಸಂಗಕ್ಕಿಂತ
ನಿನ್ನರವಿನ ಇರಾದೆಯ ಸಂಗವೇ ಲೇಸು ರಾಮೇಶ" (ಜೋಳದರಾಶಿ ದೊಡ್ಡನಗೌಡ, ಪುಟ ಸಂ, 4)

ಲೋಕದ ಜಡ–ಜಂಜಾಟಗಳನ್ನು ಕವಿ ತಣ್ಣನೆ ವಿವರಿಸುತ್ತಿದ್ದಾನೆ. ಬದುಕಿನಲ್ಲಿ ಸಹಾಯ ಮಾಡುವವರನ್ನು, ಜೀವನದಲ್ಲಿ ಕಷ್ಟ–ಸುಖಕ್ಕೆ ಅಸರೆಯಾದವರನ್ನು ಮರೆತು ಬೇರೆಯವರನ್ನು ನೆನೆಯುವುದನ್ನು ನೇರವಾಗಿ ತಿಳಿಸಿದ್ದಾರೆ. ಇಲ್ಲಿ ತನ್ನ ಶಾರೀರ ಸೃಷ್ಟಿ ಮಾಡಿದವರನ್ನು ಮರೆತು ಮೂಗಿಗೆ ಮೂಗುತಿಯನ್ನು ಮಾಡಿಕೊಟ್ಟ ಅಕ್ಕಸಾಲಿಗನನ್ನು ಸ್ಮರಿಸುವುದು ಎಷ್ಟು ಸರಿಯೆಂಬುದನ್ನು ಲೋಕಕ್ಕೆ ತಿಳಿಸಿದ್ದಾರೆ. ಒಬ್ಬ ಶಿಶುವಿಗೆ ದಿನನಿತ್ಯ ಹಾಲನ್ನು ಕೊಡುವ ಆಕಳಿಗಿಂತ ಆ ಹಾಲನ್ನು ಕರೆಯುವ ಗೊಲ್ಲನೇ ಪ್ರಸಿದ್ಧಿ ಎನ್ನುವವರು. ಹೆತ್ತ ತಂದೆ–ತಾಯಿಯನ್ನು ಮರೆತು ಅವರ ಶ್ರಮಿಸಿದ ಬದುಕನ್ನು ಮರೆತು ಮಧ್ಯಂತರದಲ್ಲಿ ಬಂದ ಮೋಹದ ಹೆಂಡತಿಯೇ ಶ್ರೇಷ್ಠ ಎನ್ನುವ ಈ ನರನ ಜನ್ಮವನ್ನು ಸೃಷ್ಟಿಸಿದ ರಾಮೇಶನ ಅರಿವಿಲ್ಲದ ಜನರ ಸಂಘಕ್ಕಿಂತ ನಿನ್ನೊಂದಿಗಿನ ಸಂಘವೇ ಲೇಸು ಎಂದಿದ್ದಾರೆ. ಅಂದರೇ ಕಷ್ಟದಲ್ಲಿ ಕೈಹಿಡಿದು ಮೇಲೆತ್ತಿದವರನ್ನು ಎಂದಿಗೂ ಮರೆಯಬಾರದೆಂಬ ತತ್ವದರ್ಶನವನ್ನು ಸಮಾಜಕ್ಕೆ ನೀಡಿದ್ದಾರೆ. ಇವರ ಅನೇಕ ಕಾವ್ಯಗಳು ವಿಭಿನ್ನ ನೆಲೆಗಳ ದರ್ಶನವನ್ನು ಚಿತ್ರಿಸಿವೆ. ಸತಿ–ಪತಿಭಾವ, ಹಿಂಸೆ–ಅಹಿಂಸೆಯ ಬೂಟಾಟಿಕೆ, ತಣ್ಣನೆ ಪ್ರಭುತ್ವ ಮತ್ತು ಜನರ ನಡುವಿನ ಭಿನ್ನತೆ, ಗಮಕ, ನಾಟಕ ಸಾಹಿತ್ಯದ ಭಿನ್ನದಾರಿಗಳನ್ನು ತುಳಿದಿರುವುದನ್ನು ಲೇಖಕರು ಸವಿಸ್ತಾರವಾಗಿ ಕಟ್ಟಿಕೊಟ್ಟಿದ್ದಾರೆ. ಇಷ್ಟೇಲ್ಲ ಕಾವ್ಯದಲ್ಲಿ ಪರಿಣತಿಯನ್ನು ಪಡೆದ ದೊಡ್ಡನಗೌಡರು ಕೊನೆಗೆ ಕಾವ್ಯದ ದಾರಿಗಳನ್ನು ಕಂಡುಕೊಂಡ ಇವರು ತನ್ನ ಸೇವೆಯನ್ನು ಕುರಿತು ಹೀಗೆ ಹೇಳುತ್ತಾರೆ. "ನನಗೆ ತಿಳಿದು ಪಟ್ಟ ಅವಕಾಶ ಸಿಕ್ಕಷ್ಟು ಕೈಲಾದಷ್ಟು ಸೇವೆ ಸಲ್ಲಿಸಿರುವೆ, ಅದರೂ ಸಮಾಜದ ಋಣ ತೀರಿಸಿಲ್ಲ" ಎನ್ನುವ ಅವರ ಮಾತಿನ ಹಿಂದಿನ ಶಕ್ತಿಯೇ ಆಧ್ಯಾತ್ಮದ ದರ್ಶನವನ್ನು ಸಮಾಜಕ್ಕೆ ವಿಸ್ತಾರಿಸುವ ಪ್ರಯತ್ನ ಮಾಡಿದ್ದಾರೆ. ಇಂತಹ ಸೂಕ್ಷ್ಮ ವಿಚಾರಗಳನ್ನು ಲೇಖಕರು ತಾಳ್ಮೆಯಿಂದ ಮತ್ತು ದೊಡ್ಡನಗೌಡರ ಬಗೆಗಿನ ಅಸಕ್ತಿಯಿಂದ ರೂಪುಗೊಳ್ಳಲು ಸಾಧ್ಯವಿದೆ.

ಜೋಳದರಾಶಿ ದೊಡ್ಡನಗೌಡರ ಆಧ್ಯಾತ್ಮಿಕ ಕೃತಿಯಾದ **'ಬಯಲಗಳಿಕೆಯ ಬೆಳಗು'** ಕೃತಿಯನ್ನು ಕುರಿತು ಓ.ಎಲ್.ನಾಗಭೂಷಣ ಸ್ವಾಮಿ ಅವರು ಬರೆದಿದ್ದು, ಈ ಕೃತಿಯು ದೊಡ್ಡನಗೌಡರು ಅಲ್ಲಮ ಪ್ರಭುವಿನ ಶೂನ್ಯಸಿಂಹಾಸನವನ್ನು

ವ್ಯಾಖ್ಯಾನಿಸಿದ ರೀತಿಯಲ್ಲಿಯೇ ಬಯಲ ಅಲಯದಲ್ಲಿ ಘನ ಮತ್ತು ದ್ರವವನ್ನು, ಕಂಡಿದ್ದು ಮತ್ತು ಕಾಣದ್ದು, ಹುಟ್ಟು ಮತ್ತು ಸಾವಿನ ಸುಳಿಗಳನ್ನು ಕಣ್ಣಿಗೆ ಕಟ್ಟುವಂತೆ ವಿಮರ್ಶಿಸಿದ್ದಾರೆ. ಶೂನ್ಯಸಂಪಾದನೆ ಅನ್ನುವುದರ ಬದಲು ಕನ್ನಡದ ರೂಪಪಡೆದ 'ಬಯಲಗಳಿಕೆ'ಯನ್ನು ರೂಪಕವಾಗಿ ಬಳಸಿಕೊಂಡು. ಶೂನ್ಯ ಸಂಪಾದನೆಯ ತಾತ್ವಿಕತೆಯನ್ನು ಕಟ್ಟಿದ್ದಾರೆ. ಬಹುಮಟ್ಟಿಗೆ ಅನಕ್ಷರಸ್ಥರನ್ನೆ ಉದ್ದೇಶಿಸಿ ಹಾಡು, ಗಮಕಗಳ ರೂಪದಲ್ಲಿ ವಾಚನ ಮಾಡಿದವರಲ್ಲಿ ಇವರೇ ಮೊದಲಿನವರು. ಸಂಸ್ಕೃತ ವಿದ್ವತ್ತನ್ನು ಆಧರಿಸಿದ್ದ ವಚನ ಅಧ್ಯಯನವನ್ನು ಕನ್ನಡದತ್ತ ಮುಖ ಮಾಡಿಸಿದ್ದು ಜೋಳದರಾಶಿ ದೊಡ್ಡನಗೌಡರ ಹೆಗ್ಗಳಿಕೆ. ಇದು ಇವರ ವಿದ್ವಾತಲೋಕಕ್ಕೆ ಆಷ್ಟೇ ಸೀಮಿತವಾಗಿದ್ದ ವಚನ ಸಾಹಿತ್ಯವನ್ನು ಜನಪದಕ್ಕೆ ತಲುಪಿಸುತ್ತಾ ವಚನಗಳಿಗೆ ಜೀವತುಂಬಿದ ಮನೋಜ್ಞ ವ್ಯಕ್ತಿತ್ವದವರು.

'ಬಯಲು' ಎನ್ನುವ ಪದಕ್ಕೆ ಕಣ್ಣಿಗೆ ಯಾವ ವಸ್ತುವೂ ಕಾಣದಿರುವಾಗ ಬಯಲು; ಆನೇಕ ಥರದ ಸ್ಥೂಲ ಸೂಕ್ಷ್ಮ ಬಯಲುಗಳು ಘನೀಭವಿಸದೆ ತೆರಪು ನೀಡಿದಾಗ ಬಯಲು, ಸಂದು, ಬಿಳಪು, ಬಿರಕು ಎನ್ನುತ್ತಾರೆ. ಬಯಲು ಅನ್ನುವುದನ್ನು ಗೌಡರು ಸತ್ಯ ಅಸತ್ಯದ ಪರಿಕಲ್ಪನೆಯಲ್ಲಿ ಚರ್ಚಿಸುತ್ತಾರೆ. ಕಣ್ಣಿಗೆ ಕಾಣುವುದು ಮಾತ್ರ ಸತ್ಯವೇ, ಕಾಣದಿರುವುದು ಅಸತ್ಯವೇ ಎಂಬ ಪ್ರಶ್ನೆ ಕೇಳಿಕೊಂಡಿದ್ದು ನಂತರದ ದಾಸ ಸಾಹಿತ್ಯದಲ್ಲಿ ಬರುವ 'ಬಯಲು ಆಲಯದೊಳಗೋ, ಅಲಯವು ಬಯಲೊಳಗೋ' ಎನ್ನುವಂತೆ ಬಯಲು ಇಲ್ಲದ್ದು, ಕಾಣದ್ದು, ಆಲಯ ಇರುವುದು ಕಾಣುವುದು, ಕಾಣದೆ ಇರುವುದು ಇಲ್ಲ ಅನ್ನುವವನು ನಾಸ್ತಿಕನಾದ, ಇದೆ ಅನ್ನುವವನು ಆಸ್ತಿಕನಾದ. ಧಾರ್ಮಿಕವಾಗಿ ಬಯಲನ್ನು ನೋಡುವ ಪರಿಯೆಂದರೆ ಬೌದ್ಧ ಮತ್ತು ಶಾಂಕರರ ಮತಗಳಲ್ಲಿ ಸತ್ಯ–ಅಸತ್ಯದ ಆಧಾರದ ಮೇಲೆ ಬಯಲು ತತ್ವದ ಅಥವಾ ಶೂನ್ಯವಾದ ಪ್ರತಿಪಾದನೆ ಮಾಡಿದ್ದಾರೆ. ಬೌದ್ಧರಿಗೆ ಕಾಣದಿರುವುದು ಸುಳ್ಳು, ಕಾಣುವುದು ಸತ್ಯ, ಶಾಂಕರ ಮತಕ್ಕೆ ಕಾಣುವುದು ಸುಳ್ಳು ಕಾಣದಿರುವುದು ಸತ್ಯ ಎಂದು ಎರಡು ನಿಲುವುಗಳನ್ನು ಸ್ಪಷ್ಟಪಡಿಸಿದ್ದಾರೆ. ಅಂದರೆ ಎಲ್ಲಿಯವರೆಗೆ ಕಾಣುವ ಆವಕಾಶ ಇರುತ್ತದೋ ಅಲ್ಲಿಯವರೆಗೂ ಬಯಲು ಒಳಗೊಂಡಿರುತ್ತದೆ. ಇಲ್ಲವೆಂದೂ ಬಯಲಲ್ಲಿ ಆಡ್ಡವಾದಾಗ ಇದೆ ಅಂತಲೂ ಅನ್ನಬಹುದು ಎಂಬ ಸಮರ್ಥನೆಗೆ ಬರುತ್ತಾರೆ.

ವೀರಶೈವ ಧರ್ಮದ ಬಯಲ ತಾತ್ವಿಕ ಚಿಂತನೆ ಎಂದರೇ ಕಾಣದ್ದರಲ್ಲೇ ಎಲ್ಲವೂ ಕಾಣುವ ಕಾರಣ ಆಡಗಿದೆ ಅಂದರೆ ಶೂನ್ಯವನ್ನು ಗುರು–ಲಿಂಗ–ಜಂಗಮವಾಗಿ ವಿಭಜಿಸಿದ್ದಾರೆ. ಕಾಯಕ, ದಾಸೋಹ, ಲಿಂಗಪತಿ ಶರಣಸತಿ ಎಂಬ ನಿಲುವಿಗೆ ಬರುತ್ತಾರೆ, ಒಟ್ಟಾರೇ ಶೂನ್ಯವೆಂದರೆ ಸೊನ್ನೆ...ಸೊನ್ನೆಯು ಸಂಖ್ಯೆಯ ಮುಂದಿದ್ದರೆ

ಪ್ರವೃತ್ತಿ ಹಿಂದಿದ್ದರೆ ನಿವೃತ್ತಿ ಆದಂರೆ 'ಸೊನ್ನೆ ಅಂದರೆ ಬಿಡುಗಡೆ ಎಂದು ಅರ್ಥ' ಎಂಬ ನಿಲುವಿಗೆ ಬರುತ್ತಾರೆ. ಈ ಲೇಖನ ಓದುಗರನ್ನು ಒಂದು ಕ್ಷಣ ತನ್ನ ಇಂದ್ರೀಯ ಗ್ರಹಿತ್ವದ ಎಚ್ಚರಿಸುವ ಯತ್ನದಲ್ಲಿ ರೂಪುಗೊಂಡಿದೆ. ಹಾಗಾಗಿ ಬಯಲಗಳಿಕೆಯ ಬೆಡಗು ಅಪರೂಪದ ಕೃತಿಯಾಗಿ ರೂಪುಗೊಂಡು ಶೂನ್ಯ ಸಂಪಾದನೆ ಓದಿನ ದಾರಿಗಳನ್ನು ಕವಲುಗಳಾಗಿ ಬಿಚ್ಚಿಟ್ಟಿದ್ದಾರೆ.

ಗುರುಮೂರ್ತಿ ಪೆಂಡಕೂರು ಅವರು ದೊಡ್ಡಗೌಡರ ಆತ್ಮಕಥನವನ್ನು ವಿಮರ್ಶೆಮಾಡಿರುವ ಪರಿಕಲ್ಪನೆ ಬಹಳ ಭಿನ್ನವಾಗಿದೆ. ಆತ್ಮ ವೃತ್ತಾಂತದ ಮಾದರಿ "ನಂದೇ ನಾನೋದಿದೆ" ಎನ್ನುವ ಶೀರ್ಷಿಕೆಯೇ ಆತ್ಮ ವಿಮರ್ಶೆಯ ದಾಟಿಯನ್ನು ಸೃಜಿಸುತ್ತದೆ. ದೊಡ್ಡನ ಗೌಡರು ಇದನ್ನು ಕುರಿತು "ಯಾರನ್ನಾದರೂ ಮಾತಾಡಿಸಿದರೆ ಅವರು ಯಾವುದನ್ನು ಲೇಕ್ಕಿಸದೆ ತಮ್ಮದೇ ಕತೆ ಹೇಳತೊಡಗಿರೆ ಆಗ ಆತ ತಂದೇ ತಾನು ಓದ್ತಾನಪ ಮಾರಾಯ' ಎಂಬುದು ಬಳ್ಳಾರಿಗರ ವಾಡಿಕೆ ಅದಕ್ಕೆ ಇವರು ಸಹ "ನಂದೇ ನಾನೋದಿದೆ" ಎಂದು ಹೆಸರಿಸಿದ್ದಾರೆ. ಇದಕ್ಕೆ ಆಕರವೆಂದರೇ ಅವರು ಪ್ರತಿನಿತ್ಯ ಬರೆಯುತ್ತಿರುವ ದಿನಚರಿಯನ್ನು ಅದರಲ್ಲಿ ಸುಖ–ದುಃಖ, ಮಾನ ಅಪಮಾನವನ್ನು ಸಹ ಎಡೆಬಿಡದೆ ಬೆನ್ನಹತ್ತಿ ನಲವತ್ತಾರು ವರ್ಷಗಳು ದಾಖಲಿಸುತ್ತ ಬರೆದ ಬರೆಹವೇ ಈ ದೊಡ್ಡನ ಗೌಡರ ಆತ್ಮವೃತ್ತಾಂತದ ದಿನಚರಿಯಾಗಿದೆ.

ಈ ಆತ್ಮಕಥನದಲ್ಲಿ ದ್ವಿಭಾಷಿಕ ವಾತವರಣದಲ್ಲಿ ದೇಸಿ ನುಡಿಗಟ್ಟನ್ನು ತಮ್ಮ ಜಾಣ್ಮೆಯಿಂದ ಬಳಸಿದ್ದಾರೆ. ಕಥನದಲ್ಲಿ ಎರಡು ಭಾಗಗಳನ್ನು ಹೇಳಿದ್ದಾರೆ. ಪೂರ್ವ–ಉತ್ತರ ಭಾಗ ಎಂದು ವಿಭಜಿಸಿ ಪೂರ್ವ ಭಾಗದಲ್ಲಿ ತಮ್ಮ ಎಳೆಯ ಚಿಗುರಿನ ಅನುಭವದೊಂದಿಗೆ ಆರಂಭಿಸಿ ಬದುಕಿನ ಅಸ್ತಿತ್ವ ಕಟ್ಟಿಕೊಂಡ ಬಗೆಯನ್ನು ಸ್ಮೃತಿ ಪಟಲದಿಂದ ಓದುಗರಿಗೆ ಹರವಿದ್ದಾರೆ. ಉತ್ತರ ಭಾಗದಲ್ಲಿ ಮಾಗಿದ ಬದುಕಿನಲ್ಲಿ ಜೀವನದ ಭದ್ರತೆಗಾಗಿ ಹೋರಾಡಿದ ಪರಿಯನ್ನು ಚಿತ್ರಿಸುತ್ತದೆ. ಹಾಗೆಯೇ ಕರ್ನಾಟಕ–ಆಂಧ್ರ ಎರಡು ರಾಜ್ಯದ ಗಡಿಗಳಲ್ಲಿ ಇವರ ಸುತ್ತಾಟ, ತಿರುಗಾಟದಲ್ಲಿ ಇವರಿಗೆ ಸಿಕ್ಕ ಪರಿಚಯ ಆ ಎರಡು ರಾಜ್ಯಗಳು ಇವರನ್ನು ಅಪ್ಪಿ–ಒಪ್ಪಿಕೊಂಡ ರೀತಿಯನ್ನು ಆತ್ಮೀಯವಾಗಿ ವರ್ಣಿಸಿದ್ದಾರೆ. ಇಲ್ಲಿ ತನ್ನ ಪ್ರದೇಶದ ಒಡನಾಡಿ ಬಳ್ಳಾರಿ ರಾಘವರೊಂದಿಗಿನ ಸಂಬಂಧವನ್ನು ನೆನೆದಿದ್ದಾರೆ.

ಜೋಳದರಾಶಿಯು ಜನರ ಮನಸ್ಸಿನಲ್ಲಿ ನೆಲೆಯೂರಿಸಿದ್ದು ದೊಡ್ಡನಗೌಡರ ವ್ಯಕ್ತಿತ್ವ, ಅವರು ನಡೆದು ಬಂದ ದಾರಿ, 'ಗೌಡರೆಂದರೆ ಜೋಳದರಾಶಿ, ಜೋಳದ ರಾಶಿಯೆಂದರೆ ಗೌಡರು' ಎಂಬಂತಾಗಿದೆ. ಜೋಳದ ರಾಶಿ ಸುಮಾರು ಎರಡು ನೂರು ಮನೆಗಳಿರುವ ಪುಟ್ಟಹಳ್ಳಿ ಇಲ್ಲಿನ ಗ್ರಾಮೀಣ ಬದುಕಿನ ಹಿಗ್ಗು–ಸುಗ್ಗಿಯನ್ನು

ಗೌಡರು ಆತ್ಮೀಯ ಭಾವದಿಂದ ಕಾಣುತ್ತಿದ್ದರು. ಇಲ್ಲಿ ಗೌಡರು ಮಾಗಿದ ವಯಸ್ಸಿನಲ್ಲಿ ತಾವು ಆಡಿಬೆಳೆದ ಊರಿನ ಬದುಕನ್ನು ಬಿಚ್ಚಿಡುತ್ತಿದ್ದಾರೆ. ಇವರಿಗೆ ನಾಟಕ, ಗಮಕಗಳ ಅಸಕ್ತಿಯೆಂದರೆ ತಾವು ಬೆಳೆದುಂಡ ವಾತವಾರಣವೇ ಕಾರಣವಾಗಿದೆ. ಇವರು ಚಿಕ್ಕ ವಯಸ್ಸಿನಲ್ಲಿಯೇ ವಿದ್ವತ್ ಪೂರ್ಣ ಗಮಕ ಹಾಡುವ ರುದ್ರಯ್ಯ ಮಾಸ್ಟರನ್ನು ಪ್ರಭಾವಿಸಿದ್ದರ ಬಗ್ಗೆ ಆಭಿಮಾನದಿಂದ ಸ್ಮರಿಸಿದ್ದಾರೆ. ರುದ್ರಯ್ಯ ಮೇಷ್ಟ್ರು ಶಾಲೆಯಲ್ಲಿ ಗಮಕ ಹಾಡಿದರೆ. ಶಾಲೆಯ ಮಕ್ಕಳಿಗಿಂತ ಊರಿನ ಜನ, ಊರಿಗೆ ಬಂದ ವ್ಯಾಪಾರಿಗಳು ನಿಂತು ಕೇಳುತ್ತಿದ್ದರು. ಹಾಗೆಯೇ ಶಾಲೆಯ ಪಕ್ಕದಲ್ಲಿದ್ದ ಗೌಸ್ ಸಾಹೇಬನ ಕುಲುಮೆ ಕೆಲಸ ಮಾಡುವುದು ಬಿಟ್ಟು ಅವರ ಗಮಕವನ್ನು ಕೇಳುತ್ತಿದ್ದರು ಅಂದರೇ ರುದ್ರಯ್ಯ ಮೇಷ್ಟ್ರು ಇವರಿಗೆ ಬಾಲ್ಯದಲ್ಲಿ ಗಮ ಕಲೆಯನ್ನು ಧಾರೆಯೆರೆದ ಪರಿಯನ್ನು ಕಟ್ಟಿಕೊಟ್ಟಿದ್ದಾರೆ. ಹೀಗೆ ಗುರುವಿನ ಹಾದಿ ಹಿಡಿದ ಶಿಷ್ಯನು ತಾನು ನಾಟಕಗಳು ಮುಗಿದ ಮೇಲೆ ಅಲ್ಲಿನ ಜನರನ್ನು ಕೂಡಿಸಿಕೊಂಡು ಕನ್ನಡ–ತೆಲುಗಿನ ಕಾವ್ಯಗಳನ್ನು ಓದಿಸುವ ಪರಿ, ಹಾಗೆಯೇ ತಾವೇ ಪ್ರತಿದಿನ ಊರಿನ ದೇವಸ್ಥಾನದಲ್ಲಿ ಪುರಾಣವನ್ನು ಓದುತ್ತ ಅದರ ಮಹತ್ವವನ್ನು ಸನ್ಮಾರ್ಗದಲ್ಲಿ ನಡೆಯುವ ಸಂದೇಶವನ್ನು ನೀಡಿದ ಕಾಯಕ ಯೋಗಿಯಂತೆ ಕಾಣಿಸುವ ಬಹು ವಿನ್ಯಾಸಕಾರರಾಗಿದ್ದಾರೆ.

ಈ ಆತ್ಮ ಕಥನದ ಮಾದರಿಯು ವ್ಯಕ್ತಿಗತ ನೆಲೆಗಿಂತ ಸಾಮೂಹಿಕ ನೆಲೆಗೆ ಹೆಚ್ಚು ಹೊತ್ತುಕೊಡುವಂತೆ ಕಾಣಿಸುತ್ತದೆ. ಇಲ್ಲಿ ತನ್ನ ಬದುಕಿನ ವಿದ್ಯಾಭ್ಯಾಸವನ್ನು ಸಹ ಆರ್ಥಕ್ಕೆ ನಿಲ್ಲಿಸುವುದು. ತರುವಾಯ ಸಾಹಿತ್ಯ ಕವಿತ್ವ–ಗಮಕ–ನಾಟಕಗಳ್ಲಿ ದುಡಿಯುವುದು, ಇಲ್ಲಿ ಒಂದು ಸಂಧರ್ಭದಲ್ಲಿ ಗೌಡರನ್ನು ಯಾಕೇ ನೀವು ಹೆಚ್ಚು ಓದಲಿಲ್ಲ ಎಂದು ಕೇಳಿದಾಗ ಅವರ ಉತ್ತರ “ಹಳ್ಳಿಯ ರೈತರಿಗೆ ತಮ್ಮ ಹುಡುಗರು ಕಲಿತು ದೊಡ್ಡ ಕೆಲಸಗಳಿಗೆ ಹೋಗಬೇಕೆಂಬ ಭಯಕೆ ಇರಲಿಲ್ಲ ತಮ್ಮ ಒಕ್ಕಲುತನದ ಬಾಳುವೆಗೆ ನೆರವಾಗುವಷ್ಟು ಓದಿದರೆ ಸಾಕು” ಎನ್ನುತ್ತಿದ್ದರೆ. ಈ ಮನೆತನ ತಲೆಮಾರುಗಳಿಂದಲೂ ಊರಿನ ಕೆಟ್ಟದ್ದು–ಒಳ್ಳೆಯದಕ್ಕು ಕಟ್ಟುನಿಟ್ಟಾಗಿ ನಡೆದುಕೊಂಡು ಬಂದಿದೆ. ಹಳ್ಳಿಗಳು ದ್ವೇಷದಿಂದ ಬಂದಂತ ಸಂವೇದನೆಯನ್ನು ಬೆಳೆಸಿದ ಸಂಧರ್ಭದಲ್ಲಿ ಗೌಡರ ತಾತನವರು ಹಳ್ಳಿಗಳ ಆಸ್ತಿತ್ವ ಉಳಿಸಲು ಹೀಗೆ ಹೇಳಿದ್ದಾರೆ “ಊರಿನ ಗೌರವ ಕೆಡದಂತೆ ನೋಡಿಕೊಂಡು ಹೋಗಿ, ತಮ್ಮ ಮನೆತನದವರು ಊರಿನ ವಿಚಾರಗಳ ಬಗ್ಗೆ ತೆಗೆದುಕೊಂಡ ತೀರ್ಮಾನಗಳನ್ನು ತಿಳಿಯದೆ ಮಾಡಿದ ಲೋಪಗಳನ್ನು ತೀದ್ದಿ ಹೇಳಿ, ಎಲ್ಲರೂ ಒಟ್ಟಾಗಿ ಊರಿನ ಅಭಿವೃದ್ಧಿಗೆ ಶ್ರಮಿಸಿ ಎನ್ನುವ ವಿಚಾರಗಳ ಬಗ್ಗೆ ತೆಗೆದುಕೊಂಡ ತೀರ್ಮಾನಗಳನ್ನು ತಿಳಿಯದೆ ಮಾಡಿದ ಲೋಪಗಳನ್ನು ತೀದ್ದಿ ಹೇಳಿ, ಎಲ್ಲರೂ ಒಟ್ಟಾಗಿ ಊರಿನ ಅಭಿವೃದ್ಧಿಗೆ ಶ್ರಮಿಸಿ ಎನ್ನುವ ವಿಚಾರಗಳಿಂದ

ಅವರಿಗಿದ್ದ ಊರಿನ ಅಭಿಮಾನ ಅದು ಅಂತರಗತವಾಗಿ ದೊಡ್ಡನಗೌಡರಲ್ಲಿ ಬೆಳೆಯಿತು. ಇವರು ಕಾರಂತರ "ಹುಚ್ಚು ಮನಸ್ಸಿನ ಹತ್ತು ಮುಖಗಳಂತೆ" ಗೌಡರ ಜೀವನದ ವಿಭಿನ್ನ ಮುಖಗಳನ್ನು ಈ ಆತ್ಮ ಚರಿತ್ರೆ ತೆರೆದಿಡುತ್ತದೆ.

ದೊಡ್ಡನಗೌಡರ ಸರಳತೆಯನ್ನು ಕುರಿತು ಒಮ್ಮೆ ನಡೆದ ಪ್ರಸಂಗವನ್ನು ನೆನಪಿಸಿಕೊಳ್ಳುವುದಾದದರೆ "ಇವರು ಕೃಷ್ಣನ ಪಾತ್ರದಲ್ಲಿ ಆಭಿನಯಿಸಿದ್ದನ್ನು ನೋಡಿದ ಪ್ರೇಕ್ಷಕನೊಬ್ಬನು ದೊಡ್ಡನ ಗೌಡರ ಮನೆಗೆ ಬಂದು ನಿನ್ನೆ ರಾತ್ರಿ ಕೃಷ್ಣನ ಪಾತ್ರದಲ್ಲಿ ಅಭಿನಯಿಸಿದ ಗೌಡರು ಎಷ್ಟೊಂದು ಚೆನ್ನಾಗಿ ಮಾಡಿದರು, ಶ್ರೀ ಕೃಷ್ಣನೇ ಧರೆಗೆ ಬಂದಂತೆ ಪಾತ್ರಕ್ಕೆ ಜೀವತುಂಬಿದರು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದಾಗ, ಆತನನ್ನು ಒಮ್ಮೆ ನಾನು ಕಾಣಬೇಕು ಎಂದು ಗೌಡರ ಹತ್ತಿರವೇ ಹೇಳುತ್ತಾನೆ. ಆಗ ಗೌಡರ ಸರಳತೆಯಿಂದ ಹೌದ ಆತನು ಈಕ್ಷಣಕ್ಕೆ ನಿಮಗೆ ಸಿಗುವುದಿಲ್ಲ ಬಿಡಿ ಎಂದು ಹೇಳುತ್ತಾರೆ. ಈ ಸರಳತೆಯ ನುಡಿಗಟ್ಟುತನವೇ ಅತ್ಮವಿಮರ್ಶೆಯನ್ನು ವಾಸ್ತವ ಬದುಕಿಗೆ ಹತ್ತಿರವೆಂಬಂತೆ ಕಟ್ಟಿಕೊಟ್ಟಿದ್ದಾರೆ. "ನಾಲ್ಕನೇ ತರಗತಿಯವರೆಗೆ ಉಸುಕಿನಾಸನ ಮಾಡಿದ ಹಳ್ಳಿ ಹುಡುಗನು ಬೃಹತ್ ಗಾತ್ರದ ಆತ್ಮ ಚರಿತ್ರೆ ಬರೆಯುವುದು: ಎರಡು ರಾಜ್ಯಗಳ ವಿಶ್ವವಿದ್ಯಾಲಯಗಳಿಂದ ಉನ್ನತ ಗೌರವ ಪಡೆಯುವುದು ಸಾಧ್ಯವೇ?" ಎನ್ನುವ ಪ್ರಶ್ನೆಗೆ ತಕ್ಕಂತೆ ಬದುಕಿನುದ್ದಕ್ಕೂ ಕಲೆ, ವೈದ್ಯ ಪದ್ಧತಿಯ ಗಿಡ ಮೂಲಿಕೆಗಾಗಿ ಆಹೋಬಲ ಕಾಡಿನಲ್ಲಿ ಹುಡುಕಾಡಿದ ಪರಿ ಕಣ್ಣಿಗೆ ಕಟ್ಟುವಂತೆ ವಿಶ್ವ ಮಾತೃತ್ವದ ದಾರಿಯನ್ನು ತೆರೆದಿಡುತ್ತದೆ. ನಡು ರಾತ್ರಿಯಲ್ಲಿ ವೈದ್ಯ ಗ್ರಂಥಗಳನ್ನು ಬಂಡಿಯಲ್ಲಿ ಹಾಕಿಕೊಂಡು ವಾದ್ಯ, ರಾಗ, ಶಾಸ್ತ್ರ, ಚಿಂತಕರೊಂದಿಗೆ ಸೇರಿ ಹೊಸ ಜನಪದ ವೈದ್ಯಕೀಯ ಅವಿಷ್ಕಾರದಲ್ಲಿ ಊಟ ನಿದ್ದೆಯಿಲ್ಲದೆ ಸುತ್ತಾಡಿದ ಅನುಭವ ಇವರ ಇನ್ನೊಂದು ಮುಖದ ದರ್ಶನವನ್ನು ಸೂಚಿಸುತ್ತದೆ. ಹೀಗೆ ಬರೆಹ, ಅಭಿನಯ, ನಿರ್ದೇಶನ, ಗಮಕ ಸಂಗೀತವನ್ನು ಮೈಗೂಡಿಸಿಕೊಂಡ ಬಗೆಯನ್ನು ಈ ಆತ್ಮ ಕಥನದಲ್ಲಿ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಗೌಡರು ತಮ್ಮ ಬದುಕಿನಲ್ಲಿ ವಿವಿಧ ವಿಭಿನ್ನವಾಗಿ ಜೀವಿಸಿದ ಇವರು ತಮ್ಮ ಸಾವಿನ ಸೂಕ್ಷ್ಮತೆಯನ್ನು ಮೊದಲೆ ಅರಿತಂತೆ ಕಾಣುತ್ತದೆ. ಅವರ ದಿನಚರಿಯಲ್ಲಿ ಹೀಗೆ ಬರೆದಿರುತ್ತಾರೆ. "ತನಗೆ ಸಾವಿನ ಸಂಭ್ರವನ್ನು ಕುರಿತಂತೆ ನಾನು ಸತ್ತ ನಂತರ ಅಂತಿಮ ಮೆರವಣಿಗೆಯಲ್ಲಿ ಇಂಥ ಊರಿನವರನ್ನೇ ಭಜನೆಗೆ ಕರೆಯಬೇಕು, ಮಣ್ಣುಮಾಡುವಾಗ ನಾನು ವ್ಯಾಖ್ಯಾನ ಮಾಡಿದ **'ಬಯಲಗಳಿಕೆಯ ಬೆಳಗು'** ಪುಸ್ತಕವನ್ನು ನನ್ನ ಪಕ್ಕದಲ್ಲಿಡಬೇಕು, ಮಣ್ಣು ಮಾಡಿಯಾದ ಮೇಲೆ ಸಮಾಧಿ ಕಟ್ಟುವುದಿರಲಿ ನಾಲ್ಕು ಕಲ್ಲು ಸಹ ಇಡಬಾರದು, ನೂರು ಮಂದಿಯಿಂದ ತಯಾರಾದ ಈ

ದೊಡ್ಡನಗೌಡ ಯಾರಿಗಿಂತಲೂ ದೊಡ್ಡವನಲ್ಲ, ಜನ ನನ್ನನ್ನು ಮರೆತರೂ ನನ್ನನ್ನು ರೂಪಿಸಿದ ನನ್ನ ಗುರುಗಳನ್ನು ಮರೆಯಬಾರದು" ಕ್ಷಣಿಕದ ಈ ಬದುಕಿನ ಅಗಣಿತವಾದ ಈ ಮಾತುಗಳು ಗೌಡರು ತಮ್ಮ ಮುಂದಿನ ಪೀಳಿಗೆಗೆ ಕೊಟ್ಟ ಬದುಕಿನ ಮೀಮಾಂಸಾತ್ಮಕ ಸೂತ್ರಗಳಂತಿವೆ. ಇವರು ಸಾವಿನಲ್ಲೂ ಸಾರ್ಥಕತೆಯ ಭಾವವನ್ನು, ಕೃತಜ್ಞತೆಯ ಸೀಮೆರೇಖೆಯನ್ನು ಬಿಟ್ಟು ಹೋಗಿರುವುದನ್ನು ಗುರುತಿಸಬಹುದು.

ದೊಡ್ಡನ ಗೌಡರ ವ್ಯಕ್ತಿತ್ವದ ಇನ್ನೊಂದು ನೋಟವೆಂದರೆ ದೊಡ್ಡನ ಗೌಡರಿಗಿದ್ದುದ್ದು ಪ್ರತಿಭೆಗೆ ಸಂಬಂಧಿಸಿದ್ದ ಆಹಂಕಾರ, ಶಿಸ್ತು ಬದ್ಧತೆಗೆ ಸಂಬಂಧಿಸಿದ ಮದ, ಕಲೆಗೆ ಸಂಬಂಧಿಸಿದ ಗಾಂಭೀರ್ಯ, ಪರಿಪೂರ್ಣತೆಗೆ ಸಂಬಂಧಿಸಿದ ಪ್ರತಿಷ್ಠೆ, ಅದು ಸಾಹುಕಾರಿಕೆಗೆ ಸಂಬಂಧಿಸಿದ್ದಲ್ಲ! ಅದು ಅವರ ಪ್ರಜ್ಞೆ ವಿದ್ವಪೂರ್ಣ ಜ್ಞಾನಕ್ಕೆ ಸಂಬಂಧಿಸಿದ್ದು ಎಂಬ ತಾತ್ವಿಕ ನಿಲುವಿಗೆ ಪರಿಮಿಸಬಹುದು. ಹೀಗಾಗಿ ಇವರು ತೆಲುಗು ರಂಗಭೂಮಿ ಮತ್ತು ಕನ್ನಡ ರಂಗಭೂಮಿಗೆ ಶ್ರಮಿಸಿದ ದಾರಿಯನ್ನು ಒಮ್ಮೆ ಕನ್ನಾಡಿಸಿ ನೋಡಿದರೆ ಇವರು ಬದುಕಿರುವ ಕಾಲ ಯಂತ್ರದೋಪಾದಿಯಲ್ಲಿ ದುಡಿದಿದ್ದಾರೆ ಎಂಬಂತೆ ತೋರುತ್ತಾರೆ. ಹೀಗಾಗಿ ಇವರು ಸದಾ ಕುವೆಂಪು ಅವರಂತೆ ವಿಶ್ವ ಚೇತನದ ಸಮ ದೃಷ್ಟಿಯ, ಸಮ ಸೃಷ್ಟಿಯ ತತ್ವಗಳನ್ನು ಮನದಲ್ಲಿ ಸ್ಮರಿಸಿದ ರಂಗಭೂಮಿಯ ಸಂತನಂತೆ ಎರಡೂ ಭಾಷೆಗಳನ್ನು ಕೂಡಿ ಕಟ್ಟುವ ಪ್ರಯತ್ನವನ್ನು ಮಾಡಿ ವಿಶ್ವ ಮಾನವತೆಯ ಭೀಜವನ್ನು ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಲ್ಲಿ ಎದುರಿಸಿದ್ದಾರೆ, ಹಾಗೂ ಕರ್ನಾಟಕ ಏಕೀಕರಣದ ಮಧ್ಯೆಯೂ ಗಡಿ, ಪ್ರಾಂತ್ಯ, ನಾಡು-ನುಡಿಯನ್ನು ಮೀರಿ ತಮ್ಮ ಅಸಿತ್ವವನ್ನು ಕಂಡುಕೊಂಡ ಕನ್ನಡ ನಾಡಿನ ಅಪರೂಪದ ವ್ಯಕ್ತಿಯಾಗಿ ದೊಡ್ಡನಗೌಡರು ಕಾಣಿಸಿಕೊಂಡಿದ್ದಾರೆಂದು ಹೆಮ್ಮೆಯಿಂದ ಸ್ಮರಿಸಿಕೊಳ್ಳುತ್ತ. ನನ್ನ ಈ ಸಣ್ಣ ಟಿಪ್ಪಣಿಯ ಬರೆಹಕ್ಕೆ ವಿರಾಮವನ್ನು ಸೂಚಿಸುತ್ತೇನೆ.

ಅಧ್ಯಯನ ಗ್ರಂಥಗಳು:

1. ಜೋಳದರಾಶಿ ದೊಡ್ಡನಗೌಡ, ನಂದೇ ನಾನೋದಿದೆ, 1998, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
2. ಜೋಳದರಾಶಿ ದೊಡ್ಡನಗೌಡ, ಬಯಲಗಳಿಕೆಯ ಬೆಳಗು, 2021, ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ, ಬೆಳಗಾವಿ.
3. ಮೃತ್ಯುಂಜಯ ರುಮಾಲೆ, ಸಂಕೀರ್ಣ ಬಳ್ಳಾರಿ ವ್ಯಕ್ತಿ-ರಂಗಭೂಮಿ-ಚರಿತ್ರೆ-ಸಂಸ್ಕೃತಿ, 2022, ದಾಸೋಹಿ ಪ್ರಕಾಶನ, ಕಾನಾಮಡುಗು.
4. ಮೃತ್ಯುಂಜಯ ರುಮಾಲೆ, ಜೋಳದರಾಶಿ ದೊಡ್ಡನಗೌಡ, 2013, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಕರ್ನಾಟಕ ಸಂಸ್ಕೃತಿ

ಅಭಿಜಿತ್ ಬಿ.

ಸಂಶೋಧನಾರ್ಥಿ, ಕನ್ನಡ ಭಾರತಿ.

ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ

abhijithb736@gmail.com

ಕರ್ನಾಟಕ ಸಂಸ್ಕೃತಿಯು ತನ್ನದೇ ಆದ ವಿಶಾಲ ವ್ಯಾಪ್ತಿಯನ್ನು ಒಳಗೊಂಡಿದೆ. ಕರ್ನಾಟಕ ಸಂಸ್ಕೃತಿಗೆ 2000 ವರ್ಷಗಳ ಇತಿಹಾಸವಿದೆ. ಕರ್ನಾಟಕ ಸಂಸ್ಕೃತಿಯ ಪರಂಪರೆಯು ಸಮೃದ್ಧವಾಗಿ ಬೆಳೆದು ಬಂದಿದ್ದು, ಇದರ ಬಗೆಗಿನ ಹಲವು ಉಲ್ಲೇಖಗಳನ್ನು ಸಾಹಿತ್ಯದ ಓದಿನಿಂದ ತಿಳಿಯಬಹುದು ಕರ್ನಾಟಕ ಸಂಸ್ಕೃತಿಯನ್ನು ಸೀಮಿತ ವ್ಯಾಪ್ತಿಯಲ್ಲಿ ನೋಡಲು ಸಾಧ್ಯವಿಲ್ಲ ಅದು ತನ್ನದೇ ಆದ ಹಲವು ಮಜಲುಗಳನ್ನು ಒಳಗೊಂಡಿದೆ ಅದನ್ನು ಸಾಬೀತುಪಡಿಸುವ ಹಲವು ಉಲ್ಲೇಖಗಳಿವೆ. ಕರ್ನಾಟಕ ರಾಜ್ಯವನ್ನು ಮೊದಲು 'ಮೈಸೂರು ರಾಜ್ಯ', 'ಮಹಿಷನಾಡು', 'ಎರೆಮೈನಾಡು' ಎಂದು ಕರೆಯಲಾಗುತ್ತಿತ್ತು. ಎರೆಮೈನಾಡು ಅಂದರೆ ಎಮ್ಮೆಗಳನ್ನು ಸಾಕುವ ಪ್ರದೇಶ ಎಂದರ್ಥ. ಕರ್ನಾಟಕದ ಕೆಲವು ಪ್ರದೇಶಗಳು ರಾಮಾಯಣ ಮತ್ತು ಮಹಾಭಾರತ ಕೃತಿಗಳಲ್ಲಿ ಬರುವುದನ್ನು ನಾವು ಕಾಣಬಹುದು. ಉದಾಹರಣೆಗೆ, ವನಸಾಸಿ ಕುಂತಲ ಮಹಿಷ ಮಂಡಲ ಎಂಬ ಹೆಸರುಗಳ ಉಲ್ಲೇಖವನ್ನು ನೋಡಬಹುದು. ಹಾಗೆಯೇ ಕನ್ನಡದ ಲಾಕ್ಷಣಿಕ ಗ್ರಂಥವಾದ ಕವಿರಾಜ ಮಾರ್ಗದಲ್ಲಿ ಶ್ರೀ ವಿಜಯನು ಕನ್ನಡನಾಡು ಕಾವೇರಿಯಿಂದ ಗೋದಾವರಿವರೆಗೆ ಹಬ್ಬಿತ್ತು ಎಂದು ಹೇಳಿದ್ದು, ಇದಕ್ಕೆ ಪೂರಕವಾಗಿ ಶಂಬಾ ಕೃತಿ ಸಂಪುಟ ಕಂನಾಡು–ಕರ್ನಾಟ–1, ಪುಟ 6ರಲ್ಲಿ "ಕಾವೇರಿಯಿಂದ ಗೋದಾವರಿವರಂ ಇರ್ದ ನಾಡೆಲ್ಲವು ಕನ್ನಡದೊಳ್ ಭಾವಿಸಿದ ಜನಪದಂ ಎಂದು ಲೋಕಕ್ಕೆಲ್ಲ ಸಾರಿ ಹೇಳಿದ್ದಾರೆ". ಕ್ರಿ.ಶ.

2ನೇ ಶತಮಾನದಲ್ಲಿನ ಶೂದ್ರಕನ 'ಮೃಚ್ಛಕಟಿಕ' ಕೃತಿಯಲ್ಲಿ ಕರ್ನಾಟಕದ ಉಲ್ಲೇಖ ಇರುವುದನ್ನು ನೋಡಬಹುದು. ಹಾಗೆಯೇ 'ಹಾಲರಾಜನ ಗಾಥಸಪ್ತಶತಿ' ಕೃತಿಯಲ್ಲಿ [ಪೊಟ್ಟ (ಹೊಟ್ಟೆ), ತುಪ್ಪ, ಪೆಟ್ಟು (ಹೊಡೆ), ತೀರ್ (ಶಕ್ಯವಾಗು)] ಕನ್ನಡದ ಪದಗಳಿರುವುದನ್ನು ಗೋವಿಂದ ಪೈ ಗುರುತಿಸುತ್ತಾರೆ. ಇದರಿಂದ ಕನ್ನಡ ನಾಡು ನುಡಿ ಸಂಸ್ಕೃತಿ ಎಷ್ಟು ಹಿಂದಿನ ಪ್ರಾಚೀನತೆ ಹೊಂದಿದೆ ಹಾಗೂ ವಿಶಾಲವಾಗಿದೆ ಎಂದು ಗ್ರಹಿಸಬಹುದು.

ಕೀಲಿ ಪದಗಳು : ಸ್ಕಂದ, ಸಂಸ್ಕೃತಿ, ಪಾಡಿ, ಸಬಾಲ್ಟರ್ನ್ ಅಧ್ಯಯನ, ತಿರುಳ್ಗನ್ನಡ,

ಪೀಠಿಕೆ

"ಒಂದು ಗ್ರೀಕ್ ನಗೆಯಾಟದಲ್ಲಿರುವ ಕನ್ನಡ ಮಾತುಗಳ ವಿಚಾರವೂ ಬಹಳ ಮಹತ್ವದ್ದಾಗಿದ್ದು, ಈ ಮಾತುಗಳು ಕನ್ನಡದೆಂದು ಹಬ್ಸ್, ಶಾಮಶಾಸ್ತ್ರಿ, ಆರ್. ನರಸಿಂಹಾಚಾರ್ಯರು, ಗೋವಿಂದ ಪೈ ಮೊದಲಾದ ವಿದ್ವಾಂಸರು ನಿರ್ಧರಿಸಿದ್ದಾರೆ" (ಶಂಬಾ ಕೃತಿ ಸಂಪುಟ ಕನ್ನಡ, ಕಂನುಡಿ–2, ಪುಟ 9). ಇದರಿಂದ ಕನ್ನಡ ನಾಡಿಗೂ ಗ್ರೀಕರಿಗೂ ಪ್ರಾಚೀನ ಕಾಲದಲ್ಲಿಯೆ ಸಂಭಂದ ಇತ್ತು ಎಂಬುದನ್ನು ತಿಳಿಯಬಹುದು. ಅಷ್ಟೇ ಅಲ್ಲದೆ, ಪಂಪನು ತನ್ನ ವಿಕ್ರಮಾರ್ಜುನ ವಿಜಯ ಕೃತಿಯಲ್ಲಿ ತೆಂಕಣಗಾಳಿ ಬೀಸಿದಾಗ ಕರ್ನಾಟಕದ ಕದಂಬರ ರಾಜದಾನಿಯಾಗಿದ್ದ ಬನವಾಸಿಯನ್ನು ನೆನೆದಿರುವುದನ್ನು ಕಾಣಬಹುದು. 3ನೇ ಶತಮಾನದಲ್ಲಿ ಅಶೋಕನು ಬೌದ್ಧ ಭಿಕ್ಷುಗಳನ್ನು ಧರ್ಮೋಪದೇಶಕ್ಕಾಗಿ ಬನವಾಸಿಗೆ ಕಳಿಸಿರುವುದರೊಂದಿಗೆ, ತನ್ನ ಶಾಸನದಲ್ಲಿ 'ತಿರುಳ್ಗನ್ನಡದ ಕೋಪಣನಗರ' (ಕೊಪ್ಪಳ) ಎಂಬ ಊರಿನ ಉಲ್ಲೇಖ ಮಾಡಿರುವುದನ್ನು ನೋಡಬಹುದು.

ಅದರೊಂದಿಗೆ ಆಂಡಯ್ಯನ ಕಬ್ಬಿಗರ ಕಾವ ಕೃತಿಯಲ್ಲಿಯು ಕನ್ನಡ 'ಮೆನಿಪ್ಪಾನಾಡು' ಎಂದು ಹೇಳಿರುವುದು ಕಂಡುಬರುತ್ತದೆ. ಇಷ್ಟೇ ಅಲ್ಲದೆ ಕನ್ನಡ ನಾಡು ಸಂಸ್ಕೃತಿಯ ಬೀಡಾಗಿದೆ ಎನ್ನುವಲ್ಲಿ ಹಲವು ಅಂಶಗಳು ಸಾಹಿತ್ಯದುದ್ಧಕ್ಕು ದೊರೆಯುತ್ತವೆ. ಕನ್ನಡ ಸಂಸ್ಕೃತಿಯನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ವಿಚಾರಗಳನ್ನು ಮಂಡಿಸಿದ್ದಾರೆ, ಚರ್ಚೆಗೂ ಒಳಪಡಿಸಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕ ಸಂಸ್ಕೃತಿಯ ಅನೇಕ ಅಧ್ಯಯನಗಳು ಚರ್ಚೆಗಳು ಪ್ರಸ್ತುತಗೊಂಡಿವೆ.

ಕ್ರಿ.ಶ. 6ನೇ ಶತಮಾನದಲ್ಲಿ ಆಳ್ವಿಕೆ ಮಾಡುತ್ತಿದ್ದ ಚಾಲುಕ್ಯರ ರಾಜಧಾನಿಯಾಗಿದ್ದ ಬಾದಾಮಿಯನ್ನು ಅಚ್ಚ ಕನ್ನಡದಲ್ಲಿ ಕಿಸುವೊಳಲೂ ಎಂದು ಕರೆಯುತ್ತಿದ್ದರು. ಇದು ಕರ್ನಾಟಕದ ಹೃದಯ ಭಾಗ ಎಂದು ಪ್ರಾಚೀನ ಕಾಲದಿಂದಲೂ ವಿಖ್ಯಾತಿಯಿರುವುದನ್ನು ನಾವು ನೋಡಬಹುದಾಗಿದೆ. ಇವರ ಸೈನ್ಯವನ್ನು ಅಜೇಯಂ ಕರ್ನಾಟಕ ಬಲಂ

ಎಂದು ಕರೆಯುತ್ತಿದ್ದರು ಎಂದು ಶಾಸನಗಳಿಂದ ನಮಗೆ ತಿಳಿಯುತ್ತದೆ. ಹಾಗೆಯೇ ಎಷ್ಟೋ ಸಂಸ್ಕೃತಿ ಕೃತಿಗಳಲ್ಲಿ ಕರ್ನಾಟಕದ ಉಲ್ಲೇಖಗಳು ಇರುವುದನ್ನು ನೋಡಬಹುದು. "ಮಾರ್ಕಂಡೇಯ ಪುರಾಣ ವರಾಹಮಿಹಿರನ ಬೃಹತ್ ಸಂಹಿತೆ (ಸುಮಾರು 6ನೇ ಶತಮಾನ) ಭಾಗವತ (ಕ್ರಿ.ಶ. 550–650) ಈ ಗ್ರಂಥಗಳು ಕರ್ನಾಟಕದ ಅಸ್ತಿತ್ವದ ಬಗ್ಗೆ ಸಾಕ್ಷಿ ಹೇಳುತ್ತವೆ" (ಶಂಬಾ ಕೃತಿ ಸಂಪುಟ ಕಂನಡ, ಕಂನುಡಿ–2, ಪುಟ 11). ಕ್ರಿ.ಶ 8–9ನೇ ಶತಮಾನದಲ್ಲಿ ಕನ್ನಡ ನುಡಿ ಕ್ಷೀಣ ವ್ಯವಸ್ಥೆಯಲ್ಲಿತ್ತು ಎಂದು ತಿಳಿಯುತ್ತದೆ. ಸಂಸ್ಕೃತ ಪ್ರಭಾವವು ಈ ಕಾಲದಲ್ಲಿ ಹೆಚ್ಚಾಗಿರುವುದರಿಂದ 'ಕವಿರಾಜಮಾರ್ಗ' ರಚಿತವಾಗಿರಬಹುದು ಎಂಬುದು ಕೆಲವು ವಿದ್ವಾಂಸಕರುಗಳ ಮಾತಾಗಿದೆ. "ರಾಜಶೇಖರನೆಂಬ 10ನೆಯ ಶತಮಾನದ ಕವಿಯು 'ಕರ್ಣಾಟೋ ಯುದ್ಧ ತಂತ್ರೆ ಚತುರಮತಿಃ, ಸಮರ ಕರ್ಮನೆ ನಿಸರ್ಗೋದ್ಭವಾ ಏವ ಕರ್ಣಾಟಾ' ಎಂದೂ 'ಕಿಂಬೂಥ...ಅಖಂಡಿತ ಪುರುಷಾಕಾರಾಃ ಹಿ ಕರ್ನಾಟಾ' ಎಂದು ಕನ್ನಡಿಗರ ಶೌರ್ಯ, ಧೈರ್ಯಗಳನ್ನು ಮುಕ್ತಕಂಠದಿಂದ ಸ್ತುತಿಸಿದ್ದಾನೆ! ಈ ಕವಿಯ ಎಂದು ಕನ್ನಡಿಗರ ಶೌರ್ಯ ಸಾಧನೆಗಳನ್ನು ಹೇಳಿರುವುದನ್ನು ನೋಡಬಹುದು" (ಅದೇ, ಪುಟ 11–12). ಕರ್ನಾಟಕದ ಜನರು ಯುದ್ಧ ತಂತ್ರದಲ್ಲಿ ಚತುರರು ಆಗಿದ್ದರು ಮತ್ತು ಯಾವುದೇ ಯುದ್ಧವನ್ನು ಸೋಲದೆ ಅಖಂಡ ಭಾರತದಲ್ಲಿ ತಮ್ಮ ಶೌರ್ಯವನ್ನು ಸ್ಥಾಪಿಸಿದರು ಎಂದು ನಮಗೆ ತಿಳಿಯುತ್ತದೆ. ಶಾತವಾನರು ಬಾದಾಮಿಯ ಚಾಲುಕ್ಯರು ರಾಷ್ಟ್ರಕೂಟರು ಯಾರು ಸಹ ತಾವು ಕರ್ನಾಟಕದ ರಾಜರು ಎಂದು ಹೇಳಿಕೊಂಡಿಲ್ಲ. ಕ್ರಿ.ಶ. 12–13ನೆಯ ಶತಮಾನದಲ್ಲಿ ಬಂದಂತಹ ಹೊಯ್ಸಳರು 'ತಾವು ಕನ್ನಡಿಗರು' ಎಂದು ಸ್ವಾಭಿಮಾನದಿಂದ ಹೇಳಿಕೊಂಡಿರುವುದನ್ನು ನೋಡಬಹುದು. ಇದರಿಂದಾಗಿ ನಮಗೆ ಒಂದು ಭಾಷೆಯಿಂದ ಒಂದು ಸಂಸ್ಕೃತಿಯನ್ನು ಕಟ್ಟಬಹುದು ಎಂದು ತಿಳಿಯುತ್ತದೆ.

ಕ್ರಿ.ಶ. 12–13ನೆಯ ಶತಮಾನದ ಕಾಲದಲ್ಲಿ ಮರಾಠ ಮತ್ತು ತೆಲುಗು ಭಾಷೆಗಳು ಉಗಮವಾಗಿತ್ತು. ಅದಕ್ಕೂ ಮುಂಚೆ ದಕ್ಷಿಣ ಪ್ರಾಂತ್ಯದಲ್ಲಿ ಕನ್ನಡವೇ ತನ್ನ ಪ್ರಾಬಲ್ಯವನ್ನು ಹೊಂದಿತ್ತು ಎಂದು ಹೇಳಬಹುದು. ಕರ್ನಾಟಕ ಎಂಬ ಪದವು ತಮಿಳುನಾಡಿನಲ್ಲಿ 'ಕನ್ನಾಡು' ಎಂದು ಪ್ರಚಲಿತದಲ್ಲಿತ್ತು ಹಾಗೆಯೇ ಸಂಸ್ಕೃತದಲ್ಲಿಯೂ ಸಹ ಕನ್ನಾಟಕ ಎಂಬುದಾಗಿ ಬಳಕೆಯಾಗಿರುವುದನ್ನು ನಾವು ನೋಡಬಹುದಾಗಿದೆ. ಕನ್ನಡ ನಾಡು ಗೋದಾವರಿಯವರಿಗೆ ಇತ್ತು ಎಂದು ತೋರಿಸಲು ಸಾಕಷ್ಟು ಆಧಾರಗಳು ನಮ್ಮಲ್ಲಿ ಇಲ್ಲ ಪ್ರಾಚೀನ ಕಾಲದಲ್ಲಿ ವೆಂಗಿಮಂಡಲ ತಮಿಳರ ತವರು ಮನೆಯಾಗಿದ್ದಕ್ಕೆ ಅನೇಕ ಸಾಕ್ಷಿಗಳು ದೊರೆಯುತ್ತವೆ ಉದಾಹರಣೆಗೆ, ಪಂಪ, ನಾಗವರ್ಮ, ಪಾಲ್ಕುರಿಕೆ

ಸೋಮನಾಥ, ನಾರಾಯಣ ಭಟ್ಟ ಇವರ ತಾಯಿಯ ಮನೆ ವೆಂಗಿಮಂಡಲವೇ ಆಗಿತ್ತು. ನೃಪತುಂಗನ ಆಳ್ವಿಕೆಯ ಕಾಲದಲ್ಲಿ ತೆಲುಗು ಭಾಷೆಯು ಅಸ್ತಿತ್ವದಲ್ಲಿಯೇ ಇರಲಿಲ್ಲ ಎಂದು ನೋಡಬಹುದು. ಆದ್ದರಿಂದ ನಿಸ್ಸಂಕೋಚವಾಗಿ ಗೋದಾವರಿಯಿಂದ ಕಾವೇರಿಯವರಿಗೆ ಕನ್ನಡ ಮಾತನಾಡುವ ಪ್ರದೇಶವಾಗಿತ್ತು ಎಂದು ತಿಳಿಯಬಹುದು. ಹಾಗೆಯೇ. ಕ್ರಿ.ಶ.7 –8ನೇ ಶತಮಾನದಲ್ಲಿ ಮರಾಠರು ಮತ್ತು ತೆಲುಗು ಭಾಷೆಗಳು ಹುಟ್ಟುತ್ತಾ ಬಂದಿರುವುದನ್ನು ನೋಡಬಹುದಾಗಿದೆ. ಭಾಷೆಯ ಅಧ್ಯಯನವನ್ನು ಮಾಡಿದರೆ ಸಂಸ್ಕೃತಿಯ ಅಧ್ಯಯನವನ್ನು ಮಾಡಿದ ಹಾಗೆ ಎರಡು ಒಂದಕ್ಕೊಂದು ಸೇರಿಕೊಂಡಿವೆ. ಭಾಷೆಯಿಂದ ನಮ್ಮ ಸಂಸ್ಕೃತಿಗೆ ಯಾವಾಗ ಅದು ಯಾವ ಪ್ರದೇಶದಲ್ಲಿ ಹೆಚ್ಚು ಪ್ರಚಲಿತದಲ್ಲಿತ್ತು ಎಂದು ತಿಳಿದುಕೊಳ್ಳಬಹುದಾಗಿದೆ.

ಪ್ರಾಚೀನ ಕಾಲದಲ್ಲಿ ಕನ್ನಡವನ್ನು ಹೆಚ್ಚಾಗಿ ಬಳಸುತಿದ್ದರಿಂದ 'ಕರ್ಣಾಟಕ ಸಂಗೀತ ಪದ್ಧತಿ' ಎಂಬ ಪ್ರಖ್ಯಾತಿಯನ್ನು ನಾವು ಈಗಲೂ ಕಾಣಬಹುದು ಕರ್ಣಾಟಕ ಸಂಗೀತದಲ್ಲಿ ತೆಲುಗು ಕವಿಗಳು ಬಹಳಷ್ಟು ಸಾಧನೆಯನ್ನು ಮಾಡಿರುವುದನ್ನು ನಾವು ನೋಡಬಹುದಾಗಿದೆ. 'ಕರ್ನಾಟಕ ಸಂಗೀತ ಪದ್ಧತಿಗೆ' 'ದಕ್ಷಿಣ ಸಂಗೀತ ಪದ್ಧತಿ' ಎಂದು ಸಹ ಕರೆಯುತ್ತಾರೆ. ಇಲ್ಲಿಯವರೆಗೆ ಕರ್ನಾಟಕ ಮತ್ತು ಆಂಧ್ರಪ್ರದೇಶಗಳು ಜೊತೆಗೆ ಸಂಸ್ಕೃತಿಯನ್ನು ಕಟ್ಟಿಕೊಂಡಿರುವುದನ್ನು ನಾವು ನೋಡಬಹುದು. ಅದರಿಂದಾಗಿ ಕವಿರಾಜಮಾರ್ಗದಲ್ಲಿ ಹೇಳಿರುವಂತೆ ಗೋದಾವರಿಯಿಂದ ಕಾವೇರಿಯವರೆಗೂ ಕನ್ನಡಪ್ರದೇಶವಿತ್ತು ಎಂದು ನಾವು ನಂಬಬಹುದು. ಕ್ರಿ.ಶ. 10ನೇ ಶತಮಾನದ ನಂತರ ಕನ್ನಡ ಭಾಷೆಯ ಮಡಿಲಿನಲ್ಲಿ ತೆಲುಗು ಭಾಷೆಯು ಬೆಳೆದಿರುವುದನ್ನು ನೋಡಬಹುದು.

ಅಧ್ಯಯನದ ಮಿತಿಗಳು

ಪ್ರಸ್ತುತ ಅಧ್ಯಯನದಲ್ಲಿ ಶಂಬಾ ಜೋಶಿಯವರ ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ ಗ್ರಂಥದಲ್ಲಿ ಎರಡು ಅಧ್ಯಯನಗಳನ್ನು ಮಾತ್ರವೇ ಆರಿಸಿಕೊಳ್ಳಲಾಗಿದೆ ಅವುಗಳೆಂದರೆ 1. ಕಂನಾಡು ಕಂನುಡಿ ಆಕೃತಿ – ಪಡೆದ ಬಗೆ. 2. ಕರ್ಣಾಟವು ದಕ್ಷಿಣೋತ್ತರದ ಸೇತುವೆ

ಪರಿಕಲ್ಪನೆ

1. ಕಂನಾಡು – ಕಂನುಡಿ ಆಕೃತಿ ಪಡೆದ ಬಗೆ

ಕರ್ನಾಟಕ ಹುಟ್ಟಿ ಬಂದ ಚರಿತ್ರೆಯನ್ನು ಶಂಬಾ ಜೋಶಿಯವರು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಹಾಗೆ ಕರ್ನಾಟಕ ಎಂಬ ಪದ ಹೇಗೆ ಬಂತು ಎಂದು ಸಹ ವಿವೇಚಿಸಿದ್ದಾರೆ. ಕರ್ನಾಟಕ ಮತ್ತು ಕಂನುಡಿಯ ಸ್ಥಳ,ಕಾಲದ ಜೊತೆಗೆ ಹೇಗೆ

ಸಂಬಂಧವನ್ನು ಪಡೆದುಕೊಂಡಿದೆ ಎಂದು ವಿವೇಚಿಸಿದ್ದಾರೆ. ಜೈನ ಬೌದ್ಧ ಉಪನಿಷತ್ತುಗಳನ್ನು ಆಕರವಾಗಿ ಬಳಸಿಕೊಂಡಿದ್ದಾರೆ.ಉತ್ತರ ಭಾರತಕ್ಕೆ ಮತ್ತು ದಕ್ಷಿಣ ಭಾರತಕ್ಕೆ ಯಾವ ರೀತಿ ಸಂಬಂಧ ಇದೆ ಎಂದು ಸಹ ತಿಳಿಸಿದ್ದಾರೆ. ಹಾಗೆಯೇ ಮಗಧ, ಉಜ್ಜಯಿನಿ, ಶ್ರವಣಬೆಳಗೊಳಗೆ ಸಂಬಂಧ ಇರುವುದನ್ನು ನಾವು ಕಾಣಬಹುದು ಉಪನಿಷತ್ತಿನ ಕೊನೆಯ ಭಾಗದಲ್ಲಿ ಜೈನ ಮತ್ತು ಬೌದ್ಧ ಧರ್ಮಗಳು ಹುಟ್ಟಿಕೊಂಡಿರುವುದನ್ನು ನೋಡಬಹುದು. ಇವುಗಳು ಅಹಿಂಸೆ ಮತ್ತು ಸನ್ಯಾಸತ್ವಗಳನ್ನು ಹೇಳಿರುವುದರಿಂದ ಕೆಲವು ಶತಮಾನಗಳ ಕಾಲ ಅಶ್ವಮೇಧ ಯಾಗ ಮತ್ತು ಸ್ಕಂದ ದೇವತೆಯ ಪೂಜೆಯು ನಿಂತಿರುವುದನ್ನು ನೋಡಬಹುದಾಗಿದೆ. "ಕ್ಷತ್ರಿಯರ ಸಾಮ್ರಾಜ್ಯ ಸ್ಥಾಪನೆಗಾಗಿ ದಿಗ್ವಿಜಯದ ಪ್ರೇರಣೆಯಿಂದ ಈ ಅಶ್ವಮೇಧ ಯಾಗವನ್ನು ಮರಳಿ ಪ್ರಾರಂಭಿಸಿದವನು ಶುಂಗ ಮನೆತನದ ಸ್ಥಾಪಕನಾಥ ಪುಷ್ಯಮಿತ್ರನೆ ಮೊದಲನಯವನೆಂದು ತೋರುತ್ತದೆ" (ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ ಪುಟ –264). ಇವನಿಂದ ಮತ್ತೇ ವೈದಿಕ ಧರ್ಮದ ಸಂಸ್ಕೃತಿ ತಲೆ ಎತ್ತುವುದನ್ನು ನಾವು ನೋಡಬಹುದು ಹಾಗೆಯೇ ಜೈನ–ಬೌದ್ಧ ಧರ್ಮದ ಪ್ರಭಾವದಿಂದಾಗಿ ವೈದಿಕ ಧರ್ಮದ ಆಚರಣೆಗಳಲ್ಲಿ ಗಮನಿಸಬಹುದಾಗಿದೆ.

ಸ್ಕಂದ ದೇವತೆಯ ಆರಾಧನೆಯು ಅಶೋಕನ ಕಾಲಕ್ಕಿಂತ ಮುಂಚೆಯೂ ಪ್ರಚಲಿತದಲ್ಲಿತ್ತು ಎಂದು ತಿಳಿಯಬಹುದಾಗಿದೆ. "ಕ್ರಿಸ್ತಾಬ್ದದ ಪ್ರಾರಂಭದಲ್ಲಿ ಸ್ಕಂದ ಹೆಸರಿನ ಪರಂಪರೆಯನ್ನು ಕುಂತಲ ಸಾತಕರ್ಣಿಗಳು ಮುಂದುವರಿಸುತ್ತಿದ್ದಾರೆ ಬನವಾಸಿಯ ಕದಂಬ ವಂಶದ ಸ್ಥಾಪಕ ; (ಕ್ರಿ. ಶ.320–70): ಇವನ ಮಗನ ಹೆಸರು ಸ್ಕಂದ (ಕಂಗ) ಕುಮಾರ್ ವರ್ಮ ಹೆಸರಿನ ರಾಜನು ಆಗಿದ್ದಾನೆ" (ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ, ಪುಟ 268). ಇದರಿಂದ ತಿಳಿಯುವುದೇನೆಂದರೆ ಕ್ರಿಸ್ತಶಕ ಆರಂಭವಾಗುವ ಮೊದಲೇ ಸ್ಕಂದ ಆಚರಣೆಗಳು ಪ್ರಚಲಿತದಲ್ಲಿತ್ತು ಎಂದು ತಿಳಿಯಬಹುದಾಗಿದೆ. ಈ ಲೇಖನದ ಮಹತ್ವದ ಪ್ರಯತ್ನವೆಂದರೆ ಸ್ಮೃತಿಗಳು ಮತ್ತು ಉಪನಿಷತ್ತಿಗಳು ಒಂದು ಪರಂಪರೆಯನ್ನು ಹೇಗೆ ಹುಟ್ಟುಹಾಕಿವೆ ಎಂದು ತಿಳಿಯಬಹುದಾಗಿದೆ. ಇದರಲ್ಲಿ ಭಾರತೀಯ ಇತಿಹಾಸದಲ್ಲಿ ಜಾತಿ ಎನ್ನುವುದು ಹೇಗೆ ಸಂಕೀರ್ಣವಾದ ಸ್ವರೂಪವನ್ನು ಪಡೆದಿದೆ ಎಂದು ವಿವೇಚಿಸುತ್ತಾರೆ. ಇದನ್ನು ಚರ್ಚಿಸುವಾಗಲೇ ಸಂಕೇತವನ್ನು ಕೂಡ ಅವಲಂಬಿಸಿಕೊಂಡಿದ್ದಾರೆ (ಶಂಬಾ ಅವರಿಗೆ ಅತ್ಯಂತ ಹೆಚ್ಚು ಆಸಕ್ತಿ ಕ್ಷೇತ್ರವೆಂದರೆ ಮಾನವಶಾಸ್ತ್ರ ಮತ್ತು ಸಂಕೇತಶಾಸ್ತ್ರ ಈ ಎರಡನ್ನು ಹೆಚ್ಚು ಬಳಸಿಕೊಳ್ಳುತ್ತಾರೆ).

"ಕ್ರಿಸ್ತಶಕ 10ನೇ ಶತಮಾನದಲ್ಲಿ ನರ್ಮದಾ ಕಾವೇರಿಯ ನಡುವಣ

ಪ್ರದೇಶದಲ್ಲಿ ಭಾಷೆ ಸ್ಥಿತ್ಯಂತರ ವಾಗಿರುವುದನ್ನು ನಾವು ಕಾಣಬಹುದು. ಕಾವೇರಿಯಿಂದ ನರ್ಮದೆಯ ಉತ್ತರ ಪರಿಸರದ ಮಧ್ಯದವರೆಗೂ ಮೊದಲು ಕಂದಮಿಳು ಭಾಷಿಕರು ವಾಸವಾಗಿದ್ದರು; ಪಟ್ಟಿ, ಪಾಡಿ ಬಳಗದ ಪುರಾತನ ಸ್ಥಳನಾಮಗಳೇ ಇದಕ್ಕೆ ಪ್ರಮಾಣ. ಉತ್ತರಾಪಥದಲ್ಲಿ ಕ್ರಿಸ್ತಪೂರ್ವ ಮೊದಲ ಶತಮಾನ ಸುಮಾರಿಗೆ ಪಾಡಿ>ವಾಡಿ ಆದುದುಂಟು. 'ಪಾಡಿ'ಯಂತೆ 'ದನಗಳನ್ನು ಕಟ್ಟುವ ಸ್ಥಳ' ಎಂಬುವುದು ಎಂಬರ್ಥದಲ್ಲಿಯೇ 'ವಾಡಿ'ಗೂ ಇಲ್ಲಿ ಅರ್ಥವಿದ್ದಿತಾಗಿ, ಜೈನ ಉತ್ತರಾಧ್ಯಯನ ಸೂತ್ರದಲ್ಲಿ ಬಂದ ವಾಕ್ಯದಿಂದ ನಿಶ್ಚಿತವಾಗಿದೆ" (ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ, ಪುಟ 278).

ಕರ್ಣಾಟದಲ್ಲಿ ದೊರೆತ ಮಣ್ಣಿನ ಪ್ರತಿಮೆಗಳಿಗೂ ಮೆಹೆಂಜೋದಾರದಲ್ಲಿ ದೊರೆತ ಪ್ರತಿಮೆಗಳಿಗೆ ಸಾಕಷ್ಟು ಹೋಲಿಕೆ ಇರುವುದರಿಂದ ಕರ್ನಾಟಕಕ್ಕೆ ಮತ್ತು ಸಿಂಧೂ ನಾಗರಿಕತೆಗೆ ಸಂಬಂಧ ಇದೆ ಎಂದು ಕೆಲವು ವಿದ್ವಾಂಸರ ನಿಲುವಾಗಿದೆ. ಮನುಸ್ಮೃತಿಯಲ್ಲಿಯೂ ಕರ್ನಾಟಕದ ಕೆಲವು ಸ್ಥಳನಾಮಗಳು ಮತ್ತು ವ್ಯಕ್ತಿನಾಮಗಳು ಇರುವುದನ್ನು ನಾವು ನೋಡಬಹುದಾಗಿದೆ. ಸಂಸ್ಕೃತವನ್ನು ಹೊರತುಪಡಿಸಿ ಕರ್ನಾಟಕ ಸಂಸ್ಕೃತಿಯನ್ನು ಹೇಗೆ ಹುಡುಕಬೇಕೆಂಬುದನ್ನು ಶಂಬಾ ಅವರು ಈ ಲೇಖನದಲ್ಲಿ ತಿಳಿಸಿದ್ದಾರೆ.

2. ಕರ್ಣಾಟವು ದಕ್ಷಿಣೋತ್ತರದ ಸೇತುವೆ

ಪಟ್ಟಿ–ಪಾಡಿ ಈ ಮಾತುಗಳು ಕಂದಮಿಳ ಭಾಷೆಯ ಪದಗಳು ಎಂದು ಮತ್ತು ಇಲ್ಲಿ ಕುರುಬಿಕೆಗಾರರು ಇದ್ದರು ಎಂದು ಸ್ಪಷ್ಟವಾಗುತ್ತದೆ. ನರ್ಮದೆಗೆ 'ರೇವತಿ' ಎಂಬ ಪ್ರಾಚೀನ ಹೆಸರು ಬರುವುದನ್ನು ನಾವು ನೋಡಬಹುದು. "ನರ್ಮದ ತೀರದ 'ಕಂನುಡಿ' (ಗಾವ ಪುರಾ) ಗೋದಾ ಪರಿಸರದ ಕನ್ನಡ ಕಂನಡ (ತಾಲೂಕು) ಶ್ರೀಶೈಲದ 'ಕಣ್ಣವಿಷಯ' ಈ ಸ್ಥಳನಾಮಗಳು ಅಲ್ಲಿದ್ದ ಕಂನುಡಿಯ ಜನದ ಕಾಲದ ಸ್ಮಾರಕಗಳಾಗಿವೆ" (ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ ಪುಟ –340). ನರ್ಮದಾ, ಶ್ರೀಶೈಲ ಪರಿಸರವು ಕಂನಡ ಸಂಸ್ಕೃತಿಯನ್ನು ಬಿಂಬಿಸುವ ನಾಡಗಿವೆ ಎಂದು ಈ ಮೂಲಕ ಶಂಬಾ ಜೋಶಿಯವರು ಸ್ಪಷ್ಟಪಡಿಸಿದ್ದಾರೆ.

ಮಧ್ಯಭಾರತದೊಡನೆ ಕಂನುಡಿಯು ಜೀವಂತ ಆಗಿರುವುದನ್ನು ಕಾಣಬಹುದು. ಹಾಗೆಯೇ ಪ್ರಾಕೃತ ಭಾಷೆಯೊಡನೆ ಕಂನುಡಿಯು ಬೆರೆತಿರುವುದನ್ನು ನೋಡಬಹುದು ಮಧ್ಯ ಭಾರತದಲ್ಲಿ ಕರ್ನಾಟಕ ವಹಿಸಿದ ಪಾತ್ರವು ಬಹಳ ವಿಶಿಷ್ಟವಾದ ರೀತಿಯಲ್ಲಿದೆ ಅದನ್ನು ಶಂಬಾವರು ತಮ್ಮದೇ ಆದ ನಿಲುವಿನಲ್ಲಿ ನೋಡಿರುವುದನ್ನು

ನಾವು ಈ ಲೇಖನದಲ್ಲಿ ಗಮನಿಸಬಹುದಾಗಿದೆ. ಯಕ್ಷಗಾನ ಬರುವುದಕ್ಕಿಂತ ಮುಂಚೆ ದಕ್ಷಿಣ ಭಾರತದಲ್ಲಿ ಮಾಲವೀ ಎಂಬ ರಾಗವು ಅಸ್ತಿತ್ವದಲ್ಲಿ ಇತ್ತು ಎಂದು ತಿಳಿಯುತ್ತದೆ. ಇದನ್ನು ತಿಳಿಯಲು ಯಾವುದೇ ಲಿಖಿತ ದಾಖಲೆಗಳು ಇಲ್ಲ. "ಜಾತಿ, ಧರ್ಮ ಮತ್ತು ಇದರೊಡನೆಯೆ ಭಾಷೆ (ಸಂಸ್ಕೃತಿ) ಎರಡನ್ನೂ ಒಂದರೊಡನೊಂದು ಬೆರಸಿ ಕಾಣುವ ಸಂಪ್ರದಾಯದಿಂದಾಗಿ ಇಡೀ ಭಾರತೀಯ ಭಾಷೆ–ಸಂಸ್ಕೃತಿಯು ತುಂಬ ವಿಪರೀತ ಪರಿಣಾಮಗಳಿಗೆ ಒಳಗಾಗುತ್ತ ಬಂದಿದೆ. ಇದು ಪ್ರಸ್ತುತ ಕಂನುಡಿ–ಕಂನಾಡ ಸಾಂಸ್ಕೃತಿಕ ಸಮೀಕ್ಷೆಯ ಅನುಷಂಗದಿಂದಲೂ ಹೊರಡುತ್ತದೆ. ಪರಿಮಿತಂ ಭೂತಂ ಅಪರಿಮಿತಂ ಭವ್ಯ ಎಂದು ಶತಪಥ ಬ್ರಾಹ್ಮಣದಲ್ಲಿ ಹೇಳಿರುವ ವಿಚಾರವು ಅತ್ಯಂತ ಉದ್ಯೋಧಕವಾಗಿದೆ" (ಕರ್ನಾಟ ಸಂಸ್ಕೃತಿಯ ಪೂರ್ವ ಪೀಠಿಕೆ ಪುಟ 343). ಇದರಿಂದ ತಿಳಿಯುವುದೇನೆಂದರೆ ಭಾಷೆ ಮತ್ತು ಸಂಸ್ಕೃತಿಗಳು ಎರಡು ಬೇರೆ ಬೇರೆ ಗಳಲ್ಲ ಅವುಗಳು ಒಂದೇ ಎಂದು ಹೇಳಬಹುದಾಗಿದೆ. ಶಂಬಾ ಜೋಶಿಯವರ ಪ್ರಕಾರ ಕರ್ನಾಟಕ ಸಂಸ್ಕೃತಿಯೇ ಬೇರೆ ಇದೆ ಮತ್ತು ಭಾಷೆಗೂ ಸಂಸ್ಕಾರಕ್ಕೂ ಒಂದು ಸಂಬಂಧವಿದೆ ಎಂದು ಹೇಳಿದ್ದಾರೆ. ಇದನ್ನು ವಿವರಿಸುವಾಗ ಸ್ವಲ್ಪ ಮಟ್ಟಿಗೆ ಭೌತಶಾಸ್ತ್ರವನ್ನು ಕೂಡ ಬಳಸಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಆಚಾರ–ವಿಚಾರಕ್ಕೆ ಪ್ರೇರೇಪಿಸಿದ ಸಂಸ್ಕಾರಗಳು ಸಂಸ್ಕಾರಗಳೇ ಅಲ್ಲ ನಡವಳಿಕೆ–ನಡವಳಿಗಳನ್ನು ರೂಪಿಸುವ ಸಂಸ್ಕಾರಗಳೇ ಜೀವಂತ ಸಂಸ್ಕಾರಗಳೆಂದು ಶಂಬಾರವರು ಈ ಲೇಖನದಲ್ಲಿ ಹೇಳಿರುವುದನ್ನು ಗಮನಿಸಬಹುದು. ಮಾನವೀಯ ಪ್ರಜ್ಞೆಯಲ್ಲಿರುವ ಸೃಜನಶೀಲತೆಯನ್ನು ಇಲ್ಲಿ ಚರ್ಚಿಸಿದ್ದಾರೆ. ಕಾಲ, ಸಂಸ್ಕೃತಿ, ಆಚಾರ–ವಿಚಾರಗಳು, ಜೀವನ ಕ್ರಮ ಇವುಗಳು ಈ ಲೇಖನದ ಪ್ರಮುಖ ಆಶಯಗಳಾಗಿವೆ.

ಫಲಿತಗಳು

- ಶಂಬಾ ಜೋಶಿಯವರ 'ಕಂನಾಡು–ಕಂನುಡಿ ಆಕೃತಿ ಪಡೆಯದ ಬಗೆ' ಮತ್ತು 'ಕರ್ನಾಟಕ ದಕ್ಷಿಣೋತ್ತರ ಸೇತುವೆ' ಈ ಲೇಖನಗಳ ಮುಖಾಂತರ ಕನ್ನಡದ ಸಂಸ್ಕೃತಿಯನ್ನು ಹುಡುಕುವ ಪ್ರಯತ್ನ ಇಲ್ಲಿ ಮಾಡಲಾಗಿದೆ.
- ಈ ಲೇಖನದಲ್ಲಿ ಕರ್ನಾಟಕವನ್ನು ಕೇವಲ ಸಾಹಿತ್ಯಿಕ ಅಧ್ಯಯನ ಮಾಡದೇ ಮಾನವಶಾಸ್ತ್ರೀಯ ಮತ್ತು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿವೇಚಿಸಲಾಗಿದೆ.
- ಕನ್ನಡದ ಸಂಸ್ಕೃತಿ ಅತ್ಯಂತ ಪ್ರಾಚೀನವಾದುದು ಎನ್ನುವುದು ಶಂಬಾ ಅವರ ಈ ಲೇಖನಗಳ ಮುಖಾಂತರ ಮರು ಪರಿಶೀಲನೆ ಮಾಡಲಾಗಿದೆ.

ತೀರ್ಮಾನ

ಒಟ್ಟಾರೆಯಾಗಿ ಕರ್ನಾಟಕದ ಸಂಸ್ಕೃತಿ ಲೇಖನವು ಕನ್ನಡ ನಾಡು ಹಾಗೂ ಕನ್ನಡ ಭಾಷೆಯ ಕುರಿತಾದ ಚರ್ಚೆಯನ್ನು ಒಳಗೊಂಡಿದೆ. ಕರ್ನಾಟಕ ಸಂಸ್ಕೃತಿಯನ್ನು ಅಧ್ಯಯನ ಮಾಡುವುದೆಂದರೆ ಕನ್ನಡ ನಾಡಿನ ಇತಿಹಾಸವನ್ನು ಪುನರ್ ಮನನ ಮಾಡುವುದು ಎಂದರ್ಥ. ಈ ಕಾರಣದಿಂದ ಓದುಗರಾದ ನಾವುಗಳು ಕರ್ನಾಟಕ ಸಂಸ್ಕೃತಿಯನ್ನು ಮತ್ತೆ–ಮತ್ತೆ ಮೆಲುಕು ಹಾಕುವುದು ಅವಶ್ಯಕವಾಗಿದೆ. ಮೊದಲೇ ಹೇಳಿದ ಹಾಗೆ ಪ್ರಸ್ತುತ ಲೇಖನದಲ್ಲಿ ಶಂಬಾ ಜೋಶಿಯವರ ಕರ್ನಾಟಕದ ಸಂಸ್ಕೃತಿಯ ಪೂರ್ವ ಪೀಠಿಕೆ ಕೃತಿಯಲ್ಲಿ ಎರಡು ಅಧ್ಯಯನಗಳನ್ನು ಆರಿಸಿಕೊಂಡಿದ್ದು, ಕಂನಾಡು–ಕಂನುಡಿ ಆಕೃತಿ ಪಡೆದ ಬಗೆ ಈ ಅಧ್ಯಯನದಿಂದ ಕನ್ನಡ ನಾಡಿನ ಹುಟ್ಟು ಮತ್ತು ಚರಿತ್ರೆಯನ್ನು ವಿವರಿಸಲಾಗಿದೆ. ಕರ್ನಾಟಕ ದಕ್ಷಿಣೋತ್ತರ ಸೇತುವೆ ಈ ಅಧ್ಯಯನದ ಮೂಲಕ ಕನ್ನಡ ನಾಡಿಗೆ ನರ್ಮದಾ ಮತ್ತು ಶ್ರೀಶೈಲ ಪರಿಸರದ ಕೊಡುಗೆ ಹಾಗೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅವಿನಾಭಾವ ಸಂಬಂಧವನ್ನು ಕುರಿತು ವಿವರಿಸಲಾಗಿದೆ. ಕರ್ನಾಟಕ ಸಂಸ್ಕೃತಿಯನ್ನು ಸೀಮಿತ ವ್ಯಾಪ್ತಿಯಲ್ಲಿ ನೋಡುವುದು ಸುಲಭದ ಮಾತಲ್ಲ. ಆದ್ದರಿಂದ ಸಂಸ್ಕೃತಿಯ ಮುಖ್ಯ ವಿಷಯವನ್ನು ಆಧಾರದಲ್ಲಿರಿಸಿಕೊಂಡು ಈ ಲೇಖನದಲ್ಲಿ ಅಧ್ಯಯನದ ಮಿತಿಗಳನ್ನು ಬಳಸಿಕೊಳ್ಳುವ ಮೂಲಕ ಸೀಮಿತ ವ್ಯಾಪ್ತಿಗೆ ತರುವ ಪ್ರಯತ್ನ ಮಾಡಲಾಗಿದೆ. ಈ ನಿಟ್ಟಿನಲ್ಲಿ ಈ ಲೇಖನದ ಪ್ರಾಮುಖ್ಯತೆಯನ್ನು ನೋಡಬಹುದು.

ಪರಾಮರ್ಶನ ಗ್ರಂಥಗಳು

1. ಕಲ್ಬುರ್ಗಿ, ಎಂ. ಎಂ. (2010). ಮಾರ್ಗ. ಸಂಪುಟ 2, 5, 6, ಸ್ವಪ್ನ ಬುಕ್ ಹೌಸ್, ಬೆಂಗಳೂರು.
2. ಚಿದಾನಂದಮೂರ್ತಿ, ಎಂ. (1975). ಹೊಸತು ಹೊಸತು. ಸಪ್ನ ಬುಕ್ ಹೌಸ್, ಬೆಂಗಳೂರು.
3. ತಪಸ್ವೀಕುಮಾರ್, ನಂ. (2000). ಸಂಸ್ಕೃತಿ ವಿಕಾಸ. ಚೇತನ ಬುಕ್ ಹೌಸ್, ಮೈಸೂರು.
4. ಮಲ್ಲೇಪುರಂ ಜಿ. ವೆಂಕಟೇಶ್ (ಸಂ.). (1999). ಶಂಬಾ ಕೃತಿ ಸಂಪುಟ–1 ರಿಂದ 6. ಕಂನಾಡು– ಕರ್ನಾಟ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
5. ಮನುಚಕ್ರವರ್ತಿ (2000). ಮಧ್ಯಮ ಮಾರ್ಗ (ಸಮಾಜ–ಸಂಸ್ಕೃತಿ–ಸಾಹಿತ್ಯ ಕಲೆಗಳನ್ನು ಕುರಿತು ಚಿಂತನೆಗಳು). ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

6. ರಾಜಾರಾಮ್ ಹೆಗಡೆ (2004). ಭಾರತೀಯ ಇತಿಹಾಸ ಸಮಾಜ ಮತ್ತು ಸಂಸ್ಕೃತಿ. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

7. ಶಂಬಾ ಜೋಶಿ (1967). ಕರ್ಣಾಟ ಸಂಸ್ಕೃತಿಯ ಪೂರ್ವ ಪೀಠಿಕೆ. ಮಾನವ ಧರ್ಮ ಪ್ರತಿಷ್ಠಾನ, ಧಾರವಾಡ.

8. ಸಿದ್ಧಲಿಂಗಯ್ಯ, ಎಸ್. ಜಿ. (2017). ಪುರಾಣ. ಕುರುಬರ ಸಾಂಸ್ಕೃತಿಕ ಪರಿಷತ್ತು, ಬೆಂಗಳೂರು.

***

ಪೂರ್ಣಚಂದ್ರ ತೇಜಸ್ವಿ: ಪರಿಸರ ಸಂಕಥನ

ಡಾ. ಆನಂದ ಎಸ್.ಎನ್.
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಅಜ್ಜಂಪುರ – 577547 ಚಿಕ್ಕಮಗಳೂರು ಜಿಲ್ಲೆ.
anandajjampura@gmail.com

ಕತೆಗಾರ ತಾನು ವಾಸಿಸುವ ಪರಿಸರದ ಜನರನ್ನೇ ಪಾತ್ರಗಳನ್ನಾಗಿಸಿಕೊಂಡು ಕತೆ ಕಟ್ಟುವ ಕಲೆ ಕನ್ನಡಕ್ಕೆ ಸಿದ್ಧಿಸಿದ್ದು ಬಹುಶಃ ತೇಜಸ್ವಿಯವರ ಮೂಲಕ ಎನಿಸುತ್ತದೆ. ಕೇವಲ ಮನುಷ್ಯರನ್ನಷ್ಟೇ ಅಲ್ಲದೆ, ಪ್ರಾಣಿ, ಪಕ್ಷಿಗಳನ್ನೂ ಸಹ ಕತೆಯಲ್ಲಿ ಪಾತ್ರಗಳನ್ನಾಗಿಸಿದ್ದನ್ನು ಗಮನಿಸಿದರೆ, ಕತೆಗಳು ಮನುಷ್ಯರ ಬದುಕಿಗಷ್ಟೇ ಸೀಮಿತವಲ್ಲ ಎನಿಸದಿರದು. ತೇಜಸ್ವಿಯವರು ಸಾಕಿದ ನಾಯಿಯ ಹೆಸರು 'ಕಿವಿ'. ಇದು ಅವರ ಬಹುತೇಕ ಕತೆಗಳಲ್ಲಿ ಪ್ರಮುಖ ಪಾತ್ರವಾಗಿದೆ. ಉಡ, ಹಾವು, ಇಲಿ, ಹಕ್ಕಿ, ಹಕ್ಕಿಮರಿ, ಹಂದಿ, ಹಂದಿಮರಿ, ಕೋಳಿ, ಕೋತಿ, ಕಪ್ಪೆ, ಆಮೆ, ಗೂಬೆ ಮೊದಲಾದ ಪ್ರಾಣಿಪಕ್ಷಿಗಳು ಮುಖ್ಯ ಪಾತ್ರಗಳಾಗಿ ಗಮನ ಸೆಳೆಯುತ್ತವೆ. ನಮ್ಮ ಸುತ್ತಮುತ್ತಲ ಪರಿಸರದಲ್ಲಿ ನಿತ್ಯ ಕಾಣುವ ಈ ಪ್ರಾಣಿಪಕ್ಷಿಗಳ ಬಗ್ಗೆ ನಮಗೆ ಯಾವ ಕುತೂಹಲವೂ ಮೂಡುವುದಿಲ್ಲ. ಆದರೆ ತೇಜಸ್ವಿಯವರ ಕತೆಗಳನ್ನು ಓದುತ್ತಲೇ, ಅವುಗಳನ್ನು ನೋಡುವ ದೃಷ್ಟಿಕೋನ, ಗಮನಿಸುವ ಮನೋಭಾವ ಬದಲಾಗುತ್ತದೆ. ಎಲ್ಲವುಗಳ ಬದುಕಿಗೂ ಆಸ್ಪದವಿರುವ ಭೂಮಿ ಕೇವಲ ಮಾನವ ಪ್ರಾಣಿಯ ಸೊತ್ತಲ್ಲ. ಇಲ್ಲಿ ಎಲ್ಲವೂ ಮಾನವನಿಗೋಸ್ಕರ ನಿರ್ಮಾಣವಾಗಿರುವಂತಹದ್ದಲ್ಲ. ಪ್ರತಿಯೊಂದು ಪ್ರಾಣಿಯೂ ತನ್ನದೇ ಆದ ರೀತಿಯಲ್ಲಿ ಬದುಕನ್ನು ರೂಪಿಸಿಕೊಂಡಿರುತ್ತದೆ. ಅದನ್ನು ಗ್ರಹಿಸಿ, ಅದರಂತೆ ನೋಡಿದಾಗ ಮಾತ್ರ ಆ ಪ್ರಾಣಿಯ ಜೀವನ ಅರ್ಥವಾಗುತ್ತದೆ. ಇಲ್ಲದಿದ್ದರೆ ಮನುಷ್ಯನು ನಂಬಿಕೆ, ಶಕುನ, ಧಾರ್ಮಿಕ ಅಂಧಶ್ರದ್ಧೆಗಳಿಗೆ ಒಳಪಡಿಸಿ ಅದರಂತೆಯೇ ಪ್ರಕೃತಿ, ಪ್ರಾಣಿ, ಪಕ್ಷಿಗಳನ್ನು

ನೋಡುತ್ತಿರುತ್ತಾನೆ. ಹಾವನ್ನು ಶಿವನು ಧರಿಸಿರುವ ಪ್ರಾಣಿ ಎಂದೂ, ಇಲಿಯನ್ನು ಗಣೇಶನ ವಾಹನ ಎಂದೂ, ಕೋತಿಯನ್ನು ಹನುಮಂತನ ಸಂತತಿ ಎಂದೂ, ಅದೇ ರೀತಿ ಹಂದಿ, ಕಪ್ಪೆ, ಗೂಬೆ, ಆಮೆ ಇವುಗಳಿಗೆ ನಾನಾ ರೀತಿಯ ಧಾರ್ಮಿಕ ನಂಬಿಕೆಗಳನ್ನು ಆರೋಪಿಸಿ ಅವುಗಳ ನೈಜ ಬದುಕನ್ನು ನೋಡುವುದು ಸಾಧ್ಯವಾಗುತ್ತಿಲ್ಲ. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಪರಿಸರದ ಕತೆ'(1991) ಸಂಕಲನದ ಕತೆಗಳು ವಿಶೇಷವಾಗಿ ನಮ್ಮೊಳಗೆ ಇದುವರೆಗೂ ಕೇಳಿಯೋ, ನೋಡಿಯೋ ಕಟ್ಟಿಕೊಂಡು ಬಂದಿರುವ ಇಂತಹ ಅಂಧಶ್ರದ್ಧೆಯ ಮೂಢನಂಬಿಕೆಗಳನ್ನು ಹೋಗಲಾಡಿಸಿ, ನಿಜವನರಿತು ನಿಶ್ಚಿಂತರಾಗಿ ಜೀವಿಗಳನ್ನು ನೋಡುವ, ಗ್ರಹಿಸುವ ಮನೋಭಾವವನ್ನು ಬೆಳೆಸುತ್ತವೆ. ಹಾಗಾಗಿಯೇ ತೇಜಸ್ವಿಯವರ 'ಪರಿಸರ ಕತೆ'ಗಳು ಆಪ್ತವಾಗುವುದು. ಈ ಕೃತಿಯಲ್ಲಿರುವ ಹದಿನಾಲ್ಕು ಕತೆಗಳೂ ಸಹ ಕಲ್ಪನೆಯಿಂದ ಕಟ್ಟಿದ ಕತೆಗಳು ಎನಿಸುವುದೇ ಇಲ್ಲ. ತೇಜಸ್ವಿಯವರ ಬದುಕಿನ ಒಡನಾಟದಲ್ಲಿ ನಡೆಯುವ ಇವುಗಳ ನಡುವೆ, ನಾವೂ ಪಾತ್ರಧಾರಿಯಾಗಲಿಲ್ಲವಲ್ಲ ಎಂಬ ಖೇದ ಕಾಡುತ್ತದೆ. ತೇಜಸ್ವಿ ಓದುಗರನ್ನೂ ಒಳತಂದು ಕತೆ ಬರೆಯುವ ಕಲೆಗಾರಿಕೆಯಲ್ಲಿ ನಿಷ್ಣಾತರು. ಎಷ್ಟೋ ಜನ ಪ್ರಸಿದ್ಧ ವ್ಯಕ್ತಿಗಳು, ಬರಹಗಾರರು ತೇಜಸ್ವಿ ಜೊತೆಗಿನ ಒಡನಾಟವನ್ನು ಹೇಳಿಕೊಳ್ಳಲು ಹೆಮ್ಮೆ ಪಡುವುದು ಈ ಕಾರಣಕ್ಕಾಗಿಯೇ.

ತೇಜಸ್ವಿಯವರ 'ಪರಿಸರದ ಕತೆ'ಗಳಲ್ಲಿ ಬರುವ ಮನುಷ್ಯ ಪಾತ್ರಗಳು ಪ್ರಸಿದ್ಧ ವ್ಯಕ್ತಿ, ಕುಟುಂಬ, ವಂಶ, ಜಾತಿ, ಧರ್ಮ, ಕುಲಕ್ಕೆ ಸೇರಿದವಲ್ಲ. ಮಲೆನಾಡಿನ ಕಾಡಿನ ಒಳಗೆ ಬದುಕುವ, ನಾಗರಿಕ ಜಗತ್ತಿನಿಂದ ಬಹುದೂರ ಉಳಿದ, ಆತ್ಮಗತವಾಗಿ ತತ್ವಜ್ಞಾನಿಯೂ, ಯೋಗಿಯೂ, ಕಾಲಜ್ಞಾನಿಯೂ ಆಗಬಲ್ಲ ಪಾತ್ರಗಳು. ಮಾರ, ಮಾಸ್ತಿ, ಬೈರ, ಪ್ಯಾರ, ಎಂಗ್ಟ, ಕಾಳಪ್ಪ, ಸೀನಪ್ಪ ಹೀಗೆ ಕಾಡಿನಲ್ಲಿ ವಾಸಿಸುತ್ತಿದ್ದ ವ್ಯಕ್ತಿಗಳೇ ಅವರ ಕತೆಗಳಿಗೆ ಗಣಿ, ಮೂಲ. ಆ ಪಾತ್ರಗಳ ಜೊತೆಗಿನ ಸಂಭಾಷಣೆ, ಅವರ ನಂಬಿಕೆಗಳು, ಅವರು ಹೇಳುವ ಕಟ್ಟುಕತೆಗಳು, ಕಾಡಿನ ಗಿಡ, ಮರ, ಬಳ್ಳಿ, ಪ್ರಾಣಿ, ಪಕ್ಷಿ, ನೆಲ, ಜಲ, ಪ್ರಕೃತಿ ಇವುಗಳ ಬಗೆಗಿರುವ ಅವರ ಅಪಾರ ಜ್ಞಾನ, ಅನುಭವ ಎಲ್ಲವನ್ನೂ ಕತೆಗಳಲ್ಲಿ ಅನಾವರಣಗೊಳಿಸಿದ್ದಾರೆ. ತೇಜಸ್ವಿ ಒಬ್ಬ ಕತೆಗಾರರಾಗಿ ಎಷ್ಟು ಆಪ್ತರಾಗುತ್ತಾರೋ, ಅವರ ಪಾತ್ರಗಳೂ ಅಷ್ಟೇ ಆಪ್ತವಾಗುತ್ತವೆ. ಯಾರೇ ಹೇಳಲಿ, ಯಾವುದನ್ನೇ ಹೇಳಲಿ ಅದನ್ನು ಪರಾಮರ್ಶಿಸಿ ಸ್ವೀಕರಿಸುವ ಗುಣವನ್ನು ತೇಜಸ್ವಿಯೇ ಒಂದು ಪಾತ್ರವಾಗಿ ಓದುಗರಿಗೆ ಮಾದರಿಯಾಗಿದ್ದಾರೆ. ಈ ಕತೆಗಳು ಸತ್ಯಶೋಧನೆಯ ವಿಧಾನವನ್ನು ಪ್ರಾತ್ಯಕ್ಷಿಕೆಯಾಗಿ ಸಂಶೋಧಕರಿಗೆ ಒದಗಿಸುತ್ತವೆ. ಬದುಕನ್ನು ಇದ್ದಂತೆ, ರೂಢಿಗತವಾಗಿ ಬಂದಂತೆ ಮುಂದುವರಿಸಿಕೊಂಡು ಹೋಗಲು ನಾವು ಸಾಧನವಾಗುವ ಬದಲು ಹೊಸಹೊಸ ಪ್ರಯೋಗಕ್ಕೆ ಒಳಪಡಿಸಿಕೊಂಡು

ಬದುಕನ್ನು ಕಂಡುಕೊಳ್ಳುವ ರೀತಿಯನ್ನು ಈ ಕತೆಗಳು ಕಲಿಸುತ್ತವೆ. ಧರ್ಮ ಮತ್ತು ಧಾರ್ಮಿಕ ಆಚರಣೆಗಳಿಂದ ನಮ್ಮೊಳಗೆ ಗಟ್ಟಿಗೊಂಡ ನಂಬಿಕೆಗಳು ಇದ್ದಾಗ್ಯೂ ಅವುಗಳನ್ನು ಮೀರಿ ಬದುಕಬಹುದಾದ ಸಾಧ್ಯತೆಗಳನ್ನು ಸ್ವ–ಅನುಭವಗಳ ಮೂಲಕವೇ ಮಾದರಿಯಾಗಿಸಿದ್ದಾರೆ. ಮಂಗ, ಹಾವು ಇವುಗಳ ವಿಚಾರದಲ್ಲಿ ತೇಜಸ್ವಿಯವರ ದೃಢನಿರ್ಧಾರ ಓದುಗರನ್ನು ಬೆರಗುಗೊಳಿಸುತ್ತದೆ. ಅಷ್ಟೇ ಅಲ್ಲ, ಅದರಂತೆ ನಡೆಯಲು ಪ್ರೇರೇಪಿಸುತ್ತದೆ. ವೈಜ್ಞಾನಿಕತೆ ಮತ್ತು ವೈಚಾರಿಕತೆ ಎಂಬುದನ್ನು ಬದುಕಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದಕ್ಕೆ ಈ ಕತೆಗಳು ಉತ್ತಮ ನಿದರ್ಶನಗಳಾಗಿವೆ. ಪ್ರತಿಯೊಂದು ಪ್ರಾಣಿಯೂ ಸಹ ಸಹಜತೆಗಿಂತ ಭಿನ್ನವಾಗಿ, ವಿಶಿಷ್ಟವಾಗಿ ವರ್ತಿಸುತ್ತದೆ ಎಂದರೆ ಅದಕ್ಕೆ ಬೇರೆಯದೇ ಆದ ಕಾರಣವಿರುತ್ತದೆ. ಅದನ್ನು ಹುಡುಕುವ ಗೋಜಿಗೆ ಹೋಗದೆ ದೆವ್ವ, ಭೂತ, ದೆಯ್ಯ, ಪಿಶಾಚಿ ಎಂದೆಲ್ಲ ನಂಬುವ ಜನಸಾಮಾನ್ಯರ ನಂಬುಗೆಯು ಜ್ಞಾನಿಗಳನ್ನೂ, ವಿದ್ಯಾವಂತರನ್ನೂ ದುರ್ಬಲರನ್ನಾಗಿಸಿ ಮೂರ್ಖರನ್ನಾಗಿಸಿರುವುದರಲ್ಲಿ ಆಶ್ಚರ್ಯವಿಲ್ಲ. ಆದರೆ ಅಂತಹ ಸಂದರ್ಭದಲ್ಲಿ ಸೂಕ್ಷ್ಮಮತಿಯಾಗಿ ವಿಚಾರಶೀಲ ಬುದ್ಧಿಯಿಂದ ಅವಲೋಕಿಸಿದರೆ ಖಂಡಿತಾ ಸತ್ಯ ಗೋಚರಿಸದಿರದು. ಇದನ್ನು ತೇಜಸ್ವಿ ಕಾಡುಕೋಳಿಯು ತನ್ನ ಮೊಟ್ಟೆಗಳಿಗಾಗಿ ಆಡುವ ವಿಚಿತ್ರ ಆಟವನ್ನು 'ಕುಕ್ಕಟ ಪಿಶಾಚಿ' ಕತೆಯಲ್ಲಿ ಮತ್ತು 'ಅವಾಂತರದ ಸೀನಪ್ಪ' ಕತೆಯಲ್ಲಿ ಬೆಳಕಿಗೆ ತಂದಿದ್ದಾರೆ.

ತೇಜಸ್ವಿಯವರ 'ಪರಿಸರದ ಕತೆ'ಗಳಲ್ಲಿ ಪ್ರತಿಭಟನೆಯು ವಿಭಿನ್ನ ಸ್ವರೂಪದಲ್ಲಿ ವ್ಯಕ್ತವಾಗಿರುವುದನ್ನು ಹೀಗೆ ಗುರುತಿಸಬಹುದು.

1. ಪ್ರಾಣಿಗಳು ಜೀವರಕ್ಷಣೆಗಾಗಿ ಮತ್ತು ಸಂತಾನ ರಕ್ಷಣೆಗಾಗಿ ನಡೆಸುವ ಪ್ರತಿಭಟನೆ.
2. ಜನಸಾಮಾನ್ಯರು ತಾವು ನಂಬಿ ಇತರರಿಗೆ ಬಿತ್ತುವ ಮೂಢನಂಬಿಕೆಗಳ ವಿರುದ್ಧ ನಿರೂಪಕರ ಪ್ರತಿಭಟನೆ.
3. ಇದ್ದುದ್ದನ್ನು ಇದ್ದ ಹಾಗೆಯೇ ನಂಬದೆ, ಪ್ರತಿಯೊಂದನ್ನು ಪರೀಕ್ಷಿಸಿ, ಪರಾಮರ್ಶಿಸಿ, ನಿಜವನರಿತಾಗ ವ್ಯಕ್ತವಾಗುವ ಪ್ರತಿಭಟನೆ.

ಪರಿಸರದಲ್ಲಿರುವ ಪ್ರತಿಯೊಂದು ಪ್ರಾಣಿಯೂ ರಕ್ಷಣಾತಂತ್ರವನ್ನು ಹೊಂದಿದೆ. ತನ್ನ ಜೀವಕ್ಕೆ ಅಪಾಯ ಒದುಗುವ ಸಂದರ್ಭದಲ್ಲಿ ಪ್ರಾಣಿಯು ಪ್ರತಿಭಟಿಸಿ ನಿಲ್ಲುತ್ತದೆ ಎಂಬುದನ್ನು ಕಪ್ಪೆ, ಆಮೆ, ಮರಿಹಂದಿಗಳ ನಿದರ್ಶನದ ಮೂಲಕ ಸಾದರಪಡಿಸಿದ್ದಾರೆ. ಕಪ್ಪೆ ಎದುರಾಳಿಯ ಮೇಲೆ ಮೂತ್ರವನ್ನು ಸಿಂಪಡಿಸುವುದು, ಆಮೆಯು ಎದುರಾಳಿ ಸಮೀಪ ಬಂದಾಗ ಗಬ್ಬುವಾಸನೆಯನ್ನು ಹರಡುವುದು, ಮರಿಹಂದಿ ಕೇಳುಗರಿಗೆ ವಿಚಿತ್ರವೂ, ಕರ್ಕಶವೂ ಆಗುವಂತೆ ಕೂಗುವುದು ಈ ಮೂರು ಸಂದರ್ಭಗಳಲ್ಲಿ ತೇಜಸ್ವಿಯವರು ಸಾಕಿದ ನಾಯಿ ಕಿವಿ, ಕೆಲಸಗಾರನಾದ ಮಾರ ಮತ್ತು ನಿರೂಪಕರು

ಇವರೆಲ್ಲಾ ಸೋಲುತ್ತಾರೆ. ಹೀಗೆ ಪ್ರಾಣಿಗಳು ತಮಗೆ ಅಪಾಯ ಒದುಗುವ ಸಂದರ್ಭದಲ್ಲಿ ಪ್ರತಿಭಟಿಸಿ ಎದುರಾಳಿಗಳನ್ನು ಅಧೀರರನ್ನಾಗಿಸುತ್ತವೆ, ಇಲ್ಲವೇ ತೊಲಗಿಸುತ್ತವೆ. ಅದೇ ರೀತಿ ಕಾಡುಕೋಳಿಯು ತನ್ನ ಮೊಟ್ಟೆಗಳ ರಕ್ಷಣೆಗೋಸ್ಕರ ಆ ದಾರಿಯಲ್ಲಿ ನಡೆದು ಬರುವ ಪ್ರಾಣಿ, ಮನುಷ್ಯರ ಎದುರು ವಿಚಿತ್ರವಾಗಿ ಕುಣಿದಾಡಿ ಅವರ ಗಮನವನ್ನು ಬೇರೆಡೆಗೆ ಸೆಳೆದು ಅವರನ್ನು ದೂರ ಕರೆದೊಯ್ಯುತ್ತದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಮಾಡಿದ ಸ್ಥಳದಲ್ಲಿ ಮೊಲವೊಂದು ಎದುರಾಳಿಯ ವಿರುದ್ಧ ತಿರುಗಿ ನಿಂತದ್ದನ್ನು ಕಂಡು ವಿದ್ಯಾರಣ್ಯರು ಹಕ್ಕಬುಕ್ಕರಿಗೆ 'ಇದು ಗಂಡು ಮೆಟ್ಟಿನ ನಾಡು' ಎಂದು ಹೇಳಿದರು. ಇಲ್ಲಿ ಮೊಲ ಪ್ರತಿಭಟಿಸಿ ನಿಲ್ಲಲು ಏನೋ ಕಾರಣವಿರಬಹುದು. ಅದನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದರೆ ಅರಿವಿಗೆ ಬರುತ್ತಿತ್ತೇನೋ. ಏಕೆಂದರೆ ಪ್ರಾಣಿಗಳು ತನಗೆ ತನ್ನ ಮೊಟ್ಟೆ, ಮರಿಗಳಿಗೆ ತೊಂದರೆ ಆಗುವ ಸಂದರ್ಭ ಬಂದಾಗ ಸ್ಥಳ ಯಾವುದಾದರೂ ಸರಿಯೇ ಪ್ರತಿಭಟಿಸಿ ನಿಲ್ಲುತ್ತವೆ. ಬೆಕ್ಕನ್ನು ನಾಯಿಯೊಂದು ಅಟ್ಟಿಸಿಕೊಂಡು ಬಂದಾಗ ಕೊನೆಗೆ ಬೆಕ್ಕು ತನ್ನ ಮೈಯ ರೋಮಗಳನ್ನು ನಿಮಿರಿಸಿ, ಕೋರೆಹಲ್ಲುಗಳನ್ನು ಪ್ರದರ್ಶಿಸಿ ತಿರುಗಿ ನಿಲ್ಲುವುದನ್ನು ಸಾಮಾನ್ಯವಾಗಿ ಎಲ್ಲ ಕಡೆ ನೋಡುತ್ತೇವೆ. ಹೀಗೆ ಪ್ರಾಣಿಗಳು ತಮ್ಮ ಮೊಟ್ಟೆ, ಮರಿಗಳಿಗೆ ತೊಂದರೆಯಾಗುವ ಸಂದರ್ಭದಲ್ಲಿ, ಪ್ರಾಣರಕ್ಷಣೆ ಸಂದರ್ಭದಲ್ಲಿ ಪ್ರತಿಭಟಿಸಿ ನಿಲ್ಲುತ್ತವೆ ಎಂಬುದನ್ನು ತೇಜಸ್ವಿಯವರ ಪರಿಸರದ ಕತೆಗಳು ಮನಗಾಣಿಸುತ್ತವೆ.

ಮಾಸ್ತಿ, ಬೈರ, ಎಂಗ್ಟ, ಗಾಡ್ಲಿ, ಪ್ಯಾರ, ಸೀನಪ್ಪ ಇಂತಹ ಪಾತ್ರಗಳನ್ನು ಕತೆಗಳಿಗೆ ತರುವುದರ ಮೂಲಕ ತೇಜಸ್ವಿಯವರು ನವ್ಯಕಥಾಸಾಹಿತ್ಯಕ್ಕಿಂತ ಭಿನ್ನವಾದ ಸಾಹಿತ್ಯ ನಿರ್ಮಾಣದತ್ತ ಮುಖ ಮಾಡಿದರು. ನಗರಕೇಂದ್ರಿತ, ಮಧ್ಯಮವರ್ಗದ ವಿದ್ಯಾವಂತ ಯುವ ಪಾತ್ರಗಳೇ ತುಂಬಿದ್ದ ನವ್ಯ ಕಥಾಸಾಹಿತ್ಯವು ಸತ್ವಹೀನವಾಗುವ ಕಾಲಕ್ಕೆ ತೇಜಸ್ವಿ ಹಳ್ಳಿಯ ಅನಕ್ಷರಸ್ಥ ಅನುಭವಿ ಪಾತ್ರಗಳನ್ನು ಕತೆಗೆ ತಂದರು. ಶಿಲಾಯುಗದ ಮಾನವರಂತೆ ಬದುಕುತ್ತಿದ್ದ ಮಲೆನಾಡಿನ ಕಾಡುಜನರ ಜೀವನ, ನಂಬಿಕೆ, ಆಚರಣೆ, ಪ್ರಕೃತಿಯೊಂದಿಗಿನ ಒಡನಾಟ, ಪ್ರಾಣಿ, ಪಕ್ಷಿ, ಜಲಚರ, ಜೀವರಾಶಿಗಳೊಂದಿಗಿನ ಸಂಬಂಧ ಇವುಗಳನ್ನು ಕತೆಯ ರೂಪದಲ್ಲಿ ಕಟ್ಟಿದ್ದಾರೆ. ನಗರದತ್ತ ವಲಸೆ ಹೋಗುವ ಯುವ ಮನಸ್ಸುಗಳಿಗೆ ಹಳ್ಳಿಯ, ಕಾಡಿನ ಬದುಕಿನ ಸಾಧ್ಯತೆಗಳನ್ನು ತೆರೆದುತೋರಿಸಿದ್ದಾರೆ. ಬದುಕು ಮುಖ್ಯವೇ ಹೊರತು ಅದು ಎಲ್ಲಿ ಎಂಬುದಲ್ಲ. ನಗರದ ಬದುಕು ಉನ್ನತವೆಂದೂ; ಹಳ್ಳಿಯ, ಕಾಡಿನ ಬದುಕು ತುಚ್ಛ, ಅವನತಿ ಎಂದೂ ಭಾವಿಸುವುದರಲ್ಲಿ ಅರ್ಥವಿಲ್ಲ. ಮನುಷ್ಯ ಎಲ್ಲೇ ಬದುಕಿದರೂ ತನ್ನ ಸುತ್ತಮುತ್ತಲ ಪರಿಸರ, ಪಶುಪಕ್ಷಿಗಳೊಂದಿಗೆ ಒಡನಾಡಿಯಾಗಿ ಬದುಕುವುದನ್ನು ಕಲಿಯಬೇಕು ಎಂಬ ಆಶಯ ತೇಜಸ್ವಿಯವರ ಕತೆಗಳಲ್ಲಿ ವ್ಯಕ್ತವಾಗುತ್ತದೆ. ಸ್ಪಂದಿಸುವ

ಗುಣ ಅವರ ಸಾಹಿತ್ಯದ ಮುಖ್ಯ ಲಕ್ಷಣ. ತನ್ನ ಸುತ್ತಲ ಜನರು, ಗಿಡಮರಬಳ್ಳಿ, ಪ್ರಾಣಿಪಕ್ಷಿಕ್ರಿಮಿಕೀಟಗಳಾದಿಯಾಗಿ ಎಲ್ಲವಕ್ಕೂ ಮನುಷ್ಯ ಸ್ಪಂದಿಸಬೇಕು. ಆಗ ಅವೂ ನಮ್ಮೊಂದಿಗೆ ಸ್ಪಂದಿಸುತ್ತವೆ. ಇದುವೇ ಪ್ರಕೃತಿಜೀವನಕ್ಕೆ ಹತ್ತಿರವಾಗುವುದಕ್ಕೆ ಕಾರಣವಾಗುವುದು. ಮಕ್ಕಳಲ್ಲಿ ಈ ಗುಣವನ್ನು ಬೆಳೆಸುವ ಬಗೆಯನ್ನು 'ಸುಸ್ಮಿತ ಮತ್ತು ಹಕ್ಕಿಮರಿ' ಕತೆಯಲ್ಲಿ ಕಾಣಬಹುದು.

ತೇಜಸ್ವಿ ಅವರು **'ಮೂಲಿಕೆ ಬಳ್ಳಿಯ ಸುತ್ತ'** ಕತೆಯಲ್ಲಿ ಭಾರತೀಯ ಆಯುರ್ವೇದವು ಅವನತಿಯತ್ತ ಸಾಗಲು ಕಾರಣವನ್ನು ಶೋಧಿಸಲು ಪ್ರಯತ್ನಿಸಿದ್ದಾರೆ. ಕಾಡು ಜನರಿಗೆ ಕಾಡಿನ ಸಸ್ಯಗಳ ಔಷಧೀಯ ಗುಣ ತಿಳಿದಿದ್ದರೂ ಅದನ್ನು ಹೇಳುವುದಿಲ್ಲ. ಹೇಳಿದರೆ ಅದರ ಗುಣವೇ ನಾಶವಾಗುತ್ತದೆ ಎಂಬ ಮೂಢನಂಬಿಕೆಯಿಂದ ಎಷ್ಟೋ ಮೂಲಿಕೆಗಳ ವಿಚಾರ ಇವತ್ತು ಕಣ್ಮರೆಯಾಗಿದೆ. ಆದರೆ ಜನಸಾಮಾನ್ಯರು ಔಷಧೀಯ ಸಸ್ಯಗಳ ಮಹತ್ವವನ್ನು ಅರಿಯದೆ, ಸುಮ್ಮನೆ ನಂಬಿಕೆಯಾಗಿ ಬಳ್ಳಿಯನ್ನು ಮರಕ್ಕೆ ಕಟ್ಟುವುದು ಮಾಡುತ್ತಿರುತ್ತಾರೆ. ಇದರ ಬಗ್ಗೆ ವಿಚಾರಿಸಿದಾಗ ಯಾರೂ ಹೇಳುವುದಿಲ್ಲ. ಆದರೆ ನಿರೂಪಕರು ಶೋಧನೆಗೆ ಇಳಿಯುತ್ತಾರೆ. ಕೊನೆಗೆ ಆ ಬಳ್ಳಿಯನ್ನು ಬಗೆದು ಬೇರಿನಲ್ಲಿದ್ದ ಗೆಡ್ಡೆಯಿಂದ ಮೂಲವ್ಯಾದಿಗೆ ಔಷಧಿ ತಯಾರಿಸುತ್ತಾರೆ ಎಂಬ ಸತ್ಯ ಗೋಚರವಾಗುತ್ತದೆ. ಆದರೆ ಜನರು ಇದರ ಗೋಜಿಗೆ ಹೋಗದೆ ಮೂಢರಾಗಿ ನಂಬಿ ಪೂಜಿಸುವುದು, ಮರಕ್ಕೆ ಕಟ್ಟುವುದು, ಸಂಗ್ರಹಿಸಿ ಇಡುವುದು ಹೀಗೆಯೇ ಬದುಕಿಕೊಂಡು ಬರುತ್ತಾರೆ. ಅದರ ಉಪಯೋಗವನ್ನು ತಾವೂ ಪಡೆದುಕೊಳ್ಳುವುದಿಲ್ಲ, ಅಗತ್ಯವಾದವರಿಗೂ ಒದಗಿಸುವುದಿಲ್ಲ. ಹೀಗೆ ತಲೆಮಾರಿನಿಂದ ತಲೆಮಾರಿಗೆ ಆಯುರ್ವೇದ ಜ್ಞಾನವು ಕ್ಷೀಣಿಸುತ್ತಾ ಬಂದಿರುವುದನ್ನು ಕತೆ ಮನಗಾಣಿಸುತ್ತದೆ. ಅಂಧ ನಂಬಿಕೆ ಪ್ರಬಲವಾದಾಗ ವೈಚಾರಿಕತೆ ಸೋಲುತ್ತದೆ ಎಂಬುದನ್ನು 'ಕಾಳಪ್ಪನ ಕೋಬ್ರ ಕತೆ' ಮತ್ತು 'ಸಂಬಳಕ್ಕೆ ನೆಕ್ಕಿಕೊಂಡ ದೆವ್ವ ಕತೆ'ಗಳು ನಿದರ್ಶನವಾಗಿವೆ. ಕಾಳಪ್ಪ ಮುಂಬೈಯಲ್ಲಿ ಇದ್ದು ಬಂದವನಾದರೂ ಹಳ್ಳಿಯ ಮೂಢನಂಬಿಕೆಗಳಿಂದ ಮುಕ್ತನಾದವನಲ್ಲ. ಅವನ ಮನೆಗೆ ನಾಗರ ಹಾವೊಂದು ಸೇರಿಕೊಳ್ಳುತ್ತದೆ. ಆಗ ಕಾಳಪ್ಪ ಅದಕ್ಕಾಗಿ ಪೂಜೆ ಮಾಡಿಸುತ್ತಾನೆ. ಕೊನೆಗೆ ಅದೇ ಹಾವು ಕಚ್ಚಿ ಅವನ ಅಪ್ಪ ಸಾಯುತ್ತಾನೆ. ಮನೆಯಲ್ಲಿ ಆ ಹಾವನ್ನು ಹುಡುಕಿದರೆ ಸಿಗುವುದಿಲ್ಲ. ಅದಕ್ಕೆ ಕಾಳಪ್ಪನ ತಂದೆ ಯಾವುದೋ ಹಾವನ್ನು ಕೆಣಕಿದ್ದೇ ಕಾರಣ ಎಂದು ತಿಳಿಯುತ್ತದೆ. ಇದನ್ನು ಕೇಳಿ ನಿರೂಪಕರ ಮನೆಯಲ್ಲಿ ಕೆಲಸ ಮಾಡುತ್ತಿದ್ದವರು ತಾವು ಹಾವುಗಳಿಗೆ ಅತಿ ಪೆಟ್ಟು ಮಾಡಿದ್ದನ್ನು ನೆನೆದು ಹೆದರುತ್ತಾರೆ. ಅಂಧಶ್ರದ್ಧೆ ಎಂಬುದು ಒಬ್ಬರಿಂದ ಒಬ್ಬರಿಗೆ ಹೀಗೆ ಸಾಂಕ್ರಾಮಿಕವಾಗಿ ಹರಡುವುದನ್ನು ತೇಜಸ್ವಿಯವರು ಕತೆಗಳಲ್ಲಿ ತಂದಿದ್ದಾರೆ.

ಒಂದು ಸಮಸ್ಯೆಯನ್ನು ಸುಲಭವಾಗಿ ಪರಿಹರಿಸಿದ ನಿರೂಪಕರಿಗೂ, ಅದೇ

ಸಮಸ್ಯೆಯನ್ನು ಪರಿಹರಿಸಲು ಹೋಗಿ ಕಷ್ಟಕ್ಕೆ ಸಿಲುಕಿದ ಗಾಡ್ಲಿಗೂ ವ್ಯತ್ಯಾಸವಿದೆ. ಇದಕ್ಕೆ ಕಾರಣ ಗಾಡ್ಲಿಯ ಮೂಢನಂಬಿಕೆ; ನಿರೂಪಕರ ವೈಚಾರಿಕತೆ. ತೋಟಕ್ಕೆ ಕೋತಿಗಳು ದಾಳಿ ಮಾಡಿದಾಗ ಏನು ಮಾಡಿದರೂ ತೋಟದಿಂದ ಕೋತಿಗಳು ಹೋಗುವುದಿಲ್ಲ. ಏಲಕ್ಕಿ ಬಳ್ಳಿಯನ್ನೇ ಹಾಳು ಮಾಡಿರುತ್ತವೆ. ಇದರಿಂದ ಕೋಪಗೊಂಡ ನಿರೂಪಕರು ಒಂದು ಕೋತಿಗೆ ಕೋವಿಯಿಂದ ಹೊಡೆದುರುಳಿಸುತ್ತಾರೆ. ಕೂಡಲೇ ಉಳಿದ ಕೋತಿಗಳೆಲ್ಲ ತೋಟ ಬಿಟ್ಟು ಓಡಿ ಹೋಗುತ್ತವೆ. ಆದರೆ ಸಸಿತೋಟಕ್ಕೆ ದಾಳಿ ಇಟ್ಟ ಕೋತಿಗಳನ್ನು ಗಾಡ್ಲಿ ಓಡಿಸಲಾಗುವುದಿಲ್ಲ. ಇದಕ್ಕೆ ಕಾರಣ ಗಾಡ್ಲಿ ಕೋತಿಯನ್ನು ಕೋತಿಯಂತೆ ನೋಡುತ್ತಿಲ್ಲ. ಅವುಗಳನ್ನು ಹನುಮಂತನ ಸಂತತಿ ಎಂದೂ, ಪೂಜ್ಯನೀಯ ಎಂದೂ ನಂಬಿರುವುದು. ಇದು ಗಾಡ್ಲಿ ಎರಡು ದಿನ ಬೋನಿನಲ್ಲಿ ಸಿಲುಕಿ ಉಪವಾಸ ಸಾಯುವಂತಾಗಲು ಕಾರಣವಾಗುತ್ತದೆ.

ಪೂರ್ಣಚಂದ್ರ ತೇಜಸ್ವಿಯವರು 'ಪರಿಸರದ ಕತೆ' ಸಂಕಲನದಲ್ಲಿ ಸರಳವಾಗಿ ಸುಲಲಿತ ಭಾಷೆಯಲ್ಲಿ ಕತೆಗಳನ್ನು ನಿರೂಪಿಸಿದ್ದಾರೆ. ಅವರ ಕತೆಗಳ ಓದು ಆಯಾಸ ಎನಿಸುವುದಿಲ್ಲ. ಸಂಭಾಷಣೆಗಳಂತೂ ಆಲಿಸಿದಷ್ಟು ಹಾಸ್ಯವನ್ನು ಸ್ಫುರಿಸುತ್ತವೆ. ವೈಚಾರಿಕತೆಯನ್ನು ತುಂಬಿಕೊಂಡು ಬೈಯ್ಗುಳ ಶೈಲಿಯ ಮಾತುಗಳು ಚಿಂತನೀಯವೂ ಆಗಿವೆ. ಅನಕ್ಷರಸ್ಥ ಕಾಡು ಜನರನ್ನು ಸಂಬಾಳಿಸಿಕೊಂಡು ಅವರೊಳಗಿನ ಜೀವನಾನುಭವವನ್ನು ಹೊರತೆಗೆಯುತ್ತಾ ಅವರ ಮೂಢನಂಬಿಕೆಗಳಿಗೆ ಉಗಿಯುತ್ತ, ಗದರಿಕೊಂಡು ಕೆಲಸ ಮಾಡಿಸುವ ಪರಿ ಹಳ್ಳಿಗಳ ದೇಶವಾದ ಭಾರತದಲ್ಲಿ ಅಕ್ಷರ ಕಲಿತವರು ಜನಸಾಮಾನ್ಯರೊಡನೆ ಹೇಗೆ ಬೆರೆತು ಬದುಕಬೇಕೆಂಬುದಕ್ಕೆ ಸಾಕ್ಷಿಯಾಗಿದೆ.

ಆಕರಗಳು :

1. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಪರಿಸರದ ಕತೆ, 1991, ಪುಸ್ತಕ ಪ್ರಕಾಶನ, ಮೈಸೂರು
2. ಕರೀಗೌಡ ಬೀಚನಹಳ್ಳಿ, ಸಂಕಥನ, 2010, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
3. ಕರೀಗೌಡ ಬೀಚನಹಳ್ಳಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಸಾಹಿತ್ಯ ಅಕಾಡೆಮಿ, ನವದೆಹಲಿ, 2015
4. ಪ್ರಸಾದ್ ರಕ್ಷಿದಿ, ನಮ್ಮ ನಡುವಿನ ತೇಜಸ್ವಿ, 2016, ಅಭಿರುಚಿ ಪ್ರಕಾಶನ, ಬೆಂಗಳೂರು

***

ಬೊಂಬೆಯ ಲಕ್ಕನ ಹರಿಶ್ಚಂದ್ರ ಸಾಂಗತ್ಯ

ಡಾ. ವಾಣಿಶ್ರೀ ಬಿ. ಎಂ.

ಎಮ್. ಇ. ಎಸ್. ಕಲೆ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು,

ಮಲ್ಲೇಶ್ವರಂ, ಬೆಂಗಳೂರು-560003

ಭಾರತ ದೇಶವು ಪರಮ ಪವಿತ್ರ ನಾಡು ಇಲ್ಲಿ ಭಗವಂತನು ಅವತಾರಗಳನ್ನೆತ್ತಿದ್ದಾನೆ. ಅವನ ಭಕ್ತರೂ ಸಹ ಕಾಲ ಕಾಲಕ್ಕೆ ಅವತರಿಸಿ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿದಿದ್ದಾರೆ. ಅನೇಕ ಮಹಾಪುರುಷರು ಆಗಿ ಹೋದ ಈ ಭೂಮಿಯಲ್ಲಿ ಹಲವಾರು ಘನತೆವೆತ್ತ ರಾಜ ವಂಶಗಳು ವೈಭವದಿಂದ ಆಳಿದ ಇತಿಹಾಸವಿದೆ. ಅಂತಹ ಒಂದು ವಂಶ ಇಕ್ಷ್ವಾಕು. ಈ ಸೂರ್ಯವಂಶದ ಮಹಾನ್ ದೊರೆಗಳಲ್ಲಿ ಸತ್ಯ ಹರಿಶ್ಚಂದ್ರನೆಂದೇ ಹೆಸರಾದ ಹರಿಶ್ಚಂದ್ರ ಭೂಪಾಲನು ತನ್ನ ಕುಲಕ್ಕೇ ಅಜರಾಮರ ಕೀರ್ತಿ ತಂದ ಮಹಾ ಪುರುಷನಾಗಿದ್ದಾನೆ. 'ಸತ್ಯಂ ವದ ಧರ್ಮಂ ಚರ' ಎಂಬ ವಾಕ್ಯವನ್ನು ಅಕ್ಷರಶಃ ಪಾಲಿಸಿ ಸತ್ಯದ ಮಹತ್ವವನ್ನು ಸಾರಿದ್ದಾನೆ. ಒಂದೊಮ್ಮೆ ಹರಿಶ್ಚಂದ್ರ ಒಂದೇ ಒಂದು ಅನೃತ ವಾಕ್ಯವನ್ನಾಡಿದ್ದರೂ ಇಂದು ಅವನ ಹೆಸರು ಉಳಿಯುತ್ತಿರಲಿಲ್ಲ. ರಾಜಾ ಸತ್ಯವ್ರತ(ತ್ರಿಶಂಕು)ವಿನ ಮಗನಾದ ಹರಿಶ್ಚಂದ್ರ ಸತ್ಯವನ್ನೇ ವ್ರತವಾಗಿ ಪಾಲಿಸಿದವನು. ಧರ್ಮರಾಯ, ನಳ, ಮಾಂಧಾತ, ಸೀತೆ ದ್ರೌಪದಿ ಸಾವಿತ್ರಿ ಮೊದಲಾದ ಲೋಕೋತ್ತರ ಮಹಿಮಾನ್ವಿತ ವ್ಯಕ್ತಿಗಳಂತೆ ಹರಿಶ್ಚಂದ್ರನೂ ಮಹತ್ವದ ಸ್ಥಾನವನ್ನು ಗಳಿಸಿದ್ದಾನೆ. ಸಪ್ತದ್ವೀಪ ವಸುಂಧರೆಯನ್ನು ಆಳಿದ ರಾಜಾ ಹರಿಶ್ಚಂದ್ರನ ಆದರ್ಶ ಪ್ರಾಚೀನ ಕಾಲದಲ್ಲಿ ಮಾತ್ರವಲ್ಲದೆ ಇಂದಿನ ಯುಗದಲ್ಲೂ ಸಲ್ಲುವಂತಿದೆ. ಭಾರತೀಯ ವಾಙ್ಮಯದಲ್ಲಿ ರಾಜಾ ಹರಿಶ್ಚಂದ್ರನ ಕಥೆ ವ್ಯಾಪಕವಾಗಿ ಕಂಡು ಬರುತ್ತದೆ. ವೇದ, ಪುರಾಣ, ಇತಿಹಾಸ, ಪದ್ಮ ಪುರಾಣ ಕಾವ್ಯಗಳಲ್ಲಿ ಹರಿಶ್ಚಂದ್ರನ

ಉಲ್ಲೇಖ ಕಂಡು ಬರುತ್ತದೆ. ವೈದಿಕ ಸಾಹಿತ್ಯದಿಂದ ಕನ್ನಡ ಕಾವ್ಯಗಳವರೆಗೆ ಹರಿಶ್ಚಂದ್ರನ ವೃತ್ತಾಂತ ಕಂಡು ಬರುತ್ತದೆ.

ಹರಿಶ್ಚಂದ್ರೋಪಾಖ್ಯಾನ: ಮೊದಲಿಗೆ ಐತರೇಯ ಬ್ರಾಹ್ಮಣ, ಸಾಂಖ್ಯಾಯನ ಶ್ರೌತಸೂತ್ರ ಮತ್ತು ವೇದಾರ್ಥ ದೀಪಿಕೆ ಪದ್ಮಪುರಾಣ, ಭಾಗವತ, ಮಹಾಭಾರತಗಳಲ್ಲಿ ಕಂಡು ಬರುತ್ತದೆ. ಸಂಸ್ಕೃತ ವಾಙ್ಮಯದಲ್ಲಿ ವೈವಿಧ್ಯಪೂರ್ಣವಾಗಿ ಕಂಡು ಬರುವ ಹರಿಶ್ಚಂದ್ರನ ಕತೆ ಕನ್ನಡದಲ್ಲಿ ಪರಿಪೂರ್ಣತೆ ಕಂಡುಕೊಂಡದ್ದು ರಾಘವಾಂಕನ ಹರಿಶ್ಚಂದ್ರ ಚರಿತ್ರೆಯಲ್ಲಿ. ರಾಘವಾಂಕ ವಾರ್ಧಕ ಷಟ್ಪದಿ ಬಂಧದಲ್ಲಿ ಹರಿಶ್ಚಂದ್ರನ ಸತ್ಯಸಂಧತೆ, ಕಠೋರ ಶೋಧನೆಗೂ ಜಗ್ಗದೆ ಎದೆಗೊಟ್ಟು ಎದುರಿಸಿ ವಿಜಯಶಾಲಿಯಾದ ಧೀರೋದಾತ್ತನನ್ನಾಗಿ ರಾಘವಾಂಕ ಚಿತ್ರಿಸಿದ್ದಾನೆ. ರಾಘವಾಂಕನ ಈ ಕೃತಿ ಕನ್ನಡಿಗರಿಗೆ ಬಹು ಪ್ರಿಯವಾದ ಕಾವ್ಯವಾಗಿ ಮುಂದಿನ ಕವಿಗಳನ್ನು ವಿಶೇಷವಾಗಿ ಆಕರ್ಷಿಸಿತು. ಷಟ್ಪದಿ ಯುಗದ ನಂತರ ಸಾಂಗತ್ಯ ವಲಯ ಪ್ರಾರಂಭವಾದ ನಂತರ ಹರಿಶ್ಚಂದ್ರನ ಕಥೆಯನ್ನು ಸರಳವಾಗಿ ಪಾಮರ ಗ್ರಾಹ್ಯವಾಗಿ ನಿರೂಪಿಸಲು ಹಲವು ಕವಿಗಳು ಹರಿಶ್ಚಂದ್ರನ ಕಥೆಯನ್ನು ಸಾಂಗತ್ಯದಲ್ಲಿ ರಚಿಸಿದ್ದಾರೆ. ರಾಘವಾಂಕನ ಕಾವ್ಯವೇ ಈ ಕವಿಗಳಿಗೆ ಸ್ಫೂರ್ತಿ.

ಹರಿಶ್ಚಂದ್ರನ ಸಾಂಗತ್ಯಗಳನ್ನು ಬರೆದ ಕವಿಗಳು ನಾಲ್ವರು.

1. ರಾಮರಸ ವಿರೂಪಾಕ್ಷ, 2. ಬೊಂಬೆಯ ಲಕ್ಕ 3. ಓದುವ ಗಿರಿಯ ಮತ್ತು 4. ಹಲಗ

ಈ ನಾಲ್ಕು ಜನ ಕವಿಗಳೂ ರಾಘವಾಂಕನನ್ನು ಯಥಾವತ್ತಾಗಿ ಅನುಸರಿಸಿದ್ದಾರೆ "ಇವರೆಲ್ಲ ರಾಘವಾಂಕನನ್ನು ಬಹಳ ನಿಕಟವಾಗಿ ಅನುವರ್ತಿಸಿದ್ದಾರೆ. ಯಾವ ರೀತಿಯಲ್ಲೂ ಪರಿವರ್ತಿಸಿಲ್ಲ. ಅವನು ಹೇಳಿದ ಕಥೆಯನ್ನೇ ಸಾಂಗತ್ಯ ರೂಪದಲ್ಲಿ ಬಳಸಿದ್ದಾರೆ, ಬೆಳೆಸಿಲ್ಲ ಎಂದು ಒಟ್ಟಿನ ಮೇಲೆ ಹೇಳಬಹುದು".[1] ಇವರ ಸಾಂಗತ್ಯಕೃತಿಗಳ ಪಾಠ ನಿರ್ಣಯಕ್ಕೆ ಹರಿಶ್ಚಂದ್ರ ಕಾವ್ಯದಿಂದ ನೆರವು ಪಡೆಯಬಹುದೆಂಬುದು ವಿದ್ವಾಂಸರ ಅಭಿಪ್ರಾಯ. ಈ ನಾಲ್ಕು ಜನರಲ್ಲಿ ರಾಮರಸ ವಿರೂಪಾಕ್ಷ ಬ್ರಾಹ್ಮಣ ಶೈವ ಕವಿ. ಮೊದಲ ಸಾಂಗತ್ಯಕಾರ. "ಕನ್ನಡದಲ್ಲಿ ಹರಿಶ್ಚಂದ್ರ ಕಥೆಯನ್ನು ಪ್ರತಿಪಾದಿಸಿದ ಬ್ರಾಹ್ಮಣ ಕವಿಗಳು ಮತ್ತಾರೂ ಇಲ್ಲವೆಂದು ತೋರುತ್ತದೆ"[2]

ಬೊಂಬೆಯ ಲಕ್ಕ ಹರಿಶ್ಚಂದ್ರ ಸಾಂಗತ್ಯ ರಚಿಸಿದ ಮತ್ತೊಬ್ಬ ಕವಿ ಹೆಸರಿನಿಂದ ಈತನು ಸೂತ್ರದ ಬೊಂಬೆಗಳನ್ನು ಆಡಿಸುತ್ತಿರಬಹುದೆಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಕೃತಿಯಲ್ಲಿ ಕವಿಯ ವಿಚಾರ ಹೆಚ್ಚಾಗಿ ತಿಳಿದು ಬರುವುದಿಲ್ಲ. ಮೊದಲನೆಯ ಸಂಧಿ ಆರನೆಯ ಪದ್ಯದಲ್ಲಿ

ಆದಿಯ ಕಥೆ ವೇದಶಾಸ್ತ್ರಗಳೆಂದು ತಿಳಿವುದು
ಆದಿಯ ಪುಣ್ಯ ಸಂಸ್ಕೃತಿಯ
ಮೇದಿನಿಗೊರೆದ ಬೊಂಬೆಯ ಲಕ್ಕರ ಧರ್ಮರ
ಪಾದವೆ ಗತಿಯೆಂದು ನೆನೆದು.

ಎಂದು ಕವಿ ಹೇಳಿ ಕೊಂಡಿದ್ದಾನೆ. ಕವಿಯ ಕಾಲ ಕ್ರಿ.ಶ. 1538 ಎಂದು ಈತನ ಕಾವ್ಯದಿಂದ ತಿಳಿದು ಬರುತ್ತದೆ. ಐದು ಸಂಧಿಗಳಲ್ಲಿ ರಚಿತವಾಗಿರುವ ಈ ಕೃತಿಗೆ ಮೂಲ ಯಾವುದೆಂದು ಕವಿ ತಿಳಿಸಿಲ್ಲ. ಆದರೂ ಇದನ್ನು ಓದುವಾಗ ರಾಘವಾಂಕನ ಕಾವ್ಯವೇ ಇದಕ್ಕೆ ಮೂಲವೆಂದು ಸುಲಭವಾಗಿ ಗ್ರಹಿಸಬಹುದು. "ಇವನ ಕಾವ್ಯವನ್ನು ರಾಘವಾಂಕನ ಹರಿಶ್ಚಂದ್ರ ಕಾವ್ಯದ ಸಾಂಗತ್ಯರೂಪ ಎಂದು ಹೇಳಬಹುದು"[3]. ಹರಿಶ್ಚಂದ್ರ ಕಾವ್ಯದ ಪದ, ಪಾದ, ಪದ್ಯಗಳೇ ಈ ಸಾಂಗತ್ಯದಲ್ಲಿ ಪುನರಾವರ್ತಿತವಾಗಿವೆ. ಷಟ್ಪದಿಯ ಕೃತಿಯನ್ನು ಸಾಂಗತ್ಯಕ್ಕೆ ಮಾರ್ಪಡಿಸಿ ಸುಲಭ ಗ್ರಾಹ್ಯವೂ ಸರಳವೂ ಆಗಿರುವಂತೆ ರಚಿಸಿದ್ದಾನೆ. "ಇದನ್ನು ಹಾಡಿದಾಗ ಇನ್ನೂ ರಸಭರಿತವಾಗಿ ಆನಂದ ಉಂಟುಮಾಡುತ್ತದೆ."[4]

ಪರಶಿವನ ಸ್ತುತಿಯೊಂದಿಗೆ ಪ್ರಾರಂಭವಾಗುವ ಈ ಕೃತಿಯಲ್ಲಿ ಗಣೇಶನನ್ನು ಬೊಂಬೆಯಲಕ್ಕ ಗಣಪತಿ, ಶಾರದೆಯನ್ನು ಸ್ತುತಿಸಿ ಕಾವ್ಯ ಪ್ರಾರಂಭಿಸಿದ್ದಾರೆ. ನೇರವಾಗಿ ದೇವಸಭೆಯಿಂದ ಕತೆ ಆರಂಭವಾಗುತ್ತದೆ.

ಮುರಿಗೊಂಬು ಮೊರಗಿವಿ ಮೆರೆವೆ ಚೆಲ್ವಧರ
ತುರುಗಿದ ಮತಿ ಮುದ್ದು ಮೊಗದ
ಕರಿಗೊರಳನ ಮೋಹದ ರಾಣೀಯ ಕಂದ
ನೆರೆ ಜಾಣ ಸಲಹು ಸನ್ಮತಿಯ

ಎಂದು ಸ್ತುತಿಸಿ, ಮುಂದುವರೆದು 'ಉತ್ತಮ ರವಿಕುಲೋದ್ಭವ ಹರಿಶ್ಚಂದ್ರನ ಭಕ್ತಿಯ ಕಥೆಯನ್ನು ಪೇಳುವೆನು. ಎನ್ನುತ್ತಾನೆ. ರಾಘವಾಂಕ ಅಯೋಧ್ಯೆಯ ವರ್ಣನೆಯಿಂದ ಪ್ರಾರಂಭ ಮಾಡುತ್ತಾನೆ. ರಾಮರಸ ವಿರೂಪಾಕ್ಷ ಲೋಮಶ ಮುನಿಗಳು ಧರ್ಮರಾಯನಿಗೆ ವನವಾಸ ಕಾಲದಲ್ಲಿ ಹೇಳಿದ ಕಥೆಯಂತೆ ಹೇಳಿದ್ದಾನೆ. ಬೊಂಬೆಯಲಕ್ಕನು ದೇವೇಂದ್ರನ ಅಮರಾವತಿಯಲ್ಲಿ ನಡೆದ ಸಭೆಯಲ್ಲಿ ವಸಿಷ್ಠರಿಗೂ ವಿಶ್ವಾಮಿತ್ರರಿಗೂ ನಡೆದ ವಾಗ್ವಾದದಿಂದ ಪ್ರಾರಂಭಿಸಿದ್ದಾನೆ.

ದೇವೇಂದ್ರನ ಸಭೆಯಲ್ಲಿ ದೇವತೆಗಳ ಸಮ್ಮುಖದಲ್ಲಿ ಕಣ್ವ, ರೋಮಜ, ವಾಸಿಷ್ಠ, ಕೌಶಿಕ, ಮೊದಲಾದ ಮುನಿಗಳೂ ನೆರೆದಿದ್ದರು. ಧರೆಯು ಹುಟ್ಟಿದಂದಿನಿಂದ ರವಿಕುಲ ವಂಶಕ್ಕೆ ಗುರುವಾಗಿರುವ ವಸಿಷ್ಠರಲ್ಲಿ ಇನ ಕುಲದಲ್ಲಿ ಪರಾಕ್ರಮಿಯಾಗಿ

ಅನೃತವನ್ನಾಡದ ಶೂರರಾರೆಂದು ಪ್ರಶ್ನೆ ಮಾಡುತ್ತಾನೆ. ಹರಿಶ್ಚಂದ್ರನ ನಾಲಿಗೆಯೊಳು ಹುಸಿಯಿಲ್ಲ ಎಂಬ ವಸಿಷ್ಠರ ಮಾತು ಕಿವಿಗೆ ಬಿದ್ದ ಕ್ಷಣ ವಿಶ್ವಾಮಿತ್ರರು ಘುಡುಘುಡಿಸಿ ಉರಿಯುಗುಳುತ್ತಾ ಹರಿಶ್ಚಂದ್ರನ ನುಡಿ ಈ ಸಭೆಯಲ್ಲೇಕೆ ಎನ್ನುತ್ತಾರೆ. ವಸಿಷ್ಠರಿಗೆ ತನ್ನ ಶಿಷ್ಯನ ಮೇಲೆ ಅದೆಷ್ಟು ಅಪಾರ ನಂಬಿಕೆ ಎಂದರೆ ನೆಲ ಬಯಲಾಗಿ ಸಮುದ್ರ ಬತ್ತಿ ಹೋದರೂ, ಕುಲಗಿರಿಗಳು ಚಲಿಸಿದರೂ, ಯುದ್ಧದಲ್ಲಿ ಶಿವನೇ ಸೋತು ಹೋದರೂ ಹರಿಶ್ಚಂದ್ರನ ನಾಲಿಗೆಯಲ್ಲಿ ಹುಸಿಯ ಹೊಲೆಯಿಲ್ಲ ಎಂಬಷ್ಟು. ಇದನ್ನು ಕೇಳೆ ವಿಶ್ವಾಮಿತ್ರರು ಇನ್ನೂ ಕೆರಳಿದರು.

ಪುತ್ರನಿಲ್ಲದೆಡೆ ಪಾತಕವೆಂದು ಮುನಿಗಳ
ಪುತ್ರನ ಬೇಡಿ ವಂದಿಸಲು
ಇತ್ತರೆ ಮರಳಿ ಪಶುವ ಮಾಡುವೆನೆಂದು
ನಿತ್ಯವ ಕೊಡದ ಪಾತಕರು.

ಎಂದ ವಿಶ್ವಾಮಿತ್ರರ ಮಾತಿಗೆ ಹರಿಶ್ಚಂದ್ರನನ್ನು ಪರೀಕ್ಷಿಸಲು ಶಿವನಿಗೂ ಅಳವಲ್ಲ ಒಂದೊಮ್ಮೆ ಹರಿಶ್ಚಂದ್ರ ಹುಸಿದರೆ

ಕೇಳು ವಿಶ್ವಾಮಿತ್ರ ಹರಿಶ್ಚಂದ್ರ ಹುಸಿದರೆ
ಕೇಳಯ್ಯ ಎನ್ನ ಭಾಷೆಯನು
ತಾಳಿದ ರೂಪು ಮಂತ್ರ ಜಪಗಳ ಬಿಟ್ಟು
ಕಾಳಾಗಿ ಸುರೆ ಹೊತ್ತು ನಡೆವೆ.

ಎಂಬ ವಸಿಷ್ಠರ ಘೋರ ಪ್ರತಿಜ್ಞೆಗೆ ವಿಶ್ವಾಮಿತ್ರನು ಮನದಲ್ಲೇ ನೊಂದುಕೊಳ್ಳುತ್ತಾನೆ. ಈ ಪದ್ಯದಲ್ಲಿ ರಾಘವಾಂಕನ ಕೃತಿಯಲ್ಲಿ ವಸಿಷ್ಠರು ಮಾಡಿದ ಪ್ರತಿಜ್ಞೆಯ ಪಡಿಯಚ್ಚಿದೆ ಹಾಗೆಯೇ ವಿಶ್ವಾಮಿತ್ರನು ನೊಂದುಕೊಂಡರೆಂಬುದು ಬೊಂಬೆಯ ಲಕ್ಕನ ಕಲ್ಪನೆ. ನಾರದ ಮಧ್ಯಸ್ಥಿಕೆ ಮಾಡುವುದು ಈತನದೇ ಕಲ್ಪನೆ. ವಿಶ್ವಾಮಿತ್ರರು

ಬ್ರಹ್ಮನಾಯುಷ ಮೂವತ್ತಾಗಲು ಮಾಸ
ಎಮ್ಮಯ ವರುಷ ನೂರಾಗೆ
ಬ್ರಹ್ಮಯಿಂದ್ರಾದಿಗಳಳಿವತನಕ ಈಗ
ನಿಮ್ಮ ದೇಶಕೆ ಬಾರನೆಂದೆ.

ಇಲ್ಲಿಯೂ ರಾಘವಾಂಕನ ಷಟ್ಪದಿಯಲ್ಲಿನ ವಿಚಾರವು ಸಾಂಗತ್ಯದಲ್ಲಿ ಪುನರಾವರ್ತಿತವಾಗಿದೆ. ವಸಿಷ್ಠರಿಗೆ ತನ್ನ ತಪಸ್ಸಿನ ಪುಣ್ಯಫಲದ ಅರ್ಧವನ್ನು ಧಾರೆ ಎರೆಯುವುದಾಗಿ ಪ್ರತಿಜ್ಞೆ ಮಾಡುತ್ತಾರೆ. ಇಲ್ಲಿ ವಿಶ್ವಾಮಿತ್ರರು ಹರಿಶ್ಚಂದ್ರನನ್ನು ತಾವು

ಹುಲ್ಲಿಗೆ ಕಡೆ ಮಾಡಿ ಬಿಡದೆ ಕಾಡುವೆನು ಎಂಬ ಮಾತನ್ನು ಹೇಳುತ್ತಾರೆ. ಈ ಸಾಂಗತ್ಯ ಕೃತಿಯಲ್ಲಿ ಹಲವಾರು ವಿಚಾರಗಳನ್ನು ಕವಿ ತನ್ನ ಕಲ್ಪನೆ ಬೆರೆಸಿ ಹೇಳಿದ್ದಾನೆ. ಕವಿಯ ಪ್ರತಿಭೆಗೆ ಉದಾಹರಣೆಯಾಗಿ

ಮೇಘವನಡರಿ ಸಿಡಲು ನೆಲಕಿಳಿವಂತೆ
ಆಗ ಗರ್ಜಿಸಿ ಆಶ್ರಮಕೆ
ಏಗೈವೆನೆಂದು ಕೌಶಿಕನಿಗೆ ವಾಸಿಷ್ಠ
ಬೇಗ ಬಂದನು ತನ್ನ ಮಠಕೆ

ಇಂದ್ರನ ಸಭೆ ಮುಗಿಯಲು ಭೂಮಿಯಲ್ಲಿ ಇನನು ಕಾಣಿಸಿಕೊಂಡನು. ಸೂರ್ಯೋದಯವನ್ನು ಕವಿ ತನ್ನದೇ ಆದ ಮಾತುಗಳಲ್ಲಿ ವರ್ಣಿಸುತ್ತಾನೆ.

ಕೋಟಿ ಕರವನು ಧರಿಸಿದಂತೆ ಭಾಸ್ಕರ
ಮೀಟುತ್ತ ರಥ ಮುಗಿಲೇರೆ
ಬೇಟ ಹಿಂಗಿತು ಕಮಲದ ಪಡೆ ನೈದಿಲ
ಆಟವಾಯಿತು ನದಿ ಕೊಳದಿ.

ಹರಿಶ್ಚಂದ್ರನು ಸೂರ್ಯೋದಯದ ನಂತರ ಮದನಾರಿ ಶಿವನನ್ನೇ ಧ್ಯಾನಿಸುತ್ತ ಎಲ್ಲ ದೇಶಗಳ ರಾಜರುಗಳ ಮಧ್ಯೆ ಕುಳಿತಿದ್ದನು. ಅವನನ್ನು ಕದನದಲ್ಲಿ ಎದುರಿಸುವ ಧೈರ್ಯವಿರದೆ

ಲಾಳ ಕೊಂಕಣ ಮಲೆಯಾಳ ಗುರ್ಜರ ಚೈನ
ಚೋಳನು ಹಡಿಯ ಹಮ್ಮೀರ
ಕೇಳವ ಮಾಳ ಪಾಂಡ್ಯನು ಸೌರಾಷ್ಟ್ರ
ಹೇಳಲೇನವನೋಲಗವ

ಚಿನ್ನದ ಚಾವಡಿ, ರತ್ನ ಖಚಿತ ಲೋವೆ (ಚಾವಣಿಯ ಮುಂಚಾಚಿದ ಭಾಗ ವಜ್ರ ಖಚಿತ ಕಂಭಗಳು) ಮತ್ತು ಮಾಣಿಕ್ಯ ವೈಢೂರ್ಯದ ರಸ ತುಂಬಿದ ನಿಲಯ ಅವನದ್ದಾಗಿತ್ತು. ಇಂತಹ ಓಲಗಕ್ಕೆ ವಿಶ್ವಾಮಿತ್ರರು ಆಗಮಿಸಿದರು. ಒಡನೆಯೇ ಹರಿಶ್ಚಂದ್ರ ಭೂಪಾಲ ಎದ್ದು ವಿನಯದಿಂದ ಚರಣಕ್ಕೆರಗಿ ಬಂದ ಕಾರಣ ಕೇಳಿದ. ಸುವರ್ಣ ಯಜ್ಞಕ್ಕಾಗಿ

ಕೇಳು ಕರಿಯ ಮೆಟ್ಟಿ ಕವಡೆಯಲೆಚ್ಚಷ್ಟು
ಹೇಳಲೇನದ ಹೊಸಹೊನ್ನ
ಆಳೋಪಿಸದ ಕೊಟ್ಟರೆ ಕಾರ್ಯವಹುದೆಂದು
ತಾಳದಿತ್ತೆನೆಂದ ರಾಯ

ಹಾಗೆ ತೆಗೆದುಕೊಂಡ ಸುವರ್ಣವನ್ನು ರಾಜನ ಭಂಡಾರದಲ್ಲಿಯೇ ಭದ್ರವಾಗಿರಿಸಿ, ವಿಶ್ವಾಮಿತ್ರ ಮುನಿ ಹೊರಟು ಹೋಗುತ್ತಾರೆ. ಧರಣಿಗೆ ಕಲ್ಪವೃಕ್ಷದಂತಿರುವ ಹರಿಶ್ಚಂದ್ರನನ್ನು ಹೇಗೆ ಅವನ ಉನ್ನತಿಯನ್ನು ಅಳಿವುದೆಂದು ರಾಘವಾಂಕಒಂದು ಷಟ್ಪದಿಯಲ್ಲಿ ಹೇಳಿರುವುದನ್ನು ಇಲ್ಲಿ ಕವಿ ಎರಡು ಸಾಂಗತ್ಯ ಪದ್ಯಗಳಲ್ಲಿ ಹೇಳುತ್ತಾನೆ. ವಿಶ್ವಾಮಿತ್ರರು ದರ್ಭೆಯನ್ನು ಮಂತ್ರಿಸಿ ಇಟ್ಟು ಮೃಗಗಳನ್ನು ಸೃಷ್ಟಿಸುತ್ತಾರೆ ಎಂದು ಬೊಂಬೆಯಲಕ್ಕ ಹೇಳುತ್ತಾನೆ. ರಾಘವಾಂಕನು ಮಂತ್ರ ಜಲವನ್ನು ದೆಸೆದೆಸೆಗೆ ತಳಿದು ಮೃಗಗಳನ್ನು ಸೃಷ್ಟಿಸಿದ ಎನ್ನುತ್ತಾನೆ. ನಾನಾ ಮೃಗಗಳ ಅಟ್ಟುಳಿಯಿಂದ ಬಸವಳಿದ ಜನತೆ 'ಹುಲುಗಚ್ಚಿ' ಇದು ರಾಘವಾಂಕನ ಪದ ಪ್ರಯೋಗ. ಯುದ್ಧದಲ್ಲಿ ಹುಲ್ಲು ಹಿಡಿದು ಶರಣಾಗತಿಯನ್ನು ಸೂಚಿಸುವುದಕ್ಕೆ ಈ ಪದವನ್ನು ಬಳಸುತ್ತಾನೆ. ಈ ಸಾಂಗತ್ಯದಲ್ಲೂ ಕವಿ ಅದನ್ನೇ ಬಳಸುತ್ತಾನೆ. ಬೇಟೆಯ ನೆಪದಲ್ಲಿ ರಾಜನನ್ನು ತನ್ನ ಆಶ್ರಮದೆಡೆಗೆ ಸೆಳೆಯುವುದು ವಿಶ್ವಾಮಿತ್ರರ ಉದ್ದೇಶ.

ಬೇಟೆಯಾಡುತ್ತಾ ಬಂದ ಅರಸ ಬಂದು ತಲುಪಿದ್ದು ಪಂಪಾದೇಶವನ್ನು ಸಮೃದ್ಧವಾಗಿ ಸಂಪದ್ಭರಿತವಾಗಿ ಕಾಣುವ ಪ್ರದೇಶ ಸುಮಾರು 26 ಷಟ್ಪದಿಗಳಲ್ಲಿ ರಾಘವಾಂಕ ವರ್ಣಿಸುವ ಹಂಪೆಯ ಪರಿಸರವನ್ನು ಬೊಂಬೆಯಲಕ್ಕ ಐದೇ ಸಾಂಗತ್ಯ ಪದ್ಯಗಳಲ್ಲಿ ಸಂಗ್ರಹಿಸಿ ಹೇಳುತ್ತಾನೆ. ಪರಾಶರ ಮುನಿಯ ಭೇಟಿಯಾಗಿ ವಸಿಷ್ಠರ ಪುಣ್ಯಾಶ್ರಮಕ್ಕೆ ರಾಜ ಬರುತ್ತಾನೆ. ವಸಿಷ್ಠರು ಶಿಷ್ಯನನ್ನು ಆಶೀರ್ವದಿಸಿ ವಿಶ್ವಾಮಿತ್ರರ ಆಶ್ರಮದೆಡೆಗೆ ಮಾತ್ರ ಹೋಗಬಾರದೆಂದು ನಿರ್ಬಂಧಿಸುತ್ತಾರೆ ರಾಘವಾಂಕನಿಗೆ ಅತೀ ಪ್ರಿಯವಾದ ಹಂಪೆಯನ್ನು ಕವಿ ವಸಿಷ್ಠರು ಹರಿಶ್ಚಂದ್ರನಿಗೆ ತೋರಿಸಿದಂತೆ ಹೇಳಿದ್ದಾನೆ. ವೇದ ತರ್ಕ ಪುರಾಣಗಳಿಗೆ ನಿಲುಕದ ಆದಿದೇವನು ಇರುವ ಸ್ಥಳಕ್ಕೆ ಕರೆದೊಯ್ದು

ಕಂದ ಕೇಳಿದು ವಿರೂಪಾಕ್ಷ ಮೂಲೋಕಕ್ಕೆ
ನಿಂದ್ಯವಲ್ಲದ ಪುಣ್ಯಕ್ಷೇತ್ರ
ವಂದಿಸು ಲಯಕೆ ಪೊರಗು ಈ ಲಿಂಗವು
ಮುಂದೆ ನೋಡಯ್ಯ ದೇವಿಯರ

ವಿರೂಪಾಕ್ಷನನ್ನು ಕಂಡ ಭೂಪತಿಯು ವಿರೂಪಾಕ್ಷನ ಲಿಂಗಕ್ಕೆ ಪಟ್ಟಿಯ ಪದಕ ಮುತ್ತುಗಳ ಕೊಟ್ಟು ವಂದನೆ ಮಾಡಿ ಪುಣ್ಯತೀರ್ಥವನ್ನು ಕೊಂಡು ನಾನಾ ವಿಧವಾದ ದಾನಗಳನ್ನು ಮಾಡಿದನು, ಗುರುವಿಗೆ ನಮಸ್ಕರಿಸಿ ಬೇಟೆ ಮುಂದುವರೆಸಲು ಮುನ್ನಡೆದುದಲ್ಲಿಗೆ ಒಂದನೆಯ ಸಂಧಿ ಮುಗಿಯುತ್ತದೆ.

ಎರಡನೆಯ ಸಂಧಿಯಲ್ಲಿ ಅರಸನ ಬೇಟೆಯ ವೈಭವವನ್ನು ವರಾಹದ ಆರ್ಭಟವನ್ನು ಆ ವರಾಹದ ಬೆನ್ನಟ್ಟಿ ರಾಜನು ವಿಶ್ವಾಮಿತ್ರ ಆಶ್ರಮ ಹೊಕ್ಕ ವಿಚಾರಗಳು,

ಗಾನರಾಣಿ ಮತ್ತು ಹರಿಶ್ಚಂದ್ರರ ಸಂವಾದ ಪ್ರಸಂಗ, ಗಾನರಾಣಿಯರು ಭಂಗಿತರಾಗಿ ಹಿಂದಿರುಗಿದಾಗ ಕನಲಿದ ವಿಶ್ವಾಮಿತ್ರರ ಕೋಪಕ್ಕೆ ರಾಜನು ಬಲಿಯಾಗಿ ಸಕಲ ಸರ್ವಸ್ವವನ್ನೂ ಅವರಿಗೊಪ್ಪಿಸಿದ್ದು, ರಾಜನ ಸರ್ವಸ್ವಾಪಹರಣ ಮಾಡಿದ ವಿಶ್ವಾಮಿತ್ರರಿಗೆ ಅಯೋಧ್ಯೆಯಲ್ಲಿನ ಸಮಸ್ತವನ್ನೂ ಒಪ್ಪಿಸಿದ್ದು ಮೊದಲಾದ ವಿಚಾರಗಳಿವೆ. ವಿಶ್ವಾಮಿತ್ರರು ಸೃಷ್ಟಿಸಿದ ಮಾಯಾ ವರಾಹವನ್ನು ಬಾಣಗಳಿಂದ ಹೊಡೆದು ಬಳಲಿದ ಅರಸನು ಅದರ ಬೆನ್ನಟ್ಟಿ ಬರುತ್ತಾ ವರ ಮುನಿ ವಿಶ್ವಾಮಿತ್ರರ ಆಶ್ರಮವನ್ನು ಹೊಕ್ಕು ಅಲ್ಲಿದ್ದ ತಾಪಸರಲ್ಲಿ ಅದು ಯಾವ ಆಶ್ರಮವೆಂದು ಪ್ರಶ್ನೆ ಮಾಡಿದಾಗ ಚಂಡ ಕೌಶಿಕ ವಿಶ್ವಾಮಿತ್ರರ ಆಶ್ರಮವೆಂಬ ಉತ್ತರ ದೊರಕಿತು. ಆ ಮಾತು ಕಿವಿಗೆ ಬಿದ್ದಾಕ್ಷಣ

ನುಡಿ ಕರ್ಣದಲಿ ಬೀಳಲು ಹಾವಗಿರಂತೆ
ಒಡಲೊಳು ಉರಿ ಮೂಡಿದಂತೆ
ನಿಡು ಬಾಣ ಬೆನ್ನಲ್ಲಿ ಉಗಿದು ಬಿದ್ದಂದದಿ
ನಡುನಡುಗಿದನು ಭೂಪಾಲ.

ಇಡೀ ಧರಣಿಯ ರಾಜರನ್ನೆಲ್ಲಾ ನಡುಗಿಸುವ ಕಲಿ ಹರಿಶ್ಚಂದ್ರನು ನಡುಗಿ ಹೋದನು. ಗುರುವಾಜ್ಞೆಗೆಟ್ಟು ಅಲ್ಲಿ ಬಂದುದಕ್ಕೆ ಪಶ್ಚಾತ್ತಾಪ ಪಟ್ಟನು. ವರಾಹನನ್ನು ಅಟ್ಟಿ ಬಂದ ಬಳಲಿಕೆ, ಗುರುವಾಜ್ಞೆ ಮೀರಿದ ಚಿಂತೆಯಿಂದ ರಾಯನು ಚಂದ್ರಮತಿಯ ತೊಡೆಯ ಮೇಲೆ ಮಲಗಿದನು. ದುಃಸ್ವಪ್ನವನ್ನು ಕಂಡ ರಾಜನನ್ನು ಪತ್ನಿಯು ಸಂತೈಸಿದಳು. ಚಂದ್ರಮತಿ ಪತಿಗೆ ತಕ್ಕ ಸತಿ ಪತಿಯ ಸತ್ಯಪ್ರತಿಜ್ಞೆಗೆ ತಾನೂ ಬದ್ಧಳು.

ಸತಿಹೋಗಲಿ ಸುತ ಹೋಗಲಿ ರಾಜ್ಯತಾ ಹೋಗಲಿ
ಮೃತವಾಗಿ ನಾನಳವಳಿಯೆ
ಖತಿ ಮನಸಿಗೆ ತಾರದೆ ಸತ್ಯ ನಿಂದರೆ
ಹಿತವಿದು ಉಡುಗೊರೆ ನಮಗೆ

ಎಂದು ಅರಸನ ಸತ್ಯನಿಷ್ಠೆಗೆ ಇಂಬುಕೊಟ್ಟಳು. ಇತ್ತ ವಿಶ್ವಾಮಿತ್ರರು ಗಾನರಾಣಿಯರನ್ನು ಸೃಷ್ಟಿಸಿ ಹರಿಶ್ಚಂದ್ರನತ್ತ ಕಳುಹುತ್ತಾನೆ. ಅಧಮಸತಿ ಎಂದು ಕವಿ ಅವರನ್ನು ಕರೆದಿದ್ದಾನೆ. ಸತ್ತಿಗೆಯನ್ನು ಬೇಡಿ, ಕೊಡದಿದ್ದರೆ ವಿವಾಹವಾಗುವಂತೆ ಕೇಳಿ ಎಂದು ಹೇಳಿ ಕಳಿಸುತ್ತಾನೆ. ರಾಘವಾಂಕನ ಕೃತಿಯಲ್ಲಿ 'ಸರ್ವ ಬುದ್ಧಿಯೊಳು ಹರಿಶ್ಚಂದ್ರನ ಮರುಳು ಮಾಡುತಿರಿ ಎಂದು ಕಳುಹಿಸುತ್ತಾನೆ. ಗಾನರಾಣಿ ಹರಿಶ್ಚಂದ್ರನ ಸಂವಾದವು ರಾಘವಾಂಕನ ಕೃತಿಯಲ್ಲಿರುವಂತೆಯೇ ಮುಂದುವರೆಯುತ್ತದೆ. ಹೊಲತಿಯರ ಮಾತುಗಳಲ್ಲಿ ಕೆಲವನ್ನು ಉದಾಹರಿಸಬಹುದು.

ಹಾಡ ಲಾಲಿಸಿ ಕೇಳಿದ ಕರ್ಣ ರೂಪನು

ನೋಡಿದ ಲೋಚನವಿರಲು
ಕೊಡೆ ನುಡಿದ ಜಿಹ್ವೆ ಮೃಗಂಧವಿದ್ದಂತೆ
ಕೂಡಲಧರ್ಮವೆ ಭೂಪಾಲ

ಗಾನ ರಾಣಿಯರ ಹಠಕ್ಕೆ ಕನಲಿದ ರಾಜನು ಅವರನ್ನು ಹೊಡೆದು ಓಡಿಸುವಾಗ ನಾರಿಯರ ಮೊರೆ ಕೇಳಿ ಮಾರಾರಿಯಂತೆ ಬಂದ ವಿಶ್ವಾಮಿತ್ರ ಮುನಿಯು ಕ್ರೋಧದಿಂದ

ಪ್ರಳಯದ ಸಿಡಿಲು ಗರ್ಜಿನೆಲಕ್ಕಿಳಿವಂತೆ
ಇಳೆಯ ಸುಡವ ಕಿಚ್ಚಿನಂತೆ
ಉಳಿಯದೆ ಜಗವ ನುಂಗುವ ಮಾರಿಯಂದದಿ
ಮುಳಿದು ಬಂದನು ರಾಯನೆಡೆಗೆ

ಮುನಿಯ ಪಾದಕ್ಕೆರಗಿದ ರಾಯನ ಶಿರವನ್ನು ನೂಕಿ ಎದೆಗೆ ಒದ್ದಾಗ ಅರಸನು ಚರಣ ನೊಂದಿತು ಶಿವ ಶಿವ ಎಂದು ವಿಶ್ವಾಮಿತ್ರರ ಪಾದಗಳನ್ನು ಕಣ್ಣಿಗೆ ಒತ್ತಿಕೊಂಡನು. ವಿಶ್ವಾಮಿತ್ರರು ರಾಜನನ್ನು ನಾನಾ ವಿಧದಲ್ಲಿ ಶಂಕಿಸಿ ಜರೆಯುತ್ತಾರೆ. ಹರಿಶ್ಚಂದ್ರನು ಎಲ್ಲವನ್ನೂ ಸಹಿಸಿದನು.

ಅಡಿಗಡಿಗೇಕೆ ನಿರೂಪ ಮೂಲೋಕವ
ಬಿಡುಯೆಂದರೆ ನಾ ಬಿಡುವೆ
ಕಡೆಗೆ ಹೊಲತಿಯರ ಮದುವೆಯೆಂಬೀಮಾತ
ನುಡಿಯದಿರೆಂದು ಕೈಮುಗಿದ.

ಇದನ್ನೇ ಹಿಡಿದ ವಿಶ್ವಾಮಿತ್ರರು ಅರಸನ ಸಕಲ ರಾಜ್ಯ, ಕೋಶ, ಸೈನ್ಯ, ಎಲ್ಲವನ್ನೂ ತನ್ನದಾಗಿಸಿಕೊಂಡರು. ನಂತರ ಹಿಂದೆ ತಮಗೆ ನೀಡಿದ್ದ ಸುವರ್ಣರಾಶಿಯನ್ನು ಸಾಲವೆಂದು ಹೇಳಿ ಅದನ್ನು ತೀರಿಸ ಹೇಳಿದರು. ವಿಶ್ವಾಮಿತ್ರರು "ಒಂದು ಮಾತುಂಟು ಬಂದು ಹೋಗು ಭೂಪ ನೊಂದು ಕೊಳಲು ಬೇಡ" ಎಂದಾಗ "ಹಿಂದಾವುದಕೆ ನೊಂದೆನು ಜೀಯ" ಎನ್ನುತ್ತಾನೆ ಹರಿಶ್ಚಂದ್ರ. ಸಾಲ ತೀರಿಸುವುದಾಗಿ ಮಾತು ಕೊಟ್ಟ ಭೂಪಾಲನು ಸತಿ ಸುತರೊಡನೆ ನಕ್ಷತ್ರಿಕನ ಜೊತೆ ಹೊರಟನು. ಅಯೋಧ್ಯೆಗೆ ಬಂದು ಸಕಲವನ್ನೂ ಮುನಿಗೊಪ್ಪಿಸಿ ಅಲ್ಲಿಂದ ಹೊರಟಲ್ಲಿಗೆ ಎರಡನೆಯ ಸಂಧಿ ಮುಗಿಯುತ್ತದೆ.

ಮೂರನೆಯ ಸಂಧಿ : ಹರಿಶ್ಚಂದ್ರನು ತನ್ನ ಸಕಲ ಪರಿವಾರವನ್ನೂ ರಾಜ್ಯವನ್ನೂ ಪ್ರಜೆಗಳನ್ನೂ ವಿಶ್ವಾಮಿತ್ರರಿಗೆ ಒಪ್ಪಿಸಿ, ಪ್ರತಿಯೊಂದನ್ನೂ ವಿವರಿಸಿ ಹೊರಟಾಗ ರಾಘವಾಂಕ "ಪುರದ ಪುಣ್ಯ ಪುರುಷ ರೂಪಿಂದೆ ಪೋಗುತಿದೆ" ಎಂಬ ಷಟ್ಪದಿ

ಬೊಂಬೆಯಲಕ್ಕನ ಕೃತಿಯಲ್ಲಿ

ಪುರದ ಪುಣ್ಯವು ಅಡಿವಿಗೆ ಪೋಗುತಿದೆ
ಪರಿಜನರ ಪಟ್ಟದೈಶ್ವರ್ಯ
ಉರಿಯೊಳು ಕೂಡಿ ದಹಿಸಿ ಪೋಗುತಲಿದೆ
ಧರೆಯ ಭಾಗ್ಯವು ಹಿಂಗಿತೆಂದು.

ನೃಪನ ಪರಿಸ್ಥಿತಿಯನ್ನು ಕಂಡ ಪ್ರಜೆಗಳು ಶೋಕಿಸುತ್ತಾರೆ. ಬೊಂಬೆಯ ಲಕ್ಕನ ಕೃತಿಯಲ್ಲಿ ಮೂಲ ಕೃತಿಯಂತೆ ಜನರು ವಿಶ್ವಾಮಿತ್ರರನ್ನು ಶಪಿಸುವುದಿಲ್ಲ, ನಿಂದಿಸುವುದಿಲ್ಲ. ಕಡು ಬಿಸಿಲು ಗಾಳಿ, ಮಳೆ, ಸಿಡಿಲು, ಪ್ರಾಣಿಗಳ ಘರ್ಜನೆ ಭಯ ಹಟ್ಟಿಸುವ ಅಡವಿಯ ಕತ್ತೆಯಲ್ಲಿ ಕ್ರೂರ ಮೃಗಗಳ ಕೂಗು ಭಯ ಹುಟ್ಟಿಸುವಂತಿದ್ದರೂ ಸತಿ ಸುತರೊಡನೆ ಮುನ್ನಡೆದನು.

ಹೊತ್ತು ಮೂಡಲು ಉರಿಯಲಿ ಬೆಂದು ದ್ರವಗೆಟ್ಟು
ಬತ್ತಿ ಬಾಯಾರಿ ಕೂಳರತು
ಸತ್ತು ಸಾವರ ಹಸಿದೆನೆಂದು ತೆರಗಾರ
ಮಿತ್ತಾಗಿ ಕಾಡಿ ಭಂಗಿಸಿದ.

ಬೊಂಬೆಯ ಲಕ್ಕನ ಪದ ಪ್ರಯೋಗ ಇಲ್ಲಿ ಪ್ರೌಢವಾಗಿ ಕಂಡು ಬರುತ್ತದೆ. ರಾಣಿ ಚಂದ್ರಮತಿಯ ಸ್ಥಿತಿ ಕಂಡು ದುಃಖಿತನಾದ ರಾಜ

ಪಾಪಿಗೆ ನೀ ನೊಂತು ಸತಿಯಾದೆ ಎಲೆ ರಾಣಿ
ಶಾಪತಟ್ಟಿತೆ ಪೂರ್ವ ಕರ್ಮ
ಕೂಪರಾರಿಲ್ಲ ಕೆಟ್ಟೆಡೆಯೊಳು ಅಡವಿಯ
ತೋಪು ನಮಗೆ ಮನೆಯೆಂದ

ಎಂದಾಗ ಹರಿಶ್ಚಂದ್ರನಿಗೆ ತಕ್ಕ ಪತ್ನಿಯಾದ ಚಂದ್ರಮತಿ ಕಾಯ, ಸುಖಭೋಗ, ಪೃಥ್ವಿಯ ಒಡತನ ಶಾಶ್ವತವಲ್ಲ, ಧರ್ಮವೇ ನಿತ್ಯವಾದುದು, ಮುಕ್ತಿಯ ದಾರಿಯನ್ನು ಮಾತ್ರ ಯೋಚಿಸು ಎನ್ನುತ್ತಾಳೆ.

ಹುಟ್ಟುವಲ್ಲಿಯೇ ತರಲಿಲ್ಲ ಈ ರಾಜ್ಯವ
ಕಟ್ಟಿ ಹೋಹರೆ ವಶವಲ್ಲ
ಬಿಟ್ಟು ಹೋಹುದ ಗುರುವಿಗೆ ಕೊಟ್ಟು ಪುಣ್ಯದ
ಬಟ್ಟೆಯಾಯಿತ್ತೆಂದಳರಸಿ

ಎಂದಾಗ ಹರಿಶ್ಚಂದ್ರನು ಅತ್ಯಂತ ಸಂತಸ ಪಡುತ್ತಾನೆ. ತನ್ನ ಪತ್ನಿಯ ಸತ್ಯ, ಧರ್ಮನಿಷ್ಠೆಯನ್ನು ಕಂಡು “ಪೂರ್ವದ ಧರ್ಮಕೀರ್ತಿಯ ಬಂದು ನೀ

ಸತಿಯಾದೆ” ಎಂದು ಹರ್ಷಿಸುತ್ತಾನೆ. ಅವರನ್ನು ಕಾಡಲು ಬಂದ ನಕ್ಷತ್ರಿಕನೂ ಸಹ ಅವಳನ್ನು ಪಾವನ ಪರಂಜ್ಯೋತಿ, ಧರ್ಮಸತಿ, ಸಾಕ್ಷಾತ್ ದೇವ ಗಂಗೆ ಎಂದು ಕೊಂಡಾಡುತ್ತಾನೆ. ಪತಿಯ ಧರ್ಮದಲ್ಲಿ ಸತಿಯ ಪಾಲನ್ನು ರಾಣಿಯು ಸಮರ್ಥವಾಗಿ ನಿರ್ವಹಿಸುತ್ತಾಳೆ. ಲೋಭತ್ವ ಮೆರೆಯುವ ಸತಿಯರ ಅವಗುಣ ಕಡೆಗಿನಿತಿಲ್ಲ ಚಂದ್ರಮತಿಗೆ ಎಂದು ಕವಿ ಹೊಗಳಿದ್ದಾನೆ.

ಅವರ ಪ್ರಯಾಣದಲ್ಲಿ ಹೆಜ್ಜೆ ಹೆಜ್ಜೆಗೂ ಎದುರಾದ ಕಷ್ಟ ಪರಂಪರೆಗಳನ್ನು ಎದುರಿಸುತ್ತಾ ಮಧ್ಯೆ ಮಧ್ಯೆ ನಕ್ಷತ್ರಿಕನ ಕಾಟದಿಂದ ಅವನ ದುರ್ಭೋದನೆಯಿಂದ ನೊಂದುಕೊಳ್ಳುತ್ತಾ.

ಅಡಿಗಡಿಗೇಕೆ ಎನ್ನಯ ಮನವನು ಜೀಯ
ತುಡುಕಿ ನೋಡಲು ಬೇಡ ತನ್ನ
ಬಿಡೆನೀ ಸಂಸಾರ ನಿತ್ಯವಲ್ಲವು ಎನ್ನ
ನುಡಿ ನಿಂದರೆ ಕೋಟಿ ಲಾಭ

ಎನ್ನುತ್ತಾ ನಾನಾ ಕಷ್ಟ ಪರಂಪರೆಗೆ ಒಳಗಾದ ರಾಜ ಪರಿವಾರಕ್ಕೆ ಬೇತಾಳ, ಮರುಳುಗಳು ಬಿಡದಂತೆ ಕಾಡುತ್ತವೆ. ರಾಘವಾಂಕ ಹೇಳುವಂತೆ ಇದು ಒಂದೆರೆಡು ಪದ್ಯದಲ್ಲಿದೆ. ಬೊಂಬೆಯಲಕ್ಕ ಮೂವತ್ತು ಸಾಂಗತ್ಯ ಪದ್ಯಗಳಲ್ಲಿ ಮರುಳುಗಳ ಉಪಟಳವನ್ನು ವರ್ಣಿಸುತ್ತಾನೆ. ಕೆದರಿದ ತಲೆಯ, ಸಿಂಹದಂತೆ ಕ್ರೂರವಾದ ಕಣ್ಣುಗಳು, ಕೋರೆ ದಾಡೆಗಳುಳ್ಳ, ಕೈಯಲ್ಲಿ ಬಾಳುಗತ್ತಿ ಹಿಡಿದ ಮರುಳುಗಳು

ಬಿಟ್ಟ ಬಾಯ್ ಬೆದರುವ ಕಣ್ಣುಗಳರೆ ಮೂಗು
ಇಟ್ಟಣಿಸರ ಕೋರೆದಾಡೆ
ಕಟ್ಟಿದ ತಲೆ ಮಾಲೆ ಪಿಡಿದ ಬಟ್ಟಲು ಬಾಳು
ಸೃಷ್ಟಿಗಧಿಕ ಮರುಳಿಹವು.

ಭಯಂಕರವಾಗಿ ತೋರುವ ಮರುಳು ಬೇತಾಳಗಳು “ಜೋಡಿಸಿ ನರರ ರಕ್ತವ ನೀಂಟಿಪೆವೆಂದು ಕೊಡೆ ನಡೆಯ ಕೋಟಿ ಮರುಳುಗಳನ್ನು ದಿಟ್ಟವಾಗಿ ಎದುರಿಸಿ ಅರಸನು ಅವುಗಳನ್ನು ಹೋರಾಡಿ ಹಿಮ್ಮೆಟ್ಟಿಸುತ್ತಾನೆ.

ಹೋಳು ಹೋಳಾಗಿ ಹೊಯ್ದನು ತೋಳು ತೊಡೆಗಳ
ಸೀಳಿದ ಮಸ್ತಕತನಕ
ಕೀಳು ಮೇಲಾಗಿ ಹೊಯ್ದನು ಕಾಲು ತೊಡೆಗಳ
ತೂಳವೆದ್ದಂತೆ ಭೂಪಾಲ

ಕೋಟಿ ಮರುಳುಗಳನ್ನು ಕೊಂದನು. ಒಂದು ಭೂತ ತನ್ನೊಡೆಯನಲ್ಲಿ

ಹೋಗಿ ದೂರು ಹೇಳಿತು. ನಂತರ ಎದುರಾದ ವೀರ ಬೇತಾಳ, ಕಾಳ ಬೇತಾಳ, ಮೊದಲಾದ ಭಯಂಕರ ಭೂತಗಳನ್ನು 'ಭಾಳನಯನ' ನಂತೆ ಭೂಪನು ನಿಗ್ರಹಿಸಿದನು. ಇದನ್ನು ಕಂಡ ದೇವತೆಗಳು ಅವನನ್ನು ಕೊಂಡಾಡಿದರು. ಹರಿಶ್ಚಂದ್ರ ತಮ್ಮನ್ನು ಕಾಡಲು ಬಂದ ಭೂತ ಬೇತಾಳಗಳ ಹಿಂಡನ್ನು ಧ್ವಂಸ ಮಾಡಿ 'ಮೃಡನಂತೆ ನಿಂದು ಬೊಬ್ಬಿಟ್ಟ' ಪ್ರಕರಣ ಮತ್ತಾವ ಕೃತಿಗಳಲ್ಲೂ ಕಂಡು ಬರುವುದಿಲ್ಲ. ಇದು ಬೊಂಬೆಯ ಲಕ್ಕನದೇ ಹೊಸ ಕಲ್ಪನೆ ಇದು ಇವನ ಸಾಹಿತ್ಯದ ವೈಶಿಷ್ಟ್ಯತೆ.

ಕಷ್ಟ ಪರಂಪರೆಯನ್ನೆದುರಿಸಿ ರಾಜ ಪರಿವಾರ ಕಾಶಿಗೆ ತಲುಪಿತು. ಗಂಗೆಯಲ್ಲಿ ಮಿಂದು ತೀರ್ಥ ಸ್ವೀಕರಿಸಿ ಕಾಶಿಯ ಪೊಂಗಳಸವನ್ನು ಕಂಡು ಸಂತಸಗೊಂಡ ರಾಜ ಮಂತ್ರಿಗೆ ಕಾಶಿ ಮಹಾತ್ಮೆಯನ್ನು ವಿವರಿಸುತ್ತಾನೆ. ಶೇಷನಿಗೂ ಈ ಕ್ಷೇತ್ರ ಮಹಿಮೆ ಕೊಂಡಾಡಲು ಸಾಧ್ಯವಿಲ್ಲ. ಭಾಳನಯನನ ಪುಣ್ಯಸ್ಥಳವಿದು. ಜನ್ಮಾಂತರಗಳ ಕೋಟಿ ಕರ್ಮಗಳು ಕ್ಷಣಾರ್ಧದಲ್ಲಿ ದಹಿಸುವ ಪುಣ್ಯಸ್ಥಳ. ಮುಕ್ತಿ ದೇವತೆಯ ಆವಾಸ ಈ ದಿವ್ಯ ಕಾಶೀಕ್ಷೇತ್ರ ಎಂದು ಹಲವು ಬಗೆಯಲ್ಲಿ ಕೀರ್ತಿಸುತ್ತಾನೆ. ವಿಶ್ವಾಮಿತ್ರರು ನೀಡಿದ ಗಡುವು ಮೀರುತ್ತಿರುವಾಗ ಸತಿ ಸುತರನ್ನು ಮಾರಲು ಸಿದ್ಧನಾಗುತ್ತಾನೆ. ಅಗ್ನಿಯು ವಿಪ್ರವೇಷದಲ್ಲಿ ಬಂದು ಅವರನ್ನು ಖರೀದಿಸುತ್ತಾನೆ. ಆತ ಕೊಟ್ಟ ಹೊನ್ನು ನಕ್ಷತ್ರಿಕನ ಊಟ, ವೀಳ್ಯಕ್ಕೆ ಸರಿಯಾಗುತ್ತದೆ. ಇನ್ನು ವಿಶ್ವಾಮಿತ್ರರ ಋಣ ತೀರುವ ಬಗೆ ಹೇಗೆ?

ಎನ್ನ ಸತಿಯು ಮಗನನು ಮಾರಿ ಎಲೆ ಮಂತ್ರಿ
ಇನ್ನು ನಾನಿರ್ದು ಫಲವೇನು
ಹೊನ್ನುಳ್ಳವರಿಗೆ ಎನ್ನು ಮಾರಿ ಋಣವನು
ಚೆನ್ನಾಗಿ ತಿದ್ದೆಂದ ರಾಯ

ಮಂತ್ರಿಯು ವಿಧಿಯಿಲ್ಲದೆ ಹರಿಶ್ಚಂದ್ರನನ್ನು ವಿಕ್ರಯಿಸಲು ಮುಂದಾದನು. ಕೌಶಿಕನ ಪ್ರೇರಣೆಯಿಂದ ವೀರಬಾಹುಕನು ಕಂಕುಳಲ್ಲಿ ಸುರೆಯನ್ನು ಹಿಡಿದು ಬಂದು ತಾನು ಕೊಳ್ಳುವುದಾಗಿ ಹೇಳುತ್ತಾನೆ. ಅಲ್ಲಿಗೆ ಹೊಲತಿಯೂ ಬಂದಳೆಂದು ಲಕ್ಕ ಹೇಳುತ್ತಾನೆ ಹೊಲೆಯನು ಬಂದು ತನ್ನನ್ನು ಕೊಳ್ಳುವುದೇ ಎಂದು ರಾಜ ಕನಲಿದಾಗ

ಹೊನ್ನುಳ್ಳ ಧನಿಕ ರಾರಾದರೂ ಕೊಳಿರೆಂದು
ಮುನ್ನ ನೀವ್ ನುಡಿದು ಸಾರಿದಿರಿ
ಇನ್ನು ದ್ವಿಜರು ಕೊಳ್ಳಲಿಯೆಂಬ ಮಾತನು
ಚೆನ್ನಾಗಿ ಹೊಲೆಯ ನೀನೆಂದ

ಹರಿಶ್ಚಂದ್ರನನ್ನು ಮಾತಲ್ಲೇ ಸಿಕ್ಕಿ ಹಾಕಿಸಿದ ವೀರಬಾಹು. ವೀರಬಾಹುಕನನ್ನು

ಸಂತೈಸಿ ರಾಜನು "ತಂದೆ ಚಿತ್ತೈಸು ನಾನರಿಯದೆ ನುಡಿದೆನು" ವಿಶ್ವಾಮಿತ್ರರಿಗೆ ನೀಡಬೇಕಾದ ಹೊನ್ನನ್ನು ನೀಡಿ ಋಣ ಭಾರ ನೀಗಿಸು ಎಂದು ಪ್ರಾರ್ಥಿಸುತ್ತಾನೆ. ಸತ್ಯಕ್ಕಾಗಿ ಏನು ಮಾಡಲೂ ಹರಿಶ್ಚಂದ್ರ ಹಿಂಜರಿಯಲಿಲ್ಲ. ಈ ನಿಷ್ಠೆಯೇ ಅವನನ್ನು ಅಜರಾಮರವಾಗಿಸಿದ್ದು. ವೀರಬಾಹು ನೀಡಿದ ಹೊನ್ನನ್ನು ನಕ್ಷತ್ರಿಕನಿಗೆ ನೀಡಿ "ತಂದೆ ವಿಶ್ವಾಮಿತ್ರ ಹೆತ್ತಯ್ಯ ದೇವಗೆ ಬಂದಿತು ಎಂದು ಚಿತ್ತೈಸಿ" ಮಂತ್ರಿಯನ್ನು ಅತ್ತ ಕಳುಹಿಸಿ ತಾನು ಹೊಲೆಗೇರಿಗೆ ಬರುತ್ತಾನೆ.

ನಾಲ್ಕನೆಯ ಸಂಧಿ : ನಾಲ್ಕನೆಯ ಸಂಧಿಯಲ್ಲಿ ಸ್ಮಶಾನದ ಚಿತ್ರಣವನ್ನು ಕವಿ ನೀಡಿದ್ದಾನೆ. ಜುಗುಪ್ಸೆ ತರಿಸುವ ವಾತಾವರಣದಲ್ಲಿ ಹರಿಶ್ಚಂದ್ರನು ಹೇಸದೆ, ಹೇವರಿಸದೆ ಸಹಜವೆಂಬಂತೆ ಕುಳಿತಿದ್ದನು. ಮಿಂಚುವ ಎಲು, ಸುರೆ ಹೊಲಸಿನ ನಾತಕ್ಕೆ ಸಂಚಲಿಸದೆ ಕುಳ್ಳಿರ್ದನು. ವೀರಬಾಹುಕನು

ಎಲುವಿನ ಎಕ್ಕೆ ನರರ ಪಟ್ಟೆ ಮಂಚಕೆ
ಬಲುದೊಗಲಿನ ಹಾಸಿಗೆಯು
ಕುಲಗಿರಿಯಂತೆ ಕುಳಿತ ವೀರಬಾಹುಕ
ನಲಿದು ಸುರೆಯ ತಾರೆಂದ

ರಾಜನ ಹೆಗಲ ಮೇಲೆ ಕಾಲನ್ನಿಟ್ಟ ಅರಸನು ಸ್ವಲ್ಪವೂ ವಿಚಲಿತನಾಗದೆ ಕಾಲನ್ನೊತ್ತಿದ. ರವಿಕುಲದ ಅರಸ ಹೊಲೆಯನ ಕುಲವ ನೋಡದೆ ಕಾಲು ಹಿಡಿದೆ, ಉತ್ತಮ ಶಿವಾರ್ಚಕನಾಗಿ ಹೊಲಸಿಗೆ ಮನ ಕಲಕಲಿಲ್ಲವೆ. ಸಿರಿಭಾಗ್ಯ ಹೋದರೆ ಉತ್ತಮಿಕೆಯೂ ಹೊರಟುಹೋಯಿತೆ? ಎಂದು ಪ್ರಶ್ನಿಸಿದ.

ಹಣ ನೀಡಿ ಋಣಮುಕ್ತನ್ನಾಗಿಸಿದ ಒಡಯನ ಸೇವೆ ಮಾಡುವುದೇ ತನ್ನ ಧರ್ಮ ಎನ್ನುತ್ತಾನೆ ಹರಿಶ್ಚಂದ್ರ.

ಕೇಳು ಚಂದುಗ ರುದ್ರಭೂಮಿಗೆ ನೀ ಹೋಗಿ
ಹೂಳುವ ಹೆಣಕೆ ಹಾಗವನು
ಮೇಳದಿಂದಲಿ ಹೋಗು ಸೀರೆಯ ಬಿಡದಿರು
ತಾಳು ಸೆರಗಿನ ಅಕ್ಕಿಯನು

ಎಂದು ಹೇಳಿ ವೀರಬಾಹುಕನು ಸಂಬಳಿಗೋಲನ್ನು ಕೊಟ್ಟು ಆಜ್ಞೆ ಮಾಡಿದ. ಅದನ್ನು ನಮ್ರವಾಗಿ ಒಪ್ಪಿದ ಹರಿಶ್ಚಂದ್ರ ಸುಡುಗಾಡನ್ನು ಹೊಕ್ಕನು ಭೂತ ಶತ ಕೋಟಿಗಳು ಎದುರಾಗಿ ಕೂಗಿ ಅವನನ್ನು ಹೆದರಿಸಿದವು. ಹಿಡಿದ ಖಂಡೆಯಿಂದ ಬೊಬ್ಬೆ ಮಾಡಿ ಹರಿಶ್ಚಂದ್ರ ಎಲ್ಲವನ್ನೂ ಓಡಿಸಿದ.

ಇತ್ತ ಚಂದ್ರಮತಿ ಮಗ ಲೋಹಿತಾಶ್ವರು ಒಡೆಯನ ಮನೆಯ ಊಳಿಗ

ಮಾಡುತ್ತಿದ್ದರು. ರಾಘವಾಂಕ ಲೋಹಿತಾಶ್ವನು ದರ್ಭೆ ಕೊಯ್ಯಲು ಹುತ್ತಿನ ಮೇಲೆ ಹತ್ತಿದ ಎಂದರೆ ಬೊಂಬೆಯಲಕ್ಕ ಒಡೆಯನ ಕರುವಿಗೆ ಹಿಡಿ ಹುಲ್ಲು ಕೊಯ್ಯಲು ಹೊರಟನು ಎಂದಿದ್ದಾನೆ.

ಕಂದ ಲೋಹಿತ ಕುಡುಗೋಲೆತ್ತಿ ಕುಯ್ಯಲು
ಬಂದು ಹುತ್ತದ ಘಟಸರ್ಪ
ಬಂಧಿಸಿ ಕೈಯ ಕಚ್ಚಲು ಹಾಹಾ ಎಂದು
ಚಂದ್ರಗ್ರಹಣ ಕೊಂಡಂತೆ

"ತರಣೇಂದು ಬಿಂಬಂ ನೆಲಕೆ ಬೀಳ್ವದದೆ" ಎಂಬ ರಾಘವಾಂಕನ ಮಾತು 'ಚಂದ್ರ ಗ್ರಹಣ ಕೊಂಡಂತೆ' ಎಂದಾಗಿದೆ. ಇದು ಒಂದು ರೀತಿಯಲ್ಲಿ ಈ ಕಾವ್ಯಕ್ಕೆ ಪೂರಕವಾಗಿದೆ. ತಾತ್ಕಾಲಿಕವಾಗಿ ಮರಣ ಅಪ್ಪಿದ ಲೋಹಿತಾಶ್ವ ಗ್ರಹಣ ಹಿಡಿದ ಚಂದ್ರ ಮತ್ತೆ ಪ್ರಕಾಶಿಸುವಂತೆ ಜೀವಿತನಾದನು. ಈ ಸಂದರ್ಭದಲ್ಲಿ ಚಂದ್ರಮತಿಯ ಅಳಲನ್ನು ರಾಘವಾಂಕನು ವರ್ಣಿಸಿರುವ ರೀತಿಯಲ್ಲೇ ವರ್ಣಿಸುತ್ತಾನೆ. ಲೋಹಿತಾಶ್ವನ ಸಹವರ್ತಿಯು ಬಂದು ಲೋಹಿತಾಶ್ವ ಹಾವಗಿದು ಮಡಿದ ವಿಚಾರ ತಿಳಿಸಲು "ಕೇಳಲೊಡನೆ ಘೊಳ್ಳೆಂದು ನೆಲಕ್ಕೆ ಬಿದ್ದು" ಸಂಕಟ ಪಟ್ಟಳು. ಒಡೆಯನಿಗೆ ವಿಚಾರ ತಿಳಿಸಿ ಅವನ ಅಪ್ಪಣೆಯಂತೆ ಎಲ್ಲ ಕೆಲಸಗಳನ್ನೂ ಪೂರೈಸಿ ಕಾಡಿಗೆ ಬಂದಳು ಇಲ್ಲಿಯೂ ಅವಳು ಬಂದ ರೀತಿಯನ್ನು ಹೇಳಲು ಕವಿ ರಾಘವಾಂಕನನ್ನೇ ಅನುಸರಿಸಿದ್ದಾನೆ. ಚಂದ್ರಮತಿಯ ವಿಲಾಪವನ್ನು ಕವಿ 13 ಸಾಂಗತ್ಯ ಪದ್ಯಗಳಲ್ಲಿ ವಿವರಿಸಿದ್ದಾನೆ.

ಬತ್ತಿತು ಎನ್ನಯ ಸಿರಿ ಈಗ ಕಂದಯ್ಯ
ಹೊತ್ತಿತು ಎನ್ನಯ ಒಡಲು
ಕೀರ್ತಿಯ ಕೊನೆ ಮುರಿಯಿತು ಪುತ್ರನೆಂದೆಂಬ
ಮಾತು ಮಸುಳಿಸಿತು ಮಗನೆ

ಸುಡುಗಾಡಿಗೆ ತಂದು, ಮಗನನ್ನು ಚಿತೆಯ ಮೇಲಿರಿಸಿ, ಕೊಳ್ಳಿಯ ನಿಕ್ಕಿ, ಮುಖವಡಿಯಾಗಿ ಬಿದ್ದಳು. ಹರಿಶ್ಚಂದ್ರ ಭೂಪಾಲ ನಿದ್ರೆಯಿಂದ ಎಚ್ಚೆತ್ತು ಅವಳನ್ನು ತಡಯುತ್ತಾನೆ. ಅವರಿಬ್ಬರ ನಡುವಿನ ಸಂವಾದವೂ ಮೂಲ ಕೃತಿಯಂತೆಯೇ ಇದೆ. ಸತ್ಯ ನಿಷ್ಠನಾದ ರಾಯನು ಅವಳ ತಾಳಿಯನ್ನಿತ್ತಾದರೂ ನೆಲದ ಹಾಗವನ್ನು ಕೂಡಿಸು ಎಂದಾಗ

ಕೆಟ್ಟನು ಹರಿಶ್ಚಂದ್ರ ರಾಯ ತಾನಳಿದನೊ
ಕಟ್ಟಿದ ಕೊರಳ ತಾಳಿಯನು
ಭ್ರಷ್ಟ ಹೊಲೆಯ ಕಂಡ ಕರ ಚೋದ್ಯವು ಎಂದು

ತೊಟ್ಟನೆ ಬಿದ್ದುರುಳಿದಳು

ಉತ್ತಮ ರವಿಕುಲ ತ್ರಿಶಂಕು ರಾಯನ ಪುತ್ರ ಹರಿಶ್ಚಂದ್ರ ನೃಪಾಲನು ಹೆತ್ತ ಮಗ ತಾನು ಆತನ ತಾಯಿ ಎಂದಾಗ "ಕಂದನೇತಕೆ ಅಳಿದನು" ಎಂದು ರಾಜ ಪ್ರಶ್ನಿಸಿದ. ಹಾವು ಕಚ್ಚಿ ಸತ್ತ ವಿಚಾರ ತಿಳಿದು

ನುಡಿಯಲರಿಯದೆ ರಾಜ್ಯವು ದೇಶವ ಬಿಟ್ಟು
ಕಡೆಗೆ ಚಾಂಡಾಲಗಾಳಾಗಿ
ಹಡೆದ ಕುಲವ ಬಿಟ್ಟು ಸತಿ ಸುತರ ಮಾರಿದ
ಕಡುಪಾಪಿಯನೇಕೆ ನೆನೆವೆ.

ಎಂದವನ ಮಾತಿಗೆ ಜಡೆ ಹೊತ್ತು, ಅಸ್ತಿ ಮಾಲೆ ತೊಟ್ಟು, ಕಿಡಿಗಣ್ಣು ಹಣೆಯಲ್ಲಿದ್ದರೆ ಮೃಡನಲ್ಲವೆ? ಹಾಗೆಯೆ ಹರಿಶ್ಚಂದ್ರನು ಹೇಗೇ ಇರಲಿ ತನ್ನ ಒಡೆಯನಲ್ಲವೆ ಎನ್ನುತ್ತಾಳೆ ಸಾಧ್ವೀಮಣಿ. ಅವಳ ಮಾತನ್ನು ಕೇಳಿ ಭೂಪಾಲ ಹಾ ಹಾ ಎನ್ನುತ್ತಾ ಮಗನ ಕಾಲಿನ ಮೇಲೆ ಬೀಳುತ್ತಾ ನಂದೀಶನ ಕೃಪೆ ತಪ್ಪಿತೆ ಎಂದು ಹಳಹಳಿಸಿದನು. ಪರಸ್ಪರ ಗುರುತು ಹತ್ತಿದ ನಂತರವೂ ಹರಿಶ್ಚಂದ್ರ ಹಾಗವನ್ನು ತಂದರೆ ಮಾತ್ರ ಸಂಸ್ಕಾರಕ್ಕೆ ಅನುಮತಿಸುವುದಾಗಿ ಹೇಳುತ್ತಾನೆ. ಚಂದ್ರಮತಿ ಅದನ್ನು ತರಲು ಅಲ್ಲಿಂದ ಹೊರಡುತ್ತಾಳೆ.

ಐದನೆಯ ಸಂಧಿ: ಕೊನೆಯ ಸಂಧಿಯಲ್ಲಿ ಕಾಶೀ ರಾಜನಿಂದ ಚಂದ್ರಮತಿಗೆ ಮರಣ ದಂಡನೆ, ಕೌಶಿಕನೊಡನೆ ರಾಜನ ಸಂವಾದ, ಹರಿಶ್ಚಂದ್ರನಿಗೆ ದೇವಾನುದೇವತೆಗಳ ಅನುಗ್ರಹ ಮೊದಲಾದ ವಿಚಾರಗಳಿವೆ. ಕಂದನನ್ನು ಕಳೆದುಕೊಂಡು ಪತ್ನಿಯನ್ನು ಕೊಲ್ಲಬೇಕಾದ ಸಂದರ್ಭ ಬಂದಾಗ ಸ್ತ್ರೀ ಹತ್ಯಾದೋಷವೆಂಬ ಪಾತಕವನ್ನೂ ಲೆಕ್ಕಿಸದೆ ಒಡೆಯನ ಮಾತನ್ನು ನಡೆಸುವ ಹರಿಶ್ಚಂದ್ರನ ಸ್ವಾಮಿ ನಿಷ್ಠೆ ಅನುಕರಣೀಯ. ಪಾಪವೋ ಪುಣ್ಯವೋ ಒಡೆಯನ ಮಾತೇ ವೇದವಾಕ್ಯವೆಂದ ಅವನ ಮನದಲ್ಲಿ

ಭಾಪು ವಿಧಿಯೆ ಕಂದನ ಮರಣವ ಕಂಡು
ಈ ಪರಿಯೆನ್ನ ಸತಿಯನು
ಕಾಪಾಲಿಯೆ ಬಲ್ಲ ನಾನೆತ್ತಿ ಹೊಯ್ವುದ
ಈ ಪರಿಗಿನ್ನು ಅಂಜುವೆನೆ.

ಎಂದು ಹರಿಶ್ಚಂದ್ರ ಸತಿಯನ್ನು ಕೊಲ್ಲಲು ಕತ್ತಿ ಹಿಡಿದು ನಿಂತಾಗ ಕೌಶಿಕನು ಆಕಾಶದಲ್ಲಿ ನಿಂದು "ಸತ್ತ ಮಗನನ್ನು ಬದುಕಿಸುವೆನು, ನಿನ್ನ ಸತಿಯ ಪ್ರಾಣವನ್ನು ಉಳಿಸುವೆನು, ನಿನ್ನ ಸಕಲ ಸಾಮ್ರಾಜ್ಯವನ್ನು ಹಿಂದಿರುಗಿಸುವೆನು" ಎಂದು ಹರಿಶ್ಚಂದ್ರನ

ಮನ ಪರಿವರ್ತಿಸಿ ತನ್ನ ಮಕ್ಕಳನ್ನು ಮದುವೆಯಾಗಲು ಒಪ್ಪಿಸಲು ಯತ್ನಿಸುತ್ತಾನೆ. ಏನೇ ಹೇಳಿದರೂ ಹರಿಶ್ಚಂದ್ರ ಒಪ್ಪದೆ ಸತಿ, ಸುತ, ರಾಜ್ಯ ಎಲ್ಲವೂ ಹೋದರೂ ಸರಿ ಸತ್ಯ ಬಿಡಲಾರೆ. ಮೃಡನಿಗೆ ಸಮರಾದ ತಾವು ಈ ರೀತಿ ಹೇಳಬಹುದೆ? ಎನ್ನುತ್ತಾನೆ. ಕತ್ತಿ ಎತ್ತಿ ಸತಿಯನ್ನು ಹೊಯ್ದು ಒಡೆಯನ ಆಜ್ಞೆ ನೆರವೇರಿಸುವ ಸಂದರ್ಭದಲ್ಲಿ

ನೊಸಲ ಕಂಗಳು ದಶ ಭುಜ ಪಂಚಮುಖವುಳ್ಳ
ಎಸೆವ ಕೆಂಜೆಡೆ ಕೋಟಿ ರವಿಯು
ಮುಸುಕಿದ ಶಶಿ, ಅರಿದಲೆ ಪುಲಿದೊಗಲಿನ
ಎಸೆವ ಶಿವನು ಬಂದನಾಗ.

ಒಡನೆಯೇ ಪಾರ್ವತಿ, ವೀರೇಶ, ನಂದೀಶ ಸಹಿತನಾಗಿ ಕಾಶಿಯ ಲಿಂಗ ಮೃಡ ಅಲ್ಲಿ ತೋರಿಕೊಂಡನು. ಅವನೊಡನೆ ಮಹಾ ವಿಷ್ಣು ಬ್ರಹ್ಮ, ಇಂದ್ರ, ಮುನಿಗಳು, ದೇವರುಗಳು ಎಲ್ಲರೂ ಬಂದರು. ಪುಷ್ಪವೃಷ್ಟಿಯಾಯಿತು. ಶಿವನು ಮೆಚ್ಚಿ ಹರಿಶ್ಚಂದ್ರನಿಗೆ "ಮೂಲೋಕವ ಸಂದೇಹ ಬೇಡ ಆಳೆಂದು" ಅನುಗ್ರಹಿಸಿದನು. ವಸಿಷ್ಠರಿಗೆ ತಪಸ್ಸಿನ ಅರ್ಧ ಫಲವನ್ನು ಕೌಶಿಕನು ಧಾರೆಯೆರೆನು.

ನೆರೆದಿಹ ಸಪ್ತ ದ್ವೀಪದ ಧರಣೀಶನೀತನ
ಪುರಕೊಯ್ಯಲೇಕೆ ಎನುತ
ಹರಿಹರ ಮೊದಲಾಗಿ ಸುರಮುನಿಗಳು ಕಾಶೀ
ಪುರದೊಳು ಪಟ್ಟ ಗಟ್ಟಿದರು.

ಹರನ ಕರುಣೆ ಪಡೆದ ಹರಿಶ್ಚಂದ್ರ ನೃಪನು ತನ್ನ ಅಯೋಧ್ಯೆಗೆ ಹಿಂದಿರುಗಿದನು. ವಿಶ್ವಾಮಿತ್ರರು, ವಸಿಷ್ಠರು ತಮ್ಮ ತಮ್ಮ ಆಶ್ರಮಗಳಿಗೆ ತೆರಳಿದರು.

ಸತ್ಯದ ನೆಲೆ ಮುಕ್ತಿಯ ಬೀಡು ಪುಣ್ಯದ
ಕೀರ್ತಿಯ ತಲೆವನೆಯನಿಸಿ
ಸತ್ಯದ ಕಥೆಯ ಕೇಳಿದ ಪುಣ್ಯ ಜನರಿಗೆ
ನಿತ್ಯವಾಗಲಿ ಸುಖವೆಂದ

ಎಂದ ಫಲಶ್ರುತಿಯೊಂದಿಗೆ ಈ ಕಾವ್ಯ ಸಮಾಪ್ತಿಯಾಗಿದೆ. ಬೊಂಬೆಯಲಕ್ಕ ತನ್ನ ಕಾವ್ಯದ ಮೂಲವನ್ನು ತಿಳಿಸದಿದ್ದರೂ ಅದು ರಾಘವಾಂಕನ ಹರಿಶ್ಚಂದ್ರ ಕಾವ್ಯವೇ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ರಾಘವಾಂಕನ ಕಾವ್ಯದ ಸಾಂಗತ್ಯ ರೂಪವೇ ಈತನ ಕೃತಿ. ಹರಿಶ್ಚಂದ್ರ ಕಾವ್ಯದ ಪದಗಳು, ಪಾದಗಳು ಪದ್ಯಗಳೇ ಈ ಸಾಂಗತ್ಯದಲ್ಲಿ ಕಂಡು ಬರುತ್ತವೆ. ಬೊಂಬೆಯ ಲಕ್ಕನ ಕೃತಿ ಇತರ ಸಾಂಗತ್ಯ ಕೃತಿಗಳಿಗಿಂತ ಚಿಕ್ಕದು ಕವಿ ಅಷ್ಟಾಗಿ ಸ್ವಂತಿಕೆಯನ್ನು ತೋರ್ಪಡಿಸಿಲ್ಲ ರಾಘವಾಂಕನನ್ನು ಯಥಾವತ್ತಾಗಿ

ಅನುಸರಿದ್ದಾನೆ. ಅಪರೂಪಕ್ಕೆ ತನ್ನದೇ ಕಲ್ಪನೆಯಲ್ಲಿ ಹೇಳಿದ್ದಾನೆ. ಹಲವು ಕಡೆ ರಾಮರಸ ವಿರೂಪಾಕ್ಷನನ್ನು ಅನುಸರಿಸಿದ್ದಾನೆ. ಕೆಲವೆಡೆ ಕವಿ ತನ್ನದೇ ಅದ ಕಲ್ಪನೆಯಲ್ಲಿ ಮಾಡಿದ ಕೆಲವು ವಿಚಾರಗಳನ್ನು ಮಾರ್ಪಡಿಸಿರುವುದೂ ಉಂಟು. ವಾರ್ಧಕದಲ್ಲಿನ ಪ್ರೌಢ ಕಾವ್ಯವನ್ನು ಜನ ಸಾಮಾನ್ಯರಿಗೂ ಅರ್ಥವಾಗುವಂತೆ ಸಾಂಗತ್ಯದಲ್ಲಿ ರಚಿಸಿರುವುದು ಈತನ ವೈಶಿಷ್ಟ್ಯ. ಭಾಷೆ ಅತ್ಯಂತ ಸರಳವೂ ಸುಲಭವೂ ಆಗಿದೆ. ಇವನ ಸಾಂಗತ್ಯದಲ್ಲಿ ಮಹಾ ಕಾವ್ಯಗಳಲ್ಲಿ ಬರುವ ವೇಶ್ಯಾವರ್ಣನೆ ಕಂಡುಬರುವುದಿಲ್ಲ. ಇದು ಒಂದು ದಿಟ್ಟತನದ ಹೆಜ್ಜೆಯಾಗಿದೆ. ಅಂದಿನ ಕವಿಗಳಲ್ಲಿ ಕೆಲವರಿಗೆ ಸೂಳೆಗೇರಿಯ ವರ್ಣನೆ ಅನುಚಿತವೆಂದು ಭಾವಿಸಿದ್ದರು. ಯಕ್ಷಗಾನ, ಬಯಲಾಟ, ಹಾಡುಗಳ ರೂಪದಲ್ಲಿ ವಿಶೇಷವಾಗಿ ಪ್ರಚಾರದಲ್ಲಿದ್ದ ಈ ಕಥೆ ಇತ್ತೀಚಿನ ದಿನಗಳಲ್ಲಿ ಕಡಿಮೆಯಾಗಿದೆ. ರಾಮರಸ ವಿರೂಪಾಕ್ಷ ಬೊಂಬೆಯ ಲಕ್ಕ, ಓದುವ ಗಿರಿಯ, ಹಲಗ ಇವರುಗಳ ಸಾಂಗತ್ಯ ಕೃತಿಗಳು ಹಾಗೂ ರಾಘವಾಂಕನ ಕಾವ್ಯಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ಅವಕಾಶಗಳಿವೆ.

ಅಡಿ ಟಿಪ್ಪಣಿ :

1. ಹರಿಶ್ಚಂದ್ರ ಸಾಂಗತ್ಯ, ಸಂ.ಸಿಪಿಕೆ. ಪುಟ 11
2. ಅದೇ, ಪುಟ ಸಂಖ್ಯೆ 11 ಹ. ಸಾಂಗತ್ಯ. ಸಂ. ಸಿಪಿಕೆ
3. ಎನ್. ಬಸವಾರಾಧ್ಯ ಹ. ಸಾಂಗತ್ಯ ಸಂಸ್ಥಾಪನದ ವಯಸ್ಕರ ಶಿಕ್ಷಣ ಸಮಿತಿ ಮೈಸೂರು 1954 ಪುಟ 5
4. (ಅದೇ ಪುಟ 6)

ಪರಾಮರ್ಶನ ಸಾಹಿತ್ಯ :

1. ಹರಿಶ್ಚಂದ್ರ ಕಾವ್ಯ, ರಾಘವಾಂಕ ಸಂ ಟಿ ಎಸ್ ವೆಂಕಣ್ಣಯ್ಯ ಗವರ್ನಮೆಂಟ್ ಬ್ರ್ಯಾಂಚ್ ಪ್ರೆಸ್ 1931
2. ಹರಿಶ್ಚಂದ್ರ ಸಾಂಗತ್ಯ ರಾಮರಸ ವಿರೂಪಾಕ್ಷ ಸಿಪಿಕೆ
3. ಹರಿಶ್ಚಂದ್ರ ಸಾಂಗತ್ಯ ಬೊಂಬೆಯಲಕ್ಕ ಸಂ. ಎನ್ ಬಸವಾರಾಧ್ಯ, ಕರ್ನಾಟಕ ಸಾಹಿತ್ಯ ಮಂದಿರ 1854
4. ಮಹಾಭಾರತ, ಭಾರತದರ್ಶನ ಪ್ರೆಸ್

***

ಮಾಳವರು ಭಾರತದ ಮೂಲನಿವಾಸಿಗಳು ಮಾಳವರ ಹಳ್ಳಿ – ಮಳವಳ್ಳಿ

ಕೆ.ಎನ್. ನಂದೀಶ

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಂಕೋಲಾ

ಉತ್ತರ ಕನ್ನಡ ಜಿಲ್ಲೆ.

ಚಿರಕಾಲ ಬೆಳಗಲಿ ಕನ್ನಡದ ದೀಪ
ಜನಕೆಲ್ಲ ಬೆಳಕಾಗಿ ಪುಣ್ಯಪ್ರದೀಪ
ಭಾರತಕೆ ಬಲವಾಗಿ ಭವ್ಯದೀಪ
ಕಳೆಯುತ್ತ ತಾಪ ಬೆಳೆಸುತ್ತು ಸೈಪ
ಹೊತ್ತಿತ್ತೋ ಹೊತ್ತಿತ್ತು ಕನ್ನಡದ ದೀಪ

– ಡಾ. ಸಿದ್ಧಯ್ಯ ಪುರಾಣಿಕ.

ಮಳವಳ್ಳಿ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಒಂದು ಪಟ್ಟಣ ಮತ್ತು ತಾಲ್ಲೂಕು. ಮಂಡ್ಯ ಜಿಲ್ಲೆಯಲ್ಲಿಯೇ ಅತಿ ದೊಡ್ಡ ಜನ ಸಂಖ್ಯೆ ಮತ್ತು ಅತಿ ಹೆಚ್ಚು ರೈತರನ್ನು ಒಳಗೊಂಡಿರುವುದು ಈ ತಾಲ್ಲೂಕಿನ ವಿಶೇಷವಾಗಿದೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನಲೆಯಲ್ಲಿ ಜನಪದ ಸಾಹಿತ್ಯದ ತವರೂರು ಪ್ರದೇಶವಾಗಿದೆ. ಹಾಗೆಯೇ ಮೊದಲು ಮೈಸೂರು ಜಿಲ್ಲೆಗೆ ಸೇರಿತ್ತು. 1939 ಜುಲೈ 1ರಂದು ಹೊಸದಾಗಿ ರಚಿಸಲ್ಪಟ್ಟ ಮಂಡ್ಯ ಜಿಲ್ಲೆಗೆ ಸೇರಿತು. ಈ ತಾಲ್ಲೂಕು ಕಾವೇರಿ ನದಿಯ ಕಣಿವೆಯಲ್ಲಿ ಸಮುದ್ರಮಟ್ಟದಿಂದ ಸುಮಾರು 762 ಮೀಟರ್‌ನಿಂದ 914 ಮೀಟರ್ ಇದೆ. ಬಿಳಿಗಿರಿರಂಗನಬೆಟ್ಟದಿಂದ ಮುಂದುವರೆದ ಕಣಶಿಲೆಯ ಬೆಟ್ಟಗಳು ಕಂಡುಬರುತ್ತದೆ.. ಐತಿಹಾಸಿಕ ಹಿನ್ನಲೆ, ಧಾರ್ಮಿಕತೆಯ ಸೊಗಡು, ದ್ರಾವಿಡ ಸಂಸ್ಕೃತಿ, ನೀರಾವರಿ,

ಕಲೆ, ಸಾಹಿತ್ಯ, ಸಾಂಸ್ಕೃತಿಕ ಮುಂತಾದ ವಿಶಿಷ್ಟತೆಯ ತಾಣವಾಗಿದೆ.

ಮಳವಳ್ಳಿ ಪದದ ಅರ್ಥ, ನಿಷ್ಪತ್ತಿ ಮತ್ತು ವಿಸ್ತಾರತೆ:

ಡಾ. ಜಿ.ವಿ. ದಾಸೇಗೌಡರು ಕನ್ನಡ ಪುಸ್ತಕ ಪ್ರಾಧಿಕಾರದವರು ಪ್ರಕಟಿಸಿರುವ "ಮಂಡ್ಯ ಜಿಲ್ಲೆಯ ಜಾತ್ರೆಗಳು" ಎಂಬ ಪುಸ್ತಕದಲ್ಲಿ 'ಮಳವಳ್ಳಿ' ಎಂಬ ಪದದ ಉತ್ಪತ್ತಿಯ ಬಗ್ಗೆ ಈ ಕೆಳಗಿನಂತೆ ಬರೆದಿರುತ್ತಾರೆ.

ಮಳವಳ್ಳಿಯ ಸುತ್ತಲ ಪ್ರದೇಶ ಅರಣ್ಯಮಯವಾಗಿತ್ತಂತೆ. ಈ ಕಾಡಿನಲ್ಲಿ ಸುವಾಸನಾಯುತವಾದ ಮಲ್ಲೆ ಹೂವಿನ ಬಳ್ಳಿಗಳು ಅಧಿಕವಾಗಿದ್ದುವಂತೆ. ಈ ಹೂವುಗಳನ್ನು ಕಾಡುಮಲ್ಲೆ ಹೂ ಎನ್ನುತ್ತಿದ್ದರಂತೆ, ಮಲ್ಲೆ ಹೂವಿನ ಬಳ್ಳಿಗಳು ಅಧಿಕವಾಗಿದ್ದ ಈ ಊರನ್ನು ಜನ 'ಮಲ್ಲೆವಲ್ಲಿ' ಎಂದು ಕರೆಯುತ್ತಿದ್ದು ಕ್ರಮೇಣ ಮಳವಳ್ಳಿಯಾಯಿತು. 'ಮಳವಳ್ಳಿ' ಪದದ ನಿಷ್ಪತ್ತಿಯನ್ನು ಹೀಗೆ ಗುರುತಿಸಬಹುದು : ಮಲೆವಲ್ಲಿ>ಮಲ್ಲವಲ್ಲಿ>ಮಲವಲ್ಲಿ>ಮಳವಳ್ಳಿ. ಇಲ್ಲಿ 'ಲ' ಕಾರಕ್ಕೆ 'ಳ'ಕಾರ ಸಹಜವಾಗಿಯೇ ಬಂದಿದೆ. ಇದು ಉಚ್ಚಾರಣೆಯಲ್ಲಾದ ಗಮನಾರ್ಹ ಬದಲಾವಣೆ. ಕಂಠಸ್ಥ ಸಂಪ್ರದಾಯದಲ್ಲಿ ಮತ್ತೊಂದು ಗಮನಾರ್ಹ ಸಂಗತಿ ಇದೆ. ಮಳವಳ್ಳಿಯ ಸುತ್ತಲೂ ಕಾಡಿತ್ತು. ಈ ಕಾಡು ಪ್ರದೇಶದಲ್ಲಿ ವಿಶೇಷವಾಗಿ ಬಿಳಿಯ ಮೊಲಗಳಿದ್ದುವಂತೆ. ಆದ್ದರಿಂದ ಈ ಊರನ್ನು 'ಮೊಲದಹಳ್ಳಿ' ಎಂದು ಕರೆಯುತ್ತಿದ್ದು ಕಾಲಕ್ರಮೇಣ ಮೊಲಹಳ್ಳಿ>ಮೊಲವಳ್ಳಿ>ಮಳವಳ್ಳಿ ಎಂದಾಗಿರುವ ಸಾಧ್ಯತೆ ಇದೆ ಎನ್ನುತ್ತಾರೆ. ಮಳವಳ್ಳಿಯು ಬೆಟ್ಟಗುಡ್ಡಗಳಿಲ್ಲದ ಮಟ್ಟಸವಾದ ಪ್ರದೇಶದಲ್ಲಿದೆ. ಮಳವಳ್ಳಿ ತಾಲೂಕಿನ ಅಂಚಿನಲ್ಲಿ ಕಾವೇರಿ ಹರಿಯುತ್ತಾಳೆ. ಕಾವೇರಿಯ ಅಕ್ಕ-ಪಕ್ಕ ಬೆಟ್ಟ-ಗುಡ್ಡಗಳಿವೆ. ಆದರೆ ಮಳವಳ್ಳಿ ಊರಿರುವ ಪ್ರದೇಶ ಮಾತ್ರ ಮಟ್ಟಸವಾದ ಪ್ರದೇಶದಲ್ಲಿದೆ. 'ಮಳವಳ್ಳಿ ಊರು ಮಾಳದಲ್ಲಿ ಹುಟ್ಟಿ ಬೆಳೆದಿದೆ. ಮಳವಳ್ಳಿ ಜನರ ಆಡು ಮಾತಿನಲ್ಲಿ ಮಾಳ ಎಂದರೆ ಮಟ್ಟಸವಾದ ಮೈದಾನ, ಅದಕ್ಕೆ ಹಿಂದೆ 'ಮಾಳದ ಹಳ್ಳಿ' ಎನ್ನುತ್ತಿದ್ದಿರಬೇಕು. ಆ ನಂತರ ಮಳವಳ್ಳಿಯಾಗಿದೆ.

ಕೆ. ಅನ್ನದಾನಿಯವರು ತಮ್ಮ "ಉತ್ತರ ದೇಸ ಕರಾಜ್ಯ" ಎಂಬ ಪುಸ್ತಕದಲ್ಲಿ 'ಮಳವಳ್ಳಿ' ಎಂಬ ಹೆಸರು ಮೂಡಿದ ಬಗ್ಗೆ ಈ ಕೆಳಗಿನ ಕಥೆಯನ್ನು ಬರೆದಿದ್ದಾರೆ. ಮಳವಳ್ಳಿ ಎಂಬ ಗ್ರಾಮದ ಹೆಸರು ಮತ್ತು ವೈಶಿಷ್ಟತೆ. (ಎಂ.ಸಿ. ವೀರೇಗೌಡರ ಮಾಹಿತಿಯನ್ನು ಆಧರಿಸಿ). ಹಿಂದೆ ಮಳವಳ್ಳಿ ಎಂಬ ಊರು ಇರಲಿಲ್ಲ. ಪ್ರಾಚೀನ ಕಾಲದಿಂದಲೂ ಒಂದು ಮಾತಿದೆ ಮಳವಳ್ಳಿ ಪಕ್ಕದಲ್ಲಿ ಮಂಚನಹಳ್ಳಿ ಶ್ರೀ ಶೈಲದ ಗಂಗರಸರು ಆ ಕಡೆಯಿಂದ ಕುದುರೆಯಲ್ಲಿ ಸವಾರಿ ಬರುವಾಗ ಅವರ ಜೊತೆಯಲ್ಲಿ ಅವರ ಭೇಟೆ ನಾಯಿಯೂ ಬರುತ್ತಾ ಇರುತ್ತದೆ. ರಾಜನ ಜೊತೆಯಲ್ಲಿ ಬಂದಿದ್ದಂತ

ಬೇಟೆನಾಯಿ, ಆ ಗುಡಿಸಿಲಿನ ಪಕ್ಕದಲ್ಲಿ ಕುಂಬಳ ಬಳ್ಳಿ ಬೆಳೆದು ಸೊಂಪಾಗಿ ಹಬ್ಬಿರುತ್ತದೆ. ಮೊಲ ನಾಯಿಯ ಮೇಲೆ ಹೋರಾಟಕ್ಕೆ ಸಿದ್ಧವಾಗುತ್ತದೆ. ಸಿದ್ಧವಾದಾಗ ಮೊಲದ ಆರ್ಭಟವನ್ನು ತಾಳಲಾರದೆ ನಾಯಿಯೇ ಓಡಲು ಶುರು ಮಾಡುತ್ತದೆ. ಮೊಲ ಹಿಂದಿನಿಂದ ಅಟ್ಟಿಸಿಕೊಂಡು ಹೋಗಿ ಈಗಿನ ಮಳವಳ್ಳಿಯ ಒಕ್ಕಲುಗೇರಿಯ ಸಿದ್ಧಪ್ಪಾಜಿಯ ದೇವಸ್ಥಾನದ ಬಳಿ ಬಂದು ಈ ಮೊಲವೇ ನಾಯಿಯನ್ನು ಕಚ್ಚಿ ಕೆಡುವುತ್ತದೆ. ಇದೆಲ್ಲವನ್ನು ನೋಡುತ್ತಿದ್ದ ಅರಸನಿಗೆ ಈ ಮೊಲವೇ ನಾಯಿಯನ್ನು ಕಚ್ಚಿ ಕೆಡವಿತಲ್ಲ ಎಂದು ಆಶ್ಚರ್ಯವಾಗಿ, ಇದು ಒಂದು ಗಂಡುಭೂಮಿ, ಮೊಲದ ಸಾಂಕೇತಿಕವಾಗಿ ಈ ಊರು ಮೊಲವಳ್ಳಿ ಎಂದು ಇಲ್ಲಿ ಸ್ಥಾಪನೆಯಾಗುತ್ತದೆ. ಮುಂದೆ ಇದು ಪ್ರಸಿದ್ಧಿಯಾಗುತ್ತದೆ ಎಂದು ಗಂಗರಸರು ಪ್ರತೀತಿಯಾಗಿ ಹೆಸರನ್ನು ಕಟ್ಟುತ್ತಾರೆ.

ಮಳವಳ್ಳಿಯ ಸಂಕ್ಷಿಪ್ತ ಇತಿಹಾಸ: (ಮಾಳ್ವರು)

300 ವರುಷಗಳ ಹಿಂದೆ ಮಾಳ್ವರು ಬಂದರು. ಈಗಿನ ಮಾಗನೂರು, ಮಾದಳ್ಳಿ, ಸಷಿಯಾಲ ಪುರಗಳಲ್ಲಿ ಡೇರೆ ಹಾಕಿ ನಿಂತರು. ಕ್ರಿ.ಶ. 1700ರಲ್ಲಿ ಅಂದರೆ ವಿಜಯ ನಗರ ಹಾಳು ಹಂಪೆಯಾಗಿ ಕೊನೆಯ ದೊರೆ ಚಿನ್ನವೆಂಕಟನು ದೇಶವಾಳುತ್ತಿದ್ದನು. ಮೈಸೂರು ಮೊದಲ ಅರಸು ಚಾಮರಾಜ ಒಡೆಯರ ನಂತರ ಇಮ್ಮಡಿ ಕೃಷ್ಣರಾಜರ ಆಳ್ವಿಕೆಯು ಆರಂಭದಲ್ಲಿ ಹೈದರ್ಆಲಿಯು ಮಹಾಸೇನದಂಡನಾಯಕನಾಗಿದ್ದ ಸಂದರ್ಭದಲ್ಲಿ ವಿಜಯನಗರದ ಅರಸನ ಅಣತಿಯಂತೆ ಮಾಳ್ವ ಜನಾಂಗ ಈ ಪ್ರದೇಶದಲ್ಲಿ ಬಂದು ಕಂದಾಯ ವಸೂಲಿ ಮಾಡಲ್ಪಡುತ್ತಿದ್ದರೆಂದು ತಿಳಿದು ಬರುತ್ತದೆ. ಕುರುಹಾಗಿ ಮಳವಳ್ಳಿ ಕೆರೆಯ ಬಯಲು ಪ್ರದೇಶ ಅದರ ಉತ್ತರ–ಪಶ್ಚಿಮ ದಿಕ್ಕಿನಿಂದ ಮಳವಳ್ಳಿಯ ಗ್ರಾಮ(ಪಟ್ಟಣ) ವಿಸ್ತೀರ್ಣ ಪ್ರಾರಂಭವಾಗಿರುತ್ತದೆ. ಸರ್ವೆ ನಂ. 1 ರಿಂದ 84 ರವರೆಗೆ ಮದ್ದೂರು ರಸ್ತೆಯ ಪಶ್ಚಿಮಕ್ಕೆ ಸರ್ವೆ ನಂ. 85 ರಿಂದ 124 ರವರೆಗೆ ಖಾತೆಯನ್ನು ಪರಿಶೀಲಿಸಬಹುದು. ಇವುಗಳು ಹಿಂದೆ ಪರಿಶಿಷ್ಟ ಜಾತಿಗೆ ಸೇರಿದ ಜಮೀನುಗಳು ಆಗಿರುತ್ತವೆ. ಇದರಿಂದ ಮಾಳ್ವರು ಬಂದು ಮೇಲೇಳಿದ ಮಾಗನೂರಿನಲ್ಲಿ ಉಳಿದಿದ್ದು, 1799ರಲ್ಲಿ ಟಿಪ್ಪು ಸುಲ್ತಾನರೊಡನೆ ಇಂಗ್ಲೀಷರು ನಡೆಸಿದ ಎರಡನೇ ಮಹಾಯುದ್ಧದಲ್ಲಿ ಪಾಲುಗೊಂಡಿರುವುದು ಸಾಕ್ಷಿ ಆಧಾರವಾಗಿ ತಿಳಿದುಬರುತ್ತದೆ. ಅಂದರೆ ಈಸ್ಟ್ ಇಂಡಿಯಾ ಕಂಪನಿಯ ಮಿಲಿಟರಿ ಚಿತ್ರಕಾರರಾದ ವಿಲಿಯಂ ಹಿಟ್‌ರವರು ಎರಡು ದಾಖಲೆಗಳನ್ನು ಬಿಟ್ಟು ಹೋಗಿರುವ ಇದರ ನಕಾಶೆಯು ನಾರ್ವೆ ನ್ಯಾಷನಲ್ ಮ್ಯೂಸಿಯಂನಲ್ಲಿ ಮತ್ತು ಇದೇ ಸಮಯದಲ್ಲಿ ಕುಂಚ ಕಲೆಯನ್ನು ಬಿಡಿಸಿದ ಬಣ್ಣದ ಚಿತ್ರವನ್ನು ಲಂಡನ್‌ನಲ್ಲಿ ಸಂಗ್ರಹಿಸಲಾಗಿದೆ.

ಹಾಗೆಯೇ ಜರ್ಮನ್ ಪಂಡಿತರಾದ ಗುಸ್ತಾವ್ ಓಪರ್ಟ್ ಅವರು ಬರೆದಿರುವ 'ದ್ರಾವಿಡರು' ಎಂಬ ಪುಸ್ತಕದಲ್ಲಿ ಮಾಳವರು ಭಾರತದ ಮೂಲನಿವಾಸಿಗಳು ಮತ್ತು ಮಳವಳ್ಳಿ ಪದವ್ಯುತ್ಪತ್ತಿಯ ಮೂಲವನ್ನು ಮಲ್ಲರು ಅಥವಾ ಮಾಳವರು ಎಂಬುದರಿಂದ ಬಂದಿದೆ ಎಂಬ ಮಾಹಿತಿಗೆ ಅನುಗುಣವಾಗಿ ಅಪರೋಕ್ಷವಾಗಿ "ಒರಿಜಿನಲ್ ಇನ್‌ಹ್ಯಾಬಿಟೆಂಟ್ಸ್ ಆಫ್ ಭಾರತ ವರ್ಷ" ಕೃತಿಯು ಪ್ರತಿಪಾದನೆಯನ್ನು ಬಳಸಿಕೊಂಡಿದ್ದಾರೆ. ಶಂಬಾಜೋಷಿ ಅವರ ಪ್ರಕಾರ ಈ ಮಾಳವರು ಕರ್ನಾಟಕಕ್ಕೂ ಮೂಲಪುರುಷರು, ಐ.ಪಿ.ಎಸ್. ಅಧಿಕಾರಿಯಾಗಿದ್ದ ಮಳವಳ್ಳಿ ನಂಜುಂಡಸ್ವಾಮಿಯವರ 'ಭಾರತದ ಮೊದಲ ದೊರೆಗಳು' ಎಂಬ ಹೊತ್ತಿಗೆಯ ಗಮನಿಸಬಹುದು. ಎರಡನೇ ಶತಮಾನದಿಂದಲೇ ಮಳವಳ್ಳಿಪುರ ಇತಿಹಾಸದಲ್ಲಿ ಗೋಚರಿಸುತ್ತದೆ. ಗಂಗರು ಎರಡನೆಯ ಶತಮಾನದಿಂದ ಹನ್ನೊಂದನೇ ಶತಮಾನದವರೆಗೆ ಆಳಿದರು. ಈ ಪ್ರದೇಶವು 'ಚಿಕ್ಕಗಂಗವಾಡಿ' ಎಂಬ ಆಡಳಿತದ ವಿಭಾಗಕ್ಕೆ ಸೇರಿತ್ತು.

ಕ್ರಿ.ಶ. ಸುಮಾರು 1004ರಲ್ಲಿ ಚೋಳರು ಗಂಗರಸರ ಸೋಲಿಸಿ ಮಳವಳ್ಳಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಮಳವಳ್ಳಿಯನ್ನಾಳಿದರು. ನಂತರ ಹೊಯ್ಸಳರಿಗೂ, ಚೋಳರಿಗೂ ನಿರ್ಣಾಯಕ ಯುದ್ಧವಾದ ನಂತರ ಚೋಳರು ಸೋತು ಮೈಸೂರು ಪ್ರಾಂತ್ಯದಿಂದಲೇ ತೊಲಗಿದರು. ಗಂಗರ ಎಲ್ಲಾ ಸಂಸ್ಥಾನಗಳನ್ನು ಚೋಳರಿಂದ ಜಯಿಸಿದ ವಿಷ್ಣುವರ್ಧನನು ತನ್ನ ಈ ಮಹಾನ್ ವಿಜಯದ ನಂತರ 'ವೀರಗಂಗ' ಎಂಬ ಬಿರುದು ಗಳಿಸಿದನು. 1399 ರಲ್ಲಿ ಮೈಸೂರು ಒಡೆಯರ ಆಡಳಿತದ ತೆಕ್ಕೆಗೆ ಮಳವಳ್ಳಿ ಸೇರಿತು. ಚಿಕ್ಕದೇವರಾಯರು ತಮ್ಮ ಕಾಲದಲ್ಲಿ ಇಂದು ಮುದಿಕೆರೆ ಅಥವಾ ದೊಡ್ಡಕೆರೆ ಎಂದು ಹೆಸರಾದ ಮಳವಳ್ಳಿ ಕೆರೆಯನ್ನು ಕಟ್ಟಿಸಿದರು. ಮೈಸೂರು ಒಡೆಯರಿಂದ ಅಧಿಕಾರ ಕಸಿದುಕೊಂಡಿದ್ದ ಹೈದರಾಲಿಯು ಟಿಪ್ಪುವಿಗೆ ಮಳವಳ್ಳಿಯನ್ನು ಜಾಗೀರಾಗಿ ಕೊಟ್ಟಿದ್ದ. 1799 ರಲ್ಲಿ ನಡೆದ ನಾಲ್ಕನೇ ಮೈಸೂರು ಯುದ್ಧವು ಮಳವಳ್ಳಿಯಲ್ಲಿ ನಡೆಯಿತು. ಆ ಯುದ್ಧದಲ್ಲಿ ಟಿಪ್ಪುಸುಲ್ತಾನನು ಜನರಲ್ ಹ್ಯಾರಿಸ್‌ನ ಬ್ರಿಟಿಷ್ ಸೈನ್ಯದ ಎದುರು ಸೋತು ಶ್ರೀರಂಗಪಟ್ಟಣಕ್ಕೆ ಓಡಿ ಹೋದನು. ಆತನು ಅಂದು ಬಳಸಿದ ಮಾರ್ಗವನ್ನು ಇಂದಿಗೂ ಮಳವಳ್ಳಿ ಜನರು 'ಸುಲ್ತಾನ್ ರಸ್ತೆ' ಎಂದು ಕರೆಯುತ್ತಾರೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹೈದರ್ ಆಲಿಯ ಸೇನಾ ದಂಡನಾಯಕ ಆಗಿದ್ದಾಗ ಇಲ್ಲಿ ಸೈನಿಕರು, ಆನೆ, ಕುದುರೆಗಳಿಗಾಗಿ ಕೋಟೆಯನ್ನು ಪೂರ್ಣಗೊಳಿಸಿ 'ಗುಣಷನ್‌ಬಾದ್' ಎಂದು ನಾಮಕರಣ ಮಾಡಿದ್ದಾನೆಂದು ತಿಳಿದು ಬಂದಿರುತ್ತದೆ. ನಂತರ ಒಮ್ಮೆ ಟಿಪ್ಪು ಸುಲ್ತಾನ್ ಇಲ್ಲಿ ಬಂದಿದ್ದಾಗ ಆತನ ಬೇಟೆಯ

ನಾಯಿಯನ್ನು ಇಲ್ಲಿ ಪೊದೆಯಲ್ಲಿದ್ದ ಒಂದು ಮೊಲವು ಹಿಮ್ಮೆಟ್ಟಿಸಿತೆಂದು, ಆದುದರಿಂದ ಮೊಲ–ಅಲ್ಲಿ ಎಂಬ ಜ್ಞಾಪಕ ಪದವು, ಆ ಮಾತಿನಂತೆ ಮೊಲ ಅಲ್ಲಿ–ಪ್ರತೀತಿಯಾಗಿ ಮಳವಳ್ಳಿ ಎಂದು ಜನರ ನುಡಿಯಾಯಿತ್ತೆಂದು.

ಬ್ರಿಟೀಷರ ಕಾಲದಲ್ಲಿ ಮಳವಳ್ಳಿಯನ್ನು ಅವರು ಮಲ್ಲವೆಲ್ಲಿ ಎಂದು ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಮಾರ್ಕಾಲು ಬಳಿ ನಡೆದ ದಿನಾಂಕ 27–03–1799ರ ಬ್ರಿಟಿಷರು ಮತ್ತು ಶ್ರೀರಂಗಪಟ್ಟಣದ ಅರಸು ಟಿಪ್ಪು ಸುಲ್ತಾನರ ಯುದ್ಧ ಹೋರಾಟವನ್ನು ಬ್ರಿಟಿಷರ ಕಾಲದ ಇತಿಹಾಸಕಾರರು 'ಮಲ್ಲವೆಲ್ಲಿ' ಹೋರಾಟ ಎಂದು ನಮೂದಿಸಿರುವುದಾಗಿ ತಿಳಿದು ಬಂದಿರುತ್ತದೆ. ಅಂದರೆ ಆಗ ಮಲ್ಲರುಗಳ ಊರು ಅಥವಾ ಮಲ್ಲರ್‌ಹಳ್ಳಿ ಎಂದು ಹೆಸರಾಗಿದ್ದ ಊರೇ, ಇಂದಿನ ಮಾಗನೂರು ಹಾಗೂ ಮಳವಳ್ಳಿ ಎಂಬ ಮಾಹಿತಿಯು ಲಭ್ಯವಿದೆ.

ಮಳವಳ್ಳಿ ತಾಲ್ಲೂಕಿನ ಆಕರ್ಷಣೆ ಮತ್ತು ವೈವಿಧ್ಯತೆ :

ಮಳವಳ್ಳಿ ತಾಲ್ಲೂಕು ಕಾವೇರಿ ಕಣಿವೆಯಲ್ಲಿ ಸಮುದ್ರ ಮಟ್ಟಕ್ಕೆ ಸುಮಾರು 762 ಮೀಟರ್‌ನಿಂದ 914 ಮೀಟರ್ ಎತ್ತರವಿದೆ. ಪೂರ್ವದಿಕ್ಕಿನಲ್ಲಿ ಸಣ್ಣ ಬೆಟ್ಟಗಳಾದ ಭೀಮನ ಕಿಂಡಿ ಬೆಟ್ಟ, ಕಬ್ಬಾಳ ಬೆಟ್ಟ, ಬಸವನಬೆಟ್ಟ(ಹೆಬ್ಬೆಟ್ಟ) ಮತ್ತು ಅಂತರಹಳ್ಳಿ ಬೆಟ್ಟಗುಡ್ಡಗಳು ಹಾಗೂ ದಕ್ಷಿಣಕ್ಕೆ ಕುಂದೂರು ಬೆಟ್ಟ, ಪಶ್ಚಿಮಕ್ಕೆ ವಡ್ಡಗಲ್ ರಂಗಸ್ವಾಮಿ ಬೆಟ್ಟ (ಕಲ್ಕುಣಿ ಬೆಟ್ಟ) ಗುಡ್ಡಗಳು ಕಂಡು ಬರುತ್ತವೆ. ಕಾವೇರಿ ನದಿಯ ತಾಲ್ಲೂಕಿನ ಪಶ್ಚಿಮ ದಕ್ಷಿಣಾ ಪೂರ್ವವಾಗಿ ಹರಿದು, ಟಿ. ನರಸೀಪುರ ತಾಲ್ಲೂಕು ಹಾಗೂ ಕೊಳ್ಳೇಗಾಲ ತಾಲ್ಲೂಕುಗಳನ್ನು ವಿಭಾಗ ಮಾಡಿ, ಶಿವನ ಸಮುದ್ರದ ಬಳಿ ಎರಡು ಭಾಗಗಳಾಗಿ ಹರಿದು, ಶಿವನ ಸಮುದ್ರವನ್ನು ದ್ವೀಪವಾಗಿಸಿ, ಕಾವೇರಿ ನದಿ ಗಗನಚುಕ್ಕಿ–ಭರಚುಕ್ಕಿ(ಪ್ರಸ್ತುತ ಕೊಳ್ಳೇಗಾಲ ತಾಲ್ಲೂಕು. ಚಾಮರಾಜನಗರ ಜಿಲ್ಲೆ) ಎಂದೆನಿಸಿ, ಅಲ್ಲದೆ ಏಷ್ಯಾ ಖಂಡದಲ್ಲೇ ಮೊಟ್ಟ ಮೊದಲ ಜಲವಿಧ್ಯುತ್ ಉತ್ಪಾದನೆಯ ತಾಣವೆಂದ ಬ್ಲಫ್ ಜಗತ್ಪ್ರಸಿದ್ಧಿ ಪಡೆದ ಸ್ಥಳವು ಆಗಿರುತ್ತದೆ. 300 ಅಡಿ ಎತ್ತರದಿಂದ(ಜಲಪಾತ) ಧುಮುಕಿ, ಮುಂದೆ ಸಾಗುತ್ತಾ, ತೊರೆಕಾಡನಹಳ್ಳಿಯ ಕದಂಬ ಗ್ರಾಮದ ಬಳಿ ಶಿಂಷಾ ನದಿಯೊಡನೆ ಸಂಗಮವಾಗಿ (ಕದಂಬ ಗ್ರಾಮದ ಬಳಿ), ಮತ್ತೆ ಹರಿದು ಅರ್ಕಾವತಿ ನದಿಯೊಡನೆ ಸಂಗಮದ ಬಳಿ ಕೂಡಿಕೊಂಡು, ಮೆಟ್ಟೂರು ಡ್ಯಾಂ ಸೇರಿ, ಮುಂದೆ ಸಮುದ್ರ ಸೇರುತ್ತದೆ. ಮಧ್ಯರಂಗವೆಂದು ಪ್ರಸಿದ್ಧಿ ಪಡೆದ ಶಿವನಸಮುದ್ರದ ಶ್ರೀರಂಗನಾಥ ದೇವಾಲಯವಿದೆ. ಶಿಂಷಾ ನದಿ ತುಮಕೂರು ಜಿಲ್ಲೆಯ ದೇವರಾಯನ ದುರ್ಗದ ದಕ್ಷಿಣ ಭಾಗದಲ್ಲಿ ಹುಟ್ಟಿ ಆಗ್ನೇಯ ದಿಕ್ಕಿನಲ್ಲಿ ಹರಿದು ಮದ್ದೂರು ತಾಲ್ಲೂಕನ್ನು ದಾಟಿ, ಮಳವಳ್ಳಿ ತಾಲ್ಲೂಕಿನ ಇಗ್ಗಲೂರು ಬಳಿ ಆಣೆಯಲ್ಲಿ ನಿಂತು, ಮುಂದೆ

ಹಲಗೂರು ಹೋಬಳಿ ಗ್ರಾಮಗಳಲ್ಲಿ ನೀರುಣಿಸಿ ತೊರೆಕಾಡನಹಳ್ಳಿಯ ಬಳಿ ಸೇತುವೆ ಕಳೆಗೆ ಹರಿದು, ಎರಡು ನದಿಗಳು ಜೋಡಣೆಯಾಗಿದ್ದು ಬೆಂಗಳೂರಿನ ಜನತೆಗೆ ನಾಲ್ಕು ಹಂತಗಳಲ್ಲಿ ಕೊಳಾಯಿಗಳ ಮೂಲಕ ಕುಡಿಯುವ ನೀರನ್ನು ನೀಡಿ ಖ್ಯಾತಿಗೊಂಡಿರುತ್ತದೆ.

ಇಲ್ಲಿಂದ ಮುಂದೆ ಹತ್ತು ಕಿ.ಮೀ ದೂರ ನದಿಯದಡದಲ್ಲಿ ಶ್ರೀಮುತ್ತತ್ತೆರಾಯಸ್ವಾಮಿ ಸನ್ನಿಧಿ ಇದೆ. ಈ ದೇವಸ್ಥಾನಕ್ಕೆ "ದೊಡ್ಡ ಮುತ್ತತ್ತಿ" ಎಂದು ಕರೆಯುವುದಾಗಿ, ಇದರಂತೆ ಶಿವನಸಮುದ್ರ ಅರ್ಥಾತ್ ಬ್ಲಫ್ ಒಳಗಡೆ ಕಾವೇರಿನದಿಯ ದಡದಲ್ಲಿ "ಚಿಕ್ಕಮುತ್ತತ್ತಿ" ಎಂದು ಕರೆಯುವ ಶ್ರೀ ಆಂಜನೇಯಸ್ವಾಮಿ ದೇವಾಲಯವಿರುತ್ತದೆ. ಅಂತರವಳ್ಳಿ ಬೆಟ್ಟ ಪ್ರವಾಸಿಗರ ಆಕರ್ಷಿಸುವ ತಾಣವಾಗಿದೆ. ಇಲ್ಲಿ ಮರುಳಸಿದ್ದೇಶ್ವರ, ರಸಸಿದ್ದೇಶ್ವರ ದೇವಾಲಯವು ಪ್ರಸಿದ್ಧವಾಗಿದೆ. ಬಸವನ ಬೆಟ್ಟವು ಮಳವಳ್ಳಿಯ ಹಲಗೂರು ಹೋಬಳಿಯಲ್ಲಿದೆ. ಬಸವನ ಬೆಟ್ಟದ ಮೇಲೆ ಬಸವೇಶ್ವರ ದೇವಾಲಯವಿದ್ದು, ಸುಂದರ ರಮಣೀಯ ವನಸಿರಿಯನ್ನು ಹೊಂದಿದೆ.

ಮಾರೇಹಳ್ಳಿ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ:

ಮಾರೇಹಳ್ಳಿ ಅನೇಕ ವಂಶದ ರಾಜರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿರುತ್ತೆ ಕ್ರಿ.ಶ. 1100ರಲ್ಲಿ "ದೇವಲಿಂಗಣಾಪುರ" ಎಂಬ ರಾಜಧಾನಿಯು ಇದ್ದು, ಚೋಳರು, ಗಂಗರು, ಹೊಯ್ಸಳರು ಹಾಗೂ ಮೈಸೂರು ಅರಸರು ಆಳಿದ ಕುರುಹುಗಳಿವೆ. ಈ ದೇವಾಲಯವು ಚೋಳರ ಕಾಲದಲ್ಲಿ ಪ್ರಾರಂಭವಾಗಿರುತ್ತದೆ. ನಂತರ ಗಂಗರಸರ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿ ದೊರೆಯುವ ಶಿಲಾ ಶಾಸನದ ಪ್ರಕಾರ ಈ ದೇವಾಲಯ ಕ್ರಿ.ಶ. 950 ರಿಂದ 1012 ರವರೆಗೆ ಆಳಿದ ಕರಿಕಾಲ ಚೋಳ ಕಟ್ಟಿಸಿದಾಗಿರುತ್ತದೆ. ಗಂಗರ ನಂತರ ಪ್ರಖ್ಯಾತ ಚಾಳುಕ್ಯ ದೊರೆ ವಿಷ್ಣುವರ್ಧನಕಾಲದಲ್ಲಿ ದೇವಸ್ಥಾನ ಮುಕ್ತಾಯವಾಗಿರುತ್ತದೆ. ಈ ದೇವಸ್ಥಾನದ ಮೂಲ ಈಶ್ವರ ಲಿಂಗ ಪ್ರತಿಷ್ಠಾಪನೆ ಬದಲು ಲಕ್ಷ್ಮೀನರಸಿಂಹನನ್ನು ಪ್ರತಿ ಸ್ಥಾಪಿಸಲಾಗಿರುತ್ತದೆ. ಈ ದೇವಾಲಯದ ಮುಂದುಗಡೆ ಶಿವಾಲಯವಿದೆ. ಶಿಥಿಲವಾದ ಈ ದೇವಸ್ಥಾನಗಳನ್ನು ವಿಜಯನಗರ ಅರಸರ ಕಾಲದಲ್ಲಿ ಜೀರ್ಣೋದ್ಧಾರವಾಗಿ ಕಲ್ಯಾಣಿಗಳನ್ನು ನಿರ್ಮಿಸಿರುತ್ತಾರೆ. ಪ್ರಾಚೀನ ಶಾಸನಗಳಲ್ಲಿ "ರಾಜಾಶ್ರಯ ವಿಣ್ಣಾಗರ" ಚೋಳೇಂದ್ರ ಚತುರ್ವೇದಿ ಮಂಗಲ, 'ಸರ್ವನವಸ್ಯದ ಉತ್ತಮ ಜಾತಿಯ ಗ್ರಾಮ ಮಾರೆಹಳ್ಳಿ' ಎಂದೇ ಉಲ್ಲೇಖಿತಗೊಂಡಿದೆ. 1960ರಲ್ಲಿ ಮೈಸೂರು ಅರಸರಾದ ಶ್ರೀ ಜಯಚಾಮರಾಜ ಒಡೆಯರು ವಿದ್ಯುತ್ ದೀಪಾಲಂಕಾರನ್ನು ಮಾಡಿಸಿರುತ್ತಾರೆ.

ಧಾರ್ಮಿಕ ಹಾಗೂ ಐತಿಹಾಸಿಕ ಹಿನ್ನಲೆ:

ಮಳವಳ್ಳಿಯು ದಟ್ಟವಾದ ಅರಣ್ಯ ಪ್ರದೇಶವಾಗಿದ್ದ ಕಾರಣ ಇಲ್ಲಿ ಆನೆಗಳನ್ನು ಹಿಡಿದು ಪಳಗಿಸುವ ಆನೆಖೆಡ್ಡಾ ಇರುವ ಕುರುಹು ಇದೆ. 3 ಕಿ.ಮೀ ದೂರದಲ್ಲಿರುವ ಕುಂದೂರು ಬೆಟ್ಟದ ಗುಹೆಯಲ್ಲಿ ವಾಸವಿರುವ ರಸಸಿದ್ಧರು(ಸಪ್ತಋಷಿಗಳು) ಪ್ರತಿ ಅಮಾವಾಸೆಯಲ್ಲಿ ಈ ದೇವಸ್ಥಾನಕ್ಕೆ ಬಂದು ದೇವರ ಪೂಜೆ ಮಾಡಿ ಹೋಗುತ್ತಾರೆ ಎಂಬ ಪ್ರತೀತಿಯಿದೆ. ಕಾರಾಣಾಂತರ ಮಾರೇಹಳ್ಳಿ ಹಾಳಾಗಿ– ಮಳವಳ್ಳಿ ಏಳಿಗೆಯಾಗಿಲಿ ಎಂದು ಮಂಟೇಸ್ವಾಮಿಯವನು ಶಾಪವಿತ್ತರೆಂದು ನೀಲಗಾರರು ತಂಬೂರಿ ಪದದೊಡನೆ ಹೇಳುತ್ತಾರೆ. ಹಾಗೇ ಸ್ವಾತಂತ್ರ್ಯದ ನಂತರ ಕನ್ನಂಬಾಡಿ ಕಟ್ಟೆ ನಿರ್ಮಾಣವಾದ ಮೇಲೆ ಇಲ್ಲಿ ಮಾರೇಹಳ್ಳಿ ಕೆರೆ ಎಂಬುದನ್ನು ನಿರ್ಮಿಸಿ ನೀರಾವರಿ ಬೆಳೆಗಳನ್ನು ಬೆಳೆಯುತ್ತಾ, 1948–49 ರಲ್ಲಿ ಮಳವಳ್ಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿ ಕೊಳಾಯಿ ಮೂಲಕ ಕಲ್ಪಿಸಲಾಗಿರುತ್ತದೆ. ಕ್ರಿ.ಶ. 1900ರಲ್ಲಿ ಆರೂಢ ಸಂಪ್ರದಾಯದ ಶ್ರೀ ಹುಬ್ಬಳ್ಳಿಯ ಶ್ರೀ ಸಿದ್ಧರೂಢರು "ಸರ್ವಧರ್ಮ ಸಮನ್ವಯ" ಸಂಕೇತವಾಗಿ ತಮ್ಮ ಆರೂಢ ಮತ ಪ್ರಚಾರ ನಿಮಿತ್ತ ಉತ್ತರದಿಂದ ದಕ್ಷಿಣಕ್ಕೆ ಬಂದು, ಮಳವಳ್ಳಿಗೆ ಬರುತ್ತಾರೆ.

ದೊಡ್ಡ ಮುತ್ತತ್ತಿ: ಮಳವಳ್ಳಿ ತಾಲ್ಲೂಕಿನ ಹಲಗೂರು ಹೋಬಳಿ ಬಸವನಬೆಟ್ಟದ ಸಾಲಿನ(ಹೆಬ್ಬೆಟ್ಟಾ) ಕಾವೇರಿ ಕಣಿವೆ ತೀರದಲ್ಲಿದೆ. ರಾಮಾಯಣ ಕಾಲದಲ್ಲಿ ಶ್ರೀ ರಾಮನು ರಾವಣೇಶ್ವರನನ್ನು ಸಂಹರಿಸಿ ಸೀತೆಯನ್ನು ಕರೆದುಕೊಂಡು ತಮ್ಮ ಲಕ್ಷ್ಮಣ ಆಂಜನೇಯರೊಡನೆ ಅಯೋಧ್ಯೆಗೆ ಹಿಂತಿರುಗುವಾಗ ಇಲ್ಲಿ ತಂಗಿದ್ದರೆಂದು, ಸೀತಾದೇವಿ ನದಿಯಲ್ಲಿ ಸ್ನಾನ ಮಾಡುವಾಗ ಮೂಗಿನ ಮೂಗುತಿ ನೀರಿನಲ್ಲಿ ಬೀಳಲು, ಅದನ್ನು ಶ್ರೀ ಆಂಜನೇಯ ನೀರಿನಲ್ಲಿ ತನ್ನ ಬಾಲವನ್ನು ಹಾಕಿ ತಿರುಗಿಸಿ ಎತ್ತಿ ಕೊಟ್ಟನೆಂದು, ಮೂಗತಿಯನ್ನು ಹುಡುಕಿ ಎತ್ತುಕೊಟ್ಟಿದ್ದರಿಂದ "ಮುತ್ತತ್ತರಾಯ" ಎಂದು ನಾಮಕರಣ ಮಾಡಿ ಹರಸಿದಳೆಂದು ಹೇಳುತ್ತಾರೆ. ಈ ನದಿಯಲ್ಲಿ ಬಾಲಹಾಕಿ ತಿರುಗಿಸಿದ್ದರಿಂದ ನದಿಯನೀರು ಮೂರು ಸುತ್ತು ತಿರುಗಿ ಮುಂದೆ ಸಾಗುವುದನ್ನು ಈಗಲೂ ಗಮನಿಸಬಹುದು ಇದನ್ನು "ತಿರುಗಣಾಮಡು" ಎಂದು ಕರೆಯುತ್ತಾರೆ.ಅಂತೆಯೇ ಮಹಾಭಾರತದ ಕಾಲದಲ್ಲಿ ಪಾಂಡವರು ವನವಾಸಕ್ಕೆ ಇಲ್ಲಿಗೆ ಬಂದು ತಂಗಿದ್ದರೆಂದು "ಪಂಡರಾಪುರ" ಎಂತಲೂ ಬೇಚರಾರ್ ಗ್ರಾಮವಿದೆ. ಭೀಮನು ಮುಂಜಾನೆ ಎದ್ದು ಈ ನದಿಯಲ್ಲಿ ಮಿಂದೂ ಲಿಂಗ ಪೂಜೆ ಮಾಡುತ್ತಿದ್ದನೆಂದು "ಭೀಮೇಶ್ವರ" ಎಂಬ ಶಿವಲಿಂಗವುಳ್ಳ ದೇವಾಲಯವಿದೆ

ಮಳವಳ್ಳಿ ತಾಲ್ಲೂಕಿನ ಸುತ್ತ ನಡೆಯುವ ಜಾತ್ರೆಗಳು ಬಹಳಷ್ಟು ಬೇರೆ

ಬೇರೆ ಸಂಪ್ರದಾಯಗಳ ಮೇಲೆ, ವಿಶಿಷ್ಟ ರೀತಿಯಲ್ಲಿ ಆಚರಣೆಯಲ್ಲಿ ಪ್ರಚಲಿತಗೊಂಡಿವೆ. ಪ್ರತಿಯೊಂದು ಜನಾಂಗದ ಸಮಾಜ, ದೇಶ, ವಿದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ಜಾತ್ರೆಗಳು ಜರುಗುತ್ತಿದ್ದವು ಎನ್ನುವುದಕ್ಕೆ ಜನಪದ ಮತ್ತು ಶಿಷ್ಟ ಕಾವ್ಯ ಕೃತಿಗಳಲ್ಲಿ ಹೇಳಿರುವುದು ಕನ್ನಡ ಸಾಹಿತ್ಯದಲ್ಲಿ ಸಾಕ್ಷಿಯಾಗಿದೆ. ಜನಪದರ ಸಾಹಿತ್ಯದಲ್ಲಿ ಹಾಡು, ಗಾದೆ, ಒಡಪು, ತ್ರಿಪದಿಗಳಲ್ಲಿ ಜಾತ್ರೆಯ ಪ್ರಸ್ತಾಪ ಕಂಡುಬರುತ್ತದೆ. ಈ ಜಾತ್ರೆಗಳು ಮಾನವನ ಜೀವನದಲ್ಲಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ನೆಲೆಗೊಂಡಿದೆ. ಜಾತ್ರೆಗಳು ತಮ್ಮ ಹುಟ್ಟನ್ನು ಪಡೆದು ವಿಕಾಸವಾದಂತೆ ದೇಶವಿದೇಶಗಳೊಂದಿನ ಸಂಪರ್ಕದಿಂದ ಹೆಚ್ಚು ಜನಪ್ರಿಯವಾಗ ತೊಡಗಿದವು. ಜಾತ್ರೆಗಳ ಆಚರಣೆಗಳು ಚಲನಶೀಲವಾದದ್ದು. ಇಲ್ಲಿನ ಆಚಾರ, ವಿಚಾರ, ನಂಬಿಕೆ, ಸಂಪ್ರದಾಯ, ಮಾರ್ಪಾಡಾಗಿರುವುದನ್ನು ಕಾಣಬಹುದಾಗಿದೆ. ಹಳೆಯ ಜಾನಪದರ ಅಂಶಗಳು ನಶಿಸಿ ಹೊಸ ಆಚರಣೆಯ ಅಂಶಗಳು, ಹೊಸ ಹೊಸ ವಿಚಾರಗಳು ಬೆಳಕಿಗೆ ಬರುತ್ತಿವೆ. ಏನೇ ಆದರೂ ಜನಪದರ ಧಾರ್ಮಿಕ ನಂಬಿಕೆಯು ಮುಂದುವರಿದುಕೊಂಡು ಬಂದಿರುವುದು ವಿಶೇಷವಾದುದು.

ಪಟ್ಟಣದ ದಂಡಿನ ಮಾರಮ್ಮ ಮತ್ತು ಸಿಡಿಹಬ್ಬದ ಆಚರಣೆ, ಮಾರೇಹಳ್ಳಿ ಲಕ್ಷ್ಮೀನರಸಿಂಹಸ್ವಾಮಿ ವೈಷ್ಣವ ಸಂಪ್ರದಾಯ ಪ್ರಕಾರ ನಡೆಯುವುದು. ಶ್ರೀ ಮತ್ತಿತಾಳೇಶ್ವರ(ನಾಗರಪೂಜೆ)ಸ್ವಾಮಿ ಜಾತ್ರೆ, ಸರಗೂರು ಶ್ರೀ ಮಲೆಮಹದೇಶ್ವರ ಜಾತ್ರೆ, ದುಗ್ಗನಹಳ್ಳಿ ಮಾದೇಶ್ವರ ಜಾತ್ರೆ ಮತ್ತು ಮಿಕ್ಕರೆ ವೀರಭದ್ರೇಶ್ವರಸ್ವಾಮಿ ಜಾತ್ರೆಗಳು ಶೈವ ಸಂಪ್ರದಾಯದಲ್ಲಿ ಸ್ಥಳೀಯ ಜನ ಒಗ್ಗೂಡಿ ಜನರ ಇಚ್ಛೆಯಂತೆ ಆಚರಿಸಲಾಗುವುದು. 'ರಾಜ ಬೊಪೇಗೌಡನ ಪುರದ ಶ್ರೀ ಮಂಟೇಸ್ವಾಮಿ ಮಹಾಸಂಸ್ಥಾನಕ್ಕೆ ಸೇರಿದ ಮುಟ್ಟನಹಳ್ಳಿ ದೊಡ್ಡಮ್ಮತಾಯಿ ಜಾತ್ರೆ, ದೊಡ್ಡ ಮುತ್ತತ್ತಿ ಆಂಜನೇಯಸ್ವಾಮಿ ಜಾತ್ರೆಗಳು ನಡೆಯುತ್ತವೆ. ಮಳವಳ್ಳಿ ಪಟ್ಟಣದಿಂದ 5 ಕಿ.ಮೀ ಪೂರ್ವದಲ್ಲಿ ಕನಕಪುರ ರಸ್ತೆ ಬದಿಯ ಚೋಳನಹಳ್ಳಿ ಗ್ರಾಮಕ್ಕೆ ಸೇರಿದೆ. ರಾಮಾಯಣದ ಕಾಲದ ಲಂಕಾಧಿಪತಿಯಾದ ರಾವಣೇಶ್ವರನ ದೇವಸ್ಥಾನ ಇಲ್ಲಿದೆ. ರಾಮಾಯಣದ ಕಾಲದಲ್ಲಿ ರಾವಣ ಬಂದು ಹೋಗಿರುವುದಾಗಿ, ಸೀತೆಯನ್ನು ಈ ಕಾಡಿನಲ್ಲಿಯೇ ಹೊತ್ತು ಹೋಗಿರುವುದಾಗಿಯೂ ತಿಳಿದು ಬರುತ್ತದೆ. ರಾವಣಿ, ಹಾಡ್ಲಿ, ಮಳವಳ್ಳಿ ಪಟ್ಟಣ ಮುಂತಾದೆಡೆ ರಾವಣನ ವಿಗ್ರಹಗಳು ಸಹ ದೊರೆತ್ತಿವೆ. ಡಿ. ಹಲಸಹಳ್ಳಿ, ಹಾಡ್ಲಿ, ಯತ್ತಂಬಾಡಿ ಮುಂತಾದೆಡೆ ವೀರ ಮಾಸ್ತಿ ಕಲ್ಲುಗಳು ಗುರುತ್ತರವಾಗಿರುತ್ತವೆ. ಉಮ್ಮತ್ತೂರು ಪಾಳೇಗಾರರ ಆಡಳಿತಕ್ಕೆ ಸೇರಿದ ಪ್ರದೇಶಗಳಾಗಿರುತ್ತವೆ. ಇದೇ ತಾಲ್ಲೂಕಿನ ಮತ್ತಿತಾಳೇಶ್ವರ ಸ್ವಾಮಿ ದೇವಸ್ಥಾನವು ಚರ್ಮಕಾಯಿಲೆಗೆ ಸಂಬಂಧಿಸಿದಂತೆ ಪ್ರಸಿದ್ಧಿ

ಪಡೆದಿದೆ. ಈ ತಾಲ್ಲೂಕಿನಲ್ಲಿ ಬಿ.ಜಿ.ಪುರ ಹೋಬಳಿಯ ಸರಗೂರು ಗ್ರಾಮದಲ್ಲಿ ಮಹದೇಶ್ವರ, ರಾಮವ್ವ, ಮೂಗಪ್ಪ ದೇವಾಲಯಗಳು ಬಹಳ ಪ್ರಸಿದ್ಧಿ ಪಡೆದಿವೆ. ಮಳವಳ್ಳಿಯಿಂದ ಹಲಗೂರು ಮಂಟೇಸ್ವಾಮಿ ಕಾವ್ಯದಲ್ಲಿ ಬರುವುದು. ನಂತರ ಹಲಗೂರು ಮುಂದೆ ಬಾಳೆಹೊನ್ನಿಗ ಹತ್ತಿರ, ಮಹಾಭಾರತದ ಕಾಲದಲ್ಲಿ ಪಾಂಡವರು ವನವಾಸಕ್ಕೆ ಬಂದಿದ್ದರು. ಇಲ್ಲಿಗೆ ಎಂಬುದಕ್ಕೆ ಸಾಕ್ಷಿಯಾಗಿ ಭೀಮನ ಕಿಂಡಿ ಬೆಟ್ಟ ಎಂಬ ಕಬ್ಬಾಳು ಬೆಟ್ಟದ ಸಾಲಿನಲ್ಲಿದೆ. ಅಲ್ಲಿಂದ ಮುಂದೆ ಹೆಬ್ಬೆಟ್ಟ ಹಾಯ್ದು, ಭೀಮೇಶ್ವರಲಿಂಗದ ದೇವಸ್ಥಾನವಿದೆ. ಸಮೀಪದಲ್ಲಿ ಪಂಚಾಕ್ಷರಿ ಮಂತ್ರವನ್ನು ಜಗತ್ತಿಗೆ ಸಾರಿದ ಮಹಾಕವಿ ಷಡಕ್ಷರ ದೇವನ ಜನ್ಮ ಸ್ಥಾನವಾದ ಧನಗೂರು ಊರು ಇದ್ದು, ಅವರು ವಾಸವಿದ್ದು ತಪಸ್ಸುಗೈದ ಗವಿಮಠ ಚಿರಸ್ಥಾಯವಾಗಿದೆ. ಮುಂದೆ ಸಾಗಿದರೆ ಕುರಿ ಸಾಕಾಣಿಕೆಯಲ್ಲಿ ಹೆಸರು ಪಡೆದಿದ್ದು ಇಲ್ಲಿಯ ಕುರಿ ಮಾಂಸ ಬಲುರುಚಿ ಎಂಬ ಹೆಗ್ಗಳಿಕೆ ಪಡೆದಿರುವ ಬಂಡೂರು ಕುರಿಸಾಗಾಣಿಕೆ ಕೇಂದ್ರವಿದೆ. ಸಪ್ತ ಮಾತೃಕೆಯರಾದ ಕುಂದೂರಿನ ಬೆಟ್ಟದರಸಮ್ಮ, ತಂಗಿಯರಾದ ಬೆಳಕವಾಡಿಯ ಮಂದಗಲಮ್ಮ, ಕ್ಯಾತನಹಳ್ಳಿಯ ಹೆಬ್ಬಳದಮ್ಮ, ಸೋಸಲೆಯ ಹೊನ್ನಾದೇವಿ, ತಲಕಾಡಿನ ಅರಸಮ್ಮ, ಗುಂಡಾಪುರದ ಬೆಟ್ಟದರಸಮ್ಮ, ನರಸೀಪುರದ ಹಾಲಗೂಡಿನ ದೇವಮ್ಮ ಎಂಬ ದೇವತೆಗಳ ಪುರಾಣ ಇತಿಹಾಸವಿದೆ. ದುಗ್ಗನಹಳ್ಳಿಯ ಮಹದೇಶ್ವರ ಸ್ವಾಮಿಯು ಪ್ರಮುಖವಾದುದು. ದುಗ್ಗನಹಳ್ಳಿಯನ್ನು 'ದೂಪದ ಹಳ್ಳಿ' ಎಂದು ಕರೆಯುತ್ತಿದ್ದರು. ಇಲ್ಲಿನ ಶಾಸನಗಳು ಗಂಗರ ಕಾಲದ ಶಾಸನಗಳು ಎಂದು ಗುರುತಿಸಲಾಗಿದೆ.

ಮಳವಳ್ಳಿ ಸಾಧಕರು:

ಮಳವಳ್ಳಿಯ ಭೌಗೋಳಿಕ ಹಿನ್ನಲೆಯಲ್ಲಿ ಈ ನೆಲದಲ್ಲಿ ಹುಟ್ಟಿ ಬೆಳೆದು ತನ್ನ ಹುಟ್ಟೂರನ್ನು ನೆನಪಿಸಿಕೊಳ್ಳುತ್ತ ಋಣ ತೀರಿಸಬೇಕೆಂದು ಯಾವುದಾದರೂ ವೃತ್ತಿಯನ್ನು ಅವಲಂಬಿಸಿ ಗುರಿ ಸಾಧಿಸಿದ ಸಾಧಕರು ಅನೇಕರು ಇರುತ್ತಾರೆ. ಅಂತಹ ಸಾಧಕರನ್ನು ಗುರುತಿಸಿ "ಮಳವಳ್ಳಿ ಸಾಧಕರು" ಗಳೆಂದು ಹೆಸರಿಬಹುದಾಗಿದೆ

ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡಲ್ಲೂ ಕಾವ್ಯ ರಚಿಸಿದವರಲ್ಲಿ ಶ್ರೀ ಕವಿ ಷಡಕ್ಷರದೇವ. ಇವರು ಮಳವಳ್ಳಿ ತಾಲ್ಲೂಕಿನ ಧನಗೂರು ಗ್ರಾಮದಲ್ಲಿ ಕ್ರಿ.ಶ. 1625ರಲ್ಲಿ ಜನಿಸಿರಬಹುದು. ಮಳವಳ್ಳಿ ಧನಗೂರು ಗವಿಮಠ ಬಿಟ್ಟ ಷಡಕ್ಷರಿಯವರು ಮೊದಲು ತಿರುಮಕೂಡಲು ನರಸಿಪುರದ ಸೋಸಲೆ ಹತ್ತಿರ ಬಂದು ನೆಲಸುತ್ತಾರೆ. ಕೆಲವು ಕಾಲನಂತರ ಕೊಳ್ಳೇಗಾಲದ ಚಿಲುಕವಾಡಿಯಲ್ಲಿಗೆ ಬಂದು ನೆಲಗೊಂಡುತ್ತಾರೆ. ನಂತರ ಶ್ರೀಯುತರು ಯಳಂದೂರಿಗೆ ಹೋಗಿ ಅಲ್ಲಿ ಕೆಲವು ವರ್ಷಗಳು ಇದ್ದು ಕೊನೆಯಲ್ಲಿ ಮುಕ್ತಿ ಹೊಂದಿ ಶಿವೈಕ್ಯರಾಗಿದ್ದಾರೆ. ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ,

ಶಬರ ಶಂಕರ ವಿಳಾಸ ಕೃತಿಗಳ ರಚಿಸಿದ್ದಾರೆ.

ಅಭಿನೇತ್ರಿ ಮಳವಳ್ಳಿ ಸುಂದರಮ್ಮರವರು ಸುಭದ್ರ, ದ್ರೌಪತಿ, ಸದಾರಮೆ, ಚಂದ್ರಮತಿ, ತಿಲೋತ್ತಮೆ, ಚೂಡಮಣಿ ಮುಂತಾದ ಪಾತ್ರಗಳನ್ನು ಅಭಿನಯಿಸಿ ನಾಟಕದಲ್ಲಿ 'ಅಭಿನೇತ್ರಿ' ಎಂಬ ಬಿರುದು ಗಳಿಸಿದರು. ಹೆಚ್.ಎಲ್. ಸಿಂಹ ಅವರ ತಂದೆ ಮಳವಳ್ಳಿಯಲ್ಲಿ ಕ್ರಿ.ಶ. 1904ರಲ್ಲಿ ತಾಲ್ಲೂಕು ಕಲೆಕ್ಟರ್ ಆಗಿದ್ದರು.(ಈಗಿನ ತಹಶೀಲ್ದಾರ್).ಇವರು "ಬೇಡರಕಣ್ಣಪ್ಪ" ಚಲನ ಚಿತ್ರದ ಮೂಲಕ ಸಾಹಿತ್ಯ ಮತ್ತು ಚಿತ್ರನಿರ್ದೇಶಕರಾಗಿದ್ದಾರೆ. ನಟಸಾರ್ವಭೌಮ ಡಾ. ರಾಜಕುಮಾರ್ ರವರು ಮಳವಳ್ಳಿ ತಾಲ್ಲೂಕಿನ ಹಲಗೂರು ಹೋಬಳಿ, ದೊಡ್ಡ ಮುತ್ತತ್ತಿಯ ಶ್ರೀ ಆಂಜನೇಯಸ್ವಾಮಿ ಅರ್ಥಾತ್ ಮುತ್ತತ್ತರಾಯನ ವರ ಪ್ರಸಾದದಿಂದ ಜನಿಸಿದರೆಂದು ಪ್ರತೀತಿ. ರೆಬಲ್ ಸ್ಟಾರ್ ಅಂಬರೀಶ್ ರವರ ತಂದೆ ಮಳವಳ್ಳಿಯಲ್ಲಿ ಸಬ್‌ರಿಜಿಸ್ಟಾರ್ ಕಛೇರಿಯಲ್ಲಿ ನೌಕರರಾಗಿದ್ದಾಗ ಮಳವಳ್ಳಿಯಲ್ಲಿ ಜನಿಸಿದರು. ತಮಿಳುನಾಡಿನ ಪ್ರಖ್ಯಾತ ಮಹಿಳಾ ಮುಖ್ಯಮಂತ್ರಿ ಎಂದು ಪ್ರಶಂಸೆಗಳಿಸಿರುವ ಶ್ರೀಮತಿ ಜಯಲಲಿತರವರು ಮೂಲಸ್ಥಳ ಮಳವಳ್ಳಿ ತಾಲೂಕಿನ ಬೆಳಕವಾಡಿ ನಿವಾಸಿಗಳಾಗಿದ್ದರು. ಕನ್ನಡ ಚಲನಚಿತ್ರ ಸಹ ಕಲಾವಿದರಾದ ಶ್ರೀ ಶನಿಮಹಾದೇವಪ್ಪರವರು ಮಳವಳ್ಳಿ ತಾಲ್ಲೂಕಿನ ಬೆಳಕವಾಡಿಯವರು. ಕೆ.ಎನ್.ನಾಗೇಗೌಡರು 1970ರಲ್ಲಿ 'ಶಾಂತಿ ಕಾಲೇಜು' ಎಂಬ ವಿದ್ಯಾ ಸಂಸ್ಥೆ ಸ್ಥಾಪಿಸಿದರು. 1982ರಲ್ಲಿ ಪ್ರಥಮ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾದರು.

ಉಪಸಂಹಾರ:

ಮಳವಳ್ಳಿಯು ಮಂಡ್ಯ ಜಿಲ್ಲೆ ಪ್ರಸಿದ್ಧ ತಾಲೂಕು. ಮಳವಳ್ಳಿ ತಾಲ್ಲೂಕಿನ ಚಾರಿತ್ರಿಕ ಮತ್ತು ಭೌಗೋಳಿಕ ಹಿನ್ನಲೆಯನ್ನು ಗುರುತಿಸಬಹುದಾಗಿದೆ. ಯಾವುದೇ ಒಂದು ಜನಾಂಗದ ಐತಿಹಾಸಿಕ ಹಾಗೂ ಚಾರಿತ್ರಿಕ ಹಿನ್ನಲೆಯನ್ನು ನೋಡಬೇಕಾದರೆ ಈ ಭೂಮಿಯ ಮೇಲೆ ಮಾನವನ ವಾಸಸ್ಥಳ ಆತನ ಜೀವನ ವಿಧಾನ, ನಿಸರ್ಗದೊಡನೆ ಆತನ ಸಂಬಂಧ, ಅಲ್ಲಿನ ಪರಿಸರ ಮತ್ತು ಜನಾಂಗಗಳ ಕುರಿತ ಮಾಹಿತಿ, ಪ್ರೇಕ್ಷಣೀಯ ಸ್ಥಳಗಳನ್ನು ಒಳಗೊಂಡಿದ್ದು ಮಾನವನ ಬದುಕಿನಲ್ಲಿ ಪ್ರಮುಖವಾದ ಅಧ್ಯಾಯವ ಒಳಗೊಂಡಿದೆ. ದ್ರಾವಿಡ ಸಂಸ್ಕೃತಿ, ಐತಿಹಾಸಿಕ ಹಿನ್ನಲೆ, ಚೋಳಗಂಗರಸರು ಹಾಗೂ ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ವಿಚಾರಗಳು, ಏಷ್ಯಾದಲ್ಲೇ ಮೊಟ್ಟಮೊದಲ ಜಲವಿದ್ಯುತ್ ತಾಣ, ರಾಮಾಯಣ ಮತ್ತು ಮಹಾಭಾರತದ ಕುರುಹುಗಳು, ಮಾರೇಹಳ್ಳಿ ದೇವಸ್ಥಾನ, ಕುಂದೂರಿನ ರಸಸಿದ್ಧರ ವಿಚಾರ, ಜಾನಪದದ ಸಂಗತಿಗಳು, 14ನೇ ಶತಮಾನದ ಮಂಟೇಸ್ವಾಮಿ ಮತ್ತು ಸಿದ್ಧಪ್ಪಾಜಿ ಅವರ ವಿಚಾರಧಾರೆಗಳು, ಸಾಂಸ್ಕೃತಿಕ

ಹಿನ್ನಲೆ, ಬ್ರೀಟೀಷರ ಭೇಟಿ, ಶಿಕ್ಷಣ, ಸಿನಿಮಾ, ರಾಜಕೀಯ ಮೊದಲಾದ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆ ನೀಡಿರುವ ಸಾಧಕರ ವಿಚಾರಧಾರೆಗಳು ಮನೆಮಾಡಿದೆ. ಈ 'ಮಳವಳ್ಳಿಯು ಐತಿಹಾಸಿಕ ಹಾಗೂ ಸಾಂಸ್ಕೃತಿಕ ತವರು ನೆಲ' ಎಂದು ಕರೆಯಬಹುದಾಗಿದೆ.

ಪರಾಮರ್ಶನ ಗ್ರಂಥಗಳು:

1. ಮಂಡ್ಯ ಜಿಲ್ಲಾ ಸಾಂಸ್ಕೃತಿಕ ಪರಂಪರೆ – ತೈಲೂರು ವೆಂಕಟಕೃಷ್ಣ
2. ಮಂಡ್ಯ ಜಿಲ್ಲೆಯ ಜಾತ್ರೆಗಳು – ಡಾ. ಜಿ.ವಿ.ದಾಸೇಗೌಡ
3. ಮಳವಳ್ಳಿ ತಾಲ್ಲೂಕಿನ ಜಾತ್ರೆಗಳು–ಒಂದು ಸಾಂಸ್ಕೃತಿಕ ಅಧ್ಯಯನ – ಸಿ. ಮಹದೇವು.
4. ಮಳವಳ್ಳಿ ಸುಂದ್ರಮ್ಮನವರ ಆತ್ಮಕಥೆ – ಕರ್ನಾಟಕ ನಾಟಕ ಅಕಾಡೆಮಿ
5. ಕರ್ನಾಟಕ ಅರಸು ಮನೆತನಗಳು – ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ. ಧಾರವಾಡ
6. ಮಳವಳ್ಳಿ ತಾಲ್ಲೂಕಿನ ಜಾನಪದ ಜೀವನ – ಡಾ.ಕೃಷ್ಣೇಗೌಡ ಹುಸ್ಕೂರು
7. ಮಳವಳ್ಳಿ ಮುತ್ತು – ಡಾ. ಕೃಷ್ಣೇಗೌಡ ಹುಸ್ಕೂರು

***

ಎಚ್. ನಾಗವೇಣಿ ಅವರ 'ಧಣಿಗಳ ಬೆಳ್ಳಿಲೋಟ' : ಇಕೋಫೆಮಿನಿಸಂ

ಡಾ. ಸುಸ್ಮಿತಾ ವೈ.
ಮೂಡುಗೊಪ್ಪ ಗ್ರಾಮ
ಸುಳುಗೋಡು.
ಹೊಸನಗರ ತಾಲ್ಲೂಕು
ಶಿವಮೊಗ್ಗ ಜಿಲ್ಲೆ – 577425

'ಇಕೋಫೆಮಿನಿಸಂ' ಪಾಶ್ಚಿಮಾತ್ಯ ಚಿಂತನಾ ಕ್ರಮವಾಗಿ 1974 ರಲ್ಲಿ ಸ್ತ್ರೀವಾದಿ ಚಿಂತಕಿ ಫ್ರಾನ್ ಸ್ವಾಫ್ಜ್ ಡುಬೋನ್ (Françoise d'Eaubonne) ಅವರ 'Feminism or death' ಎಂಬ ಕೃತಿ ಎಂಬ ಕೃತಿಯಲ್ಲಿ ಮೊದಲು ಬಳಕೆಯಾಯಿತು. ಸ್ತ್ರೀವಾದ ಮತ್ತು ಪರಿಸರವಾದಗಳನ್ನು ಒಗ್ಗೂಡಿಸಿಕೊಂಡು ಹುಟ್ಟಿದ ಉಪಕ್ರಮವಿದು. ಇದು ಪರಿಸರದ ಸಮಸ್ಯೆಗಳು ಮತ್ತು ಸ್ತ್ರೀಯರ ಮೇಲಿನ ಶೋಷಣೆಗಳನ್ನು ಒಂದೇ ರೀತಿಯ ಸಮಸ್ಯೆಯಾಗಿ ಪರಿಗಣಿಸಿ ಇದರ ಮೂಲವನ್ನು ಪಿತೃಪ್ರಧಾನತೆಯ ಪುರುಷ ಪ್ರಧಾನ ಸಮಾಜದಲ್ಲಿ ಹುಡುಕುತ್ತದೆ. ಹಾಗೆಂದ ಮಾತ್ರಕ್ಕೆ ಇಲ್ಲಿ ಹೆಣ್ಣು ಮತ್ತು ಪ್ರಕೃತಿಯನ್ನು ಭಾವನಾತ್ಮಕವಾಗಿ ಪರಸ್ಪರ ಹೋಲಿಸುವ, ವರ್ಣಿಸುವ ಕ್ರಮವೇನಿಲ್ಲ. ಪರಿಸರ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ–ದಬ್ಬಾಳಿಕೆ, ಅಧಿಕಾರಗಳು ಪಿತೃಪ್ರಧಾನ ವ್ಯವಸ್ಥೆಯಿಂದ ಪ್ರೇರೇಪಿತಗೊಂಡಂತಹುಗಳು, ಕೆಲವು ಇಲ್ಲಿಂದಲೇ ಹುಟ್ಟಿದವುಗಳು ಎಂದು ಪ್ರತಿಪಾದಿಸುತ್ತಾ ಈ ವ್ಯವಸ್ಥೆಯ ವಿರುದ್ಧ ಒಟ್ಟಾಗಿ ಹೋರಾಡುವ ಚಿಂತನಾ ಕ್ರಮವೊಂದು ಮೊದಲಿಗೆ ಪಾಶ್ಚಾತ್ಯರಲ್ಲಿ, ತದನಂತರ ಭಾರತದಲ್ಲಿಯೂ ಹುಟ್ಟಿಕೊಂಡಿತು. ಪರಿಸರ ಸಂರಕ್ಷಣೆಯ ಜೊತೆಗೆ ಮಹಿಳಾ ಹಕ್ಕುಗಳನ್ನು ಸಂರಕ್ಷಿಸಿ, ಸಮಸ್ಯೆಗಳ ವಿರುದ್ಧ ಒಟ್ಟಾಗಿ ಧ್ವನಿ ಎತ್ತುವುದೇ 'ಇಕೋಫೆಮಿನಿಸಂ'ನ ಉದ್ದೇಶ.

ಭಾರತೀಯ ನೆಲದಲ್ಲಿ ಇಕೋಫೆಮಿನಿಸಂ ತನ್ನ ರೂಪುರೇಷೆಗಳನ್ನು ಕಾಲಾನಂತರದಲ್ಲಿ ಮತ್ತಷ್ಟು ಬದಲಿಸಿಕೊಂಡಿತು. ಉತ್ತರಖಂಡದ ಚಿಪ್ಕೊ ಚಳುವಳಿಯಲ್ಲಿ ಗ್ರಾಮೀಣ ಮಹಿಳೆಯರು ಕಾಡುಗಳನ್ನು ಕಡಿಯದಂತೆ ಮರಗಳನ್ನು ಅಪ್ಪಿಕೊಂಡು ನಿಂತು ಕಾಪಾಡಿದ್ದು, ನರ್ಮದಾ ಬಚಾವೋ, ಇತ್ಯಾದಿ ಪರಿಸರ ಸಂರಕ್ಷಣಾ ಹೋರಾಟ, ಚಳುವಳಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಈ ಪರಿಕಲ್ಪನೆಯೊಂದಿಗೆ ಸಂಯೋಜಿಸಿ ಕೊಳ್ಳಲಾಯಿತು. ಪರಿಸರ ಸಂರಕ್ಷಣೆ ಮತ್ತು ಮಹಿಳಾ ಹಕ್ಕುಗಳ ಹೋರಾಟದಲ್ಲಿ ಸ್ತ್ರೀವಾದಿಗಳು ಮತ್ತು ಪರಿಸರವಾದಿಗಳನ್ನು ಈ ಪರಿಕಲ್ಪನೆ ಒಗ್ಗೂಡಿಸಿತು. ಭವಿಷ್ಯದಲ್ಲಿ ಹವಮಾನ ಬದಲಾವಣೆ, ಪ್ರಾಕೃತಿಕ ವಿಕೋಪಗಳು, ಅರಣ್ಯನಾಶ ಇತ್ಯಾದಿಗಳನ್ನು ತಡೆಯಲು ಮಹಿಳೆಯರ ಭಾಗವಹಿಸುವಿಕೆಯನ್ನು ಇದು ಉತ್ತೇಜಿಸುತ್ತದೆ. ಹಾಗೆಯೇ ಮಹಿಳಾ ಹಕ್ಕುಗಳಿಗಾಗಿ ನಿರಂತರವಾಗಿ ಒಗ್ಗೂಡಿ ಹೋರಾಡುವ ಭರವಸೆಯನ್ನು ಇಕೋಫೆಮಿನಿಸಂ ಹುಟ್ಟುಹಾಕಿದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮಹಿಳೆ ಮತ್ತು ಪರಿಸರದ ಸಮಸ್ಯೆಗಳ ಮೂಲವನ್ನು ಒಂದಾಗಿ ನೋಡಿ, ಅಂತಹ ಶೋಷಣೆಗಳ ವಿರುದ್ಧ ಧ್ವನಿ ಎತ್ತಿರುವ ಹಲವು ಉದಾಹರಣೆಗಳೂ ಸಿಗುತ್ತವೆ. ಆದರೆ ಸಾಕಷ್ಟು ಕಡೆಗಳಲ್ಲಿ ಇಂತಹ ಆಲೋಚನೆಗಳು ಪಿತೃಪ್ರಧಾನ ಭಾವನಾತ್ಮಕತೆಯ ರೂಪದಲ್ಲಿವೆ. ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ಸ್ಪಷ್ಟವಾದ ಇಕೋಫೆಮಿನಿಸಂ ಚಹರೆಗಳನ್ನು ಅಲ್ಲಲ್ಲಿ ವಿರಳವಾಗಿ ಗುರುತಿಸಬಹುದಷ್ಟೆ. ಕನ್ನಡ ಸಾಹಿತ್ಯದಲ್ಲಿ ಇಕೋಫೆಮಿನಿಸಂ ಪರಿಕಲ್ಪನೆ ಹೆಚ್ಚು ಪ್ರಚಾರಕ್ಕೆ ಬಂದಿಲ್ಲವಾದ್ದರಿಂದ ಆ ಕುರಿತಂತೆ ಬರಹ-ಚಿಂತನೆಗಳ ಕೊರತೆಯೂ ಇದೆ.

ಪ್ರಸ್ತುತ ಹೆಚ್. ನಾಗವೇಣಿಯವರ 'ಧಣಿಗಳ ಬೆಳ್ಳಿಲೋಟ' ಎನ್ನುವಂತಹ ಕಥೆಯಲ್ಲಿ ಮೇಲ್ವರ್ಗದ ಧಣಿಯೊಬ್ಬ ಪ್ರಕೃತಿಯನ್ನು ನಾಶಮಾಡಿ, ಅತಿಕ್ರಮಿಸಿ ತನ್ನ ಜಮೀನಿನ ವಿಸ್ತಾರತೆಯನ್ನು ಹೆಚ್ಚಿಸಿಕೊಳ್ಳುತ್ತಿರುತ್ತಾನೆ, ಜೊತೆಗೆ ಒಂದು ಬೆಳ್ಳಿಯಲೋಟ ಕಳೆದುಹೋದ ದಂಡಕ್ಕಾಗಿ 'ಚಿನ್ನಮ್ಮ' ಎನ್ನುವವಳನ್ನು ಉಚಿತ ದುಡಿಮೆಗೆ ಸಿಕ್ಕಿಸಿ, ಅವಳಿಂದ ಹೆಚ್ಚುವರಿ ಕೆಲಸಗಳ ಲಾಭ ಪಡೆಯುತ್ತಾನೆ. ಈ ಎರಡು ಅತಿಕ್ರಮಣದ ವಿಚಾರವಾಗಿ ಕಥೆ ಆರಂಭವಾಗಿ ಪ್ರಕೃತಿ ಮತ್ತು ಹೆಣ್ಣಿನ ಪ್ರತಿರೋಧ, ಬಂಡಾಯದೊಂದಿಗೆ ಕಥೆ ಮುಕ್ತಾಯವಾಗುತ್ತದೆ. ಈ ಕಥೆಯಲ್ಲಿ ಮೇಲ್ವರ್ಗದವರು ತಳಸಮುದಾಯಗಳನ್ನು, ಆ ವರ್ಗದ ಹೆಣ್ಣನ್ನು ತಮ್ಮ ಸಂಪತ್ತಿನ ಗಳಿಕೆ ಮತ್ತು ಉಳಿಕೆಗೆ ಬಳಸಿಕೊಳ್ಳುವಂತೆ, ಪ್ರಕೃತಿಯನ್ನೂ ನಾಶಮಾಡಿ, ಒತ್ತುವರಿ ಮಾಡಿಕೊಂಡು ತಮ್ಮ ಸಂಪತ್ತಿನ ವಿಸ್ತಾರತೆಯನ್ನು ಕಾಯ್ದುಕೊಂಡಿರುವಂತಹ ಎರಡು ಗಂಭೀರ ವಿಚಾರಗಳು ಈ ಕಥೆಯಲ್ಲಿವೆ. ಲೇಖಕಿ ಈ ಕಥೆಯಲ್ಲಿ ಮೇಲ್ವರ್ಗದವರ

ಅತಿಕ್ರಮಣವನ್ನು, ತಳವರ್ಗದವರ ಮತ್ತು ಪ್ರಕೃತಿಯ ಪ್ರತಿರೋಧವನ್ನು ಮುಖ್ಯಧಾರೆಯಾಗಿ ತಂದಿದ್ದರೂ ಸಹ ಈ ಕಥೆಯಲ್ಲಿ 'ಇಕೋಫೆಮಿನಿಸಂ'ನ ಚಹರೆಗಳಿವೆ. ಅವುಗಳನ್ನು ಈ ಕಥೆಯ ಸಂದರ್ಭಗಳ ಮೂಲಕವೇ ಬಿಡಿಸಿಕೊಳ್ಳೋಣ.

'ಧಣಿಗಳ ಬೆಳ್ಳಿಲೋಟ' ಕಥೆಯಲ್ಲಿ ಬರುವ 'ಹೊಳೆ' ಮತ್ತು 'ಚಿನ್ನಮ್ಮ' ಈ ಕಥೆಯ ಎರಡು ಕೇಂದ್ರಗಳು. ಧಣಿಗಳು ಅತಿಕ್ರಮಣ ಬುದ್ಧಿಯಿಂದ ಹರಿಯುವ ಹೊಳೆಜಾಗವನ್ನೇ ಪ್ರತಿವರುಷವೂ ಒತ್ತುವರಿ ಮಾಡಿಕೊಳ್ಳುತ್ತಾ ಬರುವಂತೆ, ಬೆಳ್ಳಿಲೋಟ ನಷ್ಟದ ದಂಡದ ನೆಪಹೂಡಿ ಗುಡ್ಡನ ತಾಯಿ ಚಿನ್ನಮ್ಮಳನ್ನೇ ಮೂರು ಬೇಸಿಗೆಗಳ ಕಾಲ ಉಚಿತ ದುಡಿಮೆಗೆ ಇಟ್ಟುಕೊಂಡಿದ್ದಾನೆ. ಬೆಳ್ಳಿಲೋಟ ಕಳೆದಿದ್ದಕ್ಕಾಗಿ ಗುಡ್ಡನನ್ನು ಮರಕ್ಕೆ ಕಟ್ಟಿ ತೆಂಗಿನ ಕೊತ್ತಳಿಗೆಯಲ್ಲಿ ಚರ್ಮ ಸುಲಿಯುವಂತೆ ಬಡಿಯುತ್ತಿರುವಾಗ, ಚಿನ್ನಮ್ಮ ಉಚಿತ ದುಡುಮೆಗೆ ಒಪ್ಪಿಕೊಂಡಾಗಲೇ ಆತ ತನ್ನ ಕೊತ್ತಳಿಗೆಯನ್ನು ಕೆಳಗೆ ಬಿಡುವುದು. "..ತಾನು ಆ ಬೆಳ್ಳಿಲೋಟದ ಹಣವನ್ನು ವರ್ಷಾನುಗಟ್ಟಲೆ ಪಡಿಯಿಲ್ಲದೆ ನಿಮ್ಮಲ್ಲಿ ದುಡಿದು ತೀರಿಸುವೆನೆಂದು ಅಳುತ್ತಾ ಬೇಡಿಕೊಂಡಳು. ಧಣಿಗಳ ಕೈಯಿಂದ ಕೊತ್ತಳಿಗೆ ಕೆಳಗುರುಳಿತು." (ಪು.21) ಎಂದು ಲೇಖಕಿ ಧಣಿಗಳ ಹೊಡೆತದ ನೆಪವನ್ನು, ಅದರ ಹಿಂದಿನ ಕಾರಣವನ್ನು ಸೂಕ್ಷ್ಮವಾಗಿ ಕಟ್ಟಿಕೊಟ್ಟಿರುವುದು ಇಲ್ಲಿ ಕಾಣುತ್ತಿದೆ. ಇಲ್ಲಿ ಚಿನ್ನಮ್ಮನನ್ನು ಒಂದು ಬೆಳ್ಳಿಲೋಟಕ್ಕಾಗಿ ಮೂರು ಬೇಸಿಗೆಗಳವರೆಗೆ ಉಚಿತ ದುಡಿಮೆಗೆ ಬಳಸಿಕೊಳ್ಳುವುದು ಹೆಣ್ಣಿನ ದುಡಿಮೆಗೆ ಗಂಡಿನ ದುಡಿಮೆಗಿಂತ ಕಡಿಮೆ ಬೆಲೆ ಇರುವುದನ್ನೇ ಸೂಚಿಸುತ್ತದೆ. ಹೆಣ್ಣಿನ ಕೆಲಸಕ್ಕೆ ಕಡಿಮೆ ಮೌಲ್ಯವಿರುವುದರಿಂದ ಧಣಿಗಳಿಗೆ ಇದರಿಂದ ಇನ್ನೂ ಲಾಭವಾದಂತಾಯಿತು. ಬೆಳ್ಳಿಲೋಟದನೆಪ ಒಂದುಕಡೆ, ಹೆಣ್ಣಿನ ಕೆಲಸಕ್ಕೆ ಕಡಿಮೆ ಮೌಲ್ಯಕಟ್ಟಿ ತಮ್ಮ ಉಚಿತ ದುಡಿಮೆಯ ಅವಧಿಯನ್ನು ಮೂರು ವರ್ಷಗಳವರೆಗೆ ಹಾಕಲು ಸಿಕ್ಕ ಅವಕಾಶ ಇನ್ನೊಂದೆಡೆ. ಈ ಧಣಿಗಳು ಆ ಹೊಳೆಯ ವಿಚಾರದಲ್ಲೂ ಇದೇ ಬಗೆಯ ತಿರಸ್ಕಾರದಲ್ಲಿಯೇ ಶೋಷಿಸುತ್ತಿರುವುದು. ಕೇವಲ ಸಣ್ಣ ಬೆಳ್ಳಿಲೋಟ ಚಿನ್ನಮ್ಮನ ಮಗನ ಕಾರಣದಿಂದ ಕಳೆದುಹೋದದ್ದು ಒಂದು ಆಕಸ್ಮಿಕ. ಆದರೆ ಧಣಿಗಳು ಚಿನ್ನಮ್ಮನ ಕುಟುಂಬದ ಮೇಲೆ ಹೊರಿಸಿದ್ದು ಕಳ್ಳತನದ ಆರೋಪ. ಆ ಬೆಳ್ಳಿಲೋಟವನ್ನು ಹುಡುಕಿಸುವುದಕ್ಕಾಗಿ ಆಗಲಿ, ಅದು ಕಳೆದುದಕ್ಕೆ ಅವರಲ್ಲಿ ಭಾವನಾತ್ಮಕ ಬೇಸರವಾಗಲಿ ಇಲ್ಲ. ಅವರಿಗೆ ಕೇವಲ ಅದೊಂದು ನೆಪ, ಉಚಿತ ದುಡುಮೆ ಹೇರಲು ಅವರಿಗೆ ಸಿಕ್ಕ ಸುವರ್ಣಾವಕಾಶ. ಹಾಗಾಗಿಯೇ ಆ ಬೆಳ್ಳಿನೋಟವನ್ನು ಹುಡುಕಿಸುವ ಪ್ರಯತ್ನವನ್ನಾಗಲಿ, ಅಥವಾ ಚಿಕ್ಕ ಹುಡುಗ ಗುಡ್ಡನನ್ನು ಕ್ಷಮಿಸುವ ಆಲೋಚನೆಯನ್ನಾಗಲಿ ಆತ ಮಾಡಲಾರ. ಆದರೆ ಧಣಿಗಳ ಹೆಂಡತಿಗೆ ಆ ಲೋಟ ಬೆಳ್ಳಿ ಎನ್ನುವುದಕ್ಕಿಂತ 'ನನ್ನಪ್ಪ ಮದುವೆಯಲ್ಲಿ ಕೊಟ್ಟ

ಬೆಳ್ಳಿಲೋಟ' ಎಂಬ ಭಾವನಾತ್ಮಕತೆಯಾದರೂ ಇದೆ. ಹಾಗಾಗಿ ಚಿನ್ನಮ್ಮನ ಗಂಡ ಕುದುಪನ ಮೇಲೆ ಆಕೆ ಸಹಜ ಅನುಮಾನ ವ್ಯಕ್ತಪಡಿಸುತ್ತಾಳೆ. ಏಕೆಂದರೆ ಆ ಲೋಟ ಅವಳಿಗೆ ಸೇರಿದ್ದು, ಅದರ ಮೇಲೆ ಭಾವನಾತ್ಮಕತೆ ನೆನಪುಗಳಿವೆ. ಆದರೆ ಬೆಳ್ಳಿಲೋಟ ಕಳೆದ ನೆಪ ಹೆಕ್ಕಿಕೊಂಡು ಗುಡ್ಡನಿಗೆ ಚರ್ಮಸುಲಿದು ಬರುವಂತೆ ಹೊಡೆಯುವುದು ಮಾತ್ರ ಧಣಿಗಳು! ಇಲ್ಲಿ ಪುರುಷ ಸಂಪತ್ತಿನ ರಕ್ಷಕ, ಧಣಿಯಾಗಿ ಕಾಣಿಸುತ್ತಾನೆ. ಮೇಲ್ವರ್ಗದಲ್ಲಾಗಲೀ, ತಳವರ್ಗದಲ್ಲಾಗಲೀ ಹೆಣ್ಣು, ಹೊನ್ನು, ಮಣ್ಣುಗಳೆಲ್ಲ ಪುರುಷನ ಆಸ್ತಿ. ಹೆಂಡತಿಯ ಬೆಳ್ಳಿಲೋಟ ಕಳೆದಿದ್ದಕ್ಕಾಗಿ ಧಣಿಗಳಿಗೆ ಗುಡ್ಡನನ್ನು ತಳಿಸುವ ಅಧಿಕಾರ ಬಂದದ್ದು, ಒಂದು ಪುರುಷನಿಗೆ ಪಿತೃಪ್ರಧಾನತೆಯ ಕಲ್ಪಿಸಿದ ಆಸ್ತಿಯ ವಾರಸುದಾರಿಕೆಯಿಂದ ಬಂದದ್ದು, ಇನ್ನೊಂದು ಪುರುಷ ಪ್ರಧಾನತೆಯಿಂದ ಬಂದದ್ದು, ಮತ್ತೊಂದು ಮೇಲ್ವರ್ಗವೆಂಬ ಅಹಂಕಾರದಿಂದ ಬಂದದ್ದು. ಈ ಮೂರು ಬಗೆಯ ಅಧಿಕಾರಗಳೇ ಚಿನ್ನಮ್ಮನ ಮಗನ ಚರ್ಮ ಸುಲಿದು ಹೋಗುವ ರೀತಿ ಬಡಿಯುವಂತೆ ಧಣಿಗಳನ್ನು ಪ್ರಚೋದಿಸಿದ್ದು, ಚಿನ್ನಮ್ಮನ ತಾಯ್ತನ ಪ್ರಜ್ಞೆಯನ್ನು ಕಲಕಿ ಉಪಾಯವಾಗಿ ಉಚಿತ ದುಡಿಮೆಯಲ್ಲಿ ಸಿಲುಕಿಸಿದ್ದು. ಇಲ್ಲಿ ಅಂತಿಮವಾಗಿ ಈ ಅಧಿಕಾರದ ಮೂಲ ಹೆಚ್ಚಾಗಿ ಪಿತೃಪ್ರಧಾನತೆಗೆಯೇ ಸಂಬಂಧಿಸಿರುವುದು ಎದ್ದು ಕಾಣುತ್ತಿದೆ.

ಪಿತೃಪ್ರಧಾನತೆಯ ಬೇರುಗಳು ಸಮಾಜದಲ್ಲಿ ಎಷ್ಟು ಆಳವಾಗಿ ಬೇರೂರಿವೆ ಎಂದರೆ ಅವುಗಳ ಚಹರೆಗಳನ್ನು ಸ್ಪಷ್ಟವಾಗಿ ಕಂಡುಹಿಡಿಯುವುದು ಕಷ್ಟ. ಹಾಗಾಗಿಯೇ ಪ್ರಕೃತಿಯನ್ನು ನಾಶ ಮಾಡುವುದಕ್ಕೂ ಪಿತೃಪ್ರಧಾನತೆಗೂ ಇರುವ ಸಂಬಂಧ ಮೇಲ್ನೋಟಕ್ಕೆ ಅಸಮಂಜಸವಾಗಿ ಕಾಣಬಹುದು. ಕಾರಣ ಪಿತೃಪ್ರಧಾನತೆಯ ಚಹರೆಗಳು ತಮ್ಮ ಗುರುತುಗಳನ್ನೇ ಮರೆಮಾಚಿಕೊಂಡು ಒಪ್ಪಿತಮೌಲ್ಯಗಳಾಗಿ ಬದಲಾಗಿ ಬಿಟ್ಟಿವೆ. ಆಸ್ತಿಯ ವಾರಸುದಾರಿಕೆಯನ್ನು ಪುರುಷನಿಗೆ ನೀಡಿರುವ ಪಿತೃಪ್ರಧಾನತೆ ಅಂತಹ ವಾರಸುದಾರಿಕೆಯಲ್ಲಿ ಹೆಣ್ಣು, ಹೊನ್ನು, ಮಣ್ಣುಗಳೆಲ್ಲವನ್ನೂ ಸೇರಿಸಿ ಬಿಟ್ಟಿವೆ. ಹಾಗೆ ಸುಮ್ಮನೆ ಮೇಲ್ನೋಟಕ್ಕೆ ಇತಿಹಾಸವನ್ನು ಗಮನಿಸಿದರೂ ಸಾಮ್ರಾಜ್ಯಗಳ ಆಳ್ವಿಕೆ, ವಿಸ್ತರಣೆ, ಅತಿಕ್ರಮಣ, ಆಕ್ರಮಣಗಳಲ್ಲಿ ಪಿತೃಪ್ರಧಾನತೆಯು ಪುರುಷನಿಗೆ ನೀಡಿರುವ ಆಸ್ತಿಯ ವಾರಸುದಾರಿಕೆಯ ಅಧಿಕಾರದ ಮೂಲವೇ ಇವೆಲ್ಲವುಗಳ ಹಿಂದೆ ನಿಂತು ಕೆಲಸಮಾಡಿದೆ ಎಂದು ಗುರುತಿಸಬಹುದು. ಇದನ್ನೆಲ್ಲ ಪಿತೃಪ್ರಧಾನತೆ ಮೂಲಕ್ಕೆ ಬೊಟ್ಟುಮಾಡಿ ತೋರಿಸುವುದು ಸಾಧ್ಯವೇ? ಮಹಿಳೆಯರಿಂದ ಸಾಮ್ರಾಜ್ಯಗಳು ಆಳಲ್ಪಡಲಿಲ್ಲವೇ? ಅತಿಕ್ರಮಣಗಳು ನಡೆಯಲಿಲ್ಲವೇ?. ಇರಬಹುದು, ಸಾಂದರ್ಭಿಕವಾಗಿ ಅತಿ ವಿರಳವಾಗಿ. ಆದರೆ ಮಹಿಳೆ ಗಂಡಾಳ್ವಿಕೆಯಲ್ಲಿ ಹೆಚ್ಚು ಕಾಲ ನರಳಿದ್ದು ಅಂತಃಪುರದ ಸ್ತ್ರೀಯರಲ್ಲಿ ಒಬ್ಬಳಾಗಿ!, ಗಂಡಿನ ಅತಿಕ್ರಮಣದ ಸಂಪತ್ತಿನ ಒಂದು ಭಾಗವಾಗಿ,

ಭೋಗದ ವಸ್ತುವಾಗಿ, ಪಿತೃಪ್ರಧಾನತೆಯಲ್ಲಿ ಪುರುಷನೇ ಸರ್ವಾಧಿಕಾರಿಯಾದಾಗ ಉಳಿದಿದ್ದೆಲ್ಲ ಆತನ ಸಂಪತ್ತೇ ಆಗುತ್ತದೆ. ಮಹಿಳೆಗೂ ಅದೇ ಸ್ಥಾನವಿದೆ, ಪ್ರಕೃತಿಗೂ ಅದೇ ಸ್ಥಾನವಿದೆ. ಈ ಇಬ್ಬರನ್ನೂ ಪುರುಷ ಅತಿಕ್ರಮಿಸಬಲ್ಲ, ತನ್ನ ಅಗತ್ಯಕ್ಕೆ ತಕ್ಕಂತೆ ನಿಯಮಗಳನ್ನು ಹೇರಬಲ್ಲ, ಬಳಸಿಕೊಳ್ಳಬಲ್ಲ.

ಉದಾಹರಣೆಗೆ, ಈ ಕಥೆಯ ಧಣಿ ವೆಂಕಟಪ್ಪಯ್ಯ ಹೊಳೆಯು ಹರಿವ ಜಾಗವನ್ನು ಬೇಸಿಗೆಯಲ್ಲಿ ನೀರು ಬತ್ತಿದಾಗ ಒತ್ತುವರಿ ಮಾಡಿ ತೆಂಗಿನತೋಟ ಮಾಡಿದ್ದರೂ ಶಪಿಸುವುದು ಮಾತ್ರ ಹೊಳೆಗೆ. "ಮಳೆಗಾಲ ಬಂದರೆ ಸಾಕು ಈ ಬಿಕನಾಸಿ ಹೊಳೆ ಊರಡೀ ತನ್ನ ಸೆರಗನ್ನೇ ಹಾಸಿಬಿಡುತ್ತದೆ..., ಎಷ್ಟಗಲ ಸೆರಗು ಹಾಸಿದರೂ ಇನ್ನಷ್ಟು ದೂರಕ್ಕೆ ಹಾಸಬೇಕೆಂಬ ಚಟ ಇದಕ್ಕೆ..." (ಪು.18) ಎನ್ನುತ್ತಾ ತನ್ನ ತಪ್ಪಿದ್ದರೂ ಹೊಳೆಯನ್ನೇ ಮೂದಲಿಸುತ್ತಾನೆ. ಪ್ರಕೃತಿಯ ಒಂದು ಭಾಗ ಮನುಷ್ಯ. ಆದರೆ ಮನುಷ್ಯನು ಪ್ರಕೃತಿ ತನ್ನ ಲಾಭಕ್ಕಾಗಿ ಇರುವುದೆಂದು ತಿಳಿದಿದ್ದಾನೆ. ಸಂಪತ್ತಿನ ವಿಸ್ತರಣೆಯ ಮನಸ್ಥಿತಿ, ಅತಿಕ್ರಮಣದ ದೃಷ್ಟಿಕೋನಗಳು ಪಿತೃಪ್ರಧಾನತೆಯು ಸಂಪತ್ತಿನ ವಾರಸುದಾರಿಕೆಯನ್ನು ಕೊಟ್ಟ ಪುರುಷನಿಗೆ ಇವುಗಳನ್ನೂ ಸಹ ಜೊತೆಯಲ್ಲಿ ಬಳುವಳಿ ನೀಡಿದಂತೆ ತೋರುತ್ತಿದೆ. ಪ್ರಾಕೃತಿಕ ಒತ್ತುವರಿಗಳಿಗೂ ಪುರುಷನ ಆಸ್ತಿಯ ವಾರಸುದಾರಿಕೆಯ ಅಧಿಕಾರಕ್ಕೂ ಸಾಕಷ್ಟು ಸನಿಹದ ಸಂಬಂಧವಿದೆ. ಆದರೆ ಪ್ರಕೃತಿಗೆ ಯಾಮಾರಿಸಿ ಪ್ರಕೃತಿಯ ಎಲ್ಲದರ ಮೇಲೆ ಹಕ್ಕು ಚಲಾಯಿಸುವವನ ದರ್ಪ ಎಂದಾದರೂ ಇಳಿಯಬೇಕಲ್ಲವೇ, 'ಪ್ರಕೃತಿ' ತಿರುಗಿಬಿದ್ದರೆ ಉಳಿವವರಾರು? ಇಲ್ಲಿ ಆ ಹೊಳೆ ಕೂಡ ಧಣಿ ವೆಂಕಟಪ್ಪಯ್ಯನ ಅತಿಕ್ರಮಣಕ್ಕೆ ತಕ್ಕ ಉತ್ತರ ನೀಡುತ್ತದೆ. "ಗದ್ದೆಯಲ್ಲಿ ಬಿತ್ತುವುದನ್ನು ಮರಳದಿನ್ನೆ ಮೇಲೆ ಬಿತ್ತಿದೆಯಲ್ಲವ ಮಾರಾಯ...? ಎಂದು ಧಣಿಯವರ ಪೆದ್ದುತನದ ಬಗ್ಗೆ ಮನಸ್ಸಲ್ಲೇ ನಗುತ್ತಾ ಆ ಧರೆಯನ್ನು ಕೆಡವಲು ಹೊಂಚು ಹಾಕುತ್ತಿರುತ್ತದೆ. ಆನಾದಿ ಕಾಲದಿಂದಲೂ ಅಲ್ಲೇ ಇರುವ ಹೊಳೆಗೇನು ತಿಳಿದಿಲ್ಲವೆ. ಇವ ಧನಿಕ ಮಹಾಶಯ ತನ್ನ ಸೆರಗನ್ನೇ ಒತ್ತರಿಸಿಕೊಂಡು ತೋಟ ಮಾಡಿದ್ದಾನೆ ಎನ್ನುವ ಸತ್ಯ. ಅಂತು ಮಳೆಗಾಲ ಕಾಲಿಟ್ಟು ಆಟಿ ತಿಂಗಳ ನಾಲ್ಕು ಜಡೆಮಳೆ ಹೊಡೆದರೆ ಸಾಕು ಧಣಿಗಳು ಕಟ್ಟಿದ ಧರೆ ಬುಡದಿಂದಲೇ ಲಯ. ಹೊಳೆ ತಟ್ಟನೆ ಧಣಿಯವರ ತೋಟದೊಳಗೆ ನುಗ್ಗಿ ಅದನ್ನಿಡೀ ಕಡಲು ಮಾಡಿ ಸೇಡು ತೀರಿಸಿಕೊಳ್ಳುತ್ತದೆ." (ಪು. 19) ಎಂದು ಹೊಳೆಯ ಪ್ರತಿರೋಧವನ್ನು ಕಥೆಗಾರ್ತಿ ಬಂಡಾಯದ ನೆಲೆಯಲ್ಲಿ ಚಿತ್ರಿಸುತ್ತಾರೆ. ಹೊಳೆ ಧಣಿಗಳ ತೋಟಕ್ಕೆ ನುಗ್ಗಿ ಕಟ್ಟಿರುವ ಧರೆಯನ್ನು ಕೆಡವಿದಂತೆ, ಮಹಿಳೆಗೆ ಕಟ್ಟಲೆಗಳ 'ಧರೆ'ಯನ್ನು ಕಟ್ಟಿ, ಮಹಿಳಾ ಬದುಕಿನ ಸ್ವಾತಂತ್ರ್ಯವನ್ನು ಅತಿಕ್ರಮಿಸಿರುವ ಪುರುಷಾಧಿಕಾರವನ್ನು ಸಹ ಕೊಡವಿಕೊಳ್ಳಬೇಕಿದೆ.

ಹೊಳೆ ತೋರಿದ ಬಂಡಾಯದಂತೆಯೇ ಈ ಕಥೆಯ ಕೊನೆಯಲ್ಲಿ ಚಿನ್ನಮ್ಮ ತೋರುವ ಪ್ರತಿರೋಧದಲ್ಲಿ ಈ ಬಂಡಾಯ ಧ್ವನಿ ಮಾರ್ಧನಿಸಿದೆ.

ಈ ಕಥೆಯ ಮುಖ್ಯ ಧ್ವನಿ ಇರುವುದು ಚಿನ್ನಮ್ಮ ತೋರುವ ಪ್ರತಿರೋಧದಲ್ಲಿ. ಒಂದು ಬೇಸಿಗೆಯಲ್ಲಿ ಧಣಿ ವೆಂಕಟಪ್ಪಯ್ಯ ಚಿನ್ನಮ್ಮ ಮತ್ತು ಅವಳ ಗಂಡ ಕುದುಪನಿಂದ ಹೊಳೆಯಲ್ಲಿ ತುಂಬಿದ್ದ ಹೂಳನ್ನು ಎತ್ತಿಸುತ್ತಾ ತಾನು ಮರದ ನೆರಳಲ್ಲಿ ನಿಂತು ಸೂಚನೆ ನೀಡುತ್ತಿರುತ್ತಾನೆ. ಚಿನ್ನಮ್ಮನ ಕುಟುಂಬದ ಮೇಲೆ ಆರೋಪ ಹೊರಿಸಿ, ಚಿನ್ನಮ್ಮನನ್ನು ಉಚಿತ ದುಡಿಮೆಗೆ ತಳ್ಳಿದ್ದ ಆ ಬೆಳ್ಳಿಲೋಟ ಆ ಕೆಸರಿನ ಮಡುವಲ್ಲಿ ಆಗ ಕಾಣಿಸಿಕೊಳ್ಳುತ್ತದೆ. ಕುದುಪನಿಗೆ ಆ ಲೋಟವನ್ನು ಧಣಿಗಳಿಗೆ ಒಪ್ಪಿಸಿ ಅಪವಾದ ಮುಕ್ತನಾಗುವ ಕಾತರ, ಆದರೆ ಚಿನ್ನಮ್ಮನಿಗೆ ತನ್ನದಲ್ಲದ ತಪ್ಪಿಗೆ ಮೂರು ಬೇಸಿಗೆಗಳ ಕಾಲ ದುಡಿಯುವಂತೆ ಮಾಡಿದ ಆ ಲೋಟ ಹುಲ್ಲುಕಡ್ಡಿಗೆ ಸಮಾನವಾಗಿ ತೋರುತ್ತದೆ. "ಇದೇ ಲೋಟವಲ್ಲವೆ... ತನ್ನ ಬೆವರಿನ ಬೆಲೆ ಕಳೆದದ್ದು. ಕಳ್ಳತನದ ಕಿರೀಟವನ್ನು ತನ್ನ ಮುರುಕಲು ಗುಡಿಸಲ ಚಾವಣಿಗೆ ಜೋಡಿಸಿದ್ದು. ಥೂ! ಬೆಳ್ಳಿಯದ್ದಾದರೇನಂತೆ... ಬುದ್ಧಿ ಮಣ್ಣಿಗಿಂತಲೂ ಬುರ್ನಾಸು, ಮೂರ್ಖಾಸಿನದ್ದು!" (ಪು. 24) ಎನ್ನುತ್ತಾ ತನ್ನ ಒಡಲ ಬೇಗೆಯನ್ನು ಹೊರಹಾಕುತ್ತಾಳೆ. ಆ 'ಬೆಳ್ಳಿಲೋಟ' ಧಣಿಯವರ ಪತ್ನಿಗೆ ಎಷ್ಟು ಪ್ರಿಯವಾದದ್ದೆಂದು ಆಕೆಗೆ ತಿಳಿದಿದೆ. ಆದರೆ ಬೆಳ್ಳಿಲೋಟವನ್ನು ತಮ್ಮ ಕುಟುಂಬ ಕದ್ದಿಲ್ಲವೆಂದು ಪರಿಪರಿಯಾಗಿ ಕೇಳಿಕೊಂಡರೂ ತಮ್ಮ ಮೇಲೆ ಕಳಂಕ ಹೊರಿಸಿ ಉಚಿತ ದುಡಿಮೆಗೆ ತಳ್ಳಿದ್ದ ಧಣಿಗಳ ನಡೆ ಬಗ್ಗೆ ಅವಳಲ್ಲಿ ರೋಷ ಉಕ್ಕುತ್ತದೆ. ಈ ಅವಮಾನಕ್ಕೆ ಪ್ರತಿಯಾಗಿ, ಸಿಕ್ಕ ಆ ಬೆಳ್ಳಿಲೋಟವನ್ನು ಮರಳಿ ಧಣಿಗಳಿಗೆ ಹಿಂದುರಿಗಿಸದೇ ಅದನ್ನು ಇನ್ನಷ್ಟು ಆಳವಾದ ಕೆಸರಿನ ಮಡುವಿಗೆ ಎಸೆದು ಸೇಡು ತೀರಿಸಿಕೊಳ್ಳುತ್ತಾಳೆ. ಎಸೆಯುವ ಮುನ್ನ ಧಣಿಗಳಿಗೆ ಕಾಣಲೆಂದೇ ಆ ಲೋಟವನ್ನು ಎತ್ತಿ, ತಿರುತಿರುಗಿಸಿ ನೋಡುವುದು ಅವಳು ಧಣಿಗಳ ವಿರುದ್ಧ ಹೂಡಿದ ಬಂಡಾಯದಂತೆ ಕಾಣುತ್ತದೆ.

ಈ ಕಥೆಯ ಸಂದರ್ಭದಲ್ಲಿ ಎರಡು ಬಗೆಯ ಅತಿಕ್ರಮಣಗಳು ಮತ್ತು ಎರಡು ಬಗೆಯ ಪ್ರತಿರೋಧಗಳು ಕಂಡುಬರುತ್ತದೆ. ಇಲ್ಲಿ ಎರಡು ಬಗೆಯ ಶೋಷಣೆಗಳೂ ಒಂದೇ ಬಗೆಯದ್ದಾಗಿವೆ. ತನ್ನ ಪಾಡಿಗೆ ತಾನು ಹರಿವ ಹೊಳೆಯ ಜಾಗವನ್ನು ಒತ್ತುವರಿ ಮಾಡಿ ಧರೆಕಟ್ಟಿ ತೋಟನೆಟ್ಟು ಆ ಹೊಳೆಯ ಮೇಲೆ ನಿರಂತರವಾಗಿ ದೌರ್ಜನ್ಯ ವೆಸಗುವಂತೆ, ಕಳ್ಳತನದ ಆರೋಪ ಹೊರಿಸಿ ತನ್ನ ತಪ್ಪಿಲ್ಲದಿದ್ದರೂ ಚಿನ್ನಮ್ಮನ್ನು ಮೂರು ವರುಷ ಉಚಿತ ದುಡಿಮೆ ಮಾಡುವಂತೆ ಮಾಡಿರುವುದು. ಈ ಮೊದಲೇ ಗುರುತಿಸಿರುವಂತೆ ಈ ಎರಡೂ ಅತಿಕ್ರಮಣ ಮನಸ್ಥಿತಿಗಳು ಆಸ್ತಿಯ ವಾರಸುದಾರಿಕೆಯ ಮೂಲಕವಾಗಿ ವೆಂಕಟಪ್ಪಯ್ಯನಿಗೆ

ದೊರೆತವುಗಳು. ಪಿತೃಪ್ರಧಾನತೆಯಲ್ಲಿ ಪ್ರಕೃತಿಯ ಎಲ್ಲವೂ ಸಂಪತ್ತಾಗಿ, ಅದರ ಒಡೆಯ ಪುರುಷನಾಗಿ ಭಾವಿತವಾಗಿರುವಾಗ, ಪುರುಷನಿಂದ ಪ್ರಕೃತಿ ಮತ್ತು ಹೆಣ್ಣು ನಿರಂತರವಾಗಿ ಆಳಲ್ಪಟ್ಟಿರುವರು. ಈ ಕಾರಣಕ್ಕಾಗಿಯೇ 'ಇಕೋಫೆಮಿನಿಸಂ' ಪರಿಕಲ್ಪನೆ ಪ್ರಕೃತಿ ಮತ್ತು ಹೆಣ್ಣಿನ ಶೋಷಣೆ ಮತ್ತು ಸಮಸ್ಯೆಗಳು ಒಂದೇ ಬಗೆಯವಾಗಿದ್ದು, ಇದರ ವಿರುದ್ಧವಾಗಿ ಸ್ತ್ರೀವಾದಿಗಳು ಮತ್ತು ಪರಿಸರವಾದಿಗಳು ಒಗ್ಗಟ್ಟಾಗಿ ಧ್ವನಿ ಎತ್ತಬೇಕೆಂಬ, ಪರಸ್ಪರ ಸಹಕಾರದಿಂದ ಪರಿಹಾರಗಳನ್ನು ಕಂಡುಕೊಳ್ಳಬೇಕೆಂಬ ಆಶಯವನ್ನು ವ್ಯಕ್ತಪಡಿಸುತ್ತದೆ. ಪ್ರಸ್ತುತ ಕಥೆಯಲ್ಲಿ ಹೆಚ್. ನಾಗವೇಣಿಯವರು ಪ್ರಕೃತಿ ಮತ್ತು ಹೆಣ್ಣಿನ ಶೋಷಣೆಯ ಸ್ವರೂಪಗಳನ್ನು, ಈ ಎರಡರ ಪ್ರತಿರೋಧಗಳನ್ನು ಒಟ್ಟಾಗಿ ನಿರೂಪಿಸಿರುವ ಬಗೆ ವಿಶೇಷವಾದುದು, ಅರ್ಥಪೂರ್ಣವಾದುದು.

ಪರಾಮರ್ಶನ ಗ್ರಂಥಗಳು :

1. ನಾಗವೇಣಿ. ಎಚ್. ಮೀಯುವ ಆಟ. ಲೋಹಿಯ ಪ್ರಕಾಶನ, ಬಳ್ಳಾರಿ, 2005.

***

ಗಂಗಪ್ಪ ತಳವಾರ ಅವರ ಕಿರು ಕಾದಂಬರಿ 'ಧಾವತಿ'

ಡಾ. ಸರ್ವೇಶ್ ಬಂಟಹಳ್ಳಿ
ಮುಖ್ಯಸ್ಥರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಯೂನಿವರ್ಸಿಟಿ
ಬೆಂಗಳೂರು–77

'ತಮಟೆ ಪ್ರಕಾಶ'ನದ ಗೆಳೆಯರು ಹೋರಾಟದ ಮುಂದುವರೆದ ಭಾಗವಾಗಿ ಸ್ಥಾಪಿಸಿಕೊಂಡಿರವ 'ತಮಟೆ ಪ್ರಕಾಶ'ನದ ಮೊದಲ ಕೃತಿ ಗಂಗಪ್ಪ ತಳವಾರ ಅವರ ಕಿರು ಕಾದಂಬರಿ 'ಧಾವತಿ'. ಕೋಲಾರ ಜಿಲ್ಲೆಯ ಅದರಲ್ಲೂ ಮಾಲೂರು ತಾಲ್ಲೂಕಿನ ಗಡಿ ಭಾಗದ ಸಣ್ಣ ಹಳ್ಳಿಯ ಕಥಾವಸ್ತುವನ್ನು ಓದುಗರ ಮನಸಿಗೆ ತಲುಪಿಸಿರುವ ಕಾದಂಬರಿಕಾರರು ಹಲವು ಮಿತಿಗಳಿಂದಾಚೆಗೂ ಗೆದ್ದಿದ್ದಾರೆ. ಮಿತಿಗಳಿರದೆ ಎಲ್ಲರನ್ನೂ ಮೆಚ್ಚಿಸುವಂತೆ ಬರೆಯುವುದು ಯಾವುದೇ ಹೊಸ ಬರಹಗಾರನಿಗೆ ಅಷ್ಟು ಸುಲಭದ ಕೆಲಸವೇನಲ್ಲ. ಅತ್ಯಂತ ಸೂಕ್ಷ್ಮವಾಗಿ ವಿಮರ್ಶಿಸಿ ತೂಗುವುದಕ್ಕಿಂತಲು ಹೊಸ ತಲೆಮಾರಿನ ಬರಹಗಾರನೊಬ್ಬ ಮಾಡಿರುವ ಪ್ರಾಮಾಣಿಕ ಪ್ರಯತ್ನವನ್ನು ಓದುಗ ಲೋಕಕ್ಕೆ ಪರಿಚಯಿಸುವ ಜವಾಬ್ದಾರಿ ಸಾಹಿತ್ಯ ಲೋಕಕ್ಕಿದೆ. 2023ರಲ್ಲಿ ಪ್ರಕಟಣೆಗೊಳ್ಳುತ್ತಿರುವ ಈ ಕೃತಿ ಕವಿಯಾಗಿದ್ದ ಗಂಗಪ್ಪನನ್ನು ಕನ್ನಡ ನಾಡಿನ ಓದುಗ ಲೋಕ ಮತ್ತೊಂದು ನೆಲೆಯಲ್ಲಿ ನೋಡುವಂತೆ ಮಾಡಿರುವ ಕೃತಿ. ತಮ್ಮ ಹಲವು ಬಿಡಿ ಬರಹಗಳಿಂದಾಗಿ ಸ್ಥಳೀಯವಾಗಿ ಸಮರ್ಥ ಗದ್ಯ ಬರಹಗಾರರೆಂದು ಗುರುತಿಸಿಕೊಂಡಿದ್ದ ಗಂಗಪ್ಪ ಇಂತಹ ಸಾಹಸಕ್ಕೆ ಕೈಹಾಕಿದ್ದು ಅವರನ್ನು ಬಲ್ಲ ಸ್ನೇಹಿತರಿಗೆ ಆಶ್ಚರ್ಯವೇನಲ್ಲ. ಬಹುಶಃ ಅವರೆಲ್ಲ ಗಂಗಪ್ಪ ಇಂತದ್ದೊಂದು ದೊಡ್ಡ ಕೆಲಸವನ್ನು ಓದುಗರ ಮುಂದಿಡುತ್ತಾರೆಂಬ ನಿರೀಕ್ಷೆಯಲ್ಲಿ ಇದ್ದರೆಂದು ನಾನಂತೂ ನಂಬುತ್ತೇನೆ. ಬರೆದಿದ್ದೆಲ್ಲವೂ ಗೆಲ್ಲುವುದಿಲ್ಲ, ಗೆದ್ದಿದ್ದೆಲ್ಲವೂ ಗಟ್ಟಿಯಾದುದೇನಲ್ಲ ಎಂಬ ಮಾತಿನಂತೆ ಕೋಲಾರದ ಮಣ್ಣಿನಲ್ಲಿ ಹಲವು ಬರಹಗಾರರು, ಕಾವ್ಯ, ಕಥೆ, ಬಿಡಿಬರಹ ಅಂತ

ತಮ್ಮ ತಮ್ಮ ಪ್ರಯತ್ನಗಳನ್ನು ಮಾಡುತ್ತಿರುವುದು ನಿಜವಾದರೂ ಸೃಜಿಸಿದ ಬರಹವನ್ನು ಓದುಗ ಪ್ರಭುವಿಗೆ ತಲುಪಿಸುವಲ್ಲಿ ನಮ್ಮೀ ಭಾಗದ ಬರಹಗಾರರು ಸೋಲುತ್ತಿದ್ದಾರೆಂದೇ ಭಾವಿಸಬಹುದು. ಆದರೆ ಗಂಗಪ್ಪನವರ ಅದೃಷ್ಟವೆಂಬಂತೆ ತಮಟೆ ಪ್ರಕಾಶನ ಈ ಕೃತಿಯನ್ನು ಅತ್ಯಂತ ಸಮರ್ಥವಾಗಿ ಓದುಗರಿಗೆ ತಲುಪಿಸಿದೆ. ಈ ಮಾದರಿ ನಮ್ಮ ಭಾಗದ ಎಲ್ಲ ಪ್ರಕಾಶಕರಿಗೂ ಹಾಗೂ ಪುಸ್ತಕಗಳನ್ನು ಹೊರತರುತ್ತಿರುವ ಬರಹಗಾರರಿಗೂ ಅನುಕರಣೀಯವಾದ ಮಾದರಿಯಾಗಿದೆ. ಬರಹಗಾರನನ್ನು ಮೀರಿ ಪುಸ್ತಕ ಪ್ರಚಾರ ಪಡೆದುಕೊಳ್ಳುವ ರೀತಿಯಲ್ಲಿ ತಮಟೆ ಗೆಳೆಯರು ಮಾಡುತ್ತಿರುವ ಕೆಲಸ ಪ್ರಶಂಸನೀಯವಾದುದು.

ಅಕ್ಕನ ವಚನದ ಅಂತರಂಗದ ಜಾಡುಹಿಡಿದು ಹೊರಟ ಗಂಗಪ್ಪ ಚಂದ್ರಿಯ ಬದುಕನ್ನು ನೆಪವಾಗಿಸಿಕೊಂಡು ಮಾಲೂರು ತಾಲ್ಲೂಕಿನ ದಕ್ಷಿಣ ಭಾಗದ ಹಳ್ಳಿಗಳ ಚಿತ್ರಣವನ್ನೇ ಬಯಲಾಗಿಸಿದ್ದಾರೆ. ಚಂದ್ರಮ್ಮ (ಚಂದ್ರಿ) ಕದಿರಪ್ಪ ಹಾಗೂ ದುಗ್ಯಮ್ಮನ ಮಗಳು. ಕೂಲಿಯನ್ನು ಬದುಕಾಗಿಸಿಕೊಂಡಿದ್ದ ಕಡುಬಡತನದಲ್ಲಿ ಹುಟ್ಟಿದ ನೋಡಲು ಸುಂದರವಾಗಿದ್ದ ಹೆಣ್ಣುಮಗಳು. ಬದುಕಿನ ನೊಗವನ್ನು ಹೆಗಲಿಗೇರಿಸಿಕೊಂಡು ಬೆಂಗಳೂರಿಗೆ ಕೆಲಸಕ್ಕೆ ಅಂತ ಹೋಗಿ ತಿಂಗಳಾನುಗಟ್ಟಲೇ ಕಳೆದು ಹೋಗುತ್ತಿದ್ದ ಅಪ್ಪ. ಕೂಲಿಯನ್ನೆ ನಂಬಿಕೊಂಡು ಊರಿನ ಶ್ರೀಮಂತರ ಹೊಲಗಳಿಗೆ, ತೋಟಗಳಿಗೆ ಕೆಲಸಕ್ಕೆ ಹೋಗುತ್ತಾ ಬದುಕಿನ ಬಂಡಿಯನ್ನು ನೂಕುತ್ತಿದ್ದ ತಾಯಿ. ಶಾಲೆಯನ್ನು ಅವಮಾನಕ್ಕೆ ಹೆದರಿ ದೂರಮಾಡಿದ ಚಂದ್ರಿ. ಇವರ ನಡುವೆ ಇಡೀ ಕಥೆಯ ಉದ್ದಕ್ಕೂ ಜೀವಂತವಾಗುವ ಸಾರಾಯಿಯ ನಶೆ. ಈ ಪಾತ್ರಗಳನ್ನು ಹಾಗೂ ಕಥೆಯನ್ನು ನಡೆಸಲು ಕಾದಂಬರಿಕಾರರು ಬಳಸಿಕೊಂಡ ಸ್ಥಳೀಯ ಕನ್ನಡ. ಗಂಗಪ್ಪನ ಗದ್ಯವನ್ನು ಈ ಮುಂಚೆ ಓದಿರುವ ಯಾರಾದರೂ ಕಾದಂಬರಿಯಲ್ಲಿ ಬಳಕೆಯಾಗಿರುವ ಭಾಷೆಗಿಂತ ಇನ್ನೂ ಸಮರ್ಥವಾಗಿ ಮಾಲೂರು ಕನ್ನಡವನ್ನು ಅವರು ಬಳಸಬಲ್ಲರೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಇಲ್ಲಿನ ಭಾಷೆ ಸ್ಥಳೀಯ ಓದುಗರಿಗೆ ಇತರರಿಗಿಂತ ಹೆಚ್ಚು ಆಪ್ತವಾಗುವಂತೆ ಮಾಡುತ್ತದೆ. ಕುಡಿತದ ಅಮಲೇರಿ ಕೈಮೀರಿ ಹೊಗಿದ್ದ ದುಗ್ಯಮ್ಮನ ಮರಣದ ನಂತರ ಆಕೆಯ ಶವವನ್ನು ಮಣ್ಣು ಮಾಡಿಬಂದು ಸಾರಾಯಿ ಕುಡಿದ ಚಂದ್ರಿ ಮತ್ತೆ ಏನೋ ಮರೆತವಳಂತೆ ತಾಯಿಯ ಗುಣಿಯ ಬಳಿಗೆ ಹೋಗುತ್ತಾಳೆ. ಅಲ್ಲಿಂದ ತನ್ನ ಇಡೀ ಕಥೆಯನ್ನು ಬಾಲ್ಯದಿಂದ ಪ್ರಾರಂಭಮಾಡುವ ಚಂದ್ರಿ ಕಥೆಯ ಕೊನೆಯಲ್ಲಿ ಅದೇ ತಾಯಿಯ ಗುಣಿಯ ಮೇಲೆ ಉಸಿರು ಚೆಲ್ಲಿರುತ್ತಾಳೆ. ಹಾಗೆ ನೋಡಿದರೆ ತನ್ನ ತಾಯಿಯ ಕಾರಣಕ್ಕಾಗಿ, ಅವಳ ಮೇಲಿನ ಪ್ರೀತಿಯ ಕಾರಣಕ್ಕಾಗಿ ಹಾಗೆ ಮಾಡಿದಳೇ ಎಂದುಕೊಂಡರೆ ಅದು ಒಪ್ಪುವ ಮಾತೇನಲ್ಲ. ಆದರೆ

ಬಾಲ್ಯದಿಂದಲೂ ದ್ವೇಷಿಸುತ್ತಿದ್ದ ತನ್ನ ತಾಯಿಯ ವರ್ತನೆಯ ಹಿಂದೆ ಹೆಣ್ಣಾಗಿ ತಾನು ಅನುಭವಿಸಿದ ಬದುಕೂ ಹೊಸತೊಂದು ದೃಷ್ಟಿಕೋನವನ್ನು ಕೊನೆಯ ಹಂತಕ್ಕೆ ಚಂದ್ರಿಯ ಮನಸಿನಲ್ಲಿ ಕಾದಂಬರಿಕಾರರು ಊಹಿಸಿರಲೂಬಹುದೆಂದು ತೋರುತ್ತದೆ.

ಧಾವತಿ ಕಾದಂಬರಿಯಲ್ಲಿ ಚಂದ್ರಿ ಹಾಗೂ ಆಕೆಯ ತಂದೆ ಕದಿರೆಪ್ಪನ ಪ್ರೀತಿ ಯಾಕೋ ತಣ್ಣಗೆ ಕಾಡಲು ಪ್ರಾರಂಭಿಸಿಬಿಡುತ್ತದೆ. ಹೌದು, ಆತ ನಿರಂತರವಾಗಿ ಹಳ್ಳಿಯಲ್ಲೇ ಇದ್ದು ಅವರ ಕ್ಷೇಮವನ್ನು ನೋಡಿಕೊಳ್ಳುವುದಿಲ್ಲ. ಕುಡಿತಕ್ಕೆ ದಾಸನಾಗಿ ಘನತೆಯನ್ನು ಕಳೆದುಕೊಂಡಿರುತ್ತಾನೆ. ಇದ್ದೊಂದು ಒಡವೆಯನ್ನು ಅಡವಿಟ್ಟು ಕಳೆದು ಹೋಗಿದ್ದ ಗಾರೆ ಕೆಲಸದ ಪರಿಕರಗಳನ್ನು ಖರೀದಿಸಿರುತ್ತಾನೆ. ಹೆಂಡತಿಯಿಂದ ಅಗೌರವಕ್ಕೂ, ಅಸಹನೆಗೂ ತುತ್ತಾಗಿರುತ್ತಾನೆ. ಹೆಂಡತಿಯ ಎಲ್ಲ ಐಲುಗಳನ್ನು ಮರೆತ ಆ ತಂದೆ ಹಾಗೂ ಮಗಳ ನಡುವಿನ ಸಂಬಂಧ ಅತ್ಯಂತ ಆಳವಾಗಿ ಕಾಡುವುದಂತೂ ನಿಜ. ತಾಯಿ ಗಂಡನಿಗೆ ಶಾಪಗಳನ್ನಿಡುತ್ತಾ ಅಸಹನೆ ತೋರುತ್ತಿದ್ದರೂ ತಂದೆಯ ಬಗೆಗೆ ಮರುಕಪಡುವ ಚಂದ್ರಿ ತಾಯಿ ಮಮತೆಯನ್ನು ತೋರುತ್ತಾಳೆ. ಒಬ್ಬಳೇ ಮಗಳೆಂಬ ಪ್ರೀತಿ ಪಟ್ಟಣದಿಂದ ಆಗಾಗ ಬಂದಾಗ ತರುವ ಉಡುಗೊರೆಗಳು, ತಿಂಡಿಗಳು ಅದನ್ನು ಮೀರಿ ಆತ ತೋರುತ್ತಿದ್ದ ನಿಶಬ್ಧ ಪ್ರೀತಿ ನನ್ನೊಳಗಿನ ಓದುಗನ್ನು ಬಹುವಾಗಿ ಕಾಡಿದ್ದು ನಿಜ. ಹೆಂಡತಿಯ ಶಾಪಗಳಿಗೆ ಪ್ರತಿಕ್ರಿಯಿಸದೆ ಊರ ಹೊರಗಿನ ಮಠಕ್ಕೆ ತೆರಳಿ ಶಾಂತನಾಗುತ್ತಿದ್ದ ವಿಧಾನ ಹಲವು ಚಿತ್ರಗಳನ್ನು ಮನಸಿನ ತೆರೆಯಮೇಲೆ ತರುತ್ತದೆ. ಚಂದ್ರಿ ಮೈನೆರೆದ ನಂತರ ಆತ ಊರಿಗೆ ಬರುವಾಗ ಬ್ಯಾಗ್ ತುಂಬಾ ಹೊತ್ತು ತರುವ ಬೆಂಗಳೂರಿನ ಸೌಂದರ್ಯ ಸಂಬಂಧಿ ವಸ್ತುಗಳು ಅಪ್ಪ ಹಾಗೂ ಮಗಳ ನಡುವಿನ ಮಾತೇ ಇರದ ಸಂಬಂಧವನ್ನು ಗಟ್ಟಿಯಾಗಿಸುವಂತೆ ಓದುಗನನ್ನು ಕಾಡುತ್ತವೆ. ಅಪ್ಪನ ಸಾವು ನಿಜಕ್ಕೂ ಚಂದ್ರಿಯನ್ನು ನೋವಿನ ಆಳಕ್ಕೆ ತಳ್ಳುವಂತೆ ಮಡುತ್ತದೆ. ತಂದೆಯ ಸಾವಿನ ನೋವು ಅತ್ಯಂತ ಸಹಜವೆಂಬಂತೆ ಓದುಗರನ್ನು ಕಾಡುತ್ತದೆ ಕೂಡ. ನನಗೆ ವಯಕ್ತಿಕವಾಗಿ ಇಡೀ ಕಾದಂಬರಿಯಲ್ಲಿ ಬಹುವಾಗಿ ಕಾಡಿದ ಅಂಶವಿದು.

ಲಕ್ಕೂರಿನ ಕರಗ, ಅಲ್ಲಿಯ ಕಳ್ಳತನ, ಚಿಕ್ಕತಿರುಪತಿಯ ಜಾತ್ರೆ, ಬಡತನದ ಹತಾಶೆ, ಮಧುಸೂದನ ಬಸ್, ಟಾಪ್ ಮೇಲೆಲ್ಲ ತುಂಬುತ್ತಿದ್ದ ತರಕಾರಿ ಹಾಗೂ ಹೂವ್ವು, ಶಾಲೆಯ ಸಹಜ ಆಸೆಯ ತಪ್ಪುಗಳು, ಬಡತನದ ಅನಾನುಕೂಲಗಳು, ಓರಗೆಯವರೊಂದಿಗಿನ ಹೋಲಿಕೆ, ಕೂಲಿ ಕೆಲಸ, ಸೌದೆ ಆಯುವುದು, ಹಣ್ಣು ತರಕಾರಿಗಳನ್ನು ಕದಿಯುವುದು, ಕಿಲಾಡಿ ಸ್ನೇಹಿತರು, ದನ ಕಾಯುವುದು, ಬತ್ತಿದ

ಕೆರೆಯ ಬಯಲಿನಲ್ಲಿ ದನಾ ಮೇಯಿಸುವ ನೆಪದಲ್ಲಿ ನೂರಾರು ತರಹದ ಆಟಗಳು, ಬಾಲ್ಯದ ನೂರು ಚೇಷ್ಟೆಗಳು... ಗಂಗಪ್ಪ ನಮ್ಮ ಭಾಗದ ಬಹಳಷ್ಟು ನಮ್ಮ ತಲೆಮಾರಿನವರಿಗೆ ಅವರ ಬಾಲ್ಯವನ್ನು ಸ್ಪಷ್ಟವಾಗಿ ಕಟ್ಟಿಕೊಟ್ಟಿದ್ದಾರೆ. ಒಂದೊಂದು ರೂಪಾಯಿ ಕೂಡಿಡುವ ಬದುಕು, ಬಡತದ ಕಾರಣಕ್ಕೆ ಅದರಿಂದಾಗುವ ಭ್ರಮನಿರಸನಗಳು, ತುಂಬಾ ಆಳಕ್ಕೆ ಊರಿದ ಕೋಪ ಅಸಹನೆ, ಗಂಗಪ್ಪ ತಮ್ಮ ಅನುಭವವನ್ನು ಸಾಕಷ್ಟು ಸೋಸಿ ಇಂತಹ ಸನ್ನಿವೇಶಗಳಲ್ಲಿ ಭಾವನೆಗಳನ್ನು ಗಟ್ಟಿಗೊಳಿಸಿದ್ದಾರೆ. ಅದೇ ಹಾದಿಯಲ್ಲಿ ಹೆಣ್ಣಾಗಿ ನಿರೂಪಿಸುವಾಗ ಗಂಡಿನ ಛಾಯೆಗಳನ್ನು ಎಷ್ಟೇ ಪ್ರಯತ್ನ ಪಟ್ಟರೂ ಸ್ವಾಭಾವಿಕವಾಗಿ ಚಲಿಸುವಾಗ ತಪ್ಪಿಸಲು ಎಡವಿದ್ದಾರೆ. ಗಂಡು ಚಂದ್ರಿಯ ನೆರಳಲ್ಲೇ ಓಡಾಡುತ್ತಿರುವಂತೆ ಭಾಸವಾಗುತ್ತದೆ.

ಇಡೀ ಕಾದಂಬರಿಗೆ ಸಂಬಂಧಪಟ್ಟಂತೆ ಮತ್ತೊಂದು ವಿಷಯ ಹರಿದಾಡುತ್ತಿದ್ದುದು ಚಂದ್ರಿ ಹಾಗೂ ಆಕೆಯ ತಾಯಿಯ ಕಾಮ ಪ್ರೇಮಗಳ ಸುತ್ತ. ನಾನು ಓದುವುದಕ್ಕೆ ಮುಂಚೆ ಕೇಳಿದ ಕೆಲವು ಅಭಿಪ್ರಾಯಗಳು ಯಾಕೋ ನಾನು ಓದಿದ ನಂತರ ಅದು ಓದಿದ ಮನಸುಗಳ ಮಿತಿಯೇ ಹೊರತು ಕಾದಂಬರಿಕಾರರ ಮಿತಿಯಲ್ಲವೆಂದು ತೋರಿತು. ತುಂಬಾ ಸಿನಿಮ್ಯಾಟಿಕ್ ಆಗಿ ಚಿತ್ರಿಸದೇ ಅತ್ಯಂತ ಸ್ವಾಭಾವಿಕವಾಗಿ ನಮ್ಮ ಭಾಗದ ಹಳ್ಳಿಗಳಲ್ಲಿ ನಡೆಯುತ್ತಿರಬಹುದಾದ ಬದುಕುಗಳ ಭಾಗವನ್ನು ಮೂಡಿಸಿದ್ದಾರೆ. ಚಂದ್ರಿಯ ತಾಯಿಯು ಟೆಂಟಿನ ಸಿನಿಮಾ ನೆಪದಲ್ಲಿ ತನ್ನನ್ನು ತಾನು ಕಾಮಕ್ಕಾಗಿ ದಾಟುವುದು, ಅದಾದ ನಂತರ ಸಾರಾಯಿಯ ನಶೆಯಲ್ಲಿ ಮುಳುಗಿ ತನ್ನ ದೇಹದ ಮೇಲೆ ಪರಿವೆಯೇ ಇಲ್ಲದೇ ಅದೇ ಉದ್ದನೆಯ ವ್ಯಕ್ತಿಗೆ ಬೆತ್ತಲಾಗುವುದು ಅತ್ಯಂತ ಸಹಜವಾಗಿಯೇ ಚಿತ್ರಿಸಿದ್ದಾರೆ. ಆದರೆ ಆ ರೀತಿಯ ಘಟನೆಗಳಿಗೆ ಬಾಲ್ಯದ ಹಾಗೂ ಪ್ರಾಯಕ್ಕೆ ಬಂದಿದ್ದ ಚಂದ್ರಿ ಸಾಕ್ಷಿಯಾಗುವುದು ಒಂದು ನೋವಿನ ಸಂಗತಿಯಾಗುತ್ತದೆ. ಹಾಗೆ ನೋಡಿದರೆ ಪ್ರಭಾಕರನ ಕಣ್ಣು ಬೀಳುವವರೆಗೂ ಚಂದ್ರಿ ತನ್ನನ್ನು ತಾನು ಕಾಪಾಡಿಕೊಂಡಿದ್ದೇ ಆಶ್ಚರ್ಯವೆಂಬಂತೆ ತೋರುತ್ತದೆ. ಹೊಲ ಮೇಯಲು ಬಂದ ಪಡ್ಡೆ ದನಗಳು ಚಿಗುರನ್ನು ನೋಡಿ ಸುಮ್ಮನೆ ಹೊರಟಾವಾದರೂ ಹೇಗೆ? (ಈ ವಿಚಾರ ಮತ್ತು ಕದಿರಪ್ಪ ಹಾಗೂ ದುಗ್ಗಮ್ಮನಿಗೆ ಒಬ್ಬಳೇ ಮಗುವಾಗಿದ್ದಿದ್ದೂ ಆಶ್ಚರ್ಯವಾಗಿಯೇ ಕಂಡಿತ್ತು). ಪ್ರಭಾಕರನನ್ನು ವಯೋಸಹಜವಾಗಿ ಚಂದ್ರಿ ಪ್ರೀತಿಸುತ್ತಾಳೆ. ಆದರೆ ಅವನು ಪಕ್ಕ ವ್ಯವಹಾರಸ್ಥ. ಅವನನ್ನು ಒಪ್ಪಿಸಿ ದೂರ ಎಲ್ಲಾದರೂ ಓಡಿ ಹೋಗಬೇಕೆಂದುಕೊಳ್ಳುವ ಅವಳ ಆಸೆ ಆಸೆಯಾಗಿಯೇ ಉಳಿಯುವಂತದ್ದು. ಪಾಪ ಆಕೆ ಭ್ರಮನಿರಸನವಾಗುತ್ತಾಳೆ. ಗಂಡನೊಂದಿಗಿನ ಬದುಕು, ಮೈದುನನ ಸಲುಗೆ, ಅವರ ಚಿತ್ರ ಹಿಂಸೆ ವಾಸ್ತವಕ್ಕೆ

ಹತ್ತಿರವೆಂಬಂತಿದ್ದರೂ ಆಕೆಯ ಮದುವೆಯ ಎಪಿಸೋಡ್ ಕವಲು ದಾರಿಯಲ್ಲಿ ಸಾಗಿತೇನೋ ಅನ್ನಿಸತೊಡಗಿತು. ರಹದಾರಿಯಲ್ಲಿ ನಡೆಯುತ್ತಿದ್ದ ಚಂದ್ರಿಯ ಕಥೆಯನ್ನು ಕವಲು ದಾರಿಯಲ್ಲಿ ಅತ್ಯಂತ ವೇಗವಾಗಿ ಓಡಿಸಿಬಿಟ್ಟರೇನೋ ಅನ್ನಿಸಲು ಪ್ರಾರಂಭವಾಯಿತು. ಅತ್ತೆಯ ಮನೆಯ ಬದುಕು ಸಾಕು ಮಾಡಿಕೊಂಡು ಬಂದ ಚಂದ್ರಿಗೆ ಇಲ್ಲಿ ನ್ಯಾಸ್ತನಾಗುವವನು ಹೆಂಚಿನ ಪ್ಯಾಕ್ಟ್ರಿ ಮೇಸ್ತ್ರಿ. ಸಹಜ ಆಸರೆಯನ್ನು ತನ್ನ ಮೊದಲ ಸಂಬಂಧದಿಂದಲು ಪಡೆಯಲು ಬಯಸುವ ಅಸಹಾಯಕ ಹೆಣ್ಣಾಗಿಯೇ ಚಂದ್ರಿ ಕಾಣಿಸುತ್ತಾಳೆ. ಆಕೆಯ ನಿರೀಕ್ಷೆಯಲ್ಲಿ ಎಲ್ಲೂ ತಪ್ಪು ಕಾಣುವುದಿಲ್ಲ. ಆದರೆ, ಗಂಡು ಪ್ರತಿ ಸಂದರ್ಭದಲ್ಲೂ ಅವಳ ನಿರೀಕ್ಷೆಯನ್ನು ಹುಸಿಗೊಳಿಸುತ್ತಾನೆ. ತನ್ನ ಗಂಡನೂ ಕೂಡ ಇದೇ ಹಾದಿ ಹಿಡಿಯುವುದು, ಕೊನೆಯ ಆಸರೆಯಂತೆ ನಂಬಿದ್ದ ಮೇಸ್ತ್ರಿ ಫ್ಯಾಕ್ಟರಿ ಒಡೆಯನನ್ನು ಕರೆತಂದು ಸಹಕರಿಸುವಂತೆ ಬಲವಂತ ಮಾಡುವುದು ಈ ಯಾವ ಘಟನೆಗಳೂ ವಾಸ್ತವಿಕ ಚಿತ್ರಣಕ್ಕೆ ದೂರವೆಂಬಂತೆ ಕಾಣುವುದೇ ಇಲ್ಲ. ನಿಜ ಒಪ್ಪಿಕೊಳ್ಳುವುದು, ಆದರ್ಶವಾಗಿ ಚಿತ್ರಿಸುವುದು ಸೂಕ್ತವೆಂಬಂತೆ ಕಂಡರು ಈ ಹಿನ್ನೆಲೆಯಲ್ಲಿ ಗಂಗಪ್ಪ ಅಶ್ಲೀಲವನ್ನು ಉದ್ರೇಕಗೊಳಿಸದೆ ಓದುಗರನ್ನು ಆಲೋಚಿಸುವಂತೆ ಚಿತ್ರಿಸುವುದು ಸಮಂಜಸವೆಂಬಂತೆ ತೋರುತ್ತದೆ. ಒಲ್ಲದ ಒಲವು ದೇಹ ಮನಸುಗಳನ್ನು ಛಿದ್ರವಾಗಿಸುತ್ತವೆ ಎಂಬುದನ್ನು ಚಂದ್ರಿಯ ಕೊನೆಯ ಕೂಡುವಿಕೆ ಓದುಗರಿಗೆ ಮನವರಿಕೆ ಮಾಡಿಸುತ್ತದೆ. ಅಲ್ಲಿಗೆ ಬದುಕಿನಿಂದ ವಿಮುಖವಾಗುವ ಚಂದ್ರಿ, ದೇಹದ ಹಾಗೂ ಮನಸಿನ ಗಾಯಗಳನ್ನು ಮಾಗಿಸಿಕೊಳ್ಳಲು ಸಾರಾಯಿಗೆ ಮುಖಮಾಡುತ್ತಾಳೆ. ಮತ್ತಷ್ಟು ಸೋಲುತ್ತಾಳೆ.

ಧಾವತಿ ಹಲವು ವಿಮರ್ಶೆಗಳನ್ನು, ಪ್ರಶ್ನೆಗಳನ್ನು, ಮಿತಿಗಳನ್ನು ಮೀರಿ ಓದುಗರು ಒಪ್ಪಿಕೊಂಡಿರುವ ಅಪ್ಪಿಕೊಂಡಿರುವ ಕಾದಂಬರಿ. ಥರ್ಡ್ ಪರ್ಸನ್ ನರೇಷನ್ ಹೆಚ್ಚು ಆಪ್ತವಾಗಿರುತ್ತಿತ್ತು ಎಂಬುದು ನನಗೂ ಅನ್ನಿಸಿತ್ತು. ಚಂದ್ರಿಯ ಮದುವೆಯ ಹಾಗೂ ಅದರ ನಂತರದ ಕಥೆ ಅತ್ಯಂತ ವೇಗವಾಯಿತು ಅನ್ನಿಸಿತು. ಆಕೆಯ ಮದುವೆ ಕಥೆಯ ನಡಿಗೆಗೆ ಬಹುದೊಡ್ಡ ತಿರುವುಕೊಡಬಹುದಾದ ಬದಲಾವಣೆಯನ್ನು ತಂದುಕೊಟ್ಟಿತೆಂದು ಹೇಳಲು ಮತ್ತಷ್ಟು ವಿಸ್ತಾರವಾದ ಕಥೆ ಹರಿಯಬೇಕಿತ್ತೇನೆ ಅನ್ನಿಸಿತು. ಹೆತ್ತ ಹೆಣ್ಣು ಮಗುವನ್ನು ಆಕೆ ಒಪ್ಪದ ನರಕದಲ್ಲಿಯೇ ಬಿಟ್ಟುಬಂದುಬಿಡುವುದು ಚಂದ್ರಿಯ ವ್ಯಕ್ತಿತ್ವ ಅಲ್ಲವೇನೋ ಅನ್ನಿಸಿತು. ಇದೇ ಭಾಷೆಯನ್ನು ಯಾವುದೇ ಇನ್‌ಫ್ಲುಯೆನ್ಸ್ ಇಲ್ಲದೆ ಗಂಗಪ್ಪ ತನ್ನ ಸಹಜ ನಡಿಗೆಯಲ್ಲಿ ನಡೆಸಿದ್ದರೆ ಮತ್ತಷ್ಟು ಆಪ್ತವಾಗುತ್ತಿತ್ತು. ಇವುಗಳಿಂದಾಚೆಗೂ ಒಂದೇ ಓದಿಗೆ ಓದಿಸಿಕೊಳ್ಳುವ ಕಾದಂಬರಿ ಹಲವು ಬದುಕಿನ ಚಿತ್ರಗಳನ್ನು ಮನಸಿನ ಪರದೆಯ ಮೇಲೆ ಚಿತ್ರಿಸುತ್ತದೆ.

ಓದುಗನನ್ನು ಬಲವಾಗಿ ಬಿಗಿದಪ್ಪಿಕೊಳ್ಳುತ್ತದೆ. ಮತ್ತಷ್ಟು ನಿರೀಕ್ಷೆಗಳೊಂದಿಗೆ ಬರಹಗಾರನ ಕೈ ಕುಲುಕುತ್ತದೆ.



ನಾನು ಇತ್ತೀಚಿಗೆ ಓದಿ ಖುಷಿಗೊಂಡ ಪುಸ್ತಕ 'ಧಾವತಿ'. ಖುಷಿಕೊಟ್ಟ ಗಂಗಪ್ಪ ಹಾಗೂ ತಮಟೆ ಸ್ನೇಹಿತರಿಗೆ ಧನ್ಯವಾದಗಳು. ತನ್ನ ಸಮರ್ಥ ಕ್ಷೇತ್ರದಲ್ಲಿ ದೃಢವಾದ ಹೆಜ್ಜೆಯನ್ನಿಟ್ಟಿರುವ ಗಂಗಪ್ಪ ನಮ್ಮ ನೆಲದ ಮತ್ತಷ್ಟು ಕಥೆಗಳಿಗೆ ಜೀವ ತುಂಬಲಿ. ಅಂಬೇಡ್ಕರ್ ಹೇಳುವ ಬದುಕಿನ ಸಿದ್ಧಾಂತಗಳನ್ನು ಪ್ರೇರಣೆಯಾಗಿ ತೆಗೆದುಕೊಳ್ಳಲಿ. ಹೆಂಡದ ದಾಸರಾಗದೆ ಓದಿನ ಮಡಿಲಿನ ಕುಸುಮಗಳನ್ನು ಬೆಳೆಸುವಂತ ಕಥನಗಳನ್ನು ಮತ್ತಷ್ಟು ಈ ಮಣ್ಣಿನಿಂದ ಹೆಕ್ಕಿತರಲೆಂಬ ಆಶಯದೊಂದಿಗೆ..

***

ಹರಿಹರನ ರಗಳೆಗಳಲ್ಲಿ ಸಮಾನತೆಯ ಪರಿಕಲ್ಪನೆ

ಭವ್ಯ ಎಂ.ಎಸ್.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಟೆರೇಸಿಯನ್ ಕಾಲೇಜು,
ಸಿದ್ದಾರ್ಥ ನಗರ, ಮೈಸೂರು–11

ಪೀಠಿಕೆ :

ಕನ್ನಡ ಸಾಹಿತ್ಯಕ್ಕೆ ಸುಮಾರು 1600 ವರ್ಷಗಳ ಇತಿಹಾಸವಿದೆ. ಈ ಅವಧಿಯಲ್ಲಿ ಅದು ವೈವಿಧ್ಯಮಯವಾಗಿಯೂ, ಸಮೃದ್ಧವಾಗಿಯೂ ಬೆಳೆದಿದೆ. ಭಾಷಿಕವಾಗಿ ಪೂರ್ವದ ಹಳೆಗನ್ನಡ, ಹಳೆಗನ್ನಡ, ನಡುಗನ್ನಡ, ಆಧುನಿಕ ಕನ್ನಡ ಎಂಬ ಬೇರೆ ಬೇರೆ ಅವಸ್ಥೆಗಳನ್ನು ಪಡೆದು ಬೆಳೆದಿರುವುದನ್ನು ಗಮನಿಸಬಹುದು. ಕನ್ನಡ ಸಾಹಿತ್ಯ ಪ್ರಕಾರಗಳ ಹಿನ್ನೆಲೆಯಲ್ಲಿ ಚಂಪೂ, ವಚನ, ಷಟ್ಪದಿ, ಸಾಂಗತ್ಯ, ಕೀರ್ತನೆ– ಹೀಗೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ವಲಯವು ಬೆಳೆದಿದ್ದು, ಧಾರ್ಮಿಕವಾಗಿ ವೀರಶೈವ, ಜೈನ, ವೈಧಿಕ ಹೀಗೆ ಹಲವಾರು ಧಾರ್ಮಿಕ ನೆಲೆಯಲ್ಲಿ ಕನ್ನಡ ಸಾಹಿತ್ಯವು ಸಮೃದ್ಧವಾಗಿ ಬೆಳೆದಿದೆ. ಈ ಪರಂಪರೆಯಲ್ಲಿ ಸಾಕಷ್ಟು ಮಹತ್ವದ ಕವಿಗಳು, ಸಾಧಾರಣ ಕವಿಗಳು ತಮ್ಮದೇ ಆದ ರೀತಿಯಲ್ಲಿ ಕನ್ನಡ ಕಾವ್ಯ ಪರಂಪರೆಯನ್ನು ಬೆಳೆಸಿದ್ದಾರೆ. "ಶರಣರ ಜೀವನ ಮತ್ತು ವಚನ ಸಾಹಿತ್ಯಗಳು ಒಂದು ಮಹಾಪೂರದಂತೆ ಬಂದು ಇಳಿದ ಮೇಲೆ ಅದರ ನೆನಪಿಂದ ಸ್ಫುರಣ ಹೊಂದಿ ಸಾಹಿತ್ಯ ನಿರ್ಮಾಣ ಮಾಡಿದವರಲ್ಲಿ ಹರಿಹರ, ರಾಘವಾಂಕ, ಪದ್ಮರಸ ಈ ಮೂವರು ಮುಖ್ಯರು. ಇವರಲ್ಲಿ ಹರಿಹರನು ಹಿರಿಯ ಹಾಗೂ ಭಕ್ತಕವಿ, ಮೇಲಾದ ಶಿವಕವಿ." ಇವೆಲ್ಲ ಅವನ ಕೃತಿಗಳಲ್ಲಿ ಭಕ್ತಿಪೂರ್ಣವಾದ, ಭಾವನಿರ್ಭರವಾದ ಸಮಗ್ರ ವ್ಯಕ್ತಿತ್ವ ಎದ್ದು ಕಾಣುತ್ತದೆ.

ಕನ್ನಡ ಸಾಹಿತ್ಯದ ಪ್ರಮುಖ ಮಹಾಕವಿಗಳಲ್ಲಿ ಹರಿಹರದೇವನಿಗೆ ವಿಶಿಷ್ಟ

ಸ್ಥಾನವಿದೆ. ಕ್ರಾಂತಿಕಾರಿ ಮನೋಭಾವವುಳ್ಳ ವಿಚಾರಶೀಲ ಕವಿ. ಧರ್ಮಕ್ಕಿಂತ ಹೆಚ್ಚು ಭಕ್ತಿಗೆ ಬೆಲೆಕೊಟ್ಟ ಈತ ಶಿವಭಕ್ತಿಯ ಶ್ರೇಷ್ಠತೆಯನ್ನು ಎತ್ತಿ ಹಿಡಿದವನು. ಬದುಕಿನ ನೋವು–ನಲಿವುಗಳನ್ನು ಜೀವನದ ಅನುಭಾವ ಅನುಭವಗಳನ್ನು ಅರಗಿಸಿಕೊಂಡು ಪಕ್ವ ವ್ಯಕ್ತಿತ್ವವನ್ನು ರೂಪಿಸಿಕೊಂಡವನು ಹರಿಹರದೇವ.

ಹರಿಹರನ ರಗಳೆಗಳಲ್ಲಿ ಸಮಾನತೆ:

ವೀರಶೈವ ಧಾರ್ಮಿಕ ಪರಂಪರೆಗೆ ಸೇರಿದ ಮಹಾಕವಿ ಹರಿಹರದೇವ. ಒಟ್ಟಾರೆ ಕನ್ನಡ ಸಾಹಿತ್ಯ ಪರಂಪರೆಯ ಪ್ರಮುಖ ಕವಿ ಮತ್ತು ಮಹತ್ವದ ಕವಿಯಾಗಿದ್ದಾನೆ. ಈತನ ಸಾಹಿತ್ಯ ಕೃಷಿ ಕೂಡ ವೈವಿಧ್ಯಮಯವಾಗಿದೆ. 'ಗಿರಿಜಾಕಲ್ಯಾಣ ಮಹಾಪ್ರಬಂಧಂ' ಎಂಬ ಮಹಾಕಾವ್ಯವನ್ನು ಹಾಗೂ ರಗಳೆ ಪ್ರಕಾರದಲ್ಲಿ ಪುರಾತನ ಹಾಗೂ ನೂತನ ಶಿವಶರಣ–ಶಿವಶರಣೆಯರನ್ನು ಕುರಿತು ನೂರಾರು ರಗಳೆಗಳನ್ನು ಬರೆದಿದ್ದಾನೆ.

ಶಿವ ಹಾಗೂ ಶಿವಶರಣೆಯರಲ್ಲದೆ ಅನ್ಯವಸ್ತುವನ್ನು ಆಯ್ದುಕೊಂಡು ಕಾವ್ಯ ಬರೆಯಲಾರೆ ಎಂಬುದು ಈತನ ವೀರ ಪ್ರತಿಜ್ಞೆ. ಈ ರಗಳೆಗಳ ಮೂಲಕ ಅವನು ವರ್ಗ ಸಂಘರ್ಷ, ವರ್ಣಸಂಘರ್ಷ ಮತ್ತು ಲಿಂಗ ಸಂಘರ್ಷಗಳನ್ನು ನಿರೂಪಿಸುತ್ತ ಸಮಾನತೆಯ ಸಂದೇಶಗಳನ್ನು ಸಾರಿದ್ದಾನೆ. ಆ ಮೂಲಕ ಹೊಸ ಕಾವ್ಯ ಸಂಪ್ರದಾಯವನ್ನು ನಿರ್ಮಿಸಿ, ಅನೇಕ ಕೃತಿಗಳನ್ನು ರಚಿಸಿ, ಭಕ್ತಿಕವಿ ಎಂಬ ಖ್ಯಾತಿಗೆ ಪಾತ್ರನಾದ ಹರಿಹರ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾನೆ. ನಿದರ್ಶನವಾಗಿ ಮಾದಾರ ಚೆನ್ನಯ್ಯನ ರಗಳೆ, ಬೇಡರ ಕಣ್ಣಪ್ಪನ ರಗಳೆ, ಇಳೆಯಾಂಡ ಗುಡಿಮಾರನ ರಗಳೆ, ಕುಂಬಾರ ಗುಂಡಯ್ಯನ ರಗಳೆ, ಮಹಾದೇವಿಯಕ್ಕನ ರಗಳೆ, ಕೋಳೂರು ಕೊಡಗೂಸಿನ ರಗಳೆ ಇತ್ಯಾದಿಗಳನ್ನು ಗಮನಿಸಬಹುದು. ಈ ರಗಳೆಗಳಲ್ಲಿನ ವಸ್ತು–ವಿಷಯಗಳು ಬೇರೆ ಬೇರೆಯಾದರೂ ಅಲ್ಲಿ ಶಿವಭಕ್ತಿ ಎಂಬುದು ಸ್ಥಾಯಿಯಾಗಿದೆ. ಈತ ನಿರ್ಮಿಸಿದ ರಗಳೆ ಕಾವ್ಯ ಸಂಪ್ರದಾಯ, ಈತನ ಅನಂತರ ಚಾಲನೆಗೊಳ್ಳದೆ ಕನ್ನಡ ಸಾಹಿತ್ಯದಲ್ಲಿ ಒಂದು ದ್ವೀಪವಾಗಿ ಉಳಿದಿದ್ದು ಮಾತ್ರ ಅಚ್ಚರಿಯ ಸಂಗತಿಯಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹರಿಹರ ತುಂಬಾ ಮಹತ್ವದ, ವೀರಶೈವ ಕವಿ. ನಿಷ್ಠಾವಂತ ಶಿವಭಕ್ತ. ಈತನ ಆರಾಧ್ಯದೈವ ಹಂಪೆಯ ವಿರೂಪಾಕ್ಷ. ಈತ ಸ್ವತಂತ್ರ ಮನೋಭಾವದ ಕ್ರಾಂತಿಕಾರಿ ಕವಿ.

"ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ
ತನಗಿಂದ್ರ ಚಂದ್ರರವಿ ಕರ್ಣ ದಧೀಚಿಬಲೀಂದ್ರನೆಂದು ತಾ
ನನವವರತಂ ಪೊಗಳ್ದು ಕೆಡಬೇಡಲೆ ಮಾನವ ನೀನಹರ್ನಿಶಂ"

ನೆನೆ ಪೊಗಳರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ" ಎಂಬ ಧ್ಯೇಯವನ್ನು ಇಟ್ಟುಕೊಂಡವನು. 'ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಕಾವ್ಯ ರಚಿಸುವುದಿಲ್ಲ'ವೆಂಬ ವಿಶಿಷ್ಟ ದೋರಣೆಯನ್ನು ಹೊಂದಿದ್ದನು. ಈ ದೋರಣೆಯನ್ನು ಘೋಷಿಸಿ ತನ್ನ ನಾಲಗೆಯನ್ನು ಶಿವನಿಗೆಂದೇ ಮೀಸಲಿರಿಸಿದ್ದನು.

ಹರಿಹರನ ಸಾಹಿತ್ಯ ಸೃಷ್ಟಿ ಕನ್ನಡದಲ್ಲಿ ವಿಶಿಷ್ಟವಾದುದು, ವೈವಿದ್ಯಮಯವಾದುದು ಆಗಿದೆ. ಸಾಂಪ್ರದಾಯಿಕ ಕಾವ್ಯ ರೀತಿಯನ್ನು ಬಿಟ್ಟು ವಸ್ತು, ಭಾಷೆ, ಶೈಲಿ ಇವುಗಳಲ್ಲಿ ಹೊಸತನವನ್ನು ತೋರಿಸಿದ್ದು, ಆಳರಸರು ಹೊಗಳುವ ಕಾವ್ಯವನ್ನು ಬರೆಯಲಿಲ್ಲ. ಬದಲಿಗೆ ರಗಳೆಗಳಲ್ಲಿ ಹೆಚ್ಚಾಗಿ ಕಾವ್ಯ ರಚಿಸಿದ್ದು 'ರಗಳೆ ಕವಿ' ಎಂದೇ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಗುರುತಿಸಿಕೊಂಡಿದ್ದಾರೆ. ಈತನ ಕಾಲ 12ನೇ ಶತಮಾನದ ಉತ್ತರಾರ್ಧವೆಂದು ಗುರುತಿಸಲಾಗುತ್ತದೆ. ಈತ ವೀರಶೈವ ಕವಿಯಾಗಿದ್ದು, ಹಂಪೆಯಲ್ಲಿ ಜನಿಸಿದನು. ತಂದೆ ಮಹಾದೇವಭಟ್ಟ, ತಾಯಿ ಶರ್ವಾಣಿ, ಗುರು ಮಾಯಿದೇವ. ಈತನು ರಾಘವಾಂಕನ ಸೋದರ ಮಾವ. 'ರಗಳೆ ಕವಿ', 'ಶಿವಕವಿ' ಎಂಬ ಬಿರುದಾಂಕಿತಗಳನ್ನು ಹೊಂದಿರುವ ಈತ ಸುಮಾರು 106 ರಗಳೆ ಪದ್ಯಗಳನ್ನು ರಚಿಸಿರುವುದಾಗಿ ಮಾಹಿತಿ ತಿಳಿದು ಬರುತ್ತದೆ. ಅಲ್ಲದೆ ಗಿರಿಜಾ ಕಲ್ಯಾಣವು ಹರಿಹರನ ಮಹೋನ್ನತ ಚಂಪೂ ಕಾವ್ಯವಾಗಿದೆ. ಆವರೆಗೆ ಕನ್ನಡ ಚಂಪೂ ಕೃತಿಗಳಲ್ಲಿ ಕಾಣದ ಕಥಾ ವಿಷಯವು ಇಲ್ಲಿದೆ. ಶೈವ ಪುರಾಣಗಳಲ್ಲಿ ಕಂಡು ಬರುವ ಶಿವ ಪಾರ್ವತಿಯರ ವಿವಾಹದ ಕಥೆ ಗಿರಿಜಾ ಕಲ್ಯಾಣದ ಕಥಾವಸ್ತು. ಗಿರಿಜೆಯ ಜನನದಿಂದ ಶಿವನೊಡನೆ ಅವಳ ವಿವಾಹದ ವರೆಗೆ ಮನೋಜ್ಞವಾಗಿ ಅವಳ ಸೌಂದರ್ಯ, ಸೊಬಗು, ಭಕ್ತಿಯ ಕಠೋರತೆ ಇವುಗಳನ್ನು ಸೂಕ್ಷ್ಮವಾಗಿ ಕವಿ ಚಿತ್ರಿಸಿದ್ದಾನೆ. ಅಲ್ಲದೆ ಹರಿಹರನ ಇತರ ಕೃತಿಗಳಾದ ಬಸವರಾಜದೇವರ ರಗಳೆ, ತಿರುನೀಲಕಂಠ ದೇವರ ರಗಳೆ, ನಂಬಿಯಣ್ಣನ ರಗಳೆ, ಮಹಾದೇವಿಯಕ್ಕನ ರಗಳೆ, ಪ್ರಭುದೇವರ ರಗಳೆ, ಕುಂಬಾರ ಗುಂಡಯ್ಯನ ರಗಳೆ, ಮಾದಾರ ಚೆನ್ನಯ್ಯನ ರಗಳೆ, ಇಳೆಯಾಂಡ ಗುಡಿಮಾರನ ರಗಳೆ, ರೇವಣಸಿದ್ದೇಶ್ವರ ರಗಳೆಗಳನ್ನು ರಚಿಸಿದ್ದಾನೆ.

'ರಗಳೆಕವಿ' ಎಂದೇ ಕರೆಯಲ್ಪಡುವ ಹರಿಹರನು ತನ್ನ ಕಾವ್ಯಗಳನ್ನು ರಗಳೆ ಪ್ರಕಾರದಲ್ಲಿಯೇ ರಚಿಸಿದ್ದು ಶಿವಭಕ್ತರ ಚರಿತ್ರೆಗಳು, ಆನುಪೂರ್ವಿಯಿಂದ ಬಂಧ ಕಥೆಗಳೇ ಆಗಿವೆ. ಭಕ್ತ ಪ್ರಕೃತಿಯ ಪ್ರಭಾವದಿಂದ ಸಹಜ ಪ್ರತಿಭೆಯ ಪ್ರಸಾದದಿಂದ ಜೀವಂತ ಉಜ್ವಲ ಚಿತ್ರಗಳಾಗಿವೆ. ಈತನು ನೂರಕ್ಕೂ ಹೆಚ್ಚು ರಗಳೆಗಳನ್ನು ರಚಿಸಿದ್ದು ಅವುಗಳ ಕಾಲನಿರ್ಣಯವನ್ನು ಅಂದಾಜಿಸಲಾಗಿದೆ. ಹರಿಹರನ ಕೃತಿಗಳು – ಗಿರಿಜಾ ಕಲ್ಯಾಣ, ಪಂಪಾಶತಕ, ರಕ್ಷಾಶತಕ, ಮುಡಿಗೆಯ ಅಷ್ಟಕ ಅಲ್ಲದೆ ಶಿವ ಶರಣರ

ರಗಳೆಗಳನ್ನು ರಚಿಸಿದ್ದಾನೆ ಅಲ್ಲದೆ ಅರವತ್ತಮೂರು ಪುರಾತನರು ಶಿವ ಶರಣರ ರಗಳೆಗಳನ್ನು ಕಾಣಬಹುದು.

ಸಾಹಿತ್ಯವು ಕಾಲಕಾಲಕ್ಕೆ ಸಮಾಜದ ಸ್ವರೂಪ ಮತ್ತು ಮೌಲ್ಯಗಳನ್ನು ಪರಾಮರ್ಶಿಸುತ್ತ ಸಮಾಜದಲ್ಲಿ ಸಮಾನತೆ ಇರಬೇಕು ಎಂಬುದನ್ನು ಪ್ರತಿಪಾದಿಸುತ್ತಾ ಬಂದಿರುವುದನ್ನು ಇಲ್ಲಿ ಗಮನಿಸಬಹುದು. 12ನೇ ಶತಮಾನದಲ್ಲಿನ ವಚನ, ಕೀರ್ತನೆ, ದಾಸ ಸಾಹಿತ್ಯ, ಮೊದಲಾದ ಪ್ರಕಾರಗಳಲ್ಲಿ ಸಮಾನತೆಯ ಪರಿಕಲ್ಪನೆ ಆಳವಾಗಿ ಮೂಡಿಬಂದಿರುವುದನ್ನು ಇಲ್ಲಿ ಗುರುತಿಸಬಹುದು. ಹರಿಹರನನ್ನು ಸಮಾನತೆಯ ಹರಿಕಾರನೆಂದು ಹೇಳಲಾಗುತ್ತದೆ. ಈ ಹಿನ್ನಲೆಯಲ್ಲಿ ಆತನ ಸಾಹಿತ್ಯದಲ್ಲಿನ ಸಮಾನತೆಯ ಪರಿಕಲ್ಪನೆಯನ್ನು ಕಾಣಬಹುದಾಗಿದೆ. ಅಲ್ಲದೆ ಹರಿಹರನ ಹಲವು ರಗಳೆಗಳಲ್ಲಿ ಮತೀಯ ಅಸಹನೆಯ ಗುರುತುಗಳಿದ್ದು ಸಮಾಜದಲ್ಲಿ ವರ್ಗ, ವರ್ಣ, ಲಿಂಗ ಸಮಾನತೆಗಳನ್ನು ಪ್ರತಿಪಾದಿಸಿದ್ದಾರೆ. ವರ್ಣ ಸಮಾನತೆಯನ್ನು ಕುರಿತಂತೆ ಮಾದಾರ ಚೆನ್ನಯ್ಯನ ರಗಳೆ, ಬೇಡರ ಕಣ್ಣಪ್ಪನ ರಗಳೆಗಳು ಪ್ರತಿಪಾದಿಸುತ್ತದೆ. ಬಸವಣ್ಣನ ಬಕ್ತಿ ಜೀವನದ ಚಿತ್ರಣದಲ್ಲಿ ಶಿವ–ಭಕ್ತರ ದೈವೀಕರಣ ಪ್ರಭಾವವನ್ನು ಕಳೆದುಕೊಂಡು ಸಾಮಾನ್ಯರಂತೆ ತಾಯಿ–ಮಗುವಿನ ವಾತ್ಸಲ್ಯವನ್ನು ಚಿತ್ರಿಸಿದ್ದಾರೆ. ಭಕ್ತಿಯ ಜೊತೆಗೆ ಐತಿಹ್ಯದ ಹಿರಿಮೆ ಇದೆ.

ಮನುಷ್ಯನ ಜೀವನವು ಅಸ್ಥಿರವಾದುದು. ಅಧಿಕಾರ, ಐಶ್ವರ್ಯ, ರೂಪು, ಯೌವನ ಶಾಶ್ವತವಲ್ಲ. ಜಾತಿ, ಮತ, ಗಂಡು–ಹೆಣ್ಣು, ಮೇಲು–ಕೀಳು ಇವು ಮಹತ್ವದವಲ್ಲ. ಭಕ್ತಿ, ಪ್ರೀತಿ, ವಿಶ್ವಾಸ, ನಂಬುಗೆ, ಧೈರ್ಯ, ಛಲ ಈ ಮೊದಲಾದವುಗಳು ಮನುಷ್ಯನನ್ನು ಶ್ರೇಷ್ಠವನ್ನಾಗಿಸುವ ಮೌಲ್ಯಗಳು. ಈ ವಿಚಾರವನ್ನು ಹರಿಹರನು ತನ್ನ ಕೃತಿಗಳಲ್ಲಿ ಎತ್ತಿ ಹಿಡಿದಿದ್ದಾನೆ. ಹರಿಹರನ ಲೋಕಾನುಭವ, ಶಿವಾನುಭವ, ಶಬ್ಧ ಸಂಪತ್ತು, ಕಲ್ಪನಾ ಶಕ್ತಿ, ಪ್ರತಿಭೆ–ಪಾಂಡಿತ್ಯ, ಅಪೂರ್ವವಾದವುಗಳು.

ಬೇಡರ ಕಣ್ಣಪ್ಪನೆಂಬ ಸಾಮಾನ್ಯ ಭಕ್ತ ಶುದ್ಧ ಭಕ್ತಿಯನ್ನು ತಿಳಿಸುತ್ತ, ಇಲ್ಲಿ ವೃತ್ತಿಯಿಂದ ಬೇಡನಾದ ಕೆಳಸ್ತರದಿಂದ ಬಂದಿದ್ದ ಕಣ್ಣಪ್ಪ ಕಾವ್ಯದ ನಾಯಕನಾಗಿದ್ದು, ನಾಗರಿಕ ಪ್ರಪಂಚದ ಅರಿವಿಲ್ಲದ ಕಣ್ಣಪ್ಪ ಅಂತರಾಳದಲ್ಲಿ ಶಿವನಲ್ಲಿ ಮುಗ್ಧ ಭಕ್ತಿಯನ್ನು ಹೊಂದಿರುವುದನ್ನು ಕಾಣುತ್ತೇವೆ. ಈ ಮುಗ್ಧ ಭಕ್ತನ ಪಾಲಿಗೆ ಶಿವ ಕೇವಲ ಕಲ್ಲಿನ ಲಿಂಗವಾಗಿರದೆ ಹಸಿವು, ಬೆದರಿಕೆ, ನೋವು–ನಲಿವುಗಳನ್ನು ಹೊಂದಿರುವ ಒಂದು ಜೀವವಾಗಿ ಕಂಡು ಬರುವುದನ್ನು ಇಲ್ಲಿ ಕಾಣಬಹುದು. ತಾನು ಬೇಟೆಯಾಡಿ ತಂದ ಮಾಂಸವನ್ನು ಶಿವನಿಗೆ ಕೊಡುವಾಗ ಆನಂದದಿಂದ ಸಂಭ್ರಮಿಸುವುದು, ಈ ಮೊದಲಾದವನ್ನು ಗಮನಿಸಿದಾಗ ಮಡಿ ಮೈಲಿಗೆ, ಆಚರಣೆಗಳ ಸಂಕೋಲೆ ಇಲ್ಲದೆ

ಮುಕ್ತವಾದ ಭಕ್ತಿ, ಪ್ರೀತಿಯನ್ನು ತಿಳಿಸುವ ಈ ನಿರೂಪಣೆಯಲ್ಲಿ ಹರಿಹರನು ಸಾಮಾಜಿಕ ಅನಿಷ್ಟ ಪದ್ಧತಿಗಳಾದ ಜಾತಿ ವ್ಯವಸ್ಥೆ, ಸಾಮಾಜಿಕ ಸಾಂಪ್ರದಾಯಿಕ ಆಚರಣೆಗಳನ್ನು ಕಲಾತ್ಮಕ ಚೌಕಟ್ಟಿನಲ್ಲಿಯೇ ಪ್ರತಿಭಟಿಸಿರುವುದನ್ನು ಇಲ್ಲಿ ಕಾಣುತ್ತೇವೆ. ಕುಂಬಾರ ಗುಂಡಯ್ಯನ ರಗಳೆಯಲ್ಲಿ ಕಾಯಕವೇ ಕೈಲಾಸ ಎಂಬ ಮಾತನ್ನು ನಿರೂಪಿಸಿರುವ ಹರಿಹರನು ಇಲ್ಲಿ ಶ್ರಮಜೀವಿಯಾದ ಗುಂಡಯ್ಯನ ಕಾಯಕ ನಿಷ್ಠೆಯನ್ನು ಗೌರವಿಸಿರುವುದನ್ನು ಕಾಣಬಹುದು. ನಂಬಿಯಣ್ಣನ ರಗಳೆಯಲ್ಲಿ 'ವೃದ್ಧ ಮಾಹೇಶ್ವರನ ಪ್ರಸಂಗ'ವು ಅಂದಿನ ಸಮಾಜದಲ್ಲಿ ಕಂಡು ಬರುವ ಅಸಮಾನತೆಯ ವಿರುದ್ಧದ ಹೋರಾಟವಾಗಿದೆ.

ಮಹಾದೇವಿಯಕ್ಕನ ರಗಳೆ, ಕೋಳುರು ಕೊಡಗೂಸಿನ ರಗಳೆಯಲ್ಲಿನ ಲಿಂಗ ಅಸಮಾನತೆಯನ್ನು, ಇಳೆಯಾಂಡ ಗುಡಿಮಾರನ ರಗಳೆ ಹಾಗೂ ಕುಂಬಾರ ಗುಂಡಯ್ಯನ ರಗಳೆಗಳು ವರ್ಗ ಸಮಾನತೆಯನ್ನು ಕುರಿತಂತೆ ಪ್ರತಿಪಾದಿಸುತ್ತವೆ. ಇಲ್ಲೆಲ್ಲ ಮತೀಯ ಅಸಹನೆಯ ಗುರುತುಗಳಿವೆ. ಈ ಹಿನ್ನೆಲೆಯಲ್ಲಿ ಅಂದಿನ ಸಮಾಜದ ವರ್ಗ, ವರ್ಣ, ಲಿಂಗ ಸಮಾನತೆಯ ಸೂಕ್ಷ್ಮ ವಿಚಾರಗಳನ್ನು ಆತನ ಬರಹಗಳಲ್ಲಿ ಕಾಣಬಹುದು. ಅಲ್ಲದೆ ಹರಿಹರನ ರಗಳೆಗಳಲ್ಲಿ ಭಕ್ತ ಮತ್ತು ಭಗವಂತನ ಸಂಬಂಧವನ್ನು ಎತ್ತಿ ಹಿಡಿದಿದ್ದಾರೆ. ಹೀಗೆ ಹರಿಹರನು ಕನ್ನಡ ಸಾಹಿತ್ಯದಲ್ಲಿ ವಿಭಿನ್ನವಾಗಿ ಗುರುತಿಸಿ ಕೊಳ್ಳುವ ಮೂಲಕ ವಿಭಿನ್ನ ವ್ಯಕ್ತಿತ್ವ, ವಿಭಿನ್ನ ಲೋಕವನ್ನು ಪರಿಚಯಿಸುವ ಮೂಲಕ ಒಂದು ಬಗೆಯ ಹೊಸ ತಿರುವನ್ನು ಸಾಹಿತ್ಯದಲ್ಲಿ ನೀಡುವ ಮೂಲಕ ಸಮಾಜದಲ್ಲಿ ಸಮಾನತೆಯನ್ನು ಎತ್ತಿ ಹಿಡಿದ ಕ್ರಾಂತಿಕಾರಿ ಕವಿ ಎನಿಸಿಕೊಂಡಿದ್ದಾರೆ. ಈ ಕಾರಣದಿಂದಲೇ ಹರಿಹರ ಕನ್ನಡ ಸಾಹಿತ್ಯದ ಉಳಿದೆಲ್ಲ ಕವಿಗಳಿಗಿಂತಲೂ ವಿಶಿಷ್ಟ ಶ್ರೇಷ್ಠ ಕವಿಯಾಗಿ ನಿಲ್ಲುತ್ತಾನೆ. ಎಲ್ಲಾ ಕಾಲಕ್ಕೂ ಆತನ ವಿಚಾರದಾರೆಗಳು ಪ್ರಸ್ತುತವೆನಿಸುತ್ತವೆ.

ಪರಾಮರ್ಶನ ಗ್ರಂಥಗಳು :

1. ಕನ್ನಡ ಸಾಹಿತ್ಯ ಚರಿತ್ರೆ : ರಂ.ಶ್ರೀ. ಮುಗಳಿ
2. ಕನ್ನಡ ಸಾಹಿತ್ಯ ಕೋಶ : ಡಾ. ರಾಜಪ್ಪ ದಳವಾಯಿ
3. ಕನ್ನಡ ಸಾಹಿತ್ಯ ಸಂಜೀವಿನಿ : ಡಾ. ಶಿವಶರಣಪ್ಪ ಮೋತಕಪಳ್ಳಿ

***

ಕನ್ನಡ ನಾಟಕ ಸಾಹಿತ್ಯದಲ್ಲಿ ಜೈವಿಕ ನೆಲೆಗಳು

ಡಾ. ಜಯಚಂದ್ರ ಶೇಖರ ವೈ.

ಸಹ ಪ್ರಾಧ್ಯಾಪಕರು

ಕನ್ನಡ ವಿಭಾಗ

ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು

ಯಲಹಂಕ ಉಪನಗರ, ಬೆಂಗಳೂರು-64

ಮಾನವನ ಬದುಕು 'ಸಾಮಾಜಿಕ' ಮತ್ತು 'ಜೈವಿಕ' ಅಂಶಗಳನ್ನು ಒಳಗೊಂಡ ಸಂಕೀರ್ಣ ವ್ಯವಸ್ಥೆಯಾಗಿದೆ. ಸಾಮಾಜಿಕ ವ್ಯವಸ್ಥೆಯು ಮನುಷ್ಯನನ್ನು ಪ್ರಭಾವಿಸುವ ರೀತಿಯಲ್ಲಿ ಜೈವಿಕ ಅಂಶಗಳು ಕೂಡ ಮಾನವನ ವ್ಯಕ್ತಿತ್ವ ಮತ್ತು ಅವನ ಬದುಕಿನ ರೀತಿಯನ್ನು ಪ್ರಭಾವಿಸುತ್ತವೆ. ಸಾಹಿತ್ಯವು ಸಾಮಾಜಿಕ ಬದುಕಿಗೆ ಕೈಗನ್ನಡಿಯಾಗಿರುವಂತೆ ಮಾನವನ ಜೈವಿಕತೆಯು ಬದುಕಿನ ರೀತಿ ನೀತಿಗಳನ್ನು ನಿರ್ದೇಶಿಸುತ್ತದೆ. ಆದ್ದರಿಂದ ಜೈವಿಕ ಅಂಶಗಳ ಆಧಾರದ ಮೇಲೆ ನಡೆಯುವಂತ ಬದುಕಿನ ಪ್ರಕ್ರಿಯೆಗಳಿಗೆ ಸಾಕ್ಷಿ ಆಗುವಂತೆ ಬಹಳಷ್ಟು ನಾಟಕಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಜೈವಿಕ ಅಂಶಗಳು ರೂಪಿಸುವ 'ಪಾತ್ರಗಳ ವರ್ತನೆ' ಮತ್ತು ಅವುಗಳ 'ಪರಿಣಾಮ'ಗಳನ್ನು ದಾಖಲಿಸುತ್ತವೆ.

'ಸಾಹಿತ್ಯ' ಮತ್ತು 'ವಿಜ್ಞಾನ' ಮಾನವನ ವರ್ತನೆ ಮತ್ತು ಅನುಭವಗಳನ್ನು ವಿಮರ್ಶೆಗೆ ಒಳಪಡಿಸುತ್ತಾ ಬರಹ ರೂಪದಲ್ಲಿ ದಾಖಲಿಸುತ್ತದೆ. 'ಜೈವಿಕ ವಿಜ್ಞಾನ', 'ವೈಜ್ಞಾನಿಕ ತತ್ವ'ಗಳ ಆಧಾರದ ಮೇಲೆ ಮನುಷ್ಯನ ವರ್ತನೆಯನ್ನು ಸಂಶೋಧನೆಗೆ ಒಳಪಡಿಸಿ ಅಭ್ಯಾಸ ಮಾಡಿದರೆ, ಸಾಹಿತ್ಯವು ಜೈವಿಕ ಅಂಶಗಳು ಹೇಗೆ ಮನುಷ್ಯನ ವರ್ತನೆಯನ್ನು ಸೃಷ್ಟಿಸುತ್ತವೆ ಮತ್ತು ಸಾಮಾಜಿಕ ಬದುಕಿನಲ್ಲಿ ಅವನನ್ನು ನಿಯಂತ್ರಿಸುತ್ತವೆ ಎಂಬುದನ್ನು ಸಾಹಿತ್ಯಿಕ ರೂಪದಲ್ಲಿ ದಾಖಲಿಸಲಾಗುತ್ತದೆ. ಜೈವಿಕ ಅಂಶಗಳು ಕೆಲವು ಸಂದರ್ಭಗಳಲ್ಲಿ 'ಋಣಾತ್ಮಕ' ಮತ್ತು 'ಧನಾತ್ಮಕ' ಪ್ರಭಾವವನ್ನು ಜೀವನದಲ್ಲಿ

ಉಂಟುಮಾಡುತ್ತವೆ. ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುವಂತಹ ಪರೋಕ್ಷ ಹಾಗೂ ಪ್ರತ್ಯಕ್ಷ ಜೈವಿಕ ಅಂಶಗಳ ಆಧಾರದ ಮೇಲೆ ಸಾಹಿತ್ಯ ರಚನೆ ನಡೆಯುತ್ತದೆ. ಸಾಹಿತ್ಯವು ಮಾನವ ಸಮಾಜದ ಮೂಲಭೂತ ಅಂಶಗಳಾದ 'ಸಂಸ್ಕೃತಿ', 'ರಾಜಕೀಯ', 'ಆರ್ಥಿಕತೆ', ಹಾಗೂ 'ಭಾಷೆ'ಗೆ ಸಂಬಂಧಿಸಿದಂತೆ ವಸ್ತು ವಿಷಯಗಳನ್ನು ಸಾಹಿತ್ಯ ಧಾತುವಾಗಿಸಿ ಚರ್ಚಿಸುತ್ತದೆ. ಸಾಹಿತ್ಯವು ಕೂಡ ಮಾನವನ ಮೆದುಳಿನಲ್ಲಿ ನಡೆಯುವ 'ಮಾನಸಿಕ ಪ್ರಕ್ರಿಯೆ'ಗಳನ್ನು, 'ದೈಹಿಕ ಹಾರ್ಮೋನು'ಗಳು ಸೃಷ್ಟಿಸುವ ವರ್ತನೆಗಳನ್ನು ಮತ್ತು ಅಂತಹ ವರ್ತನೆಗಳು ಸೃಷ್ಟಿಸಬಹುದಾಗಿರುವ ಸನ್ನಿವೇಶಗಳನ್ನು ಹಾಗೂ ಅದರ ಪರಿಣಾಮಗಳನ್ನು ಚರ್ಚಿಸಿ ಅದಕ್ಕೆ ಮೂರ್ತರೂಪವನ್ನು ಕೊಡುವ ಸಾಹಿತ್ಯವು ಕೂಡ ವಿಜ್ಞಾನವಾಗಿದೆ.

'ಭಾಷೆ', 'ಸಂಸ್ಕೃತಿ', 'ಸಾಮಾಜಿಕತೆ', 'ಮಾನವ ಶಾಸ್ತ್ರ' ಮತ್ತು 'ಜೈವಿಕತೆ'ಯ ಅಂಶಗಳನ್ನು ವಸ್ತು ವಿಷಯಗಳಾಗಿ ಸಾಹಿತ್ಯಿಕ ಪ್ರಕಾರವಾದ ನಾಟಕಗಳಲ್ಲಿ ಬಳಸಿಕೊಳ್ಳಲಾಗಿದೆ. ಮಾನವನ ಜೈವಿಕ ಅಂಶಗಳನ್ನು ಒಂದು ವಸ್ತು ವಿಷಯವಾಗಿ ಪರಿಗಣಿಸಿ ಅದನ್ನು ಭಾಷೆಯಲ್ಲಿ ಒಂದು ಮಾರ್ಗದರ್ಶನದಂತೆ ನೇರವಾಗಿ ಬಳಸಿಕೊಳ್ಳಲಾಗದಿದ್ದರೂ ಮತ್ತು ಸಾಹಿತ್ಯದಲ್ಲಿ ಗುರುತಿಸಲಾಗದಿದ್ದರೂ ಅದರ ಪ್ರಭಾವವನ್ನು ಪರೋಕ್ಷವಾಗಿ ನಾಟಕಗಳ ಪಾತ್ರಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ ಗುರಿತಿಸಲಾಗಿದೆ.

ದೈಹಿಕವಾದ ಅಂಗ 'ಮೆದುಳು' (ಮನಸ್ಸು) ಮತ್ತು (genetic) 'ಜೈವಿಕ ಹಾರ್ಮೋನು' ಸೃಷ್ಟಿಸುವ ಮಾನಸಿಕ ವರ್ತನೆಗಳಾದ 'ಲೈಂಗಿಕತೆ' (sexuality)ಯು ಮುಂತಾದ ಜೈವಿಕ ಅಂಶಗಳು ಮಾನವನ ಅಸ್ತಿತ್ವದ ಜೊತೆಗೆ ಮಾನವನ ಜೀವನವನ್ನು ಪ್ರಭಾವಿಸುತ್ತದೆ. ಭೂಮಿಯ ಮೇಲಿನ ಪರಿಸರ ವ್ಯವಸ್ಥೆಯು ಜೀವಂತ ಮತ್ತು ನಿರ್ಜೀವ ಘಟನೆಗಳಿಂದ ಮಾಡಲ್ಪಟ್ಟಿದೆ. ಜೀವಂತ ಘಟನೆಗಳನ್ನು ಜೈವಿಕ ಅಂಶಗಳು ಎಂದು ಕರೆಯಲಾಗುತ್ತದೆ. ಮಾನವ ಮತ್ತು ಎಲ್ಲಾ ಜೀವಿಗಳು ಒಂದು ನೈಸರ್ಗಿಕ ವ್ಯವಸ್ಥೆಯು ಸೃಷ್ಟಿಸಿ ಹಾಗೂ ಪ್ರಾಕೃತಿಕವಾಗಿ ನಿರ್ದಿಷ್ಟ ಕಾಲದವರೆಗೂ ಜೀವಿಸುವಂತೆ ರೂಪಿಸುವ ದೈಹಿಕ ಅಂಶವನ್ನು ಜೈವಿಕತೆ ಎಂದು ಕರೆಯಬಹುದಾಗಿದೆ.

ಮನುಷ್ಯನ ಮನಸ್ಸು ತನ್ನ ಮೂಲ ಜೈವಿಕತೆಯ ಆಧಾರದ ಮೇಲೆ ಸಾಮಾಜಿಕ ವರ್ತನೆಯು ರೂಪಗೊಳಿಸುತ್ತದೆ ಮತ್ತು ಸಾಮಾಜಿಕ ಜೀವನವನ್ನು ಪ್ರಭಾವಿಸುತ್ತದೆ ಹಾಗೂ ನಿಯಂತ್ರಿಸುತ್ತದೆ. ವಿಜ್ಞಾನ ಮನುಷ್ಯನ ವರ್ತನೆಯನ್ನು ಮತ್ತು ಅವನ ವ್ಯಕ್ತಿತ್ವವನ್ನು ತನ್ನದೇ ಆದ ವಿಭಿನ್ನ ದೃಷ್ಟಿಕೋನದಲ್ಲಿ ಅಭ್ಯಾಸ ಮಾಡಿದರೆ ಸಾಹಿತ್ಯ ಕೂಡ ಅಂತಹ ಜೈವಿಕ ಅಂಶಗಳು ಸಾಮಾಜಿಕವಾಗಿ ಮನುಷ್ಯನನ್ನು ಹೇಗೆ

ಪ್ರಭಾವಿಸುವುದರ ಜೊತೆಗೆ ವ್ಯಕ್ತಿತ್ವಗಳನ್ನು ರೂಪಿಸುತ್ತದೆ ಮತ್ತು ನಿಯಂತ್ರಿಸುತ್ತವೆ ಎಂಬುದನ್ನು ಸಾಹಿತ್ಯಿಕವಾಗಿ ವಿಮರ್ಶೆಗೆ ಒಳಪಡಿಸುತ್ತದೆ.

ಲೈಂಗಿಕತೆ :

ಮಾನವನ 'ಲೈಂಗಿಕತ್ವ' ಅವನ ಅಸ್ತಿತ್ವವಾಗಿದೆ. ಲೈಂಗಿಕತೆ ಜೀವಿಯ ಸೃಷ್ಟಿಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಮತ್ತು ಜೀವನದಲ್ಲಿ ತನ್ನದೇ ಆದ ರೀತಿಯ ಪ್ರಭಾವವನ್ನು ಉಂಟುಮಾಡುತ್ತದೆ. ಮನಃಶಾಸ್ತ್ರದ ಪಿತಾಮಹ 'ಸಿಗ್ಮನ್ ಪ್ರಾಯ್ಡ್' ಹೇಳುವಂತೆ ಲೈಂಗಿಕತೆಯು ಮನುಷ್ಯನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಈ ಪ್ರಪಂಚದಲ್ಲಿ ಮಾನವ ಒಂದು ಜೀವಿಯಾಗಿದ್ದು, ಎಲ್ಲಾ ಪ್ರಾಣಿಗಳಂತೆ ತನ್ನ ವಂಶಾವಳಿಯನ್ನು ನಿರಂತರವಾಗಿ ಮುಂದುವರಿಸಲು ಬೇಕಾಗುವಂತಹ ಸಾಮರ್ಥ್ಯವನ್ನು "ಲೈಂಗಿಕತೆ' ಎಂದು ಕರೆಯಬಹುದು. ಲೈಂಗಿಕತೆಯು ಒಂದು ಜೈವಿಕ ಪ್ರಕ್ರಿಯೆಯಾಗಿದ್ದು, ಅದು ಗಂಡು ಮತ್ತು ಹೆಣ್ಣಿನ ಸಮ್ಮಿಲನದ ಮೂಲಕ ಮಾನವನ ಪ್ರತಿರೂಪವನ್ನು ಸೃಷ್ಠಿಸುವಂತಹ ಪ್ರಕೃತಿಯ ಒಂದು ವಿಸ್ಮಯವಾಗಿದೆ. ಆದ್ದರಿಂದ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಲೈಂಗಿಕತೆಯ ಒಳ ಸುಳಿಗಳನ್ನು ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಕಾಣಬಹುದಾಗಿದೆ. ಲೈಂಗಿಕತೆಯ ಅಂಶಗಳು ಹೇಗೆ ಮನುಷ್ಯನ ಜೀವನವನ್ನು ರೂಪಿಸುತ್ತವೆ ಮತ್ತು ನಿಯಂತ್ರಿಸುತ್ತವೆ ಎಂಬುದರ ವಿಸ್ತೃತರೂಪವನ್ನು ಹಲವಾರು ನಾಟಕಗಳಲ್ಲಿ ನೋಡುತ್ತೇವೆ. ಲೈಂಗಿಕತೆಯು ಮನುಷ್ಯನ ಸಂಕೀರ್ಣ ವ್ಯಕ್ತಿತ್ವವಾಗಿದ್ದು, ಅದು ಒಳಿತು ಕೆಡುಕುಗಳ ಸಂಗಮ ಕೂಡ ಆಗಿದೆ. ಅವನ 'ಸಕರಾತ್ಮಕ' ಮತ್ತು 'ನಕರಾತ್ಮಕ' ಭಾವನೆಗಳನ್ನು, ಯೋಚನೆಗಳನ್ನು, ಮನುಷ್ಯನ ಸ್ಥಿತಿಗತಿಗಳನ್ನು ಸೃಷ್ಟಿಸುತ್ತವೆ.

ಗ್ರೀಕ್ ಸಾಹಿತ್ಯದಲ್ಲಿ ದುರಂತಕ್ಕೆ ಕಾರಣವಾಗುವ ಹಲವಾರು ಅಂಶಗಳನ್ನು ಸಾಹಿತ್ಯದ ವಿಮರ್ಶೆಯಲ್ಲಿ ಗುರುತಿಸುತ್ತೇವೆ. ಗ್ರೀಕ್ ನಾಟಕ ಸಾಹಿತ್ಯವು ಪುರಾಣ ಜಗತ್ತಿನಲ್ಲಿ 'ದೈವ', 'ವಿಧಿಯ ಕೈವಾಡ' ಮತ್ತು 'ಮನುಷ್ಯನ ಪರಲೋಕದ ಪ್ರಭಾವವೂ', 'ಮನುಷ್ಯನ ಬದುಕ'ನ್ನು ಮತ್ತು ಅವನ 'ಸ್ಥಿತಿ'ಯನ್ನು ನಿಯಂತ್ರಿಸುತ್ತವೆ ಎಂಬ ನಂಬಿಕೆಯನ್ನು ಹಾಗೂ ಅವನ ಬದುಕಿನ ಸಂದರ್ಭಗಳಲ್ಲಿ ತನ್ನನ್ನು ಮೀರಿದ ಶಕ್ತಿಯು ನಿಯಂತ್ರಿಸಿ ರೂಪಿಸುತ್ತದೆ ಎಂಬ ಅನುಭವವನ್ನು ಪ್ರಸ್ತುತಪಡಿಸುತ್ತದೆ. ಮಹಾರಾಜನನ್ನು ಒಳಗೊಂಡಂತೆ ಎಲ್ಲಾ ಸಾಮಾನ್ಯ ವ್ಯಕ್ತಿಗಳ ಬದುಕನ್ನು ರೂಪಿಸುವುದು ದೈವಶಕ್ತಿ, ಅದು ಸುಖ ದುಃಖಗಳಿಗೆ ಕಾರಣವಾಗುತ್ತದೆ ಎಂಬ ನಂಬಿಕೆಯನ್ನು ನಾಟಕ ಸಾಹಿತ್ಯದಲ್ಲೂ ಹೆಚ್ಚಿನದಾಗಿ ಕಾಣುತ್ತೇವೆ.

ದುರಂತ ನಾಟಕಗಳನ್ನು ವಿಮರ್ಶೆಗೆ ಒಳಪಡಿಸಿದಾಗ ದುರಂತಕ್ಕೆ

ಕಾರಣವಾಗುವ ಮೂಲ ಧಾತುಗಳ ಪಟ್ಟಿಯಲ್ಲಿ 'ರಾಜಕೀಯ', 'ಮಾನಸಿಕತೆ', 'ಅಧಿಕಾರ', 'ಜಾತೀಯತೆ', ಮುಂತಾದ ಪ್ರಮುಖ ವಿಷಯಗಳು ದುರಂತಕ್ಕೆ ಕಾರಣವಾಗುವ ರೀತಿಯಲ್ಲಿ 'ಮಾನವನ ಲೈಂಗಿಕತೆ' ನಾಟಕದ 'ನಾಯಕ' ಅಥವಾ ಇತರೆ ಅಧೀನ ಪಾತ್ರಗಳಿಗೆ ದುರಂತವನ್ನು ಒದಗಿಸುವ ಪ್ರಮುಖ ಪ್ರೇರಣೆಯಾಗುವುದನ್ನು ಗುರುತಿಸಲಾಗಿದೆ. ಮನುಷ್ಯನ ಜೀವನದಲ್ಲಿ 'ಲೈಂಗಿಕತೆ'ಯು ವಿವಿಧ ಉದ್ದೇಶಗಳ ಈಡೇರಿಕೆಗೆ ವ್ಯಕ್ತಿಯ ವೈಯಕ್ತಿಕ ನೆಲೆಯಲ್ಲಿ ಒದಗಿ ಬರುವ 'ದೈಹಿಕ' ಮತ್ತು 'ಮಾನಸಿಕ' ವಸ್ತು ವಿಷಯಗಳಾಗಿದ್ದರೂ ಅದು ಸಾಮಾಜಿಕ ಅಂಶಗಳ ಆಧಾರದ ಮೇಲೆ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಮಾನವ ಸಮಾಜದ ಪ್ರತಿ ವ್ಯಕ್ತಿಯು ತನ್ನ ಲೈಂಗಿಕತೆಯನ್ನು ಸಾಮಾಜಿಕ ದೃಷ್ಟಿಕೋನದಲ್ಲಿ ಈಡೇರಿಸಿಕೊಳ್ಳುವ ಮತ್ತು ಅದನ್ನು ನಿಯಂತ್ರಿಸುವಂತೆ ಸಾಮಾಜಿಕ ಸಂಸ್ಥೆಗಳು ಅವನನ್ನು ಒತ್ತಾಯಿಸುತ್ತವೆ. ಆದರೆ ಯಾವ ಸಂದರ್ಭದಲ್ಲಿ ವ್ಯಕ್ತಿಯು ತನ್ನ 'ಲೈಂಗಿಕತೆ'ಯನ್ನು ಈಡೇರಿಸಿಕೊಳ್ಳುವ ದೃಷ್ಟಿಯಲ್ಲಿ ಸಾಮಾಜಿಕ ನಿಯಮಗಳನ್ನು ಮತ್ತು ನೀತಿಗಳನ್ನು ಪಾಲಿಸದಿದ್ದ ಸಂದರ್ಭದಲ್ಲಿ ಆ ವ್ಯಕ್ತಿಯು ದುರಂತಕ್ಕೆ ಒಳಗಾಗುತ್ತಾನೆ.

ಸಫೋಕ್ಲಿಸ್‌ನ 'ಈಡಿಪಸ್' ನಾಟಕವು ಗ್ರೀಕ್ ಸಾಹಿತ್ಯದ ದುರಂತ ನಾಟಕಗಳ ಪಂಕ್ತಿಯಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿದೆ. ಗ್ರೀಕ್‌ನ ಪ್ರತಿ ದುರಂತ ನಾಟಕವು ವಿಭಿನ್ನವಾದ ಕಥಾವಸ್ತುವನ್ನು ಒಳಗೊಂಡಿದೆ. 'ರಾಜಕೀಯ', 'ದೈವತ್ವ', 'ಸಾಮಾಜಿಕ' ಮತ್ತು 'ಮಾನಸಿಕ' ಅಂಶಗಳು ದುರಂತಕ್ಕೆ ಮುಖ್ಯ ಪ್ರೇರಣೆಗಳಾಗಿ ಕಂಡುಬರುತ್ತವೆ. ಎಲ್ಲಾ ಅಂಶಗಳನ್ನು ಒಳಗೊಂಡಂತೆ 'ಲೈಂಗಿಕತೆ'ಯ ಅಂಶವು ಕೂಡ ದುರಂತಕ್ಕೆ ಕಾರಣವಾಗಬಹುದು ಎಂಬ ಸೂಕ್ಷ್ಮ ಅಂಶಗಳ ಆಧಾರದ ಮೇಲೆ ಈಡಿಪಸ್ ನಾಟಕ ರಚನೆಯಾಗಿದೆ. 'ಲೈಂಗಿಕತೆ'ಯು ದುರಂತಕ್ಕೆ ಕಾರಣವಾಗುತ್ತದೆ ಎಂಬ ವಿಷಯ ಬಹಳಷ್ಟು 'ಕಥೆ', 'ಪುರಾಣ' ನಾಟಕಗಳಲ್ಲಿ ಕಾಣಬಹುದಾಗಿದ್ದರೂ ಅದು ಪ್ರತಿ ಸಾಹಿತ್ಯ ಕೃತಿಯಲ್ಲೂ ವಿಭಿನ್ನವಾದ ಅಂಶವನ್ನು ಒಳಗೊಂಡಂತಹ ಅನುಭವವನ್ನು ಓದುಗರಿಗೆ ಅಥವಾ ಪ್ರೇಕ್ಷಕರಿಗೆ ಕಟ್ಟಿಕೊಡುತ್ತದೆ. ಲೈಂಗಿಕತೆಯನ್ನು ನಿಯಂತ್ರಿಸುವಂತಹ 'ಸಾಮಾಜಿಕ', 'ಸಾಂಸ್ಕೃತಿಕ' ಅಂಶಗಳನ್ನು ಮತ್ತು ಅಂತಹ ನಿಯಂತ್ರಣಗಳನ್ನು ಮೀರಿದಾಗ ಸಂಭವಿಸುವ 'ಅನಾಹುತ' ಅಥವಾ 'ದುರಂತ'ವನ್ನು ಅವಲೋಕಿಸುವ ಸಾಹಿತ್ಯ ಕೃತಿಗಳನ್ನು ಕಾಣಬಹುದಾಗಿದ್ದರೂ ಇಡೀ ನಾಟಕವು ಇತರ ದುರಂತ ನಾಟಕಗಳಿಗಿಂತ ಭಿನ್ನವಾದ ಅಭಿಪ್ರಾಯವನ್ನು ಮೂಡಿಸುತ್ತದೆ. ಏಕೆಂದರೆ ಅಪರೂಪಕ್ಕೆ ಸಂಭವಿಸಬಹುದಾದಂತ 'ತಾಯಿ' ಮತ್ತು 'ಮಗನ' ನಡುವಿನ ನಿಷೇಧಿತ ಲೈಂಗಿಕತೆಯ ವಸ್ತು ವಿಷಯ ಈ ನಾಟಕ ಒಳಗೊಂಡಿದೆ.

ಮನಃಶಾಸ್ತ್ರದ ಪಿತಾಮಹ 'ಸಿಗ್ಮನ್ ಪ್ರಾಯ್ಡ್' ಅಭಿಪ್ರಾಯದಂತೆ ಲೈಂಗಿಕತೆಯು ಮನುಷ್ಯನ ವ್ಯಕ್ತಿತ್ವ ಮತ್ತು ಜೀವನವನ್ನು ರೂಪಿಸುತ್ತದೆ.

'ಈಡಿಪಸ್ ಕಾಂಪ್ಲೆಕ್ಸ್', 'ನಾರ್ಸಿಸಸ್ಟ್ ಕಂಪ್ಲೆಕ್ಸ್', 'ಎಲೆಕ್ಟ್ರೋ ಕಾಂಪ್ಲೆಕ್ಸ್' ಮುಂತಾದ ಮನಃಶಾಸ್ತ್ರೀಯ ಅಂಶಗಳು 'ಬದುಕು' ಮತ್ತು 'ವ್ಯಕ್ತಿತ್ವ'ಗಳನ್ನು ರೂಪಿಸಿ ನಿಯಂತ್ರಿಸುತ್ತವೆ. ಅಂತಹ ಸಂದರ್ಭದಲ್ಲಿ ಸಾಮಾಜಿಕ ನಿಯಮಗಳು, ಸಾಮಾಜಿಕ ಪಾತ್ರಗಳ ವಿರುದ್ಧಾತ್ಮಕ ವರ್ತನೆಗಳಿಗೆ 'ಪಶ್ಚಾತ್ತಾಪ'ದ ಅಥವಾ 'ಶಿಕ್ಷೆ'ಯ ದುರಂತವನ್ನು ಉಂಟುಮಾಡುತ್ತವೆ. ಪ್ರೇಕ್ಷಕ ಮೇಲುನೋಟಕ್ಕೆ ನಾಟಕದ 'ವಸ್ತು ವಿಷಯ' ಮತ್ತು 'ವಿನ್ಯಾಸ'ವನ್ನು ಗ್ರಹಿಸುವುದೇ ಬೇರೆ, ಒಳನೋಟದಲ್ಲಿ ಇಡೀ ನಾಟಕ ಉಂಟುಮಾಡುವ ಧ್ವನಿಯೇ ಬೇರೆಯಾಗಿರುತ್ತದೆ. ಅಂತಹ ಒಳ ಧ್ವನಿಯನ್ನು ಸೂಕ್ಷ್ಮ ಮನಸ್ಸಿನ 'ಪ್ರೇಕ್ಷಕ' ಅಥವಾ ನಾಟಕದ 'ಓದುಗ' ಅರ್ಥಮಾಡಿಕೊಳ್ಳಬಲ್ಲ. ಆದ್ದರಿಂದಲೇ 'ಸಿಗ್ಮನ್ ಪ್ರಾಯ್ಡ್' ಲೈಂಗಿಕತೆಯ ವಿಕೃತಿಗಳಲ್ಲಿ ಕಂಡುಬರುವ ಅಂಶವನ್ನೇ ಈಡಿಪಸ್ ಕಾಂಪ್ಲೆಕ್ಸ್ ಎಂದು ಹೆಸರಿಸುತ್ತಾನೆ. ಇದು ಮುಖ್ಯವಾಗಿ ತಂದೆಯ ಮತ್ತು ಮಗನ ನಡುವಿನ ಆಂತರಿಕ ಅಧಿಕಾರದ ಪೈಪೋಟಿಯನ್ನು ಪ್ರತಿನಿಧಿಸುತ್ತದೆ. ಜೀವ ವರ್ಗದಲ್ಲಿ ಮುಖ್ಯವಾಗಿ ಸಂಘಟಿತವಾಗಿ ವಾಸಿಸುವಂತಹ ಜೀವ ವರ್ಗದ ಗಂಡು ಜೀವಿಗಳಲ್ಲಿನ ಅಧಿಕಾರ ಹಂಚಿಕೆಯ ಹಿಂದಿನ ಲೈಂಗಿಕತೆಯ ಪೈಪೋಟಿಯ ಭಾವವನ್ನು ನಾಟಕ ರೂಪದಲ್ಲಿ ಸಫೋಕ್ಲಿಸ್ ತೋರಿಸಿ ಕೊಡುತ್ತಾನೆ.

ಸಫೋಕ್ಲಿಸ್‌ನ ಗ್ರೀಕ್ ನಾಟಕ 'ಈಡಿಪಸ್' ಮತ್ತು ಜನ್ನನ 'ಯಶೋಧರ ಚರಿತೆ'ಯ ಕಾವ್ಯದ ಆಧಾರದ ಮೇಲೆ ಗಿರೀಶ್ ಕಾರ್ನಾಡವರು ರಚಿಸಿದ 'ಹಿಟ್ಟಿನ ಹುಂಜ' ನಾಟಕಗಳನ್ನು ಈ ಅಧ್ಯಯನದಲ್ಲಿ ಪ್ರಮುಖವಾಗಿ ದುರಂತಕ್ಕೆ ಕಾರಣವಾಗುವ 'ಲೈಂಗಿಕತೆ'ಯ ಅಂಶವನ್ನು ವಿಮರ್ಶಾತ್ಮಕ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈಡಿಪಸ್ ನಾಟಕದಲ್ಲಿ ಬರುವ ನಾಯಕ ಪಾತ್ರ 'ಈಡಿಪಸ್' ತನಗೆ ಅರಿವಿಲ್ಲದೆ ತನ್ನ ತಂದೆ 'ಲಾಯಸ್'ನನ್ನು ಕೊಂದು ತಾಯಿ 'ಜೊಕಾಸ್ತಾಳ'ನು ಮದುವೆಯಾಗುತ್ತಾನೆ. ತಾನು ಮದುವೆಯಾಗಿರುವುದು ತನ್ನ ತಾಯಿಯನ್ನೇ ಎಂಬ ಘೋರ ಅಂಶವನ್ನು ಜ್ಯೋತಿಷ್ಯರ ಮೂಲಕ ತಿಳಿದು ತನ್ನ ಕಣ್ಣುಗಳನ್ನೇ ತಾನೇ ಕಿತ್ತುಕೊಂಡು ಪಶ್ಚಾತಾಪ ಮಾಡಿಕೊಳ್ಳುತ್ತಾನೆ ಮತ್ತು ಜೋಕಾಸ್ತ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಈ ನಾಟಕವನ್ನು ಮುಖ್ಯವಾಗಿ ಗ್ರೀಕ್ ನಾಟಕಕಾರರ ಉದ್ದೇಶ ಮತ್ತು ಗ್ರೀಕ್ ಸಾಂಸ್ಕೃತಿಕ ಹಾಗೂ ಪೌರಾಣಿಕ ಅಂಶಗಳ ಆಧಾರದ ಮೇಲೆ ಇಲ್ಲಿಯವರೆಗೂ ಇತರೆ ಅಧ್ಯಯನಗಳಲ್ಲಿ ವಿಮರ್ಶೆಗೆ ಒಳಪಡಿಸಲಾಗಿದೆ. ಈಡಿಪಸ್‌ನ ಅಧೋಗತಿಗೆ ಮುಖ್ಯವಾಗಿ ಅವನ 'ಲೈಂಗಿಕತೆ'ಯೇ ದುರಂತಕ್ಕೆ ಕಾರಣವಾಗುತ್ತದೆ. ಈಜಿಪ್ಟ್‌ನ

ಕೆಲವು ಬುಡಕಟ್ಟು ಜನಾಂಗದಲ್ಲಿನ ಸಾಮಾಜಿಕ ವ್ಯವಸ್ಥೆಯನ್ನು ಹೊರತುಪಡಿಸಿ, ಬಹುತೇಕ ಮಾನವನ ಸಮಾಜದಲ್ಲಿ 'ಸೋದರಿ' ಮತ್ತು 'ತಾಯಿಯ' ಜೊತೆ ಲೈಂಗಿಕ ಸಂಪರ್ಕವನ್ನು ನಿಷೇಧಿಸಲಾಗಿದೆ. ತಂದೆಯನ್ನು ಬಂಧಿಸಿ ಇಲ್ಲವೇ ಕೊಲೆ ಮಾಡಿ ಮಗ ಅಧಿಕಾರ ಪಡೆದುಕೊಂಡ ಉದಾಹರಣಾತ್ಮಕ ಐತಿಹಾಸಿಕ ಘಟನೆಗಳು ಬಹಳಷ್ಟು ಇವೆ. ಆದರೆ ತಾಯಿಯನ್ನು ಮದುವೆಯಾದಂತಹ ಯಾವುದೇ 'ಐತಿಹಾಸಿಕ' ಅಥವಾ 'ಪೌರಾಣಿಕ' ಸಂದರ್ಭಗಳಿಲ್ಲ, ಏಕೆಂದರೆ ತಾಯಿ ಮಗನ ವೈವಾಹಿಕ ಸಂಬಂಧವನ್ನು 'ಅನೈತಿಕ' ಮತ್ತು 'ಪಾಪ ಕೃತ್ಯ'ವೆಂದು ಎಲ್ಲಾ ಸಮಾಜವು ಪರಿಗಣಿಸಿ ನಿಷೇಧಿಸಿದೆ. ಈಡಿಪಸ್ ಮುಖ್ಯವಾಗಿ ಎರಡು ತಪ್ಪುಗಳನ್ನು ಮಾಡುತ್ತಾನೆ. ಮೊದಲಿನದು ತನಗೆ ಅರಿವಿಲ್ಲದೆ ತಂದೆಯನ್ನು ಅಪರಿಚತನೆಂದು ಕೊಲ್ಲುವುದು ಮತ್ತೊಂದು ತನಗೆ ಅರಿವಿಲ್ಲದೆಯೇ ತಾಯಿಯನ್ನು ಮದುವೆಯಾಗಿ ಮಕ್ಕಳು ಪಡೆಯುವುದು. ಈ ಎರಡು ಮುಖ್ಯ ಅಪರಾಧಗಳು ಈಡಿಪಸ್‌ನಿಗೆ ಗೊತ್ತಿಲ್ಲದೆ ಸಂಭವಿಸಿರುವಂತದ್ದು. ಈ ಕೃತಿಗಳು ಈಡಿಪಸ್‌ನ ವ್ಯಕ್ತಿಗತ ಆಯ್ಕೆಯಲ್ಲ. ಈಡಿಪಸ್‌ಗೆ 'ಲಾಯಸ್' ತನ್ನ ತಂದೆ ಎಂದು ಗೊತ್ತಿದ್ದರೆ ಕೊಲ್ಲುತ್ತಲೇ ಇರಲಿಲ್ಲ ಮತ್ತು ಜೊಕಾಸ್ತ ತನ್ನ ತಾಯಿ ಎಂದು ಗೊತ್ತಿದ್ದರೆ ಮದುವೆಯಾಗುತ್ತಿರಲಿಲ್ಲ. ಈಡಿಪಸ್ ತನ್ನ ರಾಜ್ಯದ ಭೀಕರ ಪರಿಸ್ಥಿತಿಗೆ ತಾನೇ ಕಾರಣ ಎಂದು ಪ್ರೇಕ್ಷಕರಿಗೆ ಕಂಡುಬರುವವರೆಗೂ ಒಬ್ಬ ಉದಾತ್ತ ವ್ಯಕ್ತಿಯಾಗಿ ಕಾಣಿಸಿಕೊಳ್ಳುತ್ತಾನೆ. ಅರಸನಾದ ನಂತರ ಕೆಲವೊಂದು ಸಂದರ್ಭಗಳಲ್ಲಿ ಕಾನೂನಿನ ಪಾಲನೆಗಾಗಿ 'ಸರ್ವಾಧಿಕಾರಿ'ಯಂತೆ ಅಥವಾ 'ದುರಹಂಕಾರಿ'ಯಂತೆ ಕಂಡುಬಂದರೂ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗಬೇಕೆಂಬುವ ಯಾವ ಬಯಕೆಯೂ ಅವನಲ್ಲಿಲ್ಲ.

ಗ್ರೀಕ್ ಸಾಹಿತ್ಯ ಮತ್ತು ಸಫೋಕ್ಲಿಸ್‌ನ ಮುಖ್ಯ ಉದ್ದೇಶ ಮನುಷ್ಯನನ್ನು ಮೀರಿರುವಂತಹ ಪಾರಮಾರ್ಥಿಕ ವಿಷಯಗಳಾದ 'ವಿಧಿ ಬರಹ', 'ದೈವಲಿಖಿತ', 'ದೈವ ಲೀಲೆ', 'ಜ್ಯೋತಿಷ್ಯ' ಇವೆಲ್ಲವೂ ಮನುಷ್ಯನ ಬದುಕನ್ನು ನಿಯಂತ್ರಿಸುತ್ತವೆ ಎಂಬ ಆಧ್ಯಾತ್ಮಿಕ ಮತ್ತು ಧಾರ್ಮಿಕ ಅಂಶಗಳನ್ನು ಪ್ರತಿಪಾದಿಸಲು ಸೃಷ್ಟಿ ಆಗಿರುವಂತಹ ಸಾಹಿತ್ಯ ಕೃತಿಯಾಗಿರಬಹುದಾಗಿದ್ದರೂ ಇವುಗಳನ್ನು ಇಂದಿನ ವೈಜ್ಞಾನಿಕ ಸಾಹಿತ್ಯ ವಿಮರ್ಶ ಯುಗದಲ್ಲಿ 'ಸತ್ಯ' ಮತ್ತು 'ವಾಸ್ತವ'ವೆಂದು ಸಂಪೂರ್ಣವಾಗಿ ಪರಿಗಣಿಸುವುದಿಲ್ಲ. ಆದರೆ ಈಡಿಪಸ್‌ನ ಆಯ್ಕೆ ರಹಿತವಾದ ಕೃತ್ಯವು ಅವನನ್ನು ದುರಂತದೆಡೆಗೆ ತಂದು ನಿಲ್ಲಿಸುತ್ತದೆ ಮತ್ತು ಇದನ್ನು ತನ್ನ ವೈಯಕ್ತಿಕ ಅಪರಾಧವೆಂದೇ ಈಡಿಪಸ್ ಭಾವಿಸಿ ಅದಕ್ಕೆ ಪ್ರಾಯಶ್ಚಿತ್ತವಾಗಿ ತನ್ನ ಕಣ್ಣುಗಳನ್ನು ತಿವಿದುಕೊಂಡು ಕುರುಡನಾಗುತ್ತಾನೆ. 'ಅನೈತಿಕ'ವೆಂದು ಭಾವಿಸುವ ಕೃತ್ಯವು ವ್ಯಕ್ತಿಗೆ ಒಪ್ಪಿಗೆ ಇರಲಿ

ಅಥವಾ ಒಪ್ಪಿಗೆ ಇಲ್ಲದೆ ಇರಲಿ ಆ ಕೃತ್ಯವೂ ಪಾಪ ಪ್ರಜ್ಞೆಯಾಗಿ ಅವನನ್ನು ಕಾಡುತ್ತದೆ. ಪ್ರಪಂಚದಲ್ಲಿ ಎಲ್ಲವನ್ನು ಸಮರ್ಥಿಸಿಕೊಳ್ಳಬಹುದಾದಂತ ಸಾಧ್ಯತೆ ಇದ್ದರೂ ಆತ್ಮಸಾಕ್ಷಿಗೆ ಶರಣಾಗುವ ಈಡಿಪಸ್ ತನ್ನ ಅನೈತಿಕತೆಯನ್ನು ಸಮರ್ಥಿಸಿಕೊಳ್ಳಲಾರ ಮತ್ತು ಅದನ್ನು 'ವಿಧಿಬರಹ'ಕ್ಕೆ ಅಥವಾ 'ದೈವದಲೀಲೆ'ಗೂ ಆರೋಪಿಸಿ ತನ್ನನ್ನು ತಾನು ಸಮರ್ಥಿಸುವುದಿಲ್ಲ. ಬಹಳಷ್ಟು ವಿಮರ್ಶಕರು ಈಡಿಪಸ್‌ನ ದುರಂತಕ್ಕೆ ಕಾರಣವಾಗುವ ದೇವತೆಗಳನ್ನು ಆರೋಪಿಸುತ್ತಾರೆ. ಹಾಗಾದರೆ ಪ್ರಪಂಚದ ಎಲ್ಲಾ ಅಪರಾಧಗಳಿಗೆ 'ವಿಧಿ'ಯನ್ನು ಅಥವಾ 'ದೈವ'ವನ್ನು ಆರೋಪಿಸಿ ತಮ್ಮ ವ್ಯಕ್ತಿಗತ ಕೃತ್ಯಗಳಿಗೆ ತಾವು ಜವಾಬ್ದಾರರಲ್ಲವೆಂದು ಸಮರ್ಥಿಸಿ ಕೊಳ್ಳಬಹುದು. ಆದರೂ ಮನುಷ್ಯ ತನ್ನ ಬದುಕಿನ ಎಲ್ಲಾ ಸಂದರ್ಭಗಳನ್ನು ತಾನೇ ನಿರ್ಮಿಸಿ ಮತ್ತು ನಿಯಂತ್ರಿಸಲಾರ ಎಂಬುದು ಕೂಡ ಅಷ್ಟೇ ಸತ್ಯ. ಮನುಷ್ಯನ ದುರಂತಗಳಿಗೆ ಕಾರಣವಾಗುವ ಹಲವಾರು ಅಂಶಗಳಲ್ಲಿ ಮಾನವನ ಲೈಂಗಿಕತೆ ಕೂಡ ಪ್ರಮುಖವಾದ ಅಂಶವಾಗಿದೆ. ಮಾನವನ ಲೈಂಗಿಕತೆಯು ಪ್ರಕೃತಿದತ್ತವಾಗಿದ್ದರು ಅದನ್ನು ನಿಯಂತ್ರಿಸುವ ಹೊಣೆ ವ್ಯಕ್ತಿ ಮತ್ತು ಸಮಾಜದ ಅತ್ಯಂತ ಪ್ರಮುಖ ವಿಷಯವಾಗಿದೆ. ಆದರೆ ಅಂತಹ ಯಾವುದೇ ನಿಯಂತ್ರಣದ ಸಮಸ್ಯೆ ಪ್ರಾಣಿವರ್ಗದಲ್ಲಿಲ್ಲ ಅದು ಕೇವಲ ಮಾನವ ಜೀವಿಯ ಪ್ರಾಪಂಚಿಕ ಸಮಸ್ಯೆಯಾಗಿದೆ.

ಜನ್ನನ ಯಶೋಧರ ಚರಿತೆ, ಗಿರೀಶ್ ಕಾರ್ನಾಡ್‌ರ ಹಿಟ್ಟಿನ ಹುಂಜದ ನಾಟಕದ ಓದುಗ ಮತ್ತು ನಾಟಕದ ನೋಡುಗನಿಗೆ 'ಪುರುಷ ಕೇಂದ್ರಿತ' (Malegaze) ಮೀರಿದ ಪೂರ್ವ ಪೀಡನ ರಹಿತ ಮನೋಸ್ಥಿತಿಯ ಅರಿವು ಎಲ್ಲರಲ್ಲೂ ಕಂಡು ಬರುವುದಿಲ್ಲ. ಸ್ತ್ರೀಯರ ಬಗೆಗಿನ 'ದೈಹಿಕ' ಮತ್ತು 'ಮಾನಸಿಕ ವ್ಯಕ್ತಿತ್ವ'ಗಳ ಮೇಲೆ ಸಾಮಾನ್ಯ ಜನರಿಗಿರುವ ಅಭಿಪ್ರಾಯಗಳು ಈಗಾಗಲೇ ಚಾಲ್ತಿಯಲ್ಲಿರುವ ಪುರುಷ ಪ್ರಧಾನ ವ್ಯವಸ್ಥೆಯು ಸೃಷ್ಟಿಸಿರುವ ದೃಷ್ಟಿಕೋನದಲ್ಲಿ ಇರುತ್ತವೆ. ಆದ್ದರಿಂದ 'ಲೈಂಗಿಕತೆ'ಯ ಮೇಲಿನ ಅರ್ಥ ಮತ್ತು ವಿಮರ್ಶೆಯಲ್ಲಿ ಓದುಗ ಮತ್ತು ಪ್ರೇಕ್ಷಕರ ಅಭಿಪ್ರಾಯಗಳು ತುಸು ಅತಿ ಎನ್ನಿಸುವಷ್ಟು ಸಾಮಾನ್ಯೀಕರಣ ಗೊಂಡಿರುತ್ತದೆ (Over Generalization). ಅದರಲ್ಲೂ ಮುಖ್ಯವಾಗಿ ಸ್ತ್ರೀಯರ ಲೈಂಗಿಕತೆಯ ವಿಷಯದಲ್ಲಿ ಕೂಡ ಪುರುಷ ದೃಷ್ಟಿಕೋನವು ಮೇಲ್ಮೈ ಸಾಧಿಸುತ್ತದೆ. ನಾಟಕದ ಶೀರ್ಷಿಕೆ ಪುರುಷಕೇಂದ್ರಿತ ದೃಷ್ಟಿಕೋನವನ್ನು ಸೂಚಿಸುತ್ತದೆ. ಅದು ಅಮೃತಮತಿಯ ಚರಿತ್ರೆಯಲ್ಲ! ಮೇಲಾಗಿ ಯಶೋಧರನ ಚರಿತ್ರೆ ಸಾಹಿತ್ಯದ ಕೆಲವು ಕೃತಿಗಳು ಕೇವಲ ವ್ಯಕ್ತಿ ವೈಯಕ್ತಿಕ ವ್ಯಕ್ತಿತ್ವವನ್ನಷ್ಟೇ ಪ್ರತಿನಿಧಿಸುವುದಿಲ್ಲ, ಬದಲಿಗೆ ಅದು ಸಾಮಾಜಿಕ ವ್ಯಕ್ತಿತ್ವದ ಪ್ರತಿನಿಧಿಯು ಆಗಿರುತ್ತದೆ. ಜನ್ನನು ಜೈನ ಸಿದ್ಧಾಂತದ ಪ್ರತಿಪಾದಕನಾಗಿ ಅದನ್ನು ತನ್ನ ಕೃತಿಯಲ್ಲಿ ರೂಪಿಸುವಾಗ

'ಲೈಂಗಿಕತೆ'ಯನ್ನು ಮತ್ತು ಅದರ ರಾಜಕಾರಣವನ್ನು ತಂದಿರುವುದು ಕೇವಲ ಪಾರಮಾರ್ಥಿಕ ವಿಷಯಕ್ಕೆ ಸಂಬಂಧಿಸಿದಾಗಿರುವುದಿಲ್ಲ. ಅದರ ಜೊತೆಯಲ್ಲಿಯೇ ಪ್ರಾಪಂಚಿಕವಾದ ಎರಡು ವಿರುದ್ಧಾತ್ಮಕ 'ನೈತಿಕ' ಮತ್ತು 'ಅನೈತಿಕ' ವಸ್ತು ವಿಷಯಗಳ ಸಂಘರ್ಷಣೆಯನ್ನು ಅಮೃತಮತಿಯ 'ಲೈಂಗಿಕತೆಯ ದೃಷ್ಟಿಕೋನ', 'ಪುರುಷ ದೃಷ್ಟಿಕೋನ'ವನ್ನು ಯಶೋಧರ ಮತ್ತು ಅಷ್ಟವಕ್ರನ ಮೂಲಕ ಪ್ರೇಕ್ಷಕರು ತಮ್ಮದಾಗಿಸಿಕೊಳ್ಳುತ್ತಾ ಹಾಗೂ ಅದನ್ನೆ ಯೋಚಿಸುತ್ತಾ ಅಮೃತಮತಿಯನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಾರೆ. ತಮ್ಮ ದೃಷ್ಟಿಯಲ್ಲಿ ಯಾವುದು ಈಗಾಗಲೇ ಪೂರ್ವ ಸಿದ್ಧವಾಗಿ ಒಪ್ಪಿಗೆಯಾಗಿದೆಯೋ ಅದನ್ನೇ ಒಂದು ಹೆಣ್ಣು ಬಯಸಬೇಕೆನ್ನುವ ನಿರೀಕ್ಷೆ ಮತ್ತು ಅಂತ ನಿರೀಕ್ಷೆಯನ್ನು ವಿರೋಧಿಸಿ ತನ್ನದೇ ಆದಂತಹ ಲೈಂಗಿಕತೆಯ ದೃಷ್ಟಿಕೋನವನ್ನು ಕಟ್ಟಿಕೊಳ್ಳುವುದು ಒಬ್ಬ ಸ್ತ್ರೀಯ ಅಪರಾಧಿತನವಾಗುತ್ತದೆ. ಯಶೋಧರ ಒಬ್ಬ ಚೆಲುವ ಸುಂದರಾಂಗನು ಮತ್ತು ಈಗಾಗಲೇ ಸಾಮಾಜಿಕವಾಗಿ ಒಪ್ಪಿಗೆಯಾದ ಪುರುಷತ್ವದ ಎಲ್ಲಾ ದೃಷ್ಟಿಕೋನದಲ್ಲೂ ಪರಿಪೂರ್ಣನು. ಎಲ್ಲಾ ಹೆಣ್ಣುಗಳು ಇಂತಹ ದೇಹ ಮತ್ತು ವ್ಯಕ್ತಿತ್ವವನ್ನೇ ಬಯಸುತ್ತವೆ ಎಂಬ ಅತಿರೇಕದ ಸಾಮಾನ್ಯ ಕಾರಣ (Naturalisation). ಆದರೆ ಅಮೃತಮತಿಯ ದೃಷ್ಟಿಕೋನದಲ್ಲಿ ಅವಳ ನಿರೀಕ್ಷೆಯಲ್ಲಿ ಯಶೋಧರನು ಪರಿಪೂರ್ಣನ ಎನ್ನುವ ಪ್ರಶ್ನೆಯು ಪ್ರಶ್ನೆಯಾಗಿ ಉಳಿಯುತ್ತದೆ. ಪುರುಷರ ಸುಖಕ್ಕಾಗಿ ಎಂತಹದೇ ಬದಲಾವಣೆಗಳು ಅಗತ್ಯ ಬಿದ್ದಾಗ ತನ್ನಷ್ಟಕ್ಕೆ ತಾನೇ ರೂಪಗೊಳ್ಳುತ್ತವೆ. ಆದರೆ ಅಂತಹುದೇ ಬದಲಾವಣೆಗಳು ಸ್ತ್ರೀಯರ ಪರವಾದ ದೃಷ್ಟಿಕೋನಗಳು, ಕಲ್ಪನೆಯು ಕೂಡ ಸಾಧ್ಯವಿಲ್ಲ. ಹೆಣ್ಣು ಗಂಡಿನ ಲೈಂಗಿಕ ಅಂಶವು ಸಹಜ ಮತ್ತು ಜೈವಿಕವಾಗಿದ್ದರು ಅದರ ವಿವರಣಾತ್ಮಕ ವಿಮರ್ಶೆಯ ದೃಷ್ಟಿಕೋನದಲ್ಲಿ 'ನೀತಿ' ಮತ್ತು 'ಅನೀತಿ'ಯ ಪಾಠವು ಗಂಡು ಮತ್ತು ಹೆಣ್ಣಿಗೆ ಸಂಬಂಧಿಸಿದಂತೆ ಭಿನ್ನವು ಇಲ್ಲವೋ ವಿರುದ್ಧಾತ್ಮಕವೂ ಆಗಿಬಿಡುತ್ತದೆ. ಆದುದರಿಂದಲೇ ಅಮೃತಮತಿಯು ಅಪರಾಧಿ ಮತ್ತು ಯಶೋಧರನು ಅವಳ ಅಪರಾಧಿತನದ ಬಾಧಿತನಾಗಿ ನಾಟಕದಲ್ಲಿ ಚಿತ್ರಿಸಲಾಗಿದೆ. ಗಂಡು ಮತ್ತು ಹೆಣ್ಣಿನ ನಡುವಿನ ರಮ್ಯ ಸಂಬಂಧ (Romantic Relationship) ಇಬ್ಬರು ಪ್ರೇಮಿಗಳ ಸೌಂದರ್ಯಾತ್ಮಕ ದೈಹಿಕ ಆಕರ್ಷಣಗಳನ್ನೇ ಸತ್ಯವೆಂದು ನಂಬಲಾಗುತ್ತದೆ. ಅಂತಹ ನಂಬಿಕೆಗಳನ್ನು ಹುಸಿಗೊಳಿಸುವಂತೆ 'ಅಮೃತಮತಿ' ಮತ್ತು 'ಮಾವುತ' ಅಷ್ಟವಕ್ರನ ಸಂಬಂಧವು ಪ್ರೇಕ್ಷಕರಲ್ಲಿ ಕಂಪನವನ್ನುಂಟುಮಾಡುತ್ತದೆ. ಒಬ್ಬ ಸ್ತ್ರೀ ತನ್ನ ಪ್ರೇಮಿಯನ್ನು ಬಯಸುವ ರೀತಿಗೂ ಹಾಗೂ ಈಗಾಗಲೇ ಸಮಾಜದಲ್ಲಿ ಚಾಲ್ತಿಯಲ್ಲಿರುವ ಸಿದ್ಧ ಮಾದರಿಗಳಲ್ಲಿ ಹೆಣ್ಣು ಹೇಗೆ ತನ್ನ ಪ್ರೇಮಿಯನ್ನು ಬಯಸುತ್ತಾಳೆ ಮತ್ತು ಕಲ್ಪಿಸಿಕೊಳ್ಳುತ್ತಾಳೆ ಎಂಬುದರ ಘರ್ಷಣೆಯಂತೆ ಅಮೃತಮತಿಯ ಅನಿರೀಕ್ಷಿತ ನಡೆಯು ಓದುಗರಲ್ಲಿ ಗಾಬರಿ

ಹುಟ್ಟಿಸುತ್ತದೆ.

ಇತಿಹಾಸದ ಪುಟಗಳಲ್ಲಿ ಒಂದು ರಾಜ್ಯದ ಮಹಾರಾಜನಾದವನಿಗೆ ರಾಜ್ಯದ ಒಳಿತಿಗಾಗಿ ಅಥವಾ ಯಾವುದೋ ಒಂದು ಗಂಭೀರ ರಾಜಕೀಯದ ಉದ್ದೇಶಕ್ಕಾಗಿ ವಿವಾಹೇತರ ಸಂಬಂಧವು ಅನೈತಿಕವಲ್ಲ, ಆದರೆ ರಾಣಿಯ ವಿವಾಹೇತರ ಸಂಬಂಧವು ಅನೈತಿಕವಾಗಬಹುದು. ಅಮೃತಮತಿ ಮತ್ತು ಅಷ್ಟವಕ್ರನ ಸಂಬಂಧ ಅನೈತಿಕ ರೀತಿಯಲ್ಲಿ ಒಂದು ವೇಳೆ ಯಶೋಧರ ವಿವಾಹೇತರ ಸಂಬಂಧವಿದ್ದರೆ ಆಗ ಅದನ್ನು ನೋಡುವ ದೃಷ್ಟಿಕೋನ ಏನಾಗುತ್ತಿತ್ತು ಎಂಬುದು ಕಲ್ಪನಾತೀತ ಪ್ರಶ್ನೆಯಾಗಿದೆ. ಏಕೆಂದರೆ ಈಗಾಗಲೇ 'ಪುರಾಣ' ಮತ್ತು 'ಇತಿಹಾಸ'ಗಳಲ್ಲಿ ಹಲವಾರು ರಾಜರ ವಿವಾಹೇತರ ಸಂಬಂಧವನ್ನು ಅನೈತಿಕವೆಂದು ಸಾಮಾನ್ಯ ಜನರು ಅಥವಾ ವಿಮರ್ಶಕರು ಭಾವಿಸಿಲ್ಲ. ಅಂತಹ ಐತಿಹಾಸಿಕ ಅಥವಾ ಪೌರಾಣಿಕ ರಾಜರುಗಳ ಹೆಸರುಗಳು ಸಾಮಾನ್ಯರಿಗೆ ಚಿರಪರಿಚಿತ ಆದರೆ (ನಾಟಕದಲ್ಲಿ ಯಶೋಧರನ ವಿವಾಹೇತರ ಸಂಬಂಧಕ್ಕೆ ಯಾವುದೇ ದೃಷ್ಟಾಂತವಿಲ್ಲ). ಅಮೃತಮತಿಯ ನಡವಳಿಕೆಯನ್ನು ಅಸಹಜವೆಂದು ಹೇಳಲಾಗುತ್ತದೆ. ಆದರೆ ಸಾಹಿತ್ಯದ ಓದು ಇತರೆ ಜ್ಞಾನ ಶಾಖೆಗಳಾದ ಸ್ತ್ರೀವಾದ ಮತ್ತು ವೈಜ್ಞಾನಿಕ ಮನಃಶಾಸ್ತ್ರದ ದೃಷ್ಟಿಕೋನದಲ್ಲಿ ಪ್ರೇಕ್ಷಕರಿಗೆ ಸ್ತ್ರೀ ಸಂವೇದನೆಯ ಮತ್ತು ಮಾನವನ ಲೈಂಗಿಕ ಆಸಕ್ತಿಗಳ ವಿಶೇಷ ಅರಿವು ಉಂಟುಮಾಡಿದಾಗ ದುರಂತವನ್ನು ಮೀರಿದ ಸಾಹಿತ್ಯಿಕ ಗ್ರಹಿಕೆ ಸಂಭವಿಸುತ್ತದೆ.

ಆಕರ ಗ್ರಂಥಗಳು :

1. ಅಕ್ಷರ ಕೆ. ವಿ. 1994, ರಂಗಪ್ರಪಂಚ, ಅಕ್ಷರಪ್ರಕಾಶನ, ಹೆಗ್ಗೋಡು, ಸಾಗರ.
2. ಅಕ್ಷರ ಕೆ. ವಿ. 2012, ರಂಗ ಪ್ರಯೋಗ, ಅಕ್ಷರಪ್ರಕಾಶನ, ಹೆಗ್ಗೋಡು, ಸಾಗರ.
3. ಜಯಪ್ರಕಾಶ ಮಾವಿನ ಕುಳಿ, 2001, ರಂಗಪ್ರತಿಸ್ಪಂದನ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
4. ಗಿರೀಶ್ ಕಾರ್ನಾಡ, 2017, ಗಿರೀಶ್ ಕಾರ್ನಾಡ ಸಮಗ್ರನಾಟಕ, (ನಾಗಮಂಡಲ, ತುಘಲಕ್ ಮತ್ತು ಹಿಟ್ಟಿನ ಹುಂಜ ನಾಟಕ), ಮನೋಹರ ಗ್ರಂಥಮಾಲಾ, ಧಾರವಾಡ.
5. ಬರಗೂರು ರಾಮಚಂದ್ರಪ್ಪ, 1993, ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ, ಸಂಪಾದಕರ ಮಾತು.
6. ಸೊಪೊಕ್ಲಿಸ್ ಅನು; ಪಿ. ಲಂಕೇಶ್, 1991, ಈಡಿಪಸ್ ದಿ ಕಿಂಗ್, ನೆಲೆ–ಮನೆ ಪ್ರಕಾಶನ, ಮೈಸೂರು.

***

'ಟ್ರಯಲ್ ರೂಮಿನ ಅಪ್ಸರೆಯರು' ಕವನದಲ್ಲಿ ಸ್ತ್ರೀ ಸಂವೇದನೆ

ಸಂಜನಾ ಯು[1], ಸ್ಫೂರ್ತಿ[2], ಡಾ. ಬಸಯ್ಯ ಸ್ವಾಮಿ[3]

ಇಂಟೀರಿಯರ್ ಡಿಸೈನ್ ವಿದ್ಯಾರ್ಥಿ, ಜೈನ್ ವಿಶ್ವವಿದ್ಯಾಲಯ ಬೆಂಗಳೂರು,

juug24bscp17049@jainuniversity.ac.in [1]

ಇಂಟೀರಿಯರ್ ಡಿಸೈನ್ ವಿದ್ಯಾರ್ಥಿ ಜೈನ್ ವಿಶ್ವವಿದ್ಯಾಲಯ ಬೆಂಗಳೂರು,

juug24bscp23245@jainuniversity.ac.in [2]

ಸಹಾಯಕ ಪ್ರಾಧ್ಯಾಪಕ ಕನ್ನಡ ವಿಭಾಗ ಜೈನ್ ವಿಶ್ವವಿದ್ಯಾಲಯ ಬೆಂಗಳೂರು

bassayya.s@jainuniversity.ac.in [3]

ಕನ್ನಡ ಸಾಹಿತ್ಯದಲ್ಲಿ ಅಕ್ಕಮಹಾದೇವಿಯಿಂದ ಇಡಿದು ಇಲ್ಲಿಯವರೆಗೆ ಅನೇಕ ಮಹಿಳಾ ಬರಹಗಾರರು ತಮ್ಮ ಬದುಕಿನ ಸಂಕರಗಳನ್ನು ಸಾಹಿತ್ಯಿಕವಾಗಿ ದಾಖಲಿಸುತ್ತಲೆ ಬಂದಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅನೇಕ ಯುವ ಮಹಿಳಾ ಬರಹಗಾರರು ಹೆಚ್ಚಿನ ಸಂಖ್ಯೆಯಲ್ಲಿ ಕಥೆ, ಕವನ, ಕಾದಂಬರಿ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿಯನ್ನು ಮಾಡುತ್ತಿದ್ದಾರೆ. ಅವರ ಸಂಖ್ಯೆ ತುಂಬ ದೊಡ್ಡದು. ಸಂಖ್ಯೆಯಲ್ಲಿ ಮಾತ್ರವಲ್ಲದೆ ಅವರ ಸಾಹಿತ್ಯಿಕ ಬರಹದ ಗುಣಮಟ್ಟದಲ್ಲೂ ಎತ್ತರದಲ್ಲಿ ಇದ್ದಾರೆ. ಅಂತಹ ಯುವ ಮಹಿಳಾ ಬರಹಗಾರ್ತಿ, ಕವಯತ್ರಿಯಾದ ಭುವನಾ ಹಿರೇಮಠ ಅವರು ಕೂಡ ಒಬ್ಬರು.

ಭುವನಾ ಹಿರೇಮಠ, ಬೆಳಗಾವಿ ಜಿಲ್ಲೆಯ ಸೋಮನಟ್ಟಿಯಲ್ಲಿ ಜನಿಸಿದ್ದಾರೆ. ಮೂಲತಹ ಇವರು ವಿಜ್ಞಾನ ವಿಧ್ಯಾರ್ಥಿಯಾಗಿ ಭೌತಶಾಸ್ತ್ರದಲ್ಲಿ ಎಂ. ಎಸ್ಸಿ ಪದವಿ ಪಡೆದಿದ್ದಾರೆ. ಈಗ ಸರಕಾರಿ ಪ್ರೌಢ ಶಾಲೆಯಲ್ಲಿ ಗಣಿತ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಅವರು ಗಣಿತವನ್ನು ಭೋಧನೆಯನ್ನು ಮಾಡುತ್ತಿದ್ದರೂ ಕನ್ನಡ ಸಾಹಿತ್ಯ ಓದು ಬರಹದ ಮೂಲಕ ಸಾಹಿತ್ಯ ವಿದ್ಯಾರ್ಥಿಯೇ ಆಗಿದ್ದಾರೆ. ಹಾಗಾಗಿಯೇ ಇವರು 2018ರಲ್ಲಿ "ಟ್ರಯಲ್ ರೂಮಿನ ಅಪ್ಸರೆಯರು"

ಎಂಬ ತಮ್ಮ ಮೊದಲ ಕವನ ಸಂಕಲನವನ್ನು ಪ್ರಕಟಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮದೊಂದು ಕೃತಿಯನ್ನು ನೀಡಿದ್ದಾರೆ. ಈ ಕೃತಿಯೂ ಕನ್ನಡ ಸಾಹಿತ್ಯ ಓದುಗರ ಮನಸನ್ನು ಸೆಳೆದಿದೆ. ಈ ಕಾರಣಕ್ಕೆ ಈ ಕೃತಿಗೆ 'ಕಾಜಾಣ ಯುವ ಪುರಸ್ಕಾರ', 'ವೀಚಿ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ' ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿವೆ. ಅವರ ಇತ್ತೀಚಿನ ಕವನ ಸಂಕಲನ "ಮತ್ತೆ ಮತ್ತೆ ಮರ್ತ್ಯಕ್ಕಿಳಿಯುತ್ತೇನೆ" ಕಾವ್ಯ ಪ್ರಕಾರವನ್ನು ಹೊಸದಾಗಿ ಪರಿಚಯಿಸುತ್ತದೆ. ಅವರ ಹದವಾದ ಕಾವ್ಯ ಭಾಷೆ, ಆಳವಾದ ರೂಪಕಗಳು ಮತ್ತು ವಿಶಿಷ್ಟ ಶೈಲಿಯಿಂದ ಕಾವ್ಯ ಲೋಕದಲ್ಲಿ ಒಗ್ಗುಟ್ಟಿದ್ದಾರೆ. ಇವರ ಮೊದಲ ಸಂಕಲನದ ಕವನ 'ಟ್ರಯಲ್ ರೂಮಿನ ಅಪ್ಸರೆಯರು' ಎಂಬ ಕವನವು ಮಹಿಳೆಯರು ಒಳ ಭೇಗುದಿಯನ್ನು ದಾಖಲಿಸುತ್ತದೆ.

ನಮ್ಮ ಸಮಾಜದಲ್ಲಿ ಸಂಸ್ಕೃತಿ, ಆಚಾರ ವಿಚಾರ, ರೀತಿ ನೀತಿಗಳು, ಉಡುಪು ಎಂಬ ಹೆಸರಿನಲ್ಲಿ ಮಹಿಳೆಯರು ಅನೇಕ ಕಟ್ಟುಪಾಡುಗಳಲ್ಲಿ ಬದುಕನ್ನು ಸವೆಸುತ್ತಿದ್ದಾರೆ. ಬದಲಾದ ಆಧುನಿಕ ಕಾಲದಲ್ಲಿಯೂ ಮಹಿಳೆಯರು ಸಮಾಜಿಕ, ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಸಮಾನತೆಯನ್ನು ಪಡೆದುಕೊಳ್ಳಲು ಹೆಣಗುತ್ತಿದ್ದಾರೆ. ಇವುಗಳನ್ನು ಪಡೆಯಲು ಪ್ರಶ್ನಿಸುವ ಮಹಿಳೆಯರು ಪುರುಷ ಕೌಟಂಬಿಕ ಮತ್ತು ಸಮಾಜಿಕ ನೆಲೆಯಲ್ಲಿ ದಬ್ಬಾಳಿಕೆ ತುತ್ತಾಗುತ್ತಿದ್ದಾರೆ. ಇವುಗಳನ್ನು ಎದುರಿಸಿ ಬದುಕನ್ನು ಬದಲಾಯಿಸಿಕೊಂಡವರು ಇದ್ದಾರೆ. ಕುಟುಂಬವನ್ನು ಸಮಾಜವನ್ನು ಎದುರಿಸಲಾಗದೆ ಮತ್ತು ಅನುಭವಿಸಲಾಗದೆ ನಲುಗುತ್ತಿದ್ದಾರೆ.

ಆಧುನಿಕ ಕಾಲದ ನಗರದ ಬದುಕಿನ ಮಹಿಳೆಯರ ತಮ್ಮ ಬದುಕಿನ ರೀತಿ ನೀತಿಗಳು ಒಂದು ತೆರನಾದರೆ, ಹಳ್ಳಿಯಲ್ಲಿಯೇ ಹುಟ್ಟಿ ಸಾಂಸ್ಕೃತಿಕ ಕಟ್ಟುಪಾಡಿಗೊಳಗಾಗಿ ಬೆಳೆದ ಮಹಿಳೆಯರ ಬದುಕಿನ ಚಿತ್ರಣವೇ ಬೇರೆ. ಆಧಹಿನಕ ನಗರ ಬದುಕಿನ ಮಹಿಳೆಯರು ಹೆಚ್ಚು ಸ್ವತಂತ್ರಶೀಲರು, ತಮ್ಮ ಬದುಕಿನ ಆಯ್ಕೆಯನ್ನು ರೀತಿ ನೀತಿಗಳನ್ನು ತಾವೇ ರೂಪಿಸಿಕೊಳ್ಳ ಸಬಲರಾದವರು. ಆದರೆ ಹಳ್ಳಿಯ ಮಹಿಳೆ ನಗರದ ಮಹಿಳೆಯಂತೆ ಯಾಕೆ ಬದುಕಲು ಸಾಧ್ಯವಿಲ್ಲ? ಯಾಕೆ ಸಾಧ್ಯವಾಗುತ್ತಿಲ್ಲ? ನಾವು ಹೀಗೆ ಬದುಕಿದೆ ಎಷ್ಟು ಚೆಂದ. ಎಂಬ ಹೊಸ ಒಳನೋಟಗಳನ್ನು ಈ ಸಮಾಜದ ಕಟ್ಟುಪಾಡುಗಳನ್ನು ಪ್ರಶ್ನಿಸುವ ಧೀಮಂತಿಕೆ ಬೆಳೆಸಿಕೊಳ್ಳುತ್ತಿದ್ದಾಳೆ. ಆದರೆ ಅದು ಆಂತರಿಕವಗಿಯೇ ಹೆಚ್ಚು ಉಳಿಯುತ್ತಿದೆ ಎಂಬುದನ್ನು ಈ ಕವಿತೆ ಒಂದು ಆಧುನಿಕ ನಗರದ ಮಹಿಳೆ ಮತ್ತು ಹಳ್ಳಿಯ ಮಹಿಳೆಯರ ಬದುಕಿನ ಕ್ರಮಗಳನ್ನು ಮುಖಾಮುಖಿ ಮಾಡುತ್ತ ಆಧುನಿಕ ಕಾಲದಲ್ಲಿದ್ದರೂ ಹಳ್ಳಿಯ ಮಹಿಳೆಯು ಹೇಗೆ ಸಮಾಜ ಮತ್ತು ಕುಟುಂಬವನ್ನು ಒಳಗೊಂಡು ಸಾಂಸ್ಕೃತಿಕ ಕಟ್ಟುಪಾಡಿನ ಮಾನಸಿಕ ಸಂಘರ್ಷವನ್ನ

ಹೇಗೆ ಅನುಭವಿಸುತ್ತಿದ್ದಾರೆ ಎಂಬುದನ್ನು ಈ ಕವಿತೆ ಪ್ರಸ್ತುತ ಪಡಿಸಲು ಪ್ರಯತ್ನಿಸುತ್ತಿರುವುದನ್ನು ಈ ಲೇಖನದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಈ ಕವಿತೆ ಮೂವತ್ತೊಂದು ಸಾಲುಗಳನ್ನು ಒಳಗೊಂಡು ಮೂರು ಭಾಗದಲ್ಲಿ ಕವಿತೆಯ ವಸ್ತು ಹರಡಿಕೊಂಡಿದೆ.

ಈ ಕವಿತೆಯಲ್ಲಿ ಹಳ್ಳಿಯ ಮುಗ್ಧ ಹೆಣ್ಣು ಮಗಳೊಬ್ಬಳು ನಗರದ ಬಟ್ಟೆಯಂಗಡಿಯಲ್ಲಿ ಬಟ್ಟೆಯನ್ನು ಖರೀದಿಸಲು ಬಂದಿದ್ದಾಳೆ. ಬಟ್ಟಯಂಡಿಯಲ್ಲಿ ವಿಧವಿಧವಾದ ಶೈಲಿಯಲ್ಲಿನ ಬಟ್ಟೆಗಳನ್ನು ನೋಡಿ ತೆಗೆದುಕೊಂಡು ಧರಿಸಿ ನೋಡುವ ಟ್ರಯಲ್ ರೂಮಿನಲ್ಲಿ ತನ್ನನ್ನು ತಾನೂ ಆ ಬಟ್ಟೆಗಳಲ್ಲಿ ನೋಡಿಕೊಂಡಾಗ ಅವಳಲ್ಲಿ ಅನೇಕ ಚಿಂತನೆಗಳು, ಪ್ರಶ್ನೆಗಳು, ಚಕಿತತೆಗೆ ಒಳಗಾಗುವುದನ್ನು ದಾಖಲಿಸುತ್ತಾಳೆ.

"ಅಷ್ಟಷ್ಟೇ ಇಕ್ಕಟ್ಟಿನಲ್ಲಿ
ಮೂರೂ ದಿಕ್ಕಿನಿಂದ ಕೈ ಮಾಡಿ ಕರೆಯುವ
ಕನ್ನಡಿಗಳ ಆತ್ಮಕ್ಕೆ ಮಾಟವಿಲ್ಲ,
ಆಸೆಗಣ್ಣಿನಿಂದ ಬಯಸಿ ತೊಟ್ಟ
ಸ್ಲಿವ್‌ಲೆಸ್ ಟಾಪಿನ ಟುಲಿಪ್ ಮೊಗ್ಗು,
ದುಬಾರಿ ಪ್ರಿನ್ಸ್ ಕಟ್ ಬ್ಲೌಜಿನ ಜರ್‍ರಿ ಬಾರ್ಡರು,
ಟ್ರಯಲ್ ರೂಮಿನ ಹ್ಯಾಂಗರುಗಳಲ್ಲಿ
ಹಾಗೆಯೇ ನೇತುಬಿದ್ದಿವೆ,
ನೀಳ ಬೆರಳಿನ ಸೇಲ್ಸ್ ಗರ್ಲ್ ಮುಟ್ಟಿ ಮುಟ್ಟಿ ಮಡಿಕೆ ಮಾಡಿ
ನಾಳೆಯ ಮನಸುಗಳ ಕದ ತಟ್ಟುವ ತನಕ"

ಚಿಕ್ಕದಾದ ಇಕ್ಕಟ್ಟಿನ ಟ್ರಯಲ್ ರೂಮಿನಲ್ಲಿ ಕನ್ನಡಿಗಳು ಮೂರು ದಿಕ್ಕಿಗೆ ಇವೆ. ಅವು ಆಕೆಯನ್ನು ಕೈ ಮಾಡಿ ಕರೆಯುತ್ತಿವೆ. ಆದರೆ ಅವುಗಳಿಗೆ ಸಾಂಪ್ರದಾಯದ ಸಮಾಜಕ್ಕೆ ಅಡಗಿಸಿಡುವಂತೆ ಈ ಕನ್ನಡಿಗಳಿಗೆ ಮಾಯೆ ಇಲ್ಲ. ಮಾಯೆತಿಲ್ಲ. (ಮಾಯೆ ಎಂದರೆ ಅಡಗಿಸಿಡುವ ಕೆಲಸ) ಆಸೆಗಣ್ಣಲ್ಲಿ ಬಯಸಿ ಅನೇಕ ಆಧುನಿಕ ಶೈಲಿಯ ಸ್ಲಿವ್‌ಲೆಸ್ ಟಾಪಿನ ಟುಲಿಪ್ ಮೊಗ್ಗು, 'ದುಬಾರಿ ಪ್ರಿನ್ಸ್ ಕಟ್ ಬ್ಲೌಜಿನ ಜರ್‍ರಿ ಬಾರ್ಡರು' ಉಡುಪುಗಳನ್ನು ತೆಗೆದುಕೊಂಡು ತೊಟ್ಟುಕೊಳ್ಳಬೇಕೆಂಬ ಹೆಬ್ಬಯಕೆ ಆಕೆಯದ್ದು. ಅದು ಸಾಧ್ಯವಾಗುವುದಿಲ್ಲ. ಅವುಗಳನ್ನು ಈ ಟ್ರಯಲ್ ರೂಮಿನಲ್ಲಿ ಮಾತ್ರ ಧರಿಸಿಕೊಳ್ಳಲು, ಧರಿಸಿಕೊಂಡು ತನ್ನನ್ನು ತಾನೂ ನೋಡಿಕೊಳ್ಳಲು ಮಾತ್ರ ಸಾಧ್ಯ. ಹೊರಗೆ ಅಂದರೆ ಸಮಾಜದ ಮುಂದೆ ಧರಿಸಿಕೊಳ್ಳಲು ಅಥವಾ ಮನೆಯಲ್ಲಿ ಧರಸಿಕೊಳ್ಳಲು ಸಾಧ್ಯವಿಲ್ಲ ಎಂಬ ಅರಿವು ಅಳುಕು ಹಿಂಜರಿಕೆ ಅವಳ ಮನಸ್ಸಿಗೆ

ರಾಚುತ್ತದೆ. ಹೀಗೆ ಒಂದೊಂದು ಹೊಸ ಬಗೆಯ ರೀತಿಯಲ್ಲಿ ಎಂದಿಗೂ ತನ್ನ ಮನೆ ಹಳ್ಳಿಯಲ್ಲಿ ಧರಿಸದ ಈ ಬಟ್ಟೆಗಳನ್ನು ತೊಟ್ಟುಕೊಳ್ಳದ ಅವಳು ಇಲ್ಲಿ ಮಾತ್ರ ಧರಿಸಿ ತನ್ನ ಸೌಂದರ್ಯವನ್ನು ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಕಾರಣ ಮನೆ ಸಂಪ್ರದಾಯ ಸಮಾಜದ ಕಟ್ಟುಪಾಡುಗಳಲ್ಲಿ ಬೆಳೆದ ಅವಳ ಹಿಂಜರಿಕೆಯ ಮನಸ್ಥಿತಿ. ಈ ಮನಸ್ಥಿತಿಯನ್ನು ಈ ಸಮಾಜ ಕುಟುಂಬ ರೂಪಿಸಿದೆ.

ಇದೇ ಮನಸ್ಥಿತಿಯಲ್ಲಿ ಅನೇಕ ಮಹಿಳೆಯರು ಧರಿಸಿ, ತಮ್ಮನ್ನು ತಾವು ನೋಡಿಕೊಂಡು ಕೊನೆಗೆ ಕೊಂಡುಕೊಳ್ಳಲು ಹಿಂಜರಿದ ಕಾರಣಕ್ಕಾಗಿಯೇ

"ಟ್ರಯಲ್ ರೂಮಿನ ಹ್ಯಾಂಗರುಗಳಲ್ಲಿ
ಹಾಗೆಯೇ ನೇತುಬಿದ್ದಿವೆ"

ಎಂದು ಹೇಳುತ್ತಾಳೆ. 'ಟ್ರಯಲ್ ರೂಮಿನ ಅಪ್ಸರೆ' ಎಂದು ಚಿತ್ರಿಸಲಾಗಿದೆ, ಅಲ್ಲಿ ಆಕೆಯು ಹೊಸ ಉಡುಪುಗಳನ್ನು ಪ್ರಯತ್ನಿಸುತ್ತಿರುವ ದೃಶ್ಯವು ಆಕೆಯ ಆಂತರಿಕ ಹೋರಾಟದ ಪ್ರತೀಕವಾಗಿದೆ. ತನ್ನಗಿಂತಲೂ ಮುಂಚೆ ತನ್ನ ಹಾಗೆ ಇಷ್ಟ ಪಟ್ಟು ತಂದು ಧರಿಸಿ ನೋಡಿಕೊಂಡ ಮಹಿಳೆಯಂತೆ ತಾನೂ ಕೂಡ ಈ ಹ್ಯಾಂಗರ್‌ಗೆ ಹಾಕುತ್ತಿದ್ದೇನೆ ಎಂಬ ಮತ್ತೊಬ್ಬ ಮಹಿಳೆಯ ಮಾನಸಿಕ ಸಂಟವು ವ್ಯಕ್ತಪಡಿಸುತ್ತಿದ್ದಾಳೆ. ಭುವನಾ ಹಿರೇಮಠ ಅವರ "ಟ್ರಯಲ್ ರೂಮಿನ ಅಪ್ಸರೆಯರು" ಕವನವು ಆಧುನಿಕ ಮಹಿಳೆಯರ ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದ ತಲ್ಲಣವನ್ನು ದಾರ್ಶನಿಕವಾಗಿ ಪ್ರತಿಬಿಂಬಿಸುತ್ತದೆ.

ಕೊನೆಗೆ ಹೀಗೆ ನಿರಾಸೆಯಿಂದ ಹ್ಯಾಂಗರ್‌ಗೆ ನೇತು ಹಾಕಿ ಹೋದ ಬಟ್ಟೆಗಳನ್ನು 'ನೀಳ ಬೆರಳಿನ ಸೇಲ್ಸ್ ಗರ್ಲ್ ಮುಟ್ಟಿ ಮುಟ್ಟಿ ಮಡಿಕೆ ಮಾಡಿ' ತೆಗೆದು ಇಡುತ್ತಾಳೆ ಇವತ್ತಲ್ಲ ನಾಳೆ ಇವುಗಳನ್ನು ಖರೀದಿಸುವವರು, ತೊಡುವವರು ಬಂದೆ ಬರುತ್ತಾರೆ ಎಂಬಂತೆ ಆಕೆ ಮಡಿ ಮಾಡಿ ಇಡುತ್ತಿದ್ದಾಳೆ.

"ಕೂಲಿಂಗ್ ಗ್ಲಾಸಿನ ಕಾರ್ಪೋರೇಟ್ ಹುಡುಗಿಯ
ಬೆಳ್ಳನೆಯ ಮೈಯ್ಯ ಮೇಲೆ
ಬಿಸಿಲು ಮುರಿಸಿದ ದಿನ
ಟುಲಿಪ್ ಮೊಗ್ಗು ಬಿರಿಯುವ ತನಕ"

ಹೀಗೆ ಕವಯತ್ರಿಯು ಮುಂದೆ ಅಂತಹ ಸ್ವಾತಂತ್ರದ ಕಾಲವನ್ನು ನಿರೀಕ್ಷೆಯಲ್ಲಿದ್ದಾಳೆ. ಆ ನಿರೀಕ್ಷೆಯು ನಗರದ ಕಾರ್ಪೋರೇಟ್ ಜಗತ್ತಿನ ಹುಡುಗಿಯಿಂದ ನೆರವೇರುತ್ತಿದೆ ಎಂಬುದನ್ನು ಆಕೆ ಹೇಳುತ್ತಾಳೆ.

"ಮನೆಯ ಕನ್ನಡಿಯಲ್ಲಿ
ಎಂದೂ ಅನಾವರಣಗೊಳ್ಳದ ಸುಂದರತೆ,
ಕಣ್ಣು ಮೂಗು ಗಲ್ಲದ ಮೇಲೊಂದು ನೇವರಿಕೆ
ಸ್ಪರ್ಶದಲ್ಲಿ ಕನ್ನಡಿಯ ಪರಕೀಯತೆ,"

ಹೊಸ ಸಾಂಸ್ಕೃತಿಕ ಬದುಕಿಗೆ ನಗರದ ತೆರೆದುಕೊಂಡಿದೆ. ಹುಡುಗಿ ಮನೆಯೊಳಗೂ ತನ್ನನ್ನು ತಾನೂ ನೋಡಿಕೊಂಡಿದ್ದಾಳೆ. ಆದರೆ ಆ ಕನ್ನಡಿಯೇ ಬೇರೆ ಈ ಕನ್ನಡಿಯೇ ಬೇರೆ. ಇಲ್ಲಿ ಕನ್ನಡಿ ಎಂಬುದು ಸಾಂಸ್ಕೃತಿಕ ಸಂಘರ್ಷದ ಕಟ್ಟುಪಾಡಿನ ರೂಪಕವನ್ನು ಸಂಕೇತಿಸುತ್ತದೆ. 'ಮನೆಯ ಕನ್ನಡಿಯಲ್ಲಿ ಎಂದೂ ಅನಾವರಣಗೊಳ್ಳದ ಸುಂದರತೆ' ಎಂಬ ಸಾಲು ಆಕೆಯ ನಿಜವಾದ ರೂಪವನ್ನು ಹುಡುಕಲು ಹೇಗೆ ಸಾಧ್ಯವಾಗುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ. ಆದರೆ ಆಧುನಿಕ ಕಾಲದ ನಗರದಲ್ಲಿ ಆ ಕನ್ನಡಿ ಬದಲಾಗಿದೆ ಎಂಬುದನ್ನು ಹೇಳುತ್ತಾಳೆ. ಕನ್ನಡಿಯಲ್ಲಿ ಬರುವ ಪ್ರತಿಫಲ, ಆಕೆಯ ಸತ್ಯ ಪರಿಯ ಅಂತರ್ಭಾವನೆಗಳನ್ನು ತೋರಿಸುವುದಿಲ್ಲ, ಬದಲಾಗಿ ಮನೆಯಲ್ಲಿ ಕಂಡ ರೂಪವನ್ನು ಸಂಘರ್ಷದ ನೆಲೆಯಲ್ಲಿ ಎದುಬದುರುಗೊಳಿಸುತ್ತದೆ.

ನಗರದ ಬದುಕಿನ ಹೊಸ ರಿತಿಯ ಉಡುಪಗಳಲ್ಲಿ ತನ್ನನ್ನು ನೋಡಿಕೊಂಡಾಗ ಅವಳಿಗೆ ತನ್ನ ಇನ್ನೊಂದು ಬದುಕಿನ ಸೌಂದರ್ಯದ ಗುಟ್ಟುಗಳು ತೆರೆದುಕೊಳ್ಳುತ್ತವೆ.

"ಮೊಣಕಾಲು ಬಿಟ್ಟು ಮೇಲೇರುವ ಸ್ಕರ್ಟುಗಳು
ವ್ಯಾಕ್ಸ್ ಮಾಡದ ಮೀನಖಂಡ ತೊಡೆಗಳು
ಯಾವ ಮಾಡೆಲ್ಲಿಗೂ ಕಡಿಮೆಯಿಲ್ಲ ನಾನು...
ಟ್ರಯಲ್ ರೂಮಿನ ರಾರಾಜಿತ ಸತ್ಯ
ಸೀಮೆಯೋಳಗೇ"

ತಾನು ಹಳ್ಳಿಯವಳಾದರೂ ನಗರದ ಕಾರ್ಪೋರೇಟ ಜಗತ್ತಿನ ವ್ಯಾಕ್ಸ್ ಮಾಡಿಕೊಂಡು ತಳುಕು ಬಳುಕಿನಲ್ಲಿರುವ ಹುಡುಗಿಯರಿಗಿಂತ ಕಡಿಮೆ ಇಲ್ಲ, ಯಾವ ಮೊಡೆಲ್ಲಿಗೂ ಕಡಿಮೆ ಇಲ್ಲ ಎಂಬ ಸೌಂದರ್ಯದ ಅರಿವು ಅವಳಲ್ಲಿ ಮೂಡುತ್ತದೆ, ಜೊತೆಗೆ ಇಷ್ಟೊಂದು ಸೌಂದರ್ಯ ಮನೆಯ ಕನ್ನಡಿಯಲ್ಲಿ ಯಾಕೆ ಕಾಣಿಸಿಲ್ಲ, ಕಾಣಿಸಲು ಬಿಟ್ಟಿಲ್ಲ ಎಂಬುದರ ಮೂಲಕ ಸಂಪ್ರದಾಯಗಳ ಹೆಸರಲ್ಲಿ ರೀರಿ ನೀತಿಯ ಹೆಸರಲ್ಲಿ ಇಂತಹದ್ದನ್ನೆ ಹೆಣ್ಣು ಮಕ್ಕಳು ತೊಡಬೇಕು ಉಡಬೇಕು ಎಂಬ ಕಟ್ಟುಪಾಡನ್ನು ತಣ್ಣಗೆ ಅಸಾಹಯಕತೆಯಲ್ಲಿಯೇ ಪ್ರಶ್ನಿಸುತ್ತಿದ್ದಾಳೆ.

"ಮನಸು ಕನ್ನಡಿ ನಮ್ಮ ಬೆನ್ನ ಹಿಂದೆ ಬರಲಾರವು
ನಾವೆಲ್ಲ ಟ್ರಯಲ್ ರೂಮಿನ ಅಪ್ಸರೆಯರು
ವಯಸ್ಸು ಹೋದ ಹರೆಯವ ಬಡಿದೆಬ್ಬಿಸುವ
ಸ್ವೀಟ್ ಬಾಯ್ **"ಲುಕಿಂಗ್ ಸ್ಮಾರ್ಟ್...'**
ಎನ್ನುತ್ತ ಗಾಳಿಯ ಹೆಗಲ ಮೇಲೆ ಕೈ ಹಾಕಿ
ಚೂರು ಚೂರು ಸುಗಂಧವ ಬಿತ್ತುತ್ತಾ ನಡೆದಿದ್ದಾನೆ"

ಟ್ರಯಲ್ ರೂಮಿನ ಕನ್ನಡಿಗಳು ತಮ್ಮ ಮನೆಯಲ್ಲಿರುವ ಕನ್ನಡಿಗಳು ನಗರ ಮತ್ತು ಹಳ್ಳಿಯ ಸಂಸ್ಕೃತಿಯನ್ನು ಬಿಂಬಿಸುವಂತಹವು. ಅವುಗಳ ನಡುವೆ ಇರುವ ಸಂಗರ್ಷ ಕಂದಕ, ಭಿನ್ನತೆಗಳನ್ನು ಸಂಕೇತಿಸುವಂತಹವು. ನಗರದ ಟ್ರಯಲ್ ರೂಮಿನಲ್ಲಿನ ಕಂಡದ್ದು ಬದಲಾಗಬೇಕಿದ ಬದುಕಿನ ಸ್ಥಿತಿಗತಿಗಳನ್ನು ಆ ರೂಮಿನ ಕನ್ನಡಿಗಳು ತೋರಿದ ಸಅವರ ನಿಜವಾದ ಸ್ವಾತಂತ್ರದ ಕಣ್ಣುಗಳು, ದೈರ್ಯದ ನೆರಳುಗಳು ನಮ್ಮ ಹಿಂದೆ ಬರುವುದಿಲ್ಲ ಎಂದು ಹೇಳುತ್ತಿದ್ದಾಳೆ. ಜೊತೆಗೆ ಹೊರಗಿನ ಜಗತ್ತಿನ್ನು ಎದುರಿಸಲು ಹಿಂಜರಿಕೆಯೂ ಇಲ್ಲಿ ಕಾಣುತ್ತದೆ. ಹಾಗಾಗಿಯೇ ಅವರು ಆ ರೂಮಿನ ಒಳಗಿನ ಅಪ್ಸರೆಯರಾಗಿ ಉಳಿಯುವ ದುರಂತಕ್ಕೆ ಒಳಗಾಗುತ್ತಾರೆ. ಆದರೆ ತಮ್ಮಂತೆ ವಯಸ್ಸಿನ ಹರೆಯ ತುಂಬಿದ ನಗರದ ಹುಡುಗಿಯರು ಯಾವುದೆ ಕುಟುಂಬ ಸಮಾಜದ ಕಟ್ಟಳೆಗಳಿಲ್ಲದ ತಮ್ಮ ಸ್ವೇಚ್ಛದ ಬದಯುಕನ್ನು ಅನುಭವಿಸುತ್ತಿರುವುದು, ಅವರನ್ನು ಹೂಗಳನ್ನು ಮುತ್ತುವ ದುಂಬಿಗಳಂತೆ ಹುಡುಗರು ಸುತ್ತುತ್ತಾರೆ. ಆದರೆ ಹಳ್ಳಿಯ ಹುಡುಗಿ/ಮಹಿಳೆ ಮಾತ್ರ ನಗರದಲ್ಲಿಯೇ ಇದ್ದು, ನಗರದಲ್ಲಿಯೇ ವೃತ್ತಿಯನ್ನು ಮಾಡಿಕೊಂಡು ಬದುಕನ್ನು ನಡೆಸುತ್ತಿದ್ದರೂ ತಾವು ಒಂದು

"ಕಾರ್ಪೋರೇಟ್ ಕಾಡು ಹೊಕ್ಕ
ಅಜ್ಞಾತ ಜಿಂಕೆಮರಿಗಳು ನಾವು"

ಜಿಂಕೆಯಂತೆ ಬದುಕನ್ನು ನಡೆಸುವ ಸ್ಥಿತಿಯಲ್ಲಿ ಉಳಿದಿದ್ದಾರೆ. ಕಾರ್ಪೋರೇಟ್ ಕಾಡು ಹೊಕ್ಕ' 'ಅಜ್ಞಾತ ಜಿಂಕೆ ಮರಿಗಳೆಂಬ' ರೂಪಕಗಳು ನಗರದಲ್ಲಿಯೇ ಇದ್ದರೂ ನಗರದ ಬದುಕು, ಅಂದರೆ ನಗರ ಶೈಲಿಯ ಉಡುಪು, ತಮ್ಮ ಸೌಂದರ್ಯಕ್ಕೆ ತಕ್ಕ ಉಡುಪುಗಳನ್ನು ದರಿಸಲು ಸಾಧ್ಯವಾಗದೆ, ತಮ್ಮ ಹಳ್ಳಿಯ ಪುರುಷ ಮತ್ತು ಕೌಟಂಬಿಕ ಸಮಾಜ ಒಪ್ಪಿಸಿದ ರೀತಿಯಲ್ಲಿಯೇ ಬದುಕುತ್ತಿರುವುದು ತಮ್ಮ ಅಸ್ತಿತ್ವವೇ ಕಾಣದಂತೆ ಉಳಿಯುವಂತಹ ಪರಿಸ್ಥಿತಿಗೆ ಒಳಗಾಗಿರುವುದನ್ನು ತೋರಿಸುತ್ತದೆ. ಆಧುನಿಕ ಉಡುಪುಗಳು ಮಹಿಳೆಯ ವೃತ್ತಿಪರ ಬದುಕಿನ ಒಂದು

ಅವಿಭಾಜ್ಯ ಭಾಗವಾಗಿದೆ, ಆದರೆ ಅವು ಆಕೆಯನ್ನು ಶಾರೀರಿಕವಾಗಿ ಮಾತ್ರವಲ್ಲ, ಮಾನಸಿಕವಾಗಿ ಸಹ ಒತ್ತಡಕ್ಕೊಳಗಾಗುವಂತೆ ಮಾಡುತ್ತವೆ. "ಕಾರ್ಪೋರೇಟ್ ಕಾಡು" ಎಂಬುದು ಆಧುನಿಕ ಉದ್ಯಮ ಪ್ರಪಂಚದ ಕಟುಸತ್ಯದ ಪ್ರತೀಕವಾಗಿದೆ. ಕಾಡು ಅಜ್ಞಾತ, ಅಸಮಾನ, ಮತ್ತು ಅಪಾಯಕಾರಿ ಪರಿಸರವನ್ನು ಸೂಚಿಸುತ್ತದೆ, ಇಲ್ಲಿ ಜೀವಿಗಳು ತಮ್ಮ ಬದುಕಿಗಾಗಿ ಹೋರಾಡುತ್ತವೆ. ಮಹಿಳೆಯರು ಕಾರ್ಪೋರೇಟ್ ಜೀವನದಲ್ಲಿ ಈ ರೀತಿಯ ಹೋರಾಟವನ್ನು ಎದುರಿಸುತ್ತಿದ್ದಾರೆ ಸಾಮಾಜಿಕ ನಿರೀಕ್ಷೆಗಳ, ಬಾಹ್ಯ ಸೌಂದರ್ಯದ ಮಾನದಂಡಗಳ, ಮತ್ತು ವೃತ್ತಿಪರ ಯಶಸ್ಸಿನ ಒತ್ತಡದ ನಡುವೆ. ಈ 'ಕಾಡು'ವು ಕೇವಲ ಭೌತಿಕವಾಗಿ ಅಸಹಾಯಕತೆಯನ್ನು ಹೇಳುವುದಲ್ಲ, ಅದು ಮಾನಸಿಕ ಮತ್ತು ಸಾಂಸ್ಕೃತಿಕ ಒತ್ತಡಗಳನ್ನು ಸಹ ಪ್ರತಿನಿಧಿಸುತ್ತದೆ.

*****

ಒಟ್ಟಿನಲ್ಲಿ ಎಲ್ಲರ ಕಣ್ಣುಗಳನ್ನು ಸೆಳೆಯುತ್ತ ಸ್ವೇಚ್ಛೆಯಿಂದ ಬದುಕು ನಡೆಸಬೇಕಾದ ಮಹಿಳೆ ತನ್ನ ಸ್ವಾತಂತ್ರ್ಯವನ್ನು ಬದುಕಿನ ಎಲ್ಲ ಕುಷಿಯ ಕ್ಷಣಗಳನ್ನು ಕಳೆದುಕೊಂಡು ಬದುಕು ಸಾಗಿಸಬೇಕಾದ ಒತ್ತಡಕ್ಕೆ ಈ ಆಚಾರ ಸಂಪ್ರದಾಯಗಳು ತಳ್ಳಿವೆ ಎಂದು ಈ ಸಾಲುಗಳು ವ್ಯಕ್ತಪಡಿಸುತ್ತವೆ. ಈ ಕೊನೆಯ ಸಾಲಲ್ಲಿ ಮಹಿಳೆಯ ಆತ್ಮದ ನರಳುವಿಕೆಯಿದೆ. ತಮ್ಮ ಯೌವ್ವನದ ಬದುಕು ಅನುಭವಿಸಲು ಸಾಧ್ಯವಾಗದಕ್ಕೆ ತಮ್ಮನ್ನು ಯಾರಿಗೂ ಏನನ್ನು ಮಾಡದ ಸಾದು ಜಿಂಕೆ ಮರಿಗಳಿಗೆ ಹೋಲಿಸಕೊಳ್ಳುವುದರ ಮೂಲಕ ಹೀಗೆ ಈ ಹಳ್ಳಿಯ ಮಹಿಳೆಯರ ಸ್ಥಿತಿ ಎಂದು ವ್ಯಕ್ತಪಡಿಸುತ್ತಾರೆ. ತಾವು ಹಳ್ಳಿಯಿಂದ ಬಂದವರು, ಬೆಳೆದವರು. ಹೀಗೆ ಇರಬೇಕು ಹೀಗೆ ನಡೆದುಕೊಳ್ಳಬೇಕು. ಇಲ್ಲದಿದ್ದರೆ ಯಾವುದೋ ಸಾಂಪ್ರದಾಯದ ಮನುಷ್ಯತ್ವವಿಲ್ಲದ ಮೃಗಕ್ಕೆ ಜಿಂಕೆಯಂತೆ ತುತ್ತಗಬೇಕಾಗುತ್ತದೆ ಎಂಬ ಭಯವು ಅಜ್ಞಾತವಾಗಿ ಉಳಿಯುವಂತೆ ಮಾಡುತ್ತದೆ ಎಂಬುದನ್ನು ಹೇಳುತ್ತ ಕವನ ಮುಕ್ತಾಯವಾಗುತ್ತದೆ.

ಪರಾಮರ್ಶನ ಗ್ರಂಥಗಳು :

1. ಟ್ರಯಲ್ ರೂಮಿನ ಅಪ್ಸರೆಯರು., ಭುವನಾ ಹಿರೇಮಠ., 2018
2. ರಾಘವೇಂದ್ರರಾವ್ ಎಚ್. ಎಸ್– ಸಂ, ಶತಮಾನದ ವಿಮರ್ಶೆ,2022, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು
3. ಆಶಾದೇವಿ ಎಂ. ಎಸ್, ಬೆಳಕಿಗಿಂತ ಬೆಳ್ಳಗೆ, 2016, ಸಾಹಿತ್ಯ ಅಕಾದೆಮಿ.

4. ಆಮೂರ ಜಿ. ಎಸ್., ಕೊರಳು ಕೊಳಲು, 2005, ಪ್ರಿಯದರ್ಶಿನಿ ಪ್ರಕಾಶನ
5. ಉಷಾರಾಣಿ ಟಿ. ಎಂ. 2016. ಮಹಿಳಾ ಸಾಹಿತ್ಯ ಅಭಿವ್ಯಕ್ತಿವಾದ ತಾತ್ವಿಕ ಸ್ವರೂಪ. ಪಲ್ಲವ ಪ್ರಕಾಶನ ಚನ್ನಪಟ್ಟಣ.
6. ದೇಶಮಾನೆ ಸಮತಾ ಬಿ. 2003. ಸಮಾಜ ಶಾಸ್ತ್ರ ಮತ್ತು ಮಹಿಳೆ. ಚೇತನ್ ಬುಕ್ ಹೌಸ್ ಮೈಸೂರು.

***

ನಾಟ್ಯಾಣ್ವಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕಾ ಪ್ರಯೋಗ

(ಸ್ವ-ಪರಿಚಯ ಚಟುವಟಿಕೆಯನ್ನು ಅನುಲಕ್ಷಿಸಿ)

ದಿವಾಕರ ಜೆ.
ಸಂಶೋಧನಾರ್ಥಿ
ಪ್ರದರ್ಶನ ಕಲಾ ವಿಭಾಗ
ಪ್ರ. ಕಲಾ ವಿ. ಬೆಂ.ವಿ.ವಿ.
ಬೆಂಗಳೂರು ವಿಶ್ವವಿದ್ಯಾಲಯ.

ಡಾ. ಶಿವಣ್ಣ ಎಸ್.
ಮಾರ್ಗದರ್ಶಕರು
ಸ. ಪ್ರಾಧ್ಯಾಪಕರು,
ಪ್ರದರ್ಶನ ಕಲಾ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ.

ಸಂಪನ್ಮೂಲ ವ್ಯಕ್ತಿಗಳು : ನಾ. ಶ್ರೀನಿವಾಸ, ರಾಧ ಕೊಡಗು ಕ್ಯಾಟ್ಸ್ ಸಂಸ್ಥೆ, ಮೈಸೂರು.

ಪೀಠಿಕೆ:

ನಾಟಕಗಳಲ್ಲಿ ನಿರೂಪಣೆ ಮಾಡುವ ಸೂತ್ರಧಾರ ತನ್ನ ಪರಿಚಯ ಮಾಡಿಕೊಳ್ಳುವ ವಿಚಾರದಲ್ಲಿನ ಅಣು-ಅಂಶವನ್ನು ತೆಗೆದುಕೊಂಡು ಜೊತೆಗೆ ಭಾವನಾತ್ಮಕ ಸಂಬಂಧದ ಎಳೆಯನ್ನು ಹಿಡಿದು ಈ ಚಟುವಟಿಕೆ ರೂಪಿಸಲಾಗಿದೆ. ವಿದ್ಯಾರ್ಥಿಗಳ ಸ್ವ-ಪರಿಚಯದಲ್ಲಿನ ಭಾವುಕಾಂಶಗಳನ್ನು ಅವರ ಪಠ್ಯದಲ್ಲಿನ ಬೌದ್ಧಿಕಾಂಶಗಳ ಜೊತೆ ಸಂಬಂಧ ಕಲ್ಪಿಸಿ, ಪಠ್ಯದ ಮೇಲೆ ಮಾಲಿಕತ್ವ ಹೊಂದುತ್ತಾ ತಮ್ಮ ಅಭ್ಯಾಸವನ್ನು ಆಸಕ್ತಿಯಿಂದ ಮುಂದುವರೆಸಲು ಸಹಾಯ ಮಾಡುವುದು ಪ್ರಸ್ತುತ ಚಟುವಟಿಕೆಯ ಪ್ರಮುಖಾಂಶವಾಗಿರುತ್ತದೆ. ಇದನ್ನು ಪರೀಕ್ಷಿಸಲು ಮೈಸೂರಿನ ಕ್ಯಾಟ್ಸ್ ಸಂಸ್ಥೆಯ ರಂಗಸಂಪನ್ಮೂಲ ವ್ಯಕ್ತಿಗಳಾದ ನಾ. ಶ್ರೀನಿವಾಸ ಮತ್ತು ಸಂಸ್ಥೆಯ ಕಾರ್ಯಕ್ರಮ ನಿರ್ದೇಶಕರಾದ ಶ್ರೀಮತಿ ರಾಧಾ ಕೊಡಗು ಅವರು ಪ್ರಯೋಗಕಾರರಾಗಿ, ಬಳ್ಳಾರಿ ಜಿಲ್ಲೆ, ಸಿರುಗುಪ್ಪ ತಾಲ್ಲೂಕು, ಸಿರಿಗೇರಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಎಂಟನೆ ತರಗತಿಯ 50 ವಿದ್ಯಾರ್ಥಿಗಳನ್ನು ಪ್ರಯೋಗಕ್ಕೆ ಒಳಪಡಿಸಿ, ಅಧ್ಯಯನ ಮಾಡಿ ಸಂಶೋಧಿಸಿದ ವಿಷಯಗಳನ್ನು ಈ ಮುಂದಿನಂತೆ ತಿಳಿಸಲಾಗಿದೆ.

ಪ್ರಮುಖ ಪದಗಳು : ಸ್ವ-ಪರಿಚಯ, ನಾಟ್ಯಾಣ್ವಾಂಶ, ಬೌದ್ಧಿಕಾಂಶ, ಭಾವುಕಾಂಶ, ಕಲಿಕಾಮಾರ್ಗ, ಪ್ರಯೋಜ್ಯನರು, ಪ್ರಯೋಗಕಾರ, ಭಾಷಾ ಕೌಶಲ, ಶ್ರೇಣಿ ಮಾನಕ, ಕೋಷ್ಟಕ, ರೇಖಾಚಿತ್ರ

ಅಧ್ಯಯನದ ಉದ್ದೇಶ :

ಪ್ರಸ್ತುತ ಲೇಖನವು ಸಾಮಾನ್ಯ ಉದ್ದೇಶಗಳೊಂದಿಗೆ ಪ್ರಮುಖವಾಗಿ ಕನ್ನಡ ಭಾಷಾ ಕೌಶಲಗಳನ್ನು ವಿದ್ಯಾರ್ಥಿಗಳಲ್ಲಿ ಬೆಳಸುವುದಾಗಿದೆ ಅದರ ಜೊತೆಗೆ ಈ ಕೆಳಕಂಡ ನಿರ್ದಿಷ್ಟ ಉದ್ದೇಶಗಳನ್ನು ಒಳಗೊಂಡಿದೆ.

n ನಾಟ್ಯಾಣ್ವಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕೆಯ ಉದ್ದೇಶಗಳನ್ನು ತಿಳಿಯುವುದು.

n ಕನ್ನಡ ಭಾಷಾ ಪಠ್ಯದಲ್ಲಿನ ಬೌದ್ಧಿಕಾಂಶಗಳನ್ನು ಕಲಿಕಾರ್ಥಿಗಳ ಭಾವುಕಾಂಶಗಳ ಜೊತೆ ಸಂಬಂಧ ಕಲ್ಪಿಸಿ, ಅಭಿವ್ಯಕ್ತಿ ಸಾಮರ್ಥ್ಯ ಅಥವಾ ಕೌಶಲವನ್ನು ಪೋಷಿಸುವುದು.

ಅಧ್ಯಯನದ ಸ್ವರೂಪ ಮತ್ತು ವಿಧಾನ :

ಪ್ರಸ್ತುತ ಲೇಖನವು ಸಂಶೋಧನಾ ಅಧ್ಯಯನದ ವೈಧಾನಿಕಗಳನ್ನು ಅನುಸರಿಸಿ, ರಂಗಭೂಮಿಯ ಅಂಶಗಳನ್ನು ಅಣುರೂಪದಲ್ಲಿ ಗ್ರಹಿಸಿ, ಪ್ರಯೋಗಾತ್ಮಕ ವಿಧಾನದ ಮೂಲಕ ಎಂಟನೆ ತರಗತಿ ಮಕ್ಕಳ ಭಾಷಾ ಕೌಶಲಗಳ ಕಲಿಕೆಗೆ ಪೂರಕವಾಗುವಂತಹ ಅಂಶಗಳನ್ನು ಚರ್ಚಿಸುತ್ತದೆ. ಮತ್ತು ಮಕ್ಕಳ ಭಾಷಾ ಕೌಶಲಗಳ ಕಲಿಕಾಸಕ್ತಿಗೆ ಬುನಾದಿಯಾಗಿರುವ ಸ್ವ-ಪರಿಚಯ ಚಟುವಟಿಕೆ ವಿವಿಧ ಹಂತಗಳನ್ನು ತಿಳಿಸುತ್ತಾ ತೌಲನಿಕ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ.

ಈ ಲೇಖನವು ಪ್ರಾಯೋಗಿಕ ವಿಧಾನದ ಜೊತೆಗೆ ಮಾಧ್ಯಮಿಕ ಮೂಲಗಳಿಂದ ಸಂಗ್ರಹಿಸಿದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಮಾಧ್ಯಮಿಕ ಮೂಲಗಳಾದ ಭಾಷೆ, ಕನ್ನಡ ಭಾಷಾ ಕೌಶಲಗಳು, ರಂಗಭೂಮಿ, ನಾಟಕ ಕಲೆ, ರಂಗ ಪ್ರಯೋಗಕ್ಕೆ ಸಂಬಂಧಿಸಿದ ಸಂಶೋಧನಾ ಲೇಖನ ಪ್ರಬಂಧಗಳು, ಕೃತಿಗಳು, ನಾಟಕ ಕಲೆಯ ವಿಮರ್ಶಾತ್ಮಕ ಲೇಖನಗಳು, ಹಾಗೂ ಅಂತರ್ಜಾಲ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ :

ಈ ಅಧ್ಯಯನವು ಕನ್ನಡ ಭಾಷಾ ಕೌಶಲಗಳ ಕಲಿಕೆಗೆ ಪೂರಕವಾಗುವಂತಹ ನಾಟಕಕಲೆಯ ನಾಟ್ಯಾಧಾರಾಂಶಗಳ ಸಾರ ಕುರಿತು ಚರ್ಚಿಸುತ್ತದೆ. ನಾಟಕ ಕಲೆಯ ಪ್ರಾಯೋಗಿಕ ಅಣು-ಅಂಶಗಳ ಮುಖೇನ ಭಾಷಾ ಕೌಶಲಗಳ ಕಲಿಕೆಗೆ ಪೂರಕವಾಗುವಂತಹ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ನಾಟಕಕಲೆಯಲ್ಲಿರುವ

ನಾಟ್ಯಾಂಶಗಳಾದ ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕ, ಮತ್ತು ರಸಭಾವಾಂಶಗಳ ಅಳವಡಿಕೆ ಉದ್ದೇಶದೊಂದಿಗೆ ಭಾಷಾ ಕೌಶಲಗಳ ಕಲಿಕಾಸಾಧ್ಯತೆಗಳನ್ನು ಗುರುತಿಸಿಕೊಳ್ಳುವುದು. ಹಾಗೂ ವಿದ್ಯಾರ್ಥಿಗಳ ಭಾವುಕಾಂಶಗಳನ್ನು ಅವರ ಪಠ್ಯದಲ್ಲಿನ ಬೌದ್ಧಿಕಾಂಶಗಳ ಜೊತೆಗೆ ಸಂಬಂಧ ಕಲ್ಪಿಸಿ, ಪಠ್ಯವಿಷಯಗಳ ಮೇಲೆ ಮಾಲಿಕತ್ವ ಸಾಧಿಸಲು ಪ್ರೇರಣೆ ನೀಡುವುದು. ಇದನ್ನು ಪರೀಕ್ಷಿಸಲು ಬಳ್ಳಾರಿ ಜಿಲ್ಲೆಯ 8ನೇ ತರಗತಿಯಲ್ಲಿ ಓದುತ್ತಿರುವ 50 ವಿದ್ಯಾರ್ಥಿಗಳಿಗೆ ನಾಟಕ ಕಲೆಯ ಪ್ರಾಯೋಗಿಕ ಅಣು–ಅಂಶಗಳ ಕಾರ್ಯಗಾರವನ್ನು ಹಮ್ಮಿಕೊಂಡು, ಪ್ರಯೋಗಕ್ಕೆ ಅಳವಡಿಸಿ, ವಿಶ್ಲೇಷಣೆ, ಕಾರಣ ಮತ್ತು ಪರಿಣಾಮಗಳನ್ನು ತುಲನೆ ಮಾಡುತ್ತಾ ಅಧ್ಯಯನ ಮಾಡುವ ವ್ಯಾಪ್ತಿಯನ್ನು ಹೊಂದಿದೆ.

ಇದುವರೆಗೂ ನಡೆದ ಅಧ್ಯಯನಗಳು :

ವಿದೇಶದಲ್ಲಿ ಮತ್ತು ನಮ್ಮ ದೇಶದಲ್ಲಿ ನಡೆದ ಅಧ್ಯಯನಗಳನ್ನು ಗಮನಿಸಿದರೆ ಭಾಷೇತರ ವಿಷಯಗಳಿಗೆ ಸಂಬಂಧಿಸಿದಂತೆ ಕೌಶಲಗಳನ್ನು ಕುರಿತಾಗಿ ಅಧ್ಯಯನಗಳು ನಡೆದಿದೆ. ಎಲ್ಲಾ ಅಧ್ಯಯನಗಳಲ್ಲಿ ಉಪಕ್ರಮ ಪರಿಣಾಮವಾಗಿ ಧನಾತ್ಮಕ ಅಂಶಗಳನ್ನು ಸಾಧಿಸಿರುವುದು ಕಂಡು ಬಂದಿದೆ. ಭಾಷಾ ವಿಚಾರಗಳ ಬಗ್ಗೆ ವಿದೇಶ ಮತ್ತು ಭಾರತದ ಶೈಕ್ಷಣಿಕ ರಂಗದಲ್ಲಿ ಇಂಗ್ಲೀಷ್, ಸಂಸ್ಕೃತ, ಹಿಂದಿ ಭಾಷೆಗೆ ಸಂಬಂಧಿಸಿದಂತೆ ಭಾಷಾ ಕಲಿಕೆ ಕುರಿತಾಗಿ ಅಧ್ಯಯನಗಳು ನಡೆದಿದೆ. ಕನ್ನಡ ಮಾಧ್ಯಮದಲ್ಲಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ ಅನೇಕ ಸಂಶೋಧನೆಗಳು ನಡೆದರೂ ನಾಟ್ಯಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕೆ (ಸ್ವ–ಪರಿಚಯ ಚಟುವಟಿಕೆಯನ್ನು ಅನುಲಕ್ಷಿಸಿ) ಯಾವುದೇ ಸಂಶೋಧನಾ ಪ್ರಯೋಗಗಳು ನಡೆದಿರುವುದು ಕಂಡು ಬಂದಿರುವುದಿಲ್ಲ. ಹಾಗಾಗಿ ಪ್ರಸ್ತುತ ಸಂಶೋಧನಾ ಅಧ್ಯಯನವನ್ನು ಕೈಗೊಳ್ಳಲು ನಿರ್ಧರಿಸಲಾಯಿತು.

ನಾಟಕಕಲೆಯ ಅಣ್ವಾಂಶಗಳ ಮೂಲಕ ಭಾಷಾ ಕೌಶಲಗಳ ಕಲಿಕೆ :

ನಾಟಕ ಸಂಕೀರ್ಣ ಕಲೆಯಾಗಿರುವುದರಿಂದ ಈ ಕಲೆಯ ಕಲಿಕಾಂಶಗಳನ್ನು ಅಣು ಅಂಶಗಳ ರೂಪದಲ್ಲಿ ಗ್ರಹಿಸಿ ವಿವಿಧ ಕ್ಷೇತ್ರಗಳ ಸಂವಹನಾ ಸಾಮರ್ಥ್ಯವನ್ನು ಪರಿಣಾಮಕಾರಿಯಾಗಿ ಉತ್ತಮಗೊಳಿಸಲು ನಾಟಕ ಅಣು–ಅಂಶಗಳ ಕಲಿಕಾ ಮಾದರಿ ರೂಪಿಸಲಾಗಿದೆ. ಸಂಗತಿಗಳು ಮತ್ತು ಘಟನೆಗಳನ್ನು ಗುರುತಿಸಲು ಹಾಗೂ ಅವುಗಳ ನಡುವೆ ಇರುವ ಸಂಬಂಧಗಳನ್ನು ಹುಡುಕಲು; ಭಾಷೆಯನ್ನು ಕಲಿಯುವವರಿಗೆ ನಿಜ ಜೀವನದ ಸ್ಥಿತಿ ಮತ್ತು ಅನುಭವಗಳನ್ನು ಗಳಿಸಲು ಅನುಕೂಲವಾಗುವಂತಹ ನಕಲುರೂಪಗಳನ್ನು ಸೃಷ್ಟಿಸಿಕೊಳ್ಳಲು ಈ ನಾಟಕ ಅಣುಅಂಶಗಳ ಕಲಿಕಾ ಮಾದರಿ ಸಹಾಯ ಮಾಡುತ್ತದೆ. ಹೀಗಾಗಿ ಯಾವುದೇ ಕ್ಷೇತ್ರದ ಕಲಿಕಾರ್ಥಿಗಳಿಗೆ ಅವರು

ತಮ್ಮ ಭಾವನೆಗಳ ಅಭಿವ್ಯಕ್ತಿ ಮತ್ತು ಸಂವಹನವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಹೊರ ಹಾಕಲು ನಾಟಕ ರೂಪದ ಆಟವು ಅಥವಾ ಆಟ ರೂಪದ ನಾಟಕವು ಶಕ್ತಿ ನೀಡುತ್ತದೆ.

ಸ್ವ-ಪರಿಚಯ ಚಟುವಟಿಕೆ :

ಸ್ವ-ಪರಿಚಯ ಹೆಸರೆ ಸೂಚಿಸುವಂತೆ ಪ್ರಯೋಗಕ್ಕೆ ಒಳಪಡುವ ವ್ಯಕ್ತಿ ತನ್ನ ವೈಯಕ್ತಿಕ ಪರಿಚಯ ವಿವರಗಳನ್ನು ಪ್ರಸ್ತುತಪಡಿಸುವುದಾಗಿದೆ, ಅಂದರೆ ತನ್ನ ಹೆಸರಿನಿಂದ ತನಗೆ ಇಷ್ಟವಾಗುವ ವಸ್ತುಗಳ, ವ್ಯಕ್ತಿಗಳ ಹೆಸರಿನ ವರೆಗೆ ಒಂದು ಬಿಳಿಹಾಳೆಯಲ್ಲಿ ಬರೆದುಕೊಂಡು, ಆಯ್ಕೆ ಮಾಡಿಕೊಂಡ ಪಾಠದಲ್ಲಿರುವ ಪದಗಳಿಗೆ ಭಾವನಾತ್ಮಕ ಸಂಬಂಧವನ್ನು ಬೆಸೆಯುವುದಾಗಿದೆ.

ಪ್ರಯೋಗ: ಭಾಷಾ ಕೌಶಲಗಳ ಕಲಿಕೆಯಲ್ಲಿ ಸ್ವ-ಪರಿಚಯ (ಸಮೂಹ ಪ್ರಯೋಗ)

ಪ್ರಯೋಗ ಕೈಗೊಂಡ ದಿನಾಂಕ: 29-12-2023

ವಾರ: ಶುಕ್ರವಾರ

ಸ್ಥಳ: 8ನೇ ತರಗತಿ ಕೊಠಡಿ, ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸಿರಿಗೇರಿ.

ಪ್ರಯೋಗಕಾರರ ಹೆಸರು: ನಾ. ಶ್ರೀನಿವಾಸ, ಶ್ರೀಮತಿ ರಾಧಾ ಕೊಡಗು

ಪ್ರಯೋಗಕ್ಕೆ ಒಳಪಡಿಸಿದ ಗುಂಪು: 8ನೇ ತರಗತಿಯ 50 ವಿದ್ಯಾರ್ಥಿಗಳು

ಪ್ರಯೋಗಕ್ಕೆ ತೆಗೆದುಕೊಂಡ ಸಮಯ: 15 ರಿಂದ 20 ನಿಮಿಷಗಳು

ಗುರಿ: ನಾಟಕ ಪ್ರಕ್ರಿಯೆಯ ಅಣು-ಅಂಶವಾದ ಕ್ರಿಯೆಯ ಮೂಲಕ ಭಾಷಾ ಕೌಶಲಗಳ ಕಲಿಕೆ

ಪ್ರಯೋಗದ ಕಾರ್ಯಾಗಾರಗಳ ಸಂಖ್ಯೆ: ಒಂದು (2 ಹಂತದ ಚಟುವಟಿಕೆ)

ಬೇಕಾದ ಸಲಕರಣೆಗಳು: ನಿಲುಗಡಿಯಾರ, 8ನೇ ತರಗತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ, ಒಂದು ಅಭ್ಯಾಸ ಪುಸ್ತಕ, ಒಂದು ಲೇಖನಿ, ಕಾಲು ಭಾಗ ಬಿಳಿ ಹಾಳೆ, ಗುಂಡು ಪಿನ್ನು.

ಪ್ರಯೋಗದ ವಿಧಾನ: ಎಲ್ಲಾ ವಿದ್ಯಾರ್ಥಿಗಳನ್ನು ವೃತ್ತಕಾರ ಕುಳ್ಳಿರಿಸಿ, ಪ್ರಯೋಗಕಾರನು ಪ್ರಯೋಗ ಕೈಗೊಳ್ಳುವುದು.

ಮುನ್ನೆಚ್ಚರಿಕೆಗಳು :

- ಈ ಎಲ್ಲಾ ಹಂತಗಳಲ್ಲಿ ಪ್ರಯೋಜ್ಯನರು, ಪ್ರಯೋಗಕಾರನ ಸೂಚನೆಗಳನ್ನು ಸರಿಯಾಗಿ ಪಾಲಿಸತಕ್ಕದ್ದು.
- ಪ್ರಯೋಗವನ್ನು ಆರಂಭಿಸಿದ ಮೇಲೆ ಪ್ರಯೋಜ್ಯನರಿಗೆ ಮಧ್ಯದಲ್ಲಿ ಯಾವುದೇ

ಅಡೆತಡೆಯನ್ನುಂಟು ಮಾಡಬಾರದು.

ಸ್ವ–ಪರಿಚಯ ಚಟುವಟಿಕೆ ಹಂತಗಳ ಪಕ್ಷಿನೋಟ

ಕ್ರ. ಸಂ.	ಹಂತಗಳು	ತೆಗೆದುಕೊಂಡ ಸಮಯ
0	ಪೂರ್ವಸಿದ್ಧತೆ	60 ಸೆಕೆಂಡುಗಳು
1	ಸ್ವಪರಿಚಯ	120 ಸೆಕೆಂಡುಗಳು
2	ಪದಗಳ ಹುಡುಕಾಟ	600 ಸೆಕೆಂಡುಗಳು
0	ಮುಕ್ತಾಯ	60 ಸೆಕೆಂಡುಗಳು
		ಒಟ್ಟು 840 ಸೆಕೆಂಡುಗಳು


ಪೂರ್ವಸಿದ್ಧತೆ : ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಅರಾಮಸ್ಥಿತಿಯಿಂದ ಎಚ್ಚರದ ಸ್ಥಿತಿಗೆ ಬರುವಂತೆ ಸೂಚನೆ ನೀಡುವುದು. ಎಲ್ಲರೂ ಒಂದು ಗದ್ಯ ಅಥವಾ ಪದ್ಯಪಾಠವನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸುವುದು. ಹಂತ ಒಂದು: ಈ ಹಂತದಲ್ಲಿ ವಿದ್ಯಾರ್ಥಿ ಸ್ವಪರಿಚಯ ಬರೆದುಕೊಳ್ಳುವಂತೆ ಸೂಚಿಸುವುದು. ಹಂತ ಎರಡು: ಸ್ವಪರಿಚಯ ಬರೆದುಕೊಂಡ ಮೇಲೆ ಸ್ವಪರಿಚಯದ ಹೆಸರಿನ ಅಕ್ಷರಗಳಿಂದ ಪ್ರಾರಂಭವಾಗುವ ಆಯ್ದ ಪಾಠದಲ್ಲಿನ ಪದಗಳನ್ನು ಪಟ್ಟಿ ಮಾಡುವುದು. ಉದಾಹರಣೆಗೆ ತಾಯಿ ಹೆಸರಿನ ಎರಡನೆ ಅಕ್ಷರದಿಂದ ಪ್ರಾರಂಭವಾಗುವ ಪದ, ನಟನ ಹೆಸರಿನ ಮೊದಲ ಅಕ್ಷರದಿಂದ ಪ್ರಾರಂಭವಾಗುವ, ಇಷ್ಟವಾದ ತಿಂಡಿ ಹೆಸರಿನ ಮೂರನೆ ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಹುಡುಕಿ ಬರೆದುಕೊಳ್ಳುವುದು. ಹೀಗೆ ಆಯ್ದ ಪಾಠದಲ್ಲಿ ಪದಗಳ ಪಟ್ಟಿ ಮಾಡುವುದು. ಮುಕ್ತಾಯ: ಈ ಹಂತದಲ್ಲಿ ನಿಮಗೆ ಸಂಬಂಧಿಸಿದ ಪದಗಳೆ ಪಾಠದಲ್ಲಿರುವುದು ಎಂದು ಹೇಳಿ ಪಾಠ ಮತ್ತು ಸ್ವಪರಿಚಯಕ್ಕೆ ಸಂಬಂಧ ಕಲ್ಪಿಸಿ, ಎಲ್ಲಾರಿಗೂ ಅಭಿನಂದಿಸಿ ಮುಕ್ತಾಯಗೊಳಿಸುವುದು. ಪ್ರಸ್ತುತ ಸ್ವ–ಪರಿಚಯ ಚಟುವಟಿಕೆಯಲ್ಲಿನ ವಿವಿಧ ಪ್ರಮುಖ ಹಂತಗಳಲ್ಲಿ ಪ್ರಯೋಗಕ್ಕೆ ಒಳಪಟ್ಟ ವಿದ್ಯಾರ್ಥಿಗಳ ಶ್ರೇಣಿಮಾನಕಗಳ ಸರಾಸರಿ ಶೇಕಡವಾರು ತಿಳಿಸುವ ಕೋಷ್ಟಕ, ರೇಖಾಚಿತ್ರ, ಅಂತರಾವಲೋಕನ, ಚರ್ಚೆ, ವಿಶ್ಲೇಷಣೆ, ನಿರ್ಣಯವನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಕೋಷ್ಟಕ: 1. 01

ಸ್ವ–ಪರಿಚಯ ಚಟುವಟಿಕೆಯಲ್ಲಿನ ಪರಿಚಯ ಹಂತದಲ್ಲಿ ಪ್ರಯೋಜ್ಯನರು ಪಡೆದ

ಶ್ರೇಣಿಮಾನಕಗಳ ಸರಾಸರಿ ಶೇಕಡವಾರು

ಕ್ರ. ಸಂ.	ಶ್ರೇಣಿಮಾನಕಗಳು	ಪ್ರಯೋಜ್ಯನರು	ಶೇಕಡ
1	ಅತ್ಯುತ್ತಮ	15	30%
2	ಉತ್ತಮ	20	40%
3	ಚೆನ್ನಾಗಿತ್ತು	10	20%
4	ಸಾಧಾರಣ	3	6%
5	ಸಾಲದು	2	4%
	ಒಟ್ಟು =	50	100%




ಈ ಮೇಲಿನ ರೇಖಾಚಿತ್ರದಲ್ಲಿ ಕಂಡು ಬಂದಂತೆ, ಸ್ವ–ಪರಿಚಯ ಚಟುವಟಿಕೆಯಲ್ಲಿನ ಪರಿಚಯ ಹಂತದಲ್ಲಿ ಪ್ರಯೋಜ್ಯನರು ಪಡೆದ ಶ್ರೇಣಿಮಾನಕಗಳ ಸರಾಸರಿ ಶೇಕಡವಾರು 100ರಲ್ಲಿ 10% ರಷ್ಟು ಅಂದರೆ ಐದು ವಿದ್ಯಾರ್ಥಿಗಳು ಕನ್ನಡ ಭಾಷೆಯ ಪದಗಳನ್ನು ವೇಗವಾಗಿ ಗ್ರಹಿಸಿ, ಅರ್ಥಮಾಡಿಕೊಂಡು ಬರೆದುಕೊಳ್ಳುವಲ್ಲಿ ಸಮಸ್ಯೆ ಎದುರಿಸಿರುವ ಕಾರಣ ಹಿನ್ನಡೆ ಅನುಭವಿಸಿದ್ದಾರೆ, ಇವರಿಗೆ ಕನ್ನಡ ಭಾಷಾ ಕೌಶಲಗಳ ಕಲಿಕಾ ತರಬೇತಿ ನೀಡಿದರೆ, ವೇಗವಾಗಿ ಗ್ರಹಿಸಬಹುದೆಂದು ಪ್ರಸ್ತುತ ಪ್ರಯೋಗದ ಈ ಹಂತದಿಂದ ತಿಳಿದು ಬಂದಿದೆ.

ಕೋಷ್ಟಕ: 1. 02

ಸ್ವ–ಪರಿಚಯ ಚಟುವಟಿಕೆಯಲ್ಲಿನ ಪದಗಳ ಹುಡುಕಾಟ ಹಂತದಲ್ಲಿ ಪ್ರಯೋಜ್ಯನರು ಪಡೆದ ಶ್ರೇಣಿಮಾನಕಗಳ ಸರಾಸರಿ ಶೇಕಡವಾರು

ಕ್ರ. ಸಂ.	ಶ್ರೇಣಿಮಾನಕಗಳು	ಪ್ರಯೋಜ್ಯನರು	ಶೇಕಡ
1	ಅತ್ಯುತ್ತಮ	10	20%
2	ಉತ್ತಮ	15	30%
3	ಚೆನ್ನಾಗಿತ್ತು	10	20%
4	ಸಾಧಾರಣ	9	18%
5	ಸಾಲದು	6	12%
		ಒಟ್ಟು = 50	100%

ಸ್ವ-ಪರಿಚಯ ಚಟುವಟಿಕೆಯಲ್ಲಿನ ಪದಗಳ ಹುಡುಕಾಟ ಹಂತದಲ್ಲಿ ಪ್ರಯೋಜ್ಯನರು ಪಡೆದ ಶ್ರೇಣಿಮಾನಕಗಳ ಸರಾಸರಿ ಶೇಕಡವಾರು ತೋರಿಸುವ ರೇಖಾಚಿತ್ರ



ಈ ಮೇಲಿನ ರೇಖಾಚಿತ್ರದಲ್ಲಿ ಕಂಡು ಬಂದಂತೆ, ಸ್ವ-ಪರಿಚಯ ಚಟುವಟಿಕೆಯಲ್ಲಿನ ಪದಗಳ ಹುಡುಕಾಟ ಹಂತದಲ್ಲಿ ಪ್ರಯೋಜ್ಯನರು ಪಡೆದ ಶ್ರೇಣಿಮಾನಕಗಳ ಸರಾಸರಿ ಶೇಕಡವಾರು 100ರಲ್ಲಿ ಈ ಹಿಂದಿನ ಹಂತದಂತೆ ಐದು ವಿದ್ಯಾರ್ಥಿಗಳ ಜೊತೆ ಇನ್ನೂ ಒಬ್ಬ ವಿದ್ಯಾರ್ಥಿ ಪದಗಳ ಹುಡುಕಾಟದಲ್ಲಿ ಹಿಂದುಳಿದಿರುವುದು ಕಂಡು ಬಂದಿದೆ, ಇವರಿಗೆ ಕನ್ನಡ ಭಾಷಾ ಕೌಶಲಗಳ ಕಲಿಕಾ ತರಬೇತಿ ನೀಡಿದರೆ, ವೇಗವಾಗಿ ಗ್ರಹಿಸಿ, ಪದಗಳನ್ನು ಹುಡುಕಬಹುದೆಂದು ಪ್ರಸ್ತುತ ಪ್ರಯೋಗದಿಂದ ಕಂಡುಕೊಂಡ ಅಂಶವಾಗಿದೆ.

ಅಂತರಾವಲೋಕನ :

ಪ್ರಯೋಗಕ್ಕೆ ಒಳಪಟ್ಟ ಎಲ್ಲಾ ವಿದ್ಯಾರ್ಥಿಗಳು ಆಸಕ್ತಿಯಿಂದ ಪಾಲ್ಗೊಂಡು,

ತಮ್ಮ ಪರಿಚಯದೊಂದಿಗೆ ಪಾಠ ಪ್ರವೇಶ ಮಾಡಿದರು, 06 ವಿದ್ಯಾರ್ಥಿಗಳು ತಮ್ಮ ಪರಿಚಯ ಬರೆದುಕೊಂಡರಾದರೂ ಪದಗಳನ್ನು ಹುಡುಕುವಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳಲಿಲ್ಲ. ಇನ್ನೂಳಿದ ವಿದ್ಯಾರ್ಥಿಗಳು ಆಸಕ್ತಿ, ಕುತೂಹಲದಿಂದ ಹುಡುಕಾಟ ಮಾಡಿದರು, ಇವರ ಬರವಣಿಗೆಯಲ್ಲಿ ಅಕ್ಷರಗಳ ದೋಷ ಕಂಡುಬರಲಿಲ್ಲ, 35 ವಿದ್ಯಾರ್ಥಿಗಳು ಈ ಚಟುವಟಿಕೆಯಲ್ಲಿ ತಲ್ಲೀನರಾಗಿ, ಎಚ್ಚರದಿಂದ ಪದಗಳನ್ನು ಹುಡುಕಿದರು. 10 ವಿದ್ಯಾರ್ಥಿಗಳು ಸಮಯ ಪಾಲನೆಯಲ್ಲಿ ಹಿಂದುಳಿದರು, ಒಟ್ಟಾರೆಯಾಗಿ ಈ ಚಟುವಟಿಕೆ ವಿದ್ಯಾರ್ಥಿಗಳಿಗೆ ಪಠ್ಯದೊಂದಿಗೆ ಭಾವನಾತ್ಮಕ ಸಂಬಂಧ ಬೆಸೆದುಕೊಳ್ಳಲು ಪೂರಕವಾಗಿದ್ದು ಪ್ರಸ್ತುತ ಪ್ರಯೋಗದಿಂದ ಕಂಡು ಬಂದಿದೆ.

ಚರ್ಚೆ, ವಿಶ್ಲೇಷಣೆ, ನಿರ್ಣಯ:

ಪ್ರಯೋಗಕಾರ, ವಿದ್ಯಾರ್ಥಿಗಳಿಗೆ ಕಾಲು ಭಾಗದ ಬಿಳಿ ಕಾಗದವನ್ನು ನೀಡಿ ಅದರಲ್ಲಿ ಸ್ವ–ಪರಿಚಯ ಬರೆಸಿದ ಮೇಲೆ, ಬರೆದ ಹಾಳೆಯನ್ನು ಹರಿಯಲು ಮುಂದಾದಾಗ ವಿದ್ಯಾರ್ಥಿಗಳು ತಡೆದರು, ಕಾರಣ ಆ ಹಾಳೆಯಲ್ಲಿ ವಿದ್ಯಾರ್ಥಿಗಳ ಸಂಬಂಧಿಕರು ಮತ್ತು ಇಷ್ಟವಾದ ತಿಂಡಿ ಇತ್ಯಾದಿಗಳ ಹೆಸರಿತ್ತು, ಹಾಗಾಗಿ ಅದನ್ನು ಹರಿದು ಬಿಸಾಕಲು ಒಪ್ಪಲಿಲ್ಲ, ಅದೇ ಖಾಲಿ ಹಾಳೆಯನ್ನು ಹರಿದು ಬಿಸಾಕಿದರೆ ಯಾವ ವಿರೋಧವನ್ನು ವ್ಯಕ್ತಪಡಿಸಲಿಲ್ಲ, ಅಂದರೆ ಇಲ್ಲಿ ತಮ್ಮ ತನ ಹಾಗೂ ತಮ್ಮ ಕುಟುಂಬದ ಜೊತೆ ಭಾವನಾತ್ಮಕ ಸಂಬಂಧ, ಅನುಬಂಧ ವಿದ್ಯಾರ್ಥಿಗಳಲ್ಲಿ ಜಾಗೃತವಾದಂತೆ ಗೋಚರಿಸುತ್ತದೆ, ಇದೇ ಭಾವ ತಮ್ಮ ಪಠ್ಯಪುಸ್ತಕದೊಟ್ಟಿಗೆ ಬೆಸೆಯುವ ಪ್ರಯತ್ನ ಈ ಚಟುವಟಿಕೆ ಅಭಿವ್ಯಕ್ತಿಸುತ್ತದೆ.

ಸ್ವ–ಪರಿಚಯ ಎಂಬ ಈ ಚಟುವಟಿಕೆ ವಿದ್ಯಾರ್ಥಿಗಳ ಪಠ್ಯವಸ್ತು ಮತ್ತು ಕುಟುಂಬಕ್ಕೆ ಸಹ–ಸಂಬಂಧ ಕಲ್ಪಿಸುವ ಮಾರ್ಗಗಳನ್ನು ಸೂಚಿಸುತ್ತದೆ. ಈ ಚಟುವಟಿಕೆಯಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಲ್ಲಿ ಕಲಿತ ಕಲಿಕೆಯನ್ನು ಅನ್ವಯ ಮಾಡಿಕೊಳ್ಳುವ ಸಾಮರ್ಥ್ಯವನ್ನು ಅಭಿವೃದ್ಧಿ ಪಡಿಸುತ್ತದೆ. ಶೇಕಾಡ 100 ರಲ್ಲಿ ಶೇಕಾಡ 12% ರಷ್ಟು ವಿದ್ಯಾರ್ಥಿಗಳು ಕಾಗುಣಿತಾಕ್ಷರಗಳ ಸೂಚನೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ತೊಂದರೆಯನ್ನು ಅನುಭವಿಸಿದರು. ಪ್ರಯೋಗಕಾರರ ಮಧ್ಯ ಪ್ರವೇಶದಿಂದ ಪರಿಹಾರವಾಗಿ ಚಟುವಟಿಕೆಯಲ್ಲಿ ಮುಂದುವರಿದು ಸಾಧಾರಣವಾಗಿ ಪದಗಳನ್ನು ಹುಡುಕಿದರು. ಐದು ವಿದ್ಯಾರ್ಥಿಗಳು ಅಕ್ಷರಗಳನ್ನು ಹುಡುಕುವಲ್ಲಿ ಸಮಸ್ಯೆ ಅನುಭವಿಸಿದ್ದರಿಂದ ಅವರು ಈ ಚಟುವಟಿಕೆಯಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಲು ಕಷ್ಟವಾಯಿತು ಕಾರಣ ಅವರಿಗೆ ಕಾಗುಣಿತಾಕ್ಷರಗಳ ಕಲಿಕೆ ಅಲ್ಪಪ್ರಮಾಣದಲ್ಲಿ ಆಗಿದ್ದರಿಂದ, ಹಾಗಾಗಿ ಪ್ರಯೋಗಕಾರರು ಅವರಿಗೆ ಸಹಾಯಕವಾಗಿ ಮೌಖಿಕವಾಗಿ

ಅವರ ಸಂಬಂಧಿಕರ ಹೆಸರುಗಳನ್ನು ಕೇಳಿ ಆಯ್ದ ಪಠ್ಯದಲ್ಲಿ ಪದಗಳನ್ನು ಹುಡುಕಲು ಸಹಾಯ ಮಾಡಿದರು. ಈ ವಿದ್ಯಾರ್ಥಿಗಳ ಕಲಿಕೆ ಅಕ್ಷರ ಚಿಹ್ನೆಗಳ ಮೂಲಕ ಹುಡುಕುತ್ತಾ ಸಾಗಿ ಸರಿಯಾದ ಪದಗಳನ್ನು ಹುಡುಕುವಲ್ಲಿ ಯಶಸ್ವಿಯಾಗಿದ್ದು ವಿಶೇಷವಾಗಿ ಕಂಡುಬಂದಿದೆ.

ಶಾಲಾ ಶಿಕ್ಷಣದಲ್ಲಿ ಪಠ್ಯಪುಸ್ತಕ ನಿರ್ಜೀವವಾದ ವಸ್ತು, ಜೀವಂತ ವಿದ್ಯಾರ್ಥಿಗೆ ಈ ಪಠ್ಯಪುಸ್ತಕದಲ್ಲಿರುವ ವಿಷಯಗಳು ಬೇರೆ ಯಾರದ್ದೋ ಆಗಿರುತ್ತದೆ, ಈ ಕಾರಣದಿಂದಾಗಿ ಹೆಚ್ಚಾನು ಹೆಚ್ಚು ವಿದ್ಯಾರ್ಥಿಗಳು ಓದಿನ ಕಡೆ ಆಸಕ್ತಿ ತೋರಿಸುವುದಿಲ್ಲ, ಪಠ್ಯಪುಸ್ತಕದಲ್ಲಿರುವುದು ಎಲ್ಲಾ ನಮ್ಮದು ಮತ್ತು ನಮ್ಮ ಸುತ್ತಮುತ್ತಲಿನ ಕಥೆಗಳೇ ಆಗಿರುತ್ತವೆ, ಎಂಬ ಭಾವ ಮೂಡಿಸಲು ಈ ಚಟುವಟಿಕೆ ಸಹಾಯಕವಾಗಿದೆ. ಹೇಗೆಂದರೆ ನಾಟಕಕಲೆಯಲ್ಲಿ ನಟ ಬೇರೆ, ಪಾತ್ರ ಬೇರೆ ಆಗಿರುತ್ತದೆ, ಇಲ್ಲಿ ನಟ ಆ ಪಾತ್ರವನ್ನು ತಾನೇ ಎಂದು ಭಾವಿಸಿ, ಅಭ್ಯಾಸ ಮಾಡಿ ನಟಿಸಬೇಕಾಗಿರುತ್ತದೆ, ಅದೇ ರೀತಿ ವಿದ್ಯಾರ್ಥಿ ತನ್ನ ಪಠ್ಯಪುಸ್ತಕದಲ್ಲಿರುವುದು ತನ್ನ ಕುಟುಂಬ ಮತ್ತು ತನ್ನ ಸುತ್ತಮುತ್ತಲಿನ ಸಮಾಜದ ವಿಷಯಗಳೆ ಎಂದು ತಿಳಿದು ಕಲಿಯಲು ಪ್ರೇರಕವಾಗಿರುತ್ತದೆ. ಈ ಚಟುವಟಿಕೆ ಆರಂಭದಲ್ಲಿ ಕೇವಲ ಪದಗಳನ್ನು ಹುಡುಕುತ್ತ ತನಗೂ ಮತ್ತು ಪಠ್ಯವಿಷಯಕ್ಕೂ ಸಂಬಂಧವಿದೆ ಎಂದು ಭಾವಿಸುತ್ತಾ ಅಮೂರ್ತದಿಂದ ಮೂರ್ತದೆಡೆಗೆ ಸಾಗಿ, ವಿದ್ಯಾರ್ಥಿ ಪಠ್ಯಪುಸ್ತಕದ ಮೇಲೆ ಮಾಲಿಕತ್ವ ಹೊಂದಿ, ಜವಾಬ್ದಾರಿಯಿಂದ ಕಲಿಯಲು ಪ್ರಾರಂಭಿಸುತ್ತಾನೆ, ಆಗ ಕಲಿಕೆ ಫಲಪ್ರದವಾಗುತ್ತದೆ.

ಈ ಚಟುವಟಿಕೆಯಲ್ಲಿ ನಿರ್ದಿಷ್ಟ ಸಂಖ್ಯೆಯ ಪದಗಳನ್ನು ಹುಡುಕ ಬೇಕೆಂಬ ನಿಯಮವೇನು ಇರಲಿಲ್ಲ, ಆದರೂ ಹೆಚ್ಚಿನ ಸಂಖ್ಯೆಯ ಪದಗಳನ್ನು ಸುಮಾರು 35 ವಿದ್ಯಾರ್ಥಿಗಳು ಹುಡುಕಿದರು. ಇಲ್ಲಿ ವಿದ್ಯಾರ್ಥಿಗಳು ಗಟ್ಟಿಯಾಗಿ ಉಚ್ಚರಿಸಿ ಪದಗಳನ್ನು ಬರೆದುಕೊಳ್ಳುತ್ತಿದ್ದರು, ಇನ್ನೂಳಿದ ವಿದ್ಯಾರ್ಥಿಗಳು ಪದಗಳನ್ನು ಗುರುತು ಹಾಕಿ ತದನಂತರ ಬರೆದುಕೊಳ್ಳುತ್ತಿದ್ದರು. ಪುಸ್ತಕದ ಜೊತೆ ಭಾವನಾತ್ಮಕ ಸಂಬಂಧ ಬೆಳೆದಂತೆಲ್ಲಾ ಪಠ್ಯದಲ್ಲಿರುವ ವಿಷಯವಸ್ತು ಬೇರೆಯಲ್ಲ, ನಿಜ ಜೀವನದಲ್ಲಿ ಅನುಭವಿಸುವ ಸನ್ನಿವೇಶಗಳ ವಿಷಯವಸ್ತು ಬೇರೆಯಲ್ಲ, ಇವೆರಡು ಪರಸ್ಪರ ಸಂಬಂಧ ಹೊಂದಿದ್ದು. ಇದರ ಸೂಕ್ಷ್ಮಗೆರೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಚಟುವಟಿಕೆ ಯಶಸ್ವಿಯಾಗಿದೆ.

ನಾಟಕಕಲೆಯಲ್ಲಿ ಪಾತ್ರ–ಪಾತ್ರಗಳ ನಡುವಿನ ಸಂಬಂಧ ಹೇಗೆ ಗಟ್ಟಿಯಾಗಿರುತ್ತದೆಯೋ ಅದೇ ರೀತಿಯಲ್ಲಿ ವಿದ್ಯಾರ್ಥಿಗಳು ತಮ್ಮ ಪಠ್ಯ ಪುಸ್ತಕದ ಜೊತೆ ಸಂಬಂಧವನ್ನು ಗಟ್ಟಿಗೊಳಿಸಿಕೊಳ್ಳಬೇಕಾಗುತ್ತದೆ, ಕಾರಣ ವಿದ್ಯಾರ್ಥಿಗಳ ಕಲಿಕಾ

ಪ್ರಗತಿಗೆ ಪಠ್ಯಪುಸ್ತಕಗಳು ಬುನಾದಿ ಆಗಿರುವುದರಿಂದ, ಪಠ್ಯಪುಸ್ತಕದಲ್ಲಿ ತಮ್ಮ ಕುಟುಂಬಕ್ಕೆ ಸಂಬಂಧಿಸಿದವರ ಮತ್ತು ತಮಗೆ ಇಷ್ಟವಾಗುವವರ ಹೆಸರುಗಳು ಇದ್ದಾಗ ಹೇಗೆ ಗೌರವ, ಪ್ರೀತಿ ಹೆಚ್ಚಾಗಿ ಕಲಿಕೆ ನೆನಪಿನಲ್ಲಿ ಉಳಿಯಲು ಸಹಾಯಕವಾಗಿರುತ್ತದೆಯೋ ಅದೇ ರೀತಿ ಭಾವನಾತ್ಮಕ ನಂಟು ಬೆಳೆಯಲು ಈ ಚಟುವಟಿಕೆ ಸಹಾಯಕವಾಗಿದೆ.

ಈ ಚಟುವಟಿಕೆಯಲ್ಲಿ ಗಮನಿಸುವ ಕೌಶಲ ಹಾಗೂ ಕ್ರಿಯಾತ್ಮಕವಾಗಿ ಹುಡುಕುವ ಕೌಶಲ, ಸಂಬಂಧದ ಮೂಲಕ ಭಾಷಾ ಕೌಶಲಗಳನ್ನು ಕಲಿಯುವ ಮಾರ್ಗ ಸುಲಭವಾದಂತೆ ಎಂದು ತಿಳಿಸಬಹುದು. ಇಲ್ಲಿ ಪದಗಳನ್ನು ಹುಡುಕಿ ನೆನಪಿನಲ್ಲಿ ಇಟ್ಟುಕೊಳ್ಳಲು ಸಹಾಯಕವಾಗಬಹುದು, ಕಲಿತ ವಿಷಯವನ್ನು ಮನನ ಮಾಡಲು ಉತ್ತೇಜನ ನೀಡಿದಂತೆ ಆಗುತ್ತದೆ, ನಿರ್ದಿಷ್ಟ ಕಲಿಕೆಯ ಕಡೆ ಹೆಚ್ಚು ಒತ್ತು ನೀಡಲು ಸಹಾಯಕವಾಗಬಹುದು.

"ಶಿಕ್ಷಣ ಇಲಾಖೆ ಪಠ್ಯಪುಸ್ತಕ ಮತ್ತು ವಿದ್ಯಾರ್ಥಿಗಳ ನಡುವೆ ಸಂಬಂಧ ಕಲ್ಪಿಸುವ ನಿಟ್ಟಿನಲ್ಲಿ ಶಿಕ್ಷಕರನ್ನು ಬಳಸಿಕೊಳ್ಳುತ್ತದೆ, ಶಿಕ್ಷಕರಿಗೆ ರಂಗತರಬೇತಿಯಾದರೆ, ತರಗತಿಯಲ್ಲಿ ಪಠ್ಯವಿಷಯ ಮತ್ತು ವಿದ್ಯಾರ್ಥಿಗಳ ನಡುವೆ ಭಾವನಾತ್ಮಕ ಸಂಬಂಧ ಗಟ್ಟಿಗೊಳ್ಳಲು ಸಹಾಯಕವಾಗಬಹುದು. ಇದರ ಕಡೆ ಗಮನಹರಿಸಿದರೆ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ." ಎಂದು ರಂಗ ತಜ್ಞರಾದ ನಾ. ಶ್ರೀನಿವಾಸ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಚಟುವಟಿಕೆ ಆರಂಭದಲ್ಲಿ ಹೆಚ್ಚು ಆಸಕ್ತಿದಾಯಕವಾಗಿರುತ್ತದೆ, ಯಾವಾಗ ಪದಗಳು ಸಿಗುವುದಿಲ್ಲವೋ ಆಗ ಸ್ವಲ್ಪ ಆಸಕ್ತಿ ಕುಂಠಿತಗೊಳ್ಳಬಹುದು, ಆಗ ಮಾರ್ಗದರ್ಶಕರು ಪ್ರೋತ್ಸಾಹ ನೀಡಿದರೆ, ವಿದ್ಯಾರ್ಥಿಗಳ ಆಸಕ್ತಿ ಹೆಚ್ಚಾಗುತ್ತದೆ. ನಿಧಾನವಾಗಿ ಪದಗಳನ್ನು ಹುಡುಕುತ್ತಾ–ಹುಡುಕುತ್ತಾ ವಾಕ್ಯಗಳನ್ನು ಅರ್ಥ ಮಾಡಿಕೊಂಡು, ಸನ್ನಿವೇಶ, ಸಂದರ್ಭಗಳನ್ನು ವಿವರಿಸುವ ಸಾಮರ್ಥ್ಯಗಳಿಸಿಕೊಳ್ಳುತ್ತಾರೆ.

ವಿದ್ಯಾರ್ಥಿಗಳಿಗೆ ತಮ್ಮ ಪಠ್ಯಪುಸ್ತಕದ ಮೇಲೆ ಯಾವಾಗ ಮಾಲಿಕತ್ವ ಪಡೆದುಕೊಳ್ಳುತ್ತಾರೋ ಆಗ ಅವರ ಕಲಿಕೆಗೆ ವೇಗ ಸಿಗುತ್ತದೆ, ಭಾಷಾ ಕೌಶಲಗಳ ಕಲಿಕೆಯ ಜೊತೆ ಪ್ರಶ್ನೆ ಮಾಡುವ, ಪ್ರಶ್ನೆಗೆ ಸ್ವತಃ ಉತ್ತರಗಳನ್ನು ಕಂಡುಕೊಳ್ಳುವ, ಕಲ್ಪಿಸಿಕೊಳ್ಳುವ, ಸೃಜಿಸುವ, ತರ್ಕಿಸುವ, ಆಲೋಚಿಸುವ, ಕಾಪಾಡಿಕೊಳ್ಳುವ ಇತ್ಯಾದಿ ಕೌಶಲಗಳು ಅಂತರ್ಗತವಾಗಿ ಬೆಳೆಯಲು ಈ ಚಟುವಟಿಕೆ ಸಹಾಯಮಾಡುತ್ತದೆ.

ಒಟ್ಟಾರೆಯಾಗಿ ಸ್ವಪರಿಚಯ ಚಟುವಟಿಕೆ ವಿದ್ಯಾರ್ಥಿಗಳ ಪಠ್ಯದೊಂದಿಗೆ ಅವರ ಸಂಬಂಧ ಗಟ್ಟಿಗೊಳಿಸಿ, ಕಲಿಕೆಗೆ ಪ್ರೇರಕಶಕ್ತಿಯಾಗಿ ನಿಂತಿದ್ದು ವಿಶೇಷವಾಗಿದೆ, ಭಾಷಾ ಕೌಶಲಗಳ ಕಲಿಕೆಗೆ ಈ ಚಟುವಟಿಕೆ ಸಹಾಯಕವಾಗಿದೆ ಎಂದು ಪ್ರಸ್ತುತ

ಪ್ರಯೋಗದಿಂದ ಸಾಕ್ಷೀಕರಿಸಲಾಗಿದೆ.

ಅಧ್ಯಯನದ ಫಲಿತಗಳು :

ಪ್ರಸ್ತುತ ಅಧ್ಯಯನದ ಫಲಿತಗಳಲ್ಲಿ ಕಂಡು ಬಂದ ಅಂಶಗಳಲ್ಲಿ ಪ್ರಮುಖವಾಗಿ ವಿದ್ಯಾರ್ಥಿಗಳ ಭಾಷಾ ಕೌಶಲಗಳ ಕಲಿಕಾ ಸಾಮಾರ್ಥ್ಯ ಹೆಚ್ಚಾಗುತ್ತಿರುವುದು ಜೊತೆಗೆ ಈ ಕೆಳಗಿನ ಅಂಶಗಳನ್ನು ಗುರುತಿಸಬಹುದು.

n ಸ್ವ–ಪರಿಚಯ ಚಟುವಟಿಕೆ ಮೂಲಕ ಕಲಿಕಾರ್ಥಿಗಳು ಪರಸ್ಪರ ಅಭಿವ್ಯಕ್ತಿ ಸಾಮರ್ಥ್ಯಗಳ ಹಿನ್ನಲೆಗಳನ್ನು ಅರಿತುಕೊಳ್ಳುತ್ತಿರುವುದು ಕಂಡುಬಂದಿದೆ.

n ಕಲಿಕಾರ್ಥಿಗಳು ವಸ್ತು–ವಿಷಯ–ಘಟನೆಗಳ ಸಂಬಂಧವನ್ನು ತಿಳಿದು, ಪಠ್ಯಪುಸ್ತಕದ ಜೊತೆ ಭಾವನಾತ್ಮಕ ಮಾಲಿಕತ್ವ ಹೊಂದುತ್ತಾರೆ.

n ಮಾಡುಗ ಹಾಗೂ ಕೇಳುಗರಿಗೂ ಅನುಭವಾಧಾರಿತ ಅಂತರಕ್ರಿಯಾತ್ಮಕ ಸಂವಹನೆಗೆ ಸಹಕರಿಸುತ್ತದೆ.

n ನಾಟಕಕಲೆಯ ಅಣು–ಅಂಶಗಳು ಅಭಿವ್ಯಕ್ತಿಯ ಪ್ರತೀಕ, ನವರಸ, ನವಭಾವಗಳ ಪ್ರಕಟಣೆಗೆ, ಕಲ್ಪನೆ, ನಾವೀನ್ಯ, ಸ್ವಂತಿಕೆ, ಆವಿಷ್ಕಾರಗುಣಕ್ಕೆ ಸಹಾಯ ಮಾಡುತ್ತದೆ.

ಉಪಸಂಹಾರ :

ಪ್ರಯೋಗಾತ್ಮಕ ಗುಂಪಿನ ಪ್ರಯೋಜ್ಯನರ ಕನ್ನಡ ಭಾಷಾ ಕೌಶಲಗಳ ಕಲಿಕೆಯಲ್ಲಿ ಸ್ವ–ಪರಿಚಯ ಚಟುವಟಿಕೆ ಎಂಟನೆ ತರಗತಿ ಪ್ರಥಮ ಭಾಷಾ ಕನ್ನಡ ಪಠ್ಯ ಪುಸ್ತಕದಲ್ಲಿರುವ ಗದ್ಯ ಮತ್ತು ಪದ್ಯಪಾಠಗಳ ಜೊತೆಗೆ ಭಾವನಾತ್ಮಕ ಸಂಬಂಧ ಬೆಳಸುವಲ್ಲಿ ಸಹಾಯಕವಾದ ಅಂಶಗಳ ಕಲಿಕೆಯೊಂದಿಗೆ, ಕನ್ನಡ ಭಾಷಾ ಪಠ್ಯದಲ್ಲಿನ ಬೌದ್ಧಿಕಾಂಶಗಳನ್ನು ಕಲಿಕಾರ್ಥಿಗಳ ಭಾವುಕಾಂಶಗಳ ಜೊತೆ ಸಂಬಂಧ ಕಲ್ಪಿಸಿ, ಅಭಿವ್ಯಕ್ತಿ ಸಾಮರ್ಥ್ಯದ ಕೌಶಲಗಳು ಪೋಷಣೆಯಾಗಿರುವುದು ಪ್ರಸ್ತುತ ಪ್ರಯೋಗದಿಂದ ಕಂಡುಬಂದಿದೆ.

ಪರಾಮರ್ಶನ ಗ್ರಂಥಗಳು :

1. ನಾರಾಯಣ ಕೆ. ವಿ. (ಸಂ), 2019, ಭಾಷೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಆಮೂರ ಜಿ. ಎಸ್. (ಸಂ), 2006, ಶ್ರೀರಂಗ ಸಾರಸ್ವತ ಸಂಪುಟ–8, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
3. ಪ್ರೊ. ಎಂ. ಅಬ್ದುಲ್ ರೆಹಮಾನ್ ಪಾಷ, 2023, ಕನ್ನಡ ಭಾಷಾ ಕೌಶಲ ಕಲಿಕೆ–ಬೋಧನೆ, ಕ್ರಿಯಾ ಮಾಧ್ಯಮ ಪ್ರಕಾಶನ, ಬೆಂಗಳೂರು.
4. ಕೃಷ್ಣಶಾಸ್ತ್ರೀ ಎ. ಆರ್. 1990, ಸಂಸ್ಕೃತ ನಾಟಕ, ಕನ್ನಡ ಮತ್ತು ಸಂಸ್ಕೃತಿ

ನಿರ್ದೇಶನಾಲಯ, ಬೆಂಗಳೂರು.

5. ಎನ್. ಎಸ್. ವೆಂಕಟರಾಮ್, 2021, ರಂಗಭೂಮಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.
6. Tracy E. Bersley - The Body's Brain: Neurology in Theatrical Practice, The IATC journal/Revue de l'AICT – June/Juin 2018: Issue No 17
7. ಸಂಗಮೇಶ ಸವದತ್ತಿಮಠ, 1992, ಕನ್ನಡ ನಾಟಕಗಳಲ್ಲಿ ಭಾಷೆ, ವಿದ್ಯಾನಿಧಿ ಪ್ರಕಾಶನ ಗದಗ.
8. ಸದಾನಂದ ಸುವರ್ಣ, 2011, ರಂಗಾನುಭೂತಿ, ಸುರ್ವಣಗಿರಿ ಪ್ರಕಾಶನ ಮಂಗಳೂರು.
9. ರಂಗತಜ್ಞ ನಾ. ಶ್ರೀನಿವಾಸ ಅವರೊಂದಿಗೆ ನಡೆದ ಚರ್ಚಾ ಮಾಹಿತಿ.

ಅನುಬಂಧ – 1 ಛಾಯಾ ಚಿತ್ರಗಳು:



ಪ್ರಯೋಜ್ಯನರ ಸ್ವ–ಪರಿಚಯ ಚಟುವಟಿಕೆಯ ವಿವಿಧ ದೃಶ್ಯಗಳ ಛಾಯಾ ಚಿತ್ರಗಳು

ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ಪ್ರಜ್ಞೆ

ಡಾ. ಸುರೇಶ ಎನ್.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಬಿಜಿಎಸ್ ಸೈನ್ಸ್ ಅಕಾಡಮಿ ಮತ್ತು ಸಂಶೋಧನಾ ಕೇಂದ್ರ
ಅಗಲಗುರ್ಕಿ, ಚಿಕ್ಕಬಳ್ಳಾಪುರ – 562101
drsureshan17@gmail.com

ಕನಕದಾಸರು ಕನ್ನಡ ನಾಡಿನ ಶ್ರೀಮಂತ ಸಂಸ್ಕೃತಿಯಲ್ಲಿ ಬೆರತು ಹೋಗಿರುವ ಶ್ರೇಷ್ಠ ವ್ಯಕ್ತಿ. ದಾಸ ಸಾಹಿತ್ಯಕ್ಕೆ ವೈಶಿಷ್ಟಪೂರ್ಣವಾದ ಮೆರುಗನ್ನು ತಂದಿತ್ತ ಪಾಂಡಿತ್ಯಪೂರ್ಣ ಕವಿ. ಸಹಜ ಬದುಕಿನಿಂದ ಕೀರ್ತನಕಾರರಾಗಿ, ಸಂತರಾಗಿ, ದಾರ್ಶನಿಕರಾಗಿ, ತತ್ವಜ್ಞಾನಿಯಾಗಿ ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಗೆ ಕನಕದಾಸರು ಅನನ್ಯ ಕೊಡುಗೆ ನೀಡಿದ್ದಾರೆ. ತಮ್ಮ ಕೀರ್ತನೆಗಳಲ್ಲಿ ಭಕ್ತಿ, ವೈರಾಗ್ಯ, ಭಜನೆಗಳಷ್ಟೇ ಅಲ್ಲದೆ ಹದಿನಾರನೆಯ ಶತಮಾನದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಸಾತ್ವಿಕ ಸಮರ ಸಾರಿದ್ದಾರೆ. ಸಾಮಾಜಿಕ ಮಡಿವಂತಿಕೆಯನ್ನು ಕನಕದಾಸರು ಕೀರ್ತನೆಗಳಲ್ಲಿ ವಿಡಂಬಿಸಿದ್ದಾರೆ. ಅಂದಿನ ಸಮಾಜದ ಓರೆಕೋರೆಗಳನ್ನು ತಿದ್ದುವ ಪ್ರಯತ್ನ ಮಾಡಿದ್ದಾರೆ.

"ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ?"

ಎಂಬ ತಾರ್ಕಿಕ ಪ್ರಶ್ನೆಯ ಮೂಲಕ ವರ್ಗ ಸಮಾನತೆಯನ್ನು ತಮ್ಮ ಕೀರ್ತನೆಗಳಲ್ಲಿ ಪ್ರತಿಪಾದಿಸಿದ್ದಾರೆ. ಕನಕದಾಸರು ಕೇವಲ ಕೀರ್ತನಕಾರರಷ್ಟೇ ಅಲ್ಲ, ಆ ಕಾಲಘಟ್ಟದ ಶೋಷಿತ ಸಮುದಾಯಗಳ ಪ್ರಾತಿನಿಧಿಕ ಸಂಪತ್ತು. ಅಂದಿನ ಅವರ ಹೋರಾಟ ಇಂದಿಗೂ ಅನಿವಾರ್ಯವಾಗಿರುವುದು ನಮ್ಮ ಪ್ರಜ್ಞಾವಂತಿಕೆಯ ದುಃಸ್ಥಿತಿಯಲ್ಲದೆ ಮತ್ತೇನು? ಭಗವಂತನ ಸಾಕ್ಷಾತ್ಕಾರಕ್ಕೆ ಶ್ರೇಷ್ಠ ಕುಲದಲ್ಲಿಯೇ ಹುಟ್ಟಬೇಕೆಂಬ

ಮನುವಾದಿಗಳ ಅಲಿಖಿತ ನಿಯಮವನ್ನು ತಮ್ಮ ಕೀರ್ತನೆಗಳ ಮೂಲಕ ಪ್ರಬಲವಾಗಿ ಖಂಡಿಸಿದ್ದಾರೆ. 'ಸತ್ಕುಲವೆನ್ನುವುದು ಜಾತಿಯಲ್ಲ. ಸತ್ಯ, ಸದಾಚಾರ, ಸೌಜನ್ಯಗಳೇ ಕುಲವಲ್ಲದೆ ಹುಟ್ಟಿನಿಂದ ಯಾರೂ ಮೇಲು ಕೀಳಾಗುವುದಿಲ್ಲ' ಎನ್ನುವುದನ್ನು ಕೆಳಗಿನ ದುಷ್ಟಾಂತಗಳ ಮೂಲಕ ವಿವರಿಸಿದ್ದಾರೆ.

"ಕುಲ ಕುಲ ಕುಲವೆನ್ನುತಿಹರೊ ।
ಕುಲವಾವುದು ಸತ್ಯ ಸುಜನರಿಗೆ ।
ಕೆಸರೊಳು ತಾವರೆ ಪುಟ್ಟಲು ಅದತಂದು ।
ಕುಸುಮನಾಭನಿಗೆ ಅರ್ಪಿಸರೇನಯ್ಯ?
ಪಶುವಿನ ಮಾಂಸದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣ್ಣರೇನಯ್ಯ?"

ಎಂಬ ನುಡಿಗಳು ಅಂದಿನ ಮೂಲಭೂತವಾದಿಗಳಿಗೆ ಅಜೀರ್ಣವಾಗುತ್ತವೆ. ಕೊನೆಯಲ್ಲಿ ತಾತ್ವಿಕವಾಗಿ **'ಆತ್ಮ ಯಾವ ಕುಲ, ಜೀವನಾವ ಕುಲ, ತತ್ವೇಂದ್ರೀಯಗಳ ಕುಲ ಪೇಳಿರಯ್ಯ'** ಎಂದಿದ್ದಾರೆ.

ಹದಿನಾರನೆಯ ಶತಮಾನದಲ್ಲಿ ಜನಸಾಮಾನ್ಯರೇನೊ ಅಜ್ಞಾನವಶರಾಗಿ ಮೂಢನಂಬಿಕೆಗಳಿಗೆ ಒಳಗಾಗುತ್ತಾರೆ. ಆದರೆ ಜ್ಞಾನಿಗಳು ಶಾಸ್ತ್ರರೆನಿಸಿಕೊಂಡವರೂ ಮಾಡುವ ಕಂದಾಚಾರಗಳು, ಕರ್ಮಕಾಂಡಗಳು ಕನಕದಾಸರನ್ನು ಚಿಂತೆಗೆ ಕೆಡವಿದೆ. ಸತ್ತವರಿಗಾಗಿ ನಡೆಸುವ ಕರ್ಮಾಂತರಗಳ ಟೊಳ್ಳುತನವನ್ನು ಅವರು " ಆವ ಕರ್ಮವೊ ಇದು ಆವ ಧರ್ಮವೊ, ಆವ ಕರ್ಮವೆಂದರರಿಯೆ ಹಾರುವರಿದ ಬಲ್ಲರೆ" ಪ್ರಶ್ನಿಸಿದ್ದಾರೆ. ಸತ್ತವರು ಉಣ್ಣುವನೆಂದು ಪಿಂಡ ಹಾಕುವುದನ್ನು, ತಿಲದಾನ ಮಾಡುವುದನ್ನು ಲೇವಡಿ ಮಾಡಿದ್ದಾನೆ.

"ಎಳ್ಳು ದರ್ಭೆ ಕೈಲಿ ಪಿಡಿದು
ಪಿತರ ತೃಪ್ತಿ ಪಡಿಸುತ್ತೀರಿ
ಎಳ್ಳು ಮೀನು ನುಂಗಿಹೋಯಿತು
ದರ್ಭೆ ನೀರೊಳು ಹರಿದು ಹೋಯಿತು"

ಇಂಥ ಆಚರಣೆಗಳನ್ನು ಹೇಳುವವರು, ಮಾಡುವವರು ಇಬ್ಬರೂ ಮೂರ್ಖರೆಂದು ಕನಕದಾಸರು ಹೇಳಿದ್ದಾರೆ.

ಡಾಂಭಿಕ ಭಕ್ತಿ–ಆಚಾರಗಳ ಬಗ್ಗೆ ಕನಕದಾಸರು

ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೇ?
ಜನ್ನ ಸಾರ್ಥಕವಿಲ್ಲದವರೆಲ್ಲ ಭಾಗವತರೆ?

ಮೂಗಿಡಿದು ನೀರೊಳಗೆ ಮುಳುಗಿ ಕಪತಪವ ಮಾಡಿ

ಭಾಗವತ ಶಾಸ್ತ್ರಾದಿಗಲನ್ನೆಲ್ಲ ಓದಿ

ಬಾಗಿ ಪರಸತಿಯರನ್ನು ಬಯಸಿ ಕಣ್ಣಿಡುವಂಥ

ನೀತಿ ತಪ್ಪಿದವರೆಲ್ಲ ದೇವ ಬ್ರಾಹ್ಮಣರೆ?" ಕೃಷ್ಣ ಎಂದು ಎಲ್ಲ ಪಂಥಗಳ ಆಷಾಡಭೂತಿಗಳನ್ನು ನಿರ್ಭಿಡೆಯಿಂದ ಪ್ರಶ್ನಿಸಿದರು.

ಮಂಡೆ ಬೋಳು ಮಾಡಿ ನಾಮ

ಮಂಡೆಯನ್ನು ಬರೆದು ಕೆಡಿಸಿ

ಕಂಡಕಂಡವರನು ಕೂಡಿ

ಭಂಡ ಜನ್ಮ ಹೊರೆಯುವವಗೆ

ದಾಸಪಟ್ಟವೋ ಸನ್ಯಾಸ ಪಟ್ಟವೋ॥

ಎನ್ನುವ ಕಪಟ ವೇಷಧರಿಸಿ ವಂಚನೆಗೈಯುವ ದಾಸರು ಮತ್ತು ಸನ್ಯಾಸಿಗಳ ಮೇಲೂ ತಮ್ಮ ಹರಿತ ಮಾತುಗಳ ಚಾಟಿ ಬೀಸಿದ್ದಾರೆ. ಕಾಯಕ ತತ್ವವನ್ನು ಪ್ರತಿಪಾದಿಸಿರುವ ಕನಕದಾಸರು –

'ಕುಂಟೆ ತುದಿಗೆ ಕೊರಡು ಹಾಕಿ

ಹೆಂಟೆ ಮಣ್ಣು ಸಮ ಮಾಡಿ

ರೆಮಟೆ ಹೊಡೆದು ಬೆಳೆಸುವುದು

ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ'

ಬದುಕಿನ ಪರಮಾರ್ಥವನ್ನು ಈ ಮೇಲಿನ ಕೀರ್ತನೆಯಲ್ಲಿ ತಿಳಿಸುವುದರ ಜೊತೆಗೆ ಆಧುನಿಕ ಬದುಕನು ಪರಾಮರ್ಶಿಸುವಂತೆ ಪರಮ ಸತ್ಯವನ್ನು ದರ್ಶಿಸಿದ್ದಾರೆ.

'ಹೆಣ್ಣು ಹೊನ್ನು ಮಣ್ಣು ಮೂರು ನಿನ್ನದೇನಲೋ

ಅನ್ನದಿಂದ ಬಂದ ಕಾಮ ನಿನ್ನದೇನಲೋ

ಕರ್ಣದಿಂದ ಬರುವ ದೋಷ ನಿನ್ನದೇನಲೋ

ನಿನ್ನ ಬಿಟ್ಟು ಹೋಹ ದೇಹ ನಿನ್ನದೇನಲೋ'

ಕೀಲು ಜಡಿದ ತೊಗಲು ಗೊಂಬೆ ಈ ದೇಹ ಇದು ನಿನ್ನದಲ್ಲ. ಈ ಹೆಣ್ಣು, ಹೊನ್ನು, ಮಣ್ಣು, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ – ಇವು ಯಾವೂ ನಿನ್ನವಲ್ಲ. ಸಾವು ಬಂದು ನಿನ್ನನ್ನು ಎಳೆಯುವಾಗ ಇವು ಯವೂವೂ ನಿನ್ನನ್ನು ಉಳಿಸಿಕೊಳ್ಳಲು ಪ್ರಯತ್ನಿಸುವುದಿಲ್ಲ. ಇವು ಯಾವೂವೂ ನಿನ್ನೊಂದಿಗೆ ಬರುವುದಿಲ್ಲ ಎಂಬುದನ್ನು ಕನಕದಾಸರು ಹಲವಾರು ಕೀರ್ತನೆಗಳಲ್ಲಿ ನಿರೂಪಿಸಿದ್ದಾರೆ.

"ಸತ್ಯವಂತರ ಸಂಗವಿರಲು ತೀರ್ಥವೇತಕೆ
ನಿತ್ಯ ಜ್ಞಾನಿಯಾದ ಮೇಲೆ ಚಿಂತೆಯಾತಕೆ"

ಸತ್ಯವಂತರ ಸಂಗ ಮಾಡುವುದಾದರೆ ಯಾವ ತೀರ್ಥ ಯಾತ್ರೆಯೂ ಅಗತ್ಯವಿರುವುದಿಲ್ಲ ಎಂಬುದನ್ನು ಹೇಳುತ್ತಲೇ ಜ್ಞಾನದ ಬಲವೇ ಶ್ರೇಷ್ಠವಾದುದ್ದು ಅದನ್ನು ಗಳಿಸಿದವನಿಗೆ ನಿಶ್ಚಿಂತೆಯಾದ ಬದುಕಿದೆ ಎಂದಿದ್ದಾರೆ.

'ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೋ
ಪಡೆದ ಜನನಿಯ ತೆರದಿ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು
ಗುಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ'

ಭೂಮಿಯ ಮೇಲೆ ನೆಲೆಸಿರುವ ಪ್ರತಿಯೊಂದು ಜೀವಿಗೂ ಆ ದೇವರು ಆಹಾರಾದಿಗಳನ್ನು ನೀಡಿ ಕಾಪಾಡುತ್ತಾನೆ. ಅದು ಮೇಲ್ನೋಟಕ್ಕೆ ಕಾಣುವುದಿಲ್ಲವಷ್ಟೇ ಉದಾಹರಣೆಗೆ ಬೆಟ್ಟದ ಮೇಲಿರುವ ಮರಗಿಡಗಳಿಗೆ ಕಟ್ಟೆಯನ್ನು ಕಟ್ಟಿ ಅದರಲ್ಲಿ ನೀರನ್ನು ಹಾಕಿ ಯಾರೂ ಬೆಳೆಸುತ್ತಿಲ್ಲ. ಆದರೂ ಅವು ಬೆಳೆದು ಹೆಮ್ಮರಗಳಾಗಿಲ್ಲವೆ? ಅವುಗಳಿಗೆ ಕಾಲಕಾಲಕ್ಕೆ ಮಳೆಯನ್ನು ಸುರಿಸಿ (ನೀರನ್ನೆರೆದು) ಪೋಷಣೆ ಮಾಡುತ್ತಿರುವವನು ಆ ಜಗದೊಡೆಯನಾದ ಆದಿಕೇಶವನು. ಅವನು ಎಲ್ಲರನ್ನೂ ರಕ್ಷಿಸುತ್ತಾನೆಂಬ ಭರವಸೆ ಇಟ್ಟುಕೊಳ್ಳಬೇಕೆಂದು ಕನಕದಾಸರ ಆಶಯ. ಅಹಂಕಾರಿಯದ ಮಾನವ ನಾನೇ ಎಲ್ಲ, ನನ್ನಿಂದಲೇ ಎಲ್ಲಾ ಎಂದು ಬೊಬ್ಬಿರಿಯುವಾಗ ಸಮಷ್ಠಿ ಹಿತದ ಒಡೆಯನಾದ ದೇವರೇ ನಮ್ಮೆಲ್ಲರನ್ನು ಸಲಹುತ್ತಾನೆ ಎಂದು ಹತಾಶರಾದವರಿಗೆ ಗಟ್ಟಿ ಸಾಂತ್ವನ ಹೇಳಿದ್ದಾರೆ ಕನಕದಾಸರು.

ಒಟ್ಟಾರೆಯಾಗಿ ಮೂಢನಂಬಿಕೆಗಳು, ಆಷಾಢಭೂತಿತನಗಳು, ಜಾತೀಯ ಅಸಮಾನತೆ–ವಿಷಮತೆಗಳಿಂದ ಜನ ಮುಕ್ತರಾದರೆ ಆ ಸಮಾಜ ಆದರ್ಶ ಸಮಾಜವಾಗುತ್ತದೆ ಎಂಬ ಸಾಮಾಜಿಕ ಪ್ರಜ್ಞೆ ಕನಕದಾಸರ ಕೀರ್ತನೆಗಳಲ್ಲಿ ಗಾಢವಾಗಿದೆ. "ಕನಕದಾಸರು ಒಂದು ಜನಾಂಗದ ಪ್ರತಿನಿಧಿಯಾಗದೆ, ಒಂದು ತತ್ವದ ಪ್ರತಿನಿಧಿಯಾಗಿ ಮಾನವೀಯತೆ ಅಂತಃಕರಣ, ನಿಷ್ಕಲ್ಮಷ ಪ್ರೇಮ ಇವುಗಳ ಮೌಲ್ಯವನ್ನು ಸಮಾಜಕ್ಕೆ ತಿಳಿಸಿಕೊಟ್ಟಿದ್ದಾರೆ. ಯವ ಮತವನ್ನೂ ಬಿಡದೆ ಯಾವ ಮತಕ್ಕೂ ಅಂಟಿಕೊಳ್ಳದೇ ಸಕಲ ತತ್ವಗಳನ್ನೂ ಮೀರಿ ನಿರ್ದಿಗಂತವಾಗಿ ಬೆಳೆದು ವಿಶ್ವ ಮಾನವರಾಗಿ ವಿಜೃಂಭಿಸಿದ

ಯೋಗ ಪುರುಷರು" ಎಂಬ ದೇಜಗೌ ಅವರ ಮಾತುಗಳು ಕನಕದಾಸರ ಬಹುಮುಖೀ ವ್ಯಕ್ತಿತ್ವವನ್ನು ಎತ್ತಿ ಹೇಳುತ್ತವೆ.

ಪರಾಮರ್ಶನ ಗ್ರಂಥಗಳು :

1. ರಂ. ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್‌ಹೌಸ್, ಮೈಸೂರು
2. ತ.ಸು. ಶಾಮರಾಯ, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್‌ಹೌಸ್, ಮೈಸೂರು
3. ಆರ್.ಎಸ್. ಪಂಚಮುಖಿ, ಹರಿದಾಸ ಸಾಹಿತ್ಯ
4. ಜಿ. ವರದರಾಜ ರಾವ್, ಹರಿದಾಸ ಸಾಹಿತ್ಯ ಸಮೀಕ್ಷೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
5. ಎಚ್.ಎಸ್.ವೆಂಕಟೇಶಮೂರ್ತಿ, ಕೀರ್ತನಕಾರರು, ಜನಸಾಮಾನ್ಯರಿಗೆ ಸಾಹಿತ್ಯ ಚರಿತ್ರೆ. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

***

PEER - REVIEWED JOURNAL
ISSN: 2320-9941

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

ಸಂಪುಟ - 09, ಸಂಚಿಕೆ- 03

VOLUME: 09, ISSUE: 03

PRATHISPANDA

An Exchange of Creative Impulse

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

LITERATURE, CULTURE - RESEARCH QUARTERLY

PEER - REVIEWED JOURNAL
ISSN: 2320-9941

HTTPS://PRATHISPANDHA.WORDPRESS.COM/